ಮಂಗಳವಾರ, ಮಾರ್ಚ್ 1, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 60 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ


ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಹಾಶಿವರಾತ್ರಿ ಶುಭಾಶಯಗಳು

ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
₹52,480 (ಬೆಂಗಳೂರು)	₹67,400 (ಬೆಂಗಳೂರು)	75.35

ಕ್ಷೇಮ ಕುಶಲ

ಭ್ರಮರಿ ಪ್ರಾಣಾಯಾಮವು ಮನಸ್ಸು ಹಾಗೂ ನರಮಂಡಲದ ಮೇಲೆ ಹಿತವಾದ ಪರಿಣಾಮವನ್ನು ಉಂಟುಮಾಡಿ, ಮನೋದೈಹಿಕ ಆರೋಗ್ಯವನ್ನು ವೃದ್ಧಿಸುತ್ತದೆ.



ಫಲ ನೀಡದ ರಷ್ಯಾ– ಉಕ್ರೇನ್ ಮೊದಲ ಸುತ್ತಿನ ಚರ್ಚೆ • ಇನ್ನಷ್ಟು ನಿರ್ಬಂಧ ಹೇರಿದ ಅಮೆರಿಕ

ಕದನ ವಿರಾಮಕ್ಕೆ ಒತ್ತಡ

ಕೀವ್ (ಎ.ಪಿ): ಯುದ್ಧಕ್ಕೆ ವಿರಾಮ ನೀಡುವ ನಿಟ್ಟಿನಲ್ಲಿ ಉಕ್ರೇನ್ ಮತ್ತು ರಷ್ಯಾ ನಡುವೆ ನಡೆದ ಮೊದಲ ಸುತ್ತಿನ ಮಾತುಕತೆ ಅಂತ್ಯವಾಗಿದ್ದು, ಫಲಪ್ರದವಾಗಿಲ್ಲ. ಶೀಘ್ರವೇ ಮತ್ತೊಂದು ಸುತ್ತಿನ ಮಾತುಕತೆ ನಡೆಸಲು ನಿರ್ಧರಿಸಲಾಗಿದೆ.

ಆದರೆ, ಸುಮಾರು ಐದು ಗಂಟೆ ಚರ್ಚೆ ನಡೆದಿದ್ದು, ತಕ್ಷಣ ಕದನ ವಿರಾಮ ಘೋಷಿಸಲು ಒತ್ತಡ ಹೇರಿದ ಉಕ್ರೇನ್ ಇದೇ ವೇಳೆ ಯೂರೋಪ್ ಒಕ್ಕೂಟಕ್ಕೆ ಸೇರ್ಪಡೆ ಕುರಿತು ಪ್ರಸ್ತಾಪಿಸಿದೆ. ಪಾಶ್ಚಿಮಾತ್ಯ ದೇಶಗಳ ಜೊತೆಗೆ ಬಾಂಧವ್ಯ ಬಲಪಡಿಸುವುದು ಇದರ ಉದ್ದೇಶ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಈ ಪ್ರಸ್ತಾವಕ್ಕೆ ಸಹಿ ಹಾಕಿದ್ದು, ಛಾಯಾಚಿತ್ರವನ್ನೂ ಹಂಚಿಕೊಂಡಿದ್ದಾರೆ. ಯೂರೋಪ್ ಒಕ್ಕೂಟದ ಕೇಂದ್ರ ಕಚೇರಿಯಿರುವ ಬ್ರಸೆಲ್ಸ್‌ಗೆ ಶೀಘ್ರವೇ ಈ ಪ್ರಸ್ತಾಪವನ್ನು ಕಳುಹಿಸಲಾಗುವುದು ಎಂದು ಅವರ ಕಚೇರಿ ಪ್ರಕಟಿಸಿದೆ.

ಉಭಯ ಬಣಗಳು ಆದ್ಯತೆ ಮೇರೆಗೆ ಬಗೆಹರಿಸಿಕೊಳ್ಳಬೇಕಾದ ವಿಷಯಗಳನ್ನು ಪಟ್ಟಿ ಮಾಡಿವೆ. ಎರಡನೇ ಸುತ್ತಿನ ಮಾತುಕತೆಯಲ್ಲಿ ದೃಢ ನಿರ್ಧಾರಕ್ಕೆ ಬರುವ ಸಾಧ್ಯತೆಗಳಿವೆ. ಪ್ರಸಕ್ತ ಬೆಳವಣಿಗೆಗಳ ಬಗ್ಗೆ ಕೂಲಂಕಷ ಚರ್ಚೆ ನಡೆಯಿತು ಎಂದು ಮೂಲಗಳು ತಿಳಿಸಿವೆ.

ಉಕ್ರೇನ್ ಮೇಲೆ ರಷ್ಯಾವು ಕಳೆದ ವಾರ ದಾಳಿ ಆರಂಭಿಸಿದ ಬಳಿಕ ಎರಡೂ ದೇಶಗಳ ನಡುವೆ ಮೊದಲ ಮಾತುಕತೆ ಇದಾಗಿತ್ತು. ತಕ್ಷಣವೇ ಕದನ ವಿರಾಮ ಘೋಷಿಸಬೇಕು ಎಂದು ಉಕ್ರೇನ್ ನಿಯೋಗವು ಒತ್ತಾಯಿಸಿದೆ. ಪಶ್ಚಿಮದ ದೇಶಗಳು ವಿವಿಧ ರೀತಿಯ ನಿರ್ಬಂಧಗಳನ್ನು ಹೇರುವ ಮೂಲಕ ರಷ್ಯಾವನ್ನು ಮಣಿಸಲು ಯತ್ನಿಸುತ್ತಿವೆ.

ಬೆಲರೂಸ್ ಮತ್ತು ಉಕ್ರೇನ್‌ನ ಗಡಿಯಲ್ಲಿರುವ ಸ್ಥಳದಲ್ಲಿ ಶಾಂತಿ ಮಾತುಕತೆ ನಡೆಯಿತು. ಆದರೆ, ಸಭೆಯ ದಿನವೇ ರಷ್ಯಾ ನಡೆಸಿದ ಷೆಲ್ ದಾಳಿಗೆ ಉಕ್ರೇನ್‌ನ ಎರಡನೇ ಅತ್ಯಂತ ದೊಡ್ಡ ನಗರ ಹಾರ್ಕಿವ್‌ನಲ್ಲಿ 11 ಜನರು ಮೃತಪಟ್ಟಿದ್ದಾರೆ.

‘ಈ ಸಭೆಯಿಂದ ಬಿಕ್ಕಟ್ಟು ಬಗೆಹರಿಯುತ್ತದೆ ಎಂಬ ಭರವಸೆ ಏನೂ ಇಲ್ಲ’ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮಾತುಕತೆಗೆ ಮೊದಲೇ ಹೇಳಿದ್ದಾರೆ.

ಉಕ್ರೇನ್ ಬಿಕ್ಕಟ್ಟು ಪರಿಹಾರ ಆಗಬೇಕಿದ್ದರೆ ಆ ದೇಶವು ತಟಸ್ಥ ನಿಲುವು ತಳೆಯಬೇಕು. ಸೇನೆಯನ್ನು ತ್ಯಜಿಸಬೇಕು ಮತ್ತು ನಾಜಿ ಮನಸ್ಥಿತಿಯನ್ನು ಬಿಡಬೇಕು ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಅವರಿಗೆ ಹೇಳಿದ್ದಾರೆ.



ಹಾರ್ಕಿವ್‌ನ ರಸ್ತೆಯೊಂದರಲ್ಲಿ ಉಕ್ರೇನ್‌ನ ಯೋಧರು ರಷ್ಯಾದ ಸೇನಾ ವಾಹನಗಳನ್ನು ಸೋಮವಾರ ಧ್ವಂಸ ಮಾಡಿದ್ದಾರೆ –ರಾಯಿಟರ್ಸ್ ಚಿತ್ರ

- ಉಕ್ರೇನ್ ಮೇಲೆ ರಷ್ಯಾ ಯುದ್ಧ ಆರಂಭಿಸಿ ಐದು ದಿನಗಳು ಕಳೆದಿವೆ
- ಉಕ್ರೇನ್‌ನಿಂದ ಸಮೀಪದ ದೇಶಗಳಿಗೆ ವಲಸೆ ಹೋದವರ ಸಂಖ್ಯೆ ಸೋಮವಾರ ಐದು ಲಕ್ಷವನ್ನು ದಾಟಿದೆ
- ಉಕ್ರೇನ್‌ನಲ್ಲಿ 352 ನಾಗರಿಕರು ರಷ್ಯಾದ ದಾಳಿಯಿಂದಾಗಿ ಮೃತಪಟ್ಟಿದ್ದಾರೆ. ಅವರಲ್ಲಿ 15 ಮಕ್ಕಳು ಕೂಡ ಸೇರಿದ್ದಾರೆ
- ದಾಳಿಯ ಸಂದರ್ಭದಲ್ಲಿ ರಷ್ಯಾ ಎಸಗಿರುವ ಯುದ್ಧಾಪರಾಧಗಳ ಬಗ್ಗೆ ತನಿಖೆ ನಡೆಸಬೇಕು ಎಂದು ಉಕ್ರೇನ್ ಹಾಗೂ ಅದರ ಮಿತ್ರ ಪಕ್ಷಗಳು ವಿಶ್ವ ಸಂಸ್ಥೆಯನ್ನು ಒತ್ತಾಯಿಸಿವೆ
- ರಾಜಧಾನಿ ಕೀವ್ ಮತ್ತು ಎರಡನೇ ಅತಿ ದೊಡ್ಡ ನಗರ ಹಾರ್ಕಿವ್ ಅನ್ನು ನಿಯಂತ್ರಣಕ್ಕೆ ಪಡೆಯಲು ರಷ್ಯಾಕ್ಕೆ ಸಾಧ್ಯವಾಗಿಲ್ಲ
- ರಷ್ಯಾದ ಕರೆನ್ಸಿ ರೂಬಲ್‌ನ ಬೆಲೆಯು ಡಾಲರ್ ಮತ್ತು ಯೂರೊ ಎದುರು ಕುಸಿದಿದೆ. ಹಾಗಾಗಿ, ಬಡ್ಡಿದರವನ್ನು ದುಪ್ಪಟ್ಟಿಗಿಂತಲೂ ಹೆಚ್ಚಿಸಿ ರಷ್ಯಾದ ಕೇಂದ್ರೀಯ ಬ್ಯಾಂಕ್ ಆದೇಶ ಹೊರಡಿಸಿದೆ. ಈಗ ಅಲ್ಲಿ ಬಡ್ಡಿ ದರವು ಶೇ 20ಕ್ಕೆ ಏರಿದೆ

11ನೇ ಪುಟ ನೋಡಿ

ವಿಶೇಷ ಪುಟ 11

ಆಳ–ಅಗಲ
ಭಾರತೀಯ ವಿದ್ಯಾರ್ಥಿಗಳ ಮೇಲೆ ಪ್ರಹಾರ

ತೆರವು ಕಾರ್ಯಾಚರಣೆಗೆ ನಾಲ್ವರು ಉಸ್ತುವಾರಿ

ಉಕ್ರೇನ್‌ನಿಂದ ವಿದ್ಯಾರ್ಥಿಗಳ ತೆರವು ಕಾರ್ಯಾಚರಣೆಗೆ ಕೇಂದ್ರ ಸರ್ಕಾರವು ನಾಲ್ವರು ಸಚಿವರನ್ನು ಉಸ್ತುವಾರಿಯಾಗಿ ಸೋಮವಾರ ನಿಯೋಜನೆ ಮಾಡಿದೆ. ಉಕ್ರೇನ್‌ನಿಂದ ವಿದ್ಯಾರ್ಥಿಗಳನ್ನು ಹಂಗೆರಿ, ರೊಮೇನಿಯಾ, ಪೋಲೆಂಡ್, ಸ್ಲೊವಾಕಿಯಾ ಮತ್ತು ಮಾಲ್ಡೋವಾ ಮೂಲಕ ತೆರವು ಮಾಡಲಾಗುತ್ತಿದೆ.

ಹಂಗರಿ ಮೂಲಕ ನಡೆಯುವ ತೆರವು ಕಾರ್ಯಾಚರಣೆಯ ಉಸ್ತುವಾರಿಯನ್ನು ಸಚಿವ ಹರದೀಪ್ ಸಿಂಗ್ ಪುರಿ ಅವರಿಗೆ ವಹಿಸಲಾಗಿದೆ. ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ರೊಮೇನಿಯಾ ಮತ್ತು ಮಾಲ್ಡೋವಾದ ಕಾರ್ಯಾಚರಣೆಯನ್ನು ನಿರ್ವಹಿಸಲಿದ್ದಾರೆ. ಕಿರಣ್ ರಿಜಿಜು ಅವರು ಸ್ಲೊವಾಕಿಯಾ ಮತ್ತು ವಿ.ಕೆ.ಸಿಂಗ್ ಅವರು ಪೋಲೆಂಡ್ ಮೂಲಕ ನಡೆಯುವ ಕಾರ್ಯಾಚರಣೆಗಳ ಉಸ್ತುವಾರಿಯಾಗಿದ್ದಾರೆ. ನಾಲ್ವರೂ ಸಚಿವರುಗಳು ತಮಗೆ ವಹಿಸಿರುವ ದೇಶಗಳಿಗೆ ತೆರಳಿ, ಮೇಲ್ವಿಚಾರಣೆ ನಡೆಸಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಹೇಳಿದೆ.

ನೆರವಿಗೆ ನಿರ್ಧಾರ– ನವದೆಹಲಿ (ಪಿಟಿಐ): ಉಕ್ರೇನ್‌ನಲ್ಲಿ ಅತಂತ್ರರಾಗಿರುವ ನೆರೆ ರಾಷ್ಟ್ರಗಳ ಜನರನ್ನು ರಕ್ಷಿಸಲು ಭಾರತ ನೆರವು ನೀಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಭಾರತೀಯರ ರಕ್ಷಣೆಗೆ ಇಡೀ ಸರ್ಕಾರಿಯಂತ್ರ ಕಾರ್ಯತತ್ಪರವಾಗಿದೆ ಎಂದಿದ್ದಾರೆ. ಸೋಮವಾರ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದರು. ಉಕ್ರೇನ್‌ನ ಗಡಿಯಲ್ಲಿ ಅತಂತ್ರರಾಗಿರುವವರಿಗೆ ಪರಿಹಾರ ಸಾಮಗ್ರಿಗಳನ್ನು ಮಂಗಳವಾರ ಕಳುಹಿಸಲಾಗುತ್ತದೆ ಎಂದು ತಿಳಿಸಿದರು.

ಆಸ್ತಿ ತೆರಿಗೆ ಸಂಗ್ರಹದಲ್ಲೇ ₹ 500 ಕೋಟಿ ಅಕ್ರಮ ಪತ್ತೆ

ಬಿಬಿಎಂಪಿ ಕಚೇರಿಗಳಲ್ಲಿ ಮುಂದುವರಿದ ಎಸಿಬಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಕಂದಾಯ ವಿಭಾಗವು ಆಸ್ತಿ ತೆರಿಗೆ ಸಂಗ್ರಹದಲ್ಲೇ ₹ 500 ಕೋಟಿಗೂ ಹೆಚ್ಚು ಅಕ್ರಮ ನಡೆಸಿರುವುದನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಸೋಮವಾರ ಪತ್ತೆಮಾಡಿದೆ.

ಬಿಬಿಎಂಪಿಯ 25 ಕಚೇರಿಗಳ ಮೇಲೆ ಶುಕ್ರವಾರ ದಾಳಿ ನಡೆಸಿದ್ದ ಎಸಿಬಿ ಅಧಿಕಾರಿಗಳು, ಶೋಧ ನಡೆಸಿದ್ದರು. ಸೋಮವಾರವೂ ಶೋಧ ಕಾರ್ಯಾಚರಣೆ ಮುಂದುವರಿಯಿತು. ಕಂದಾಯ, ಎಂಜಿನಿಯರಿಂಗ್ ಮತ್ತು ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ವಿಭಾಗಗಳಲ್ಲಿ ಭಾರಿ ಪ್ರಮಾಣದ ಅಕ್ರಮಗಳು ನಡೆದಿರುವುದನ್ನು ತನಿಖಾ ತಂಡ ಪತ್ತೆಹಚ್ಚಿದೆ.

‘ಹಲವು ಬಹುರಾಷ್ಟ್ರೀಯ ಕಂಪನಿಗಳು, ಮಾಲ್‌ಗಳು, ಅಪಾರ್ಟ್‌ಮೆಂಟ್ ಸಮುಚ್ಚಯಗಳಿಂದ ತೆರಿಗೆ ಸಂಗ್ರಹಿಸದೇ ಬಿಬಿಎಂಪಿ ಮತ್ತು ರಾಜ್ಯ ಸರ್ಕಾರಕ್ಕೆ ₹ 500 ಕೋಟಿಗೂ ಹೆಚ್ಚು ನಷ್ಟ ಉಂಟುಮಾಡಿರುವುದು ಪತ್ತೆಯಾಗಿದೆ. ಕೆಲವು ಬಹುರಾಷ್ಟ್ರೀಯ ಕಂಪನಿಗಳು, ಮಾಲ್‌ಗಳು ಮತ್ತು ಅಪಾರ್ಟ್‌ಮೆಂಟ್ ಸಮುಚ್ಚಯಗಳಿಗೆ ಸರ್ಕಾರದ ಮಾನದಂಡಗಳಿಗೆ ವಿರುದ್ಧವಾಗಿ ಕಡಿಮೆ ತೆರಿಗೆ ವಿಧಿಸುವ ಮೂಲಕ ಅಕ್ರಮವಾಗಿ ಲಾಭ ಮಾಡಿಕೊಡಲಾಗಿದೆ’ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

5ನೇ ಪುಟ ನೋಡಿ

ಸುಳ್ಳು ಮಾಹಿತಿ ನೀಡಿ ಟಿಡಿಆರ್ !

‘ಟಿಡಿಆರ್ ವಿಭಾಗದಲ್ಲೂ ಭಾರಿ ಪ್ರಮಾಣದ ಅಕ್ರಮಗಳು ಪತ್ತೆಯಾಗಿವೆ. ಒಂದು ಮಹಡಿ ಇರುವ ಕಟ್ಟಡಗಳನ್ನು ಎರಡು, ಮೂರು ಮಹಡಿಗಳ ಕಟ್ಟಡ ಎಂದು ಸುಳ್ಳು ದಾಖಲೆ ಸೃಷ್ಟಿಸಿ ಹೆಚ್ಚಿನ ಟಿಡಿಆರ್ ವಿತರಿಸಲಾಗಿದೆ. ಕೆಲವು ಪ್ರಕರಣಗಳಲ್ಲಿ ಸ್ವತ್ತಿನ ನೈಜ ಮಾಲೀಕರನ್ನು ಬಿಟ್ಟು ಅನ್ಯ ವ್ಯಕ್ತಿಗಳಿಗೆ ಟಿಡಿಆರ್ ನೀಡಿರುವುದೂ ಕಂಡುಬಂದಿದೆ’ ಎಂದು ತನಿಖಾ ಸಂಸ್ಥೆ ಹೇಳಿದೆ.

ರಸ್ತೆ ವಿಸ್ತರಣೆಗೆ ಕಟ್ಟಡಗಳು ಬಳಕೆಯಾಗದಿದ್ದರೂ ಸುಳ್ಳು ಮಾಹಿತಿ ನೀಡಿ ಟಿಡಿಆರ್ ನೀಡಲಾಗಿದೆ. ಸ್ವಾಧೀನಪಡಿಸಿಕೊಂಡ ಕಟ್ಟಡಗಳ ಎದುರು ನಿಂತು ಫೋಟೊ ತೆಗೆಸಿ, ಅವುಗಳನ್ನು ಅಕ್ರಮಕ್ಕೆ ಬಳಸಲಾಗಿದೆ. ಈ ಹಗರಣದಲ್ಲಿ ಬಹುರಾಷ್ಟ್ರೀಯ ಕಂಪನಿಗಳು, ಮಧ್ಯವರ್ತಿಗಳು ಮತ್ತು ಕೆಲವು ಭೂಮಾಲೀಕರು ಭಾಗಿಯಾಗಿದ್ದಾರೆ ಎಂದು ತಿಳಿಸಿದೆ.

ರಾಮನ್ ಸಂಶೋಧನಾ ಸಂಸ್ಥೆಯ ಮಹತ್ವದ ಸಾಧನೆ

ಸುಳ್ಳಾದ ‘ಬ್ರಹ್ಮಾಂಡ’ ರೇಡಿಯೊ ತರಂಗ ಸಂದೇಶ !

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾಸ್ಫೋಟದಿಂದಾಗಿ (ಬಿಗ್ ಬ್ಯಾಂಗ್) ಬ್ರಹ್ಮಾಂಡದ ಉಗಮದ ಸಂದರ್ಭದಲ್ಲಿ ಹುಟ್ಟಿದ ನಕ್ಷತ್ರಗಳು ಮತ್ತು ನಕ್ಷತ್ರಪುಂಜಗಳಿಂದ ಹೊರಹೊಮ್ಮಿದ ರೇಡಿಯೊ ತರಂಗ ಸಂದೇಶ ಪತ್ತೆ ಮಾಡಲಾಗಿದೆ’ ಎಂಬ ಅಮೆರಿಕಾದ ವಿಜ್ಞಾನಿಗಳ ವಾದಗಳನ್ನು ರಾಮನ್ ಸಂಶೋಧನಾ ಸಂಸ್ಥೆಯ(ಆರ್‌ಆರ್‌ಐ) ಖಗೋಳ ವಿಜ್ಞಾನಿಗಳು ಬುಡಮೇಲು ಮಾಡಿದ್ದಾರೆ!

ಬೆಂಗಳೂರಿನ ರಾಮನ್ ಸಂಶೋಧನಾ ಸಂಸ್ಥೆಯ ಹೊಸ ಶೋಧ ಅಂತರಾಷ್ಟ್ರೀಯ ಮಟ್ಟದಲ್ಲಿ ಸಂಚಲನ ಮೂಡಿಸಿದೆ. ಕನ್ನಡಿಗ ಪ್ರೊ.ಎನ್.ಉದಯಶಂಕರ್ ಮತ್ತು ಪ್ರೊ.ರವಿಸುಬ್ರಹ್ಮಣ್ಯ ನೇತೃತ್ವದ ತಂಡ ಸಂಸ್ಥೆಯೇ ಅಭಿವೃದ್ಧಿಪಡಿಸಿದ ‘ಸರಾಸ್–3’ (ಎಸ್‌ಎಆರ್‌ಎಎಸ್–3) ರೇಡಿಯೊ ದೂರದರ್ಶಕದ ಮೂಲಕ ಬ್ರಹ್ಮಾಂಡದ ‘ಸಂದೇಶ’ದ ರಹಸ್ಯ ಬಿಡಿಸಿ ಜಗತ್ತಿನ ಮುಂದಿಟ್ಟಿದ್ದಾರೆ.



ಶರಾವತಿ ಹಿನ್ನೀರಿನಲ್ಲಿ ‘ಸರಾಸ್–3’ ದೂರದರ್ಶಕದ ಪ್ರಯೋಗ

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಹಿಜಾಬ್: ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಲು ಅನುಮತಿ ನಿರಾಕರಣೆ

ಉಡುಪಿ: ಇಲ್ಲಿನ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿಗೆ ಸೋಮವಾರ ಹಿಜಾಬ್ ಧರಿಸಿ ಬಂದ ಮೂವರು ವಿಜ್ಞಾನ ವಿಭಾಗದ ವಿದ್ಯಾರ್ಥಿನಿಯರಿಗೆ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಲು ಅನುಮತಿ ನಿರಾಕರಿಸಲಾಗಿದೆ.

ಈ ಬಗ್ಗೆ ಟ್ವೀಟ್ ಮೂಲಕ ಬೇಸರ ವ್ಯಕ್ತಪಡಿಸಿರುವ ಆಲ್ಮಾಸ್, ‘ಸೋಮವಾರ ಅಂತಿಮ ಪ್ರಾಯೋಗಿಕ ಪರೀಕ್ಷೆ ಇತ್ತು. ಅದಕ್ಕಾಗಿ ಕಾಲೇಜಿಗೆ ಬಂದಿದ್ದೆವು. ಆದರೆ, ಹಿಜಾಬ್ ಧರಿಸಿದ ಕಾರಣಕ್ಕೆ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಿಲ್ಲ. ಐದು ನಿಮಿಷದಲ್ಲಿ ಕಾಲೇಜಿನಿಂದ ಹೊರಗೆ ಹೋಗದಿದ್ದರೆ ಪೊಲೀಸ್ ಠಾಣೆಗೆ ದೂರು ನೀಡುವುದಾಗಿ ಪ್ರಾಂಶುಪಾಲರು ಬೆದರಿಸಿದರು’ ಎಂದು ಆರೋಪಿಸಿದ್ದಾರೆ.

‘ರೆಕಾರ್ಡ್ ಬುಕ್‌ಗೆ ಸಹಿ ಮಾಡಲು ಅಧ್ಯಾಪಕರು ನಿರಾಕರಿಸಿದರು. ಹಿಜಾಬ್ ಬಿಚ್ಚಿಟ್ಟು ಬಂದರೆ ಅಂಕಗಳನ್ನು ನೀಡುವುದಾಗಿ ಸೂಚಿಸಿದರು. ಅದಕ್ಕೆ ನಾವು ಒಪ್ಪಲಿಲ್ಲ’ ಎಂದು ಆಲ್ಮಾಸ್ ದೂರಿದ್ದಾರೆ.

‘ಹಿಜಾಬ್‌ಗೆ ಅನುಮತಿ ನೀಡದ ಕಾರಣಕ್ಕೆ ಎರಡು ತಿಂಗಳು ತರಗತಿ ಪಾಠದಿಂದ ಹೊರಗುಳಿದಿದ್ದೇವೆ. ಮನೆಯಲ್ಲಿ ಯೂಟ್ಯೂಬ್ ವಿಡಿಯೋಗಳನ್ನು ವೀಕ್ಷಿಸಿ ಅಭ್ಯಾಸ ಮಾಡಿದರೂ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಲು ಪ್ರಾಂಶುಪಾಲರು ಅನುಮತಿ ನೀಡಲಿಲ್ಲ. ನಾವು ಮಾಡಿರುವ ಅಪರಾಧವಾದರೂ ಏನು?’ ಎಂದು ಆಲ್ಮಾಸ್ ಪ್ರಶ್ನಿಸಿದ್ದಾರೆ.

ಆರೋಪ ಸುಳ್ಳು: ‘ವಿದ್ಯಾರ್ಥಿನಿಯರು ಹಿಂದೆಯೂ ನನ್ನ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿದ್ದು, ಈಗಲೂ ಸುಳ್ಳು ಹೇಳಿದ್ದಾರೆ’ ಎಂದು ಕಾಲೇಜಿನ ಪ್ರಾಂಶುಪಾಲ ರುದ್ರೇಗೌಡ ಹೇಳಿದ್ದಾರೆ.

‘ಸೋಮವಾರ ಬೆಳಿಗ್ಗೆ 9ರಿಂದ 11ರವರೆಗೆ ಪ್ರಾಯೋಗಿಕ ಪರೀಕ್ಷೆ ಇತ್ತು. ಪ್ರಯೋಗಾಲಯಕ್ಕೆ ಬಂದ ಮೂವರು ಮುಸ್ಲಿಂ ವಿದ್ಯಾರ್ಥಿನಿಯರಿಗೆ ಹಿಜಾಬ್ ಬಿಚ್ಚಿಟ್ಟು ಒಳಗೆ ಬರುವಂತೆ ಪ್ರಾಧ್ಯಾಪಕರು ಸೂಚಿಸಿದರು. ಆದರೆ, ವಿದ್ಯಾರ್ಥಿನಿಯರು ಒಪ್ಪಲಿಲ್ಲ. ಬಳಿಕ ನನ್ನ ಕಚೇರಿಗೆ ಬಂದು ಹಿಜಾಬ್ ಧರಿಸಿ ಪ್ರಾಯೋಗಿಕ ಪರೀಕ್ಷೆ ಬರೆಯಲು ಅನುಮತಿ ನೀಡುವಂತೆ ಕೋರಿದರು. ಹೈಕೋರ್ಟ್ ಮಧ್ಯಂತರ ಆದೇಶ ಇರುವುದರಿಂದ ಅನುಮತಿ ನೀಡಲು ಸಾಧ್ಯವಿಲ್ಲ ಎಂದು ತಿಳಿಸಿ, ಪ್ರಾಯೋಗಿಕ ಪರೀಕ್ಷೆಗೆ ಗೈರಾದರೆ ಸರ್ಕಾರ ಮರು ಪರೀಕ್ಷೆ ನಡೆಸುವ ಸಾಧ್ಯತೆಗಳು ತೀರಾ ಕಡಿಮೆ. ಭವಿಷ್ಯದ ಹಿತದೃಷ್ಟಿಯಿಂದ ಹಿಜಾಬ್ ಬಿಚ್ಚಿಟ್ಟು ಪರೀಕ್ಷೆಗೆ ಹಾಜರಾಗುವಂತೆ ಕಿವಿಮಾತು ಹೇಳಿದರೂ ವಿದ್ಯಾರ್ಥಿನಿಯರು ಒಪ್ಪದೆ ಮನೆಗೆ ತೆರಳಿದರು’ ಎಂದು ಪ್ರಾಂಶುಪಾಲರು ವಿವರಿಸಿದರು.

ಇನ್ನಷ್ಟು ಸುದ್ದಿಗಳು 5

ಜಿಡಿಪಿ ಶೇ 5.4ರಷ್ಟು ಬೆಳವಣಿಗೆ

ನವದೆಹಲಿ (ಪಿಟಿಐ): ಡಿಸೆಂಬರ್ ತ್ರೈಮಾಸಿಕದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರವು ಶೇಕಡ 5.4ಕ್ಕೆ ಇಳಿಕೆ ಕಂಡಿದೆ. ಆದರೆ ಇದು, ಇದೇ ಅವಧಿಯಲ್ಲಿ ಚೀನಾ ದಾಖಲಿಸಿರುವ ಶೇ 4ರ ಬೆಳವಣಿಗೆ ದರಕ್ಕಿಂತ ಹೆಚ್ಚಿದೆ.

ಶೇ 5.4ರಷ್ಟು ಬೆಳವಣಿಗೆ ಕಾಣುವ ಮೂಲಕ ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ದಾಖಲಿಸಿದ ದೇಶ ಎಂಬ ಹೆಗ್ಗಳಿಕೆಯನ್ನು ಭಾರತ ಉಳಿಸಿಕೊಂಡಿದೆ. ಸೆಪ್ಟೆಂಬರ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 8.5ರಷ್ಟು ಆಗಿತ್ತು.

2021–22ರಲ್ಲಿ ದೇಶವು ಒಟ್ಟು ಜಿಡಿಪಿ ಬೆಳವಣಿಗೆ ಪ್ರಮಾಣವು ಶೇ 8.9ರಷ್ಟು ಇರಲಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು ಸೋಮವಾರ ಬಿಡುಗಡೆ ಮಾಡಿರುವ ವರದಿಯಲ್ಲಿ ಅಂದಾಜಿಸಿದೆ. ಜನವರಿಯಲ್ಲಿನ ವರದಿಯು ಜಿಡಿಪಿ ಬೆಳವಣಿಗೆ ಶೇ 9.2ರಷ್ಟು ಆಗಬಹುದು ಎಂದು ಅಂದಾಜು ಮಾಡಿತ್ತು.


ಕೊರೊನಾ ಪೀಡಿತ 2020–21ರಲ್ಲಿ ದೇಶದ ಜಿಡಿಪಿ ಕಂಡ ಕುಸಿತವು ಶೇ (–)6.6ರಷ್ಟು ಎಂದು ಎನ್‌ಎಸ್‌ಒ ಪರಿಷ್ಕೃತ ಲೆಕ್ಕ ನೀಡಿದೆ. ಈ ಮೊದಲು, ಕುಸಿತವು ಶೇ (–) 7.3ರಷ್ಟು ಎಂದು ಹೇಳಲಾಗಿತ್ತು.

ಕೋಮುದ್ವೇಷದಿಂದ ಏಳು ವರ್ಷಗಳ ಹಿಂದೆ ಹತ್ಯೆಯಾಗಿದ್ದ ಬಜರಂಗದಳದ ಕಾರ್ಯಕರ್ತ

ವಿಶ್ವನಾಥ್ ಮನೆ ಸ್ವಚ್ಛಗೊಳಿಸಿದ ಮುಸ್ಲಿಂ ಯುವಕರು

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ತೀರ್ಥಹಳ್ಳಿ ರಸ್ತೆಯ ಗಾಜನೂರು ಬಳಿ 2015ರಲ್ಲಿ ಕೋಮುದ್ವೇಷಕ್ಕೆ ಜೀವ ಕಳೆದುಕೊಂಡ ಬಜರಂಗದಳದ ಕಾರ್ಯಕರ್ತ ವಿಶ್ವನಾಥ್ ಶೆಟ್ಟಿ ಅವರ ಆಲ್ಕೊಳದ ಪಾಳುಬಿದ್ದ ಮನೆಯನ್ನು ಸೋಮವಾರ ಮುಸ್ಲಿಂ ಯುವಕರು ಸ್ವಚ್ಛಗೊಳಿಸಿದರು.



ಜಬೀಉಲ್ಲಾ

ಏಳು ವರ್ಷಗಳ ಹಿಂದೆ ನಗರದಲ್ಲಿ ನಡೆದ ಪಿಎಫ್‌ಐ ಸಂಸ್ಥಾಪನಾ ದಿನದಲ್ಲಿ ಭಾಗವಹಿಸಿ ಹಿಂದಿರುಗುತ್ತಿದ್ದ ಒಂದು ಗುಂಪು ವಿಶ್ವನಾಥ್ ಶೆಟ್ಟಿ ಅವರನ್ನು ಹತ್ಯೆ ಮಾಡಿತ್ತು. ಎರಡು ವರ್ಷಗಳ ಹಿಂದೆ ಅವರ ತಂದೆ ವಸಂತಶೆಟ್ಟಿ ಮೂಳೆ ಕ್ಯಾನ್ಸರ್‌ನಿಂದ ಮೃತಪಟ್ಟ ಬಳಿಕ ತಾಯಿ ಮೀನಾಕ್ಷಿ ಅವರು ಚಿಂದಿ ಆಯ್ದು ಕಷ್ಟದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಬಂದ ಹಣದಲ್ಲಿ ಒಬ್ಬನೇ ಮೊಮ್ಮಗನನ್ನು (ವಿಶ್ವನಾಥ್ ಅವರ ಪುತ್ರ) ಓದಿಸಲು ಹೆಣಗಾಡುತ್ತಿದ್ದಾರೆ. ವಿಧವಾ ವೇತನಕ್ಕಾಗಿ ಅಲೆದಾಡುತ್ತಿದ್ದಾರೆ.

ನಗರದ ಸಾಗರ ರಸ್ತೆಯ ಆಲ್ಕೊಳ, ನಂದಿನಿ ಬಡಾವಣೆಯ 5ನೇ ತಿರುವಿನಲ್ಲಿರುವ ಅವರ ಮನೆ ಪಾಳು ಬಿದ್ದಿದೆ. ಕಾಂಪೌಂಡ್ ಹೊರಗೆ ಕಸದ ರಾಶಿ ಇದೆ. ಪುಟ್ಟ ಮನೆಯ ಸಿಮೆಂಟ್ ಶೀಟ್‌ಗಳ ಮೇಲೆ ಅರ್ಧ ಅಡಿಯಷ್ಟು ಮಣ್ಣು ಕೂತಿದೆ. ಮನೆಯ ಬಾಗಿಲುಗಳನ್ನು ಗೆದ್ದಲು ತಿಂದಿದೆ. ಮೀನಾಕ್ಷಮ್ಮ ಚಿಂದಿ ಆಯ್ದು ಸಂಕಷ್ಟದ ಜೀವನ ನಡೆಸುತ್ತಿರುವ ಕುರಿತು ಫೆ.27ರ ಸಂಚಿಕೆಯಲ್ಲಿ ‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ವರದಿ ನೋಡಿದ ವಿದ್ಯಾನಗರದ ಯುವಕ ಜಬೀಉಲ್ಲಾ ಅವರು ಜೆಡಿಎಸ್ ಮುಖಂಡ ಎಂ. ಶ್ರೀಕಾಂತ್ ಅವರನ್ನು ಸಂಪರ್ಕಿಸಿ, ತಮ್ಮ ತಂಡದೊಂದಿಗೆ ಬಂದು ಮನೆಯ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದಾರೆ.



ವಿಶ್ವನಾಥ್ ಅವರ ಮನೆಯ ಸ್ವಚ್ಛತಾ ಕಾರ್ಯದಲ್ಲಿ ತೊಡಗಿದ್ದ ಜಬೀಉಲ್ಲಾ ಅವರ ತಂಡ

5ನೇ ಪುಟ ನೋಡಿ

ಹೊಸ ಚಪ್ಪಲಿ ನೋಡಿ ಕಣ್ಣೀರಾದರು...



ಆಲ್ಕೊಳದ ಮೀನಾಕ್ಷಮ್ಮ ಅವರ ಮನೆಗೆ ಸೋಮವಾರ ಬಂದ ದಾನಿಯೊಬ್ಬರು ಬರಿಗಾಲಲ್ಲಿ ಇದ್ದ ಅವರನ್ನು ನೋಡಿ ಹೊಸ ಚಪ್ಪಲಿ ತಂದುಕೊಟ್ಟಿದ್ದಾರೆ. ಅದನ್ನು ತೋರಿಸಿ ಮೀನಾಕ್ಷಮ್ಮ ಕಣ್ಣೀರು ಸುರಿಸಿದರು. ‘ಪತಿ ಇದ್ದಾಗ ಕೊಡಿಸಿದ್ದ ಚಪ್ಪಲಿ ಸವೆದು ಹೋಗಿತ್ತು. ಚಿಂದಿ ಆಯುವ ನನಗೆ ಚಪ್ಪಲಿ ಕೊಳ್ಳಲೂ ಹಣ ಇರಲಿಲ್ಲ. ಯಾರೋ ಬಂದು ಹೊಸ ಚಪ್ಪಲಿ ಕೊಟ್ಟರು. ಕಣ್ಣೀರು ಹೇಗೆ ತಡೆಯಲಿ’ ಎಂದು ಗದ್ಗದಿತರಾದರು.

ಬ್ಯಾಂಕ್ ಖಾತೆ ವಿವರ

ಮೀನಾಕ್ಷಮ್ಮ ಅವರ ಉಳಿತಾಯ ಖಾತೆ ಸಂಖ್ಯೆ: 110036146286, ಕೆನರಾ ಬ್ಯಾಂಕ್, ಎಪಿಎಂಸಿ ಶಾಖೆ, ಶಿವಮೊಗ್ಗ

ಐಎಫ್‌ಎಸ್‌ಸಿ ಕೋಡ್: ಸಿಎನ್‌ಆರ್‌ಬಿ0003066, ಎಂಐಸಿಆರ್ ಕೋಡ್: 577015203

50 ಸಾವಿರ ಮಕ್ಕಳಿಗೆ ಪೋಲಿಯೊ ಹನಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪಲ್ಸ್‌ಪೋಲಿಯೊ ಅಭಿಯಾನದಡಿ ಐದು ವರ್ಷದೊಳಗಿನ 50 ಸಾವಿರಕ್ಕೂ ಅಧಿಕ ಮಕ್ಕಳಿಗೆ ಸೋಮವಾರ ಪೋಲಿಯೊ ಹಾಕಲಾಗಿದೆ.

'ಆರೋಗ್ಯ ಕಾರ್ಯಕರ್ತ ಮನೆ ಮನೆಗೆ ತೆರಳಿ 51,801ಮಕ್ಕಳಿಗೆ ಹನಿ ಹಾಕಿದ್ದಾರೆ' ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ.ಬಾಲಚಂದರ್ 'ಪ್ರಜಾವಾಣಿ'ಗೆ ತಿಳಿಸಿದರು.

'10.80 ಲಕ್ಷ ಮಕ್ಕಳಿಗೆ ಪೋಲಿಯೊ ಹನಿ ಹಾಕುವ ಗುರಿ ಹಾಕಿಕೊಳ್ಳಲಾಗಿತ್ತು. ಇದುವರೆಗೆ ಒಟ್ಟು ಶೇ 98.43 ಗುರಿ ಸಾಧನೆ ಮಾಡಲಾಗಿದೆ.' ಎಂದರು.



ಎಸ್‌ಎಸ್‌ಎಫ್ ಸಾಹಿತ್ಯೋತ್ಸವ: ಮೂವರಿಗೆ ಪ್ರಥಮ ಸ್ಥಾನ

ಬೆಂಗಳೂರು: ಗುಜರಾತ್‌ನಲ್ಲಿ ಇತ್ತೀಚೆಗೆ ನಡೆದ ಎಸ್‌ಎಸ್‌ಎಫ್ ರಾಷ್ಟ್ರೀಯ ಸಾಹಿತ್ಯೋತ್ಸವದಲ್ಲಿ ಕರ್ನಾಟಕದ ತಂಡವು ರನ್ನರ್ ಅಪ್ ಸ್ಥಾನ ಪಡೆಯಿತು. ಮೊದಲ ಸ್ಥಾನವನ್ನು ಜಮ್ಮು-ಕಾಶ್ಮೀರ ರಾಜ್ಯ ಗಳಿಸಿತು. ಕರ್ನಾಟಕದತಂಡದಲ್ಲಿ ಬೆಂಗಳೂರಿನ ಹಲಸೂರಿನಲ್ಲಿರುವ ಮರ್ಕಿನ್ಸ್ ಸಂಸ್ಥೆಯ 17 ಸ್ಪರ್ಧಿಗಳು ಭಾಗವಹಿಸಿದ್ದರು.

ಅಬ್ದುಲ್ ಬಾಸಿತ್, (ಅರೇಬಿಕ್ ಭಾಷಣ), ಆರ್.ರಕೀಬ್ (ಡಿಜಿಟಲ್ ಡಿಸೈನ್), ಶರೀಫ್ ಹಾಸನ (ಹಿಂದಿ ಕವಿತೆ) ಪ್ರಥಮ ಸ್ಥಾನ ಪಡೆದರು.

ವಿವಿಧ ವಿಭಾಗಗಳಲ್ಲಿ ಸ್ಪರ್ಧಿಸಿದ್ದ ನಬೀಲ್, ಸಾಬೀತ್, ರಾಫಿ, ಅರ್ಷಕ್ ಉಬೈದ್, ಮುಬಶೀ‍ರ್ ದ್ವಿತೀಯ ಸ್ಥಾನ, ಅನ್ಸಾರ್ (ಕ್ಯಾಲ್ಲಿಗ್ರಫಿ), ಆಬಿದ್ (ಇಂಗ್ಲಿಷ್ ಕವಿತೆ), ಮುಹಮ್ಮದ್ ಫಾಯಿಸ್ (ಇಂಗ್ಲಿಷ್ ಪದ್ಯರಚನೆ), ಫಸ್ಲು ರಹ್ಮಾನ್ (ಇಂಗ್ಲಿಷ್ ಪದ್ಯ ಪಠಣ) ತೃತೀಯ ಸ್ಥಾನ ಪಡೆದರು.

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಮಾರ್ಚ್ 2ರಂದು ಬೆಳಿಗ್ಗೆ 11ರಿಂದ 6ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಮಲ್ಲೇಶಪಾಳ್ಯ, ಮಾರುತಿ ನಗರದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಕೋರಮಂಗಲ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

FORM-IV
PRAJAVANI

STATEMENT about ownership and other particulars about newspaper 'PRAJAVANI' Bangalore as required to be published under Section 19-D (b) of the Press and Registration of Books Act, read with Rule-8 of the Registration of Newspapers (Central) Rules, 1956.

1. **Place of Publication:** Bangalore
2. **Periodicity of Publication:** Daily
3. **Printer :** Mr. B. A. Ravi, Citizen of India, No.1857/P HIG, Sri Ranga Nilaya, Jalavahini Road, Srirampuram 2nd Stage, Mysore-570023
4. **Publisher :** Mr. B. A. Ravi, Citizen of India, No.1857/P HIG, Sri Ranga Nilaya, Jalavahini Road, Srirampuram 2nd Stage, Mysore-570023
5. **Editor :** Mr. Sudesha Doddapalya Citizen of India, Olavu, # 286, 12th Cross, Janatha Nagar, T.K. Layout, Mysore.
6. Names and addresses of individuals who own the newspaper and partners or shareholders holding more than one percent of the total capital.

Proprietors: The Printers (Mysore) Pvt. Ltd. CIN. No. U22110KA1948PTC000521 Plot No. 7-12, Kumbalgodu Industrial Area II Phase, Mysore Road, Bangalore-560 074.

Shareholders holding more than one percent of the total capital:

1. Mr. K. N. Hari Kumar, No. 22 1st 'A' Main, 1st Block, RMV 2nd Stage, Bangalore-560 094.

2. Mr. K. N. Tilak Kumar, No. 173, Subbaramachetty Road, Basavanagudi, Bangalore-560 004.

3. Mr. K. N. Shanth Kumar, No. 298/A, 1st Main Road, 8th Block, Jayanagar, Bangalore - 560 082.

4. K. N. Guruswamy & Co. Pvt. Ltd. No. 75, M. G. Road, Bangalore-560 001 5. Legal Heirs of Late Khan Bahadur Budan Saheb, Landlord, Hindupur, Andhra Pradesh. 6. Mr. S. N. Srinivasa Murthy, Mr. S. N. Shiva Shankar, No. 10, VI Main, II Cross, Gandhinagar, Bangalore - 560 009. 7. Mr. S. D. Eswarasa, Sri. Durgamba Lodge, 305, Subedar Chatram Road, 6th Main, Gandhinagar, Bangalore - 560 009. 8. Mr. S.D. Aswathnarayana, Mr. S. D. Nageshwar, Mr. S. D. Shivaram, Mr. S. D. Krishnamurthy, Mr. S. N. Raghavendra, No. 361, II 'C' Cross, 4th Main Road, 3rd Stage, 3rd Block, Basaveswaranagar, Bangalore-560 079 9. Mr. M. P. Manjunath, No.172, Ground Floor, Moksha Marga, Siddartha Layout, Mysore - 570011, 10. Mr. S.D. Muniswamy, Swamy Dhondusa Fabric, Sri Lodge (Basement) No. 9, 6th Main, 2nd Cross, Gandhinagar, Bangalore-560 009 11. Mrs. Prema B. Moola, Mr. Ananda Ranga Moola, Mr. Ved Manu Moola, & Ms. Dev Siri Moola, No. 9, 'Rangapuri', Lalbagh Road, Bangalore-560 027. 12. Mrs. Pratibha S. Moola, Mr. Siddartha S. Moola, Ms. Lakshmi S. Moola, Ms. Vidya S. Moola, Ms. Aparna S. Moola, No. 38, Wellington Street, Richmond Town, Bangalore-560 025. 13. Mrs. Anuradha R. Moola, Ms. Sharuna R. Moola, Ms. Bhavana R. Moola, 'Centropolis', No. 21, Langford Road, Richmond Town, Bangalore-560 025. 14. Mrs. Dechu R. Moola, Mr. Vishnu R. Moola, Ms. Brinda Devi Moola, Ms. Maya R. Moola, Flat No. 32, August Mansion Apts. No. 42, Curley Street, Richmond Town, Bangalore-560 025.

I, B. A. Ravi, hereby declare that the particulars given above are true to the best of my knowledge and belief.

Place : Bangalore
Date : 28-02-2022

Sd/-
(B. A. Ravi)
Publisher

3ರಿಂದ ದ್ರಾಕ್ಷಿ–ಕಲ್ಲಂಗಡಿ ಮೇಳ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಹಾಪ್‌ಕಾಮ್ಸ್ ವತಿಯಿಂದ ಮಾರ್ಚ್ 3ರಿಂದ ಏಪ್ರಿಲ್‌ವರೆಗೆ ರಿಯಾಯಿತಿ ದರದಲ್ಲಿ 'ದ್ರಾಕ್ಷಿ ಮತ್ತು ಕಲ್ಲಂಗಡಿ ಮಾರಾಟ ಮೇಳ' ಆಯೋಜಿಸಲಾಗಿದೆ ಎಂದು ಹಾಪ್‌ಕಾಮ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್.ಮಿರ್ಜಿ ತಿಳಿಸಿದರು.

'ವಿಜಯಪುರ, ಬಾಗಲಕೋಟೆ, ಗದಗ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಬೆಳೆದ 8ಕ್ಕೂ ಹೆಚ್ಚು ತಳಿಯ ದ್ರಾಕ್ಷಿ ಹಾಗೂ ಕಿರಣ, ನಾಮಧಾರಿ ತಳಿಯ ಕಲ್ಲಂಗಡಿ ಮೇಳದಲ್ಲಿ ಇರಲಿದೆ. ಈ ಬಾರಿ ಶೇ 5ರಷ್ಟು ರಿಯಾಯಿತಿ ದರದಲ್ಲಿ ಮಾರಾಟ ನಡೆಯಲಿದೆ. ಮೇಳದ ಮೊದಲ ವಾರದಲ್ಲಿ 50 ಟನ್ ದ್ರಾಕ್ಷಿ ಮತ್ತು 25 ಟನ್ ಕಲ್ಲಂಗಡಿ ಮಾರಾಟ ಆಗುವ ನಿರೀಕ್ಷೆ ಇದೆ' ಎಂದರು.

ಹಾಪ್‌ಕಾಮ್ಸ್ ಅಧ್ಯಕ್ಷ ಎನ್. ದೇವರಾಜ್, 'ಲಾಲ್‌ಬಾಗ್ ಬಳಿ ಇರುವ ಹಾಪ್‌ಕಾಮ್ಸ್ ಕೇಂದ್ರ ಕಚೇರಿಯಲ್ಲಿ ಮಾರ್ಚ್ 3ರಂದು ಬೆಳಿಗ್ಗೆ 11 ಗಂಟೆಗೆ ತೋಟಗಾರಿಕೆ ಸಚಿವ ಮುನಿರತ್ನ ಮೇಳ ಉದ್ಘಾಟಿಸುವರು. ಸಂಸ್ಥೆಯ ಮಳಿಗೆಗಳಲ್ಲೂ ಮಾರಾಟ ಇರಲಿದೆ' ಎಂದರು. ಆಯೋಜಿಸಲಾಗಿದೆ ಎಂದು ಹಾಪ್‌ಕಾಮ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್.ಮಿರ್ಜಿ ತಿಳಿಸಿದರು.

'ವಿಜಯಪುರ, ಬಾಗಲಕೋಟೆ, ಗದಗ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಬೆಳೆದ 8ಕ್ಕೂ ಹೆಚ್ಚು ತಳಿಯ ದ್ರಾಕ್ಷಿ ಹಾಗೂ ಕಿರಣ, ನಾಮಧಾರಿ ತಳಿಯ ಕಲ್ಲಂಗಡಿ ಮೇಳದಲ್ಲಿ ಇರಲಿದೆ. ಈ ಬಾರಿ ಶೇ 5ರಷ್ಟು ರಿಯಾಯಿತಿ ದರದಲ್ಲಿ ಮಾರಾಟ ನಡೆಯಲಿದೆ. ಮೇಳದ ಮೊದಲ ವಾರದಲ್ಲಿ 50 ಟನ್ ದ್ರಾಕ್ಷಿ ಮತ್ತು 25 ಟನ್ ಕಲ್ಲಂಗಡಿ ಮಾರಾಟ ಆಗುವ ನಿರೀಕ್ಷೆ ಇದೆ' ಎಂದರು.

ಹಾಪ್‌ಕಾಮ್ಸ್ ಅಧ್ಯಕ್ಷ ಎನ್. ದೇವರಾಜ್, 'ಲಾಲ್‌ಬಾಗ್ ಬಳಿ ಇರುವ ಹಾಪ್‌ಕಾಮ್ಸ್ ಕೇಂದ್ರ ಕಚೇರಿಯಲ್ಲಿ ಮಾರ್ಚ್ 3ರಂದು ಬೆಳಿಗ್ಗೆ 11 ಗಂಟೆಗೆ ತೋಟಗಾರಿಕೆ ಸಚಿವ ಮುನಿರತ್ನ ಮೇಳ ಉದ್ಘಾಟಿಸುವರು. ಸಂಸ್ಥೆಯ ಮಳಿಗೆಗಳಲ್ಲೂ ಮಾರಾಟ ಇರಲಿದೆ' ಎಂದು ಉಮೇಶ್ ಅವರು ಹೇಳಿದರು.

ಚುನಾವಣೆ ಎದುರಿಸಲು ಸಿದ್ಧರಾಗಿ: ಬೈರತಿ

ಕೆ.ಆರ್.ಪುರ: 'ಬಿಬಿಎಂಪಿ ಮತ್ತು ವಿಧಾನಸಭೆ ಚುನಾವಣೆಗಳನ್ನು ಸಮರ್ಥವಾಗಿ ಎದುರಿಸಲು ಪಕ್ಷ ಸಂಘಟನೆಗೆ ಒತ್ತು ನೀಡಬೇಕು' ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಹೇಳಿದರು.

ಬಿಜೆಪಿ ಮಹಿಳಾ ಮೋರ್ಚಾ ಅಯೋಜಿಸಿದ್ದ ಮಹಿಳಾ ಕಾರ್ಯಕಾರಣಿ ಸಭೆ ಉದ್ಘಾಟಿಸಿ ಮಾತನಾಡಿದರು.

'ಈ 2 ಚುನಾವಣೆಗಳನ್ನು ಎದುರಿಸಲು ಕಾರ್ಯಕರ್ತರು ಕಾರ್ಯೋನ್ಮುಖರಾಗಬೇಕು. ಮುಖಂಡರು, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಒಗ್ಗಟಿನಿಂದ ಪಕ್ಷವನ್ನು ಮತ್ತಷ್ಟು ಬಲಿಷ್ಠಗೊಳಿಸಬೇಕು' ಎಂದರು.



ಸಚಿವ ಬೈರತಿ ಬಸವರಾಜ ಮಾತನಾಡಿದರು.

'ನಿಷ್ಠಾವಂತ ಕಾರ್ಯಕರ್ತರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನನ್ನದು' ಎಂದು ಹೇಳಿದರು.

ಮಹಿಳಾ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷೆ ಗೀತಾ ವಿವೇಕಾನಂದಬಾಬು, ಜಿಲ್ಲಾ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಜಯಂತಿ, ಕ್ಷೇತ್ರದ ಅಧ್ಯಕ್ಷ ಎಂ.ಶಿವರಾಜ್, ಕ್ಷೇತ್ರದ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾದೇವಿ ಶ್ರೀನಿವಾಸ್ ಇದ್ದರು.

ಬಯೋಕಾನ್‌ನಿಂದ 'ಬಯೋಸಿಮಿಲರ್ಸ್' ವಹಿವಾಟು ಖರೀದಿ

ನವದೆಹಲಿ (ಪಿಟಿಐ): ವಯಾಟ್ರಿಸ್ ಕಂಪನಿಯ 'ಬಯೋಸಿಮಿಲರ್ಸ್' ವಹಿವಾಟನ್ನು ₹ 24,990 ಕೋಟಿಗೆ ಖರೀದಿಸುತ್ತಿರುವುದಾಗಿ ಬಯೋಕಾನ್ ಕಂಪನಿ ಪ್ರಕಟಿಸಿದೆ. ಇದು ಫಾರ್ಮಾ, ಆರೋಗ್ಯ ಸೇವಾ ವಲಯದ ಅತಿದೊಡ್ಡ ಖರೀದಿ ಒಪ್ಪಂದ ಎನ್ನಲಾಗಿದೆ.

ಈ ವಿಚಾರವಾಗಿ ಬಯೋಕಾನ್‌ನ ಅಂಗಸಂಸ್ಥೆಯಾಗಿರುವ ಬಯೋಕಾನ್ ಬಯೋಲಾಜಿಕ್ಸ್, ವಯಾಟ್ರಿಸ್ ಜೊತೆ ಒಪ್ಪಂದ ಮಾಡಿಕೊಂಡಿದೆ.

3ರಂದು ನೀರು ಪೂರೈಕೆಯಲ್ಲಿ ವ್ಯತ್ಯಯ

ಬೆಂಗಳೂರು: ಕಾವೇರಿ 3ನೇ ಹಂತ ಮತ್ತು 4ನೇ ಹಂತದ 1ನೇ ಘಟ್ಟದಿಂದ ನೀರು ಸರಬರಾಜಾಗುವ ಪ್ರದೇಶಗಳಲ್ಲಿ ಮಾರ್ಚ್ 3ರಂದು ಬೆಳಿಗ್ಗೆ 6ರಿಂದ ಮಧ್ಯರಾತ್ರಿ 12ರವರೆಗೆ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ತಿಳಿಸಿದೆ.

ಗಾಂಧಿನಗರ, ವಸಂತ ನಗರ, ಹೈಗ್ರೌಂಡ್ಸ್, ಪುರಭವನ, ಲಾಲ್‌ಬಾಗ್ ರಸ್ತೆ, ಕಬ್ಬನ್ ಪೇಟೆ, ಕುಂಬಾರಪೇಟೆ, ಚಿಕ್ಕಪೇಟೆ, ಭಾರತಿ ನಗರ, ಶಿವಾಜಿ ನಗರ, ಎಂ.ಎಂ ರಸ್ತೆ, ಬ್ಯಾಡರಹಳ್ಳಿ, ನೇತಾಜಿ ರಸ್ತೆ, ವಿವೇಕಾನಂದ ನಗರ, ಡಿ.ಜೆ.ಹಳ್ಳಿ, ನಾಗವಾರ, ಲಿಂಗರಾಜಪುರ, ಚಾಮರಾಜಪೇಟೆ, ಹನುಮಂತ ನಗರ, ಗಿರಿನಗರ, ಬ್ಯಾಟರಾಯನಪುರ, ಶ್ರೀನಗರ, ಬನಶಂಕರಿ, ಯಶವಂತಪುರ, ಮಲ್ಲೇಶ್ವರ, ಜಯಮಹಲ್, ಶೇಷಾದ್ರಿಪುರ, ಸದಾಶಿವನಗರ, ಪ್ಯಾಲೇಸ್ ಗುಟ್ಟಹಳ್ಳಿ, ಸಂಜಯನಗರ, ಡಾಲರ್ಸ್ ಕಾಲೊನಿ, ಗೆದ್ದಲಹಳ್ಳಿ, ಭೂಪಸಂದ್ರ, ಆರ್.ಟಿ.ನಗರ, ಆನಂದನಗರ, ಸುಲ್ತಾನ್ ಪಾಳ್ಯ, ಎಂ ಜಿ. ರಸ್ತೆ, ಇಂದಿರಾನಗರ, ಹಲಸೂರು, ಎಸ್.ಪಿ.ರಸ್ತೆ, ಓ.ಟಿ. ಪೇಟೆ, ಕೆ.ಜಿ.ಹಳ್ಳಿ, ಮಡಿವಾಳ, ನೇತಾಜಿ ನಗರ, ಗಣಪತಿ ನಗರ, ಉತ್ತರಹಳ್ಳಿ, ಬೆಳ್ಳಂದೂರು, ಇಬ್ಬಲೂರು, ಎಸಿಎಸ್ ಕೇಂದ್ರ, ಸಿದ್ಧಾರ್ಥ ಕಾಲೊನಿ, ಜಕ್ಕಸಂದ್ರ, ಅರಸು ಕಾಲೊನಿ, ಕೃಷ್ಣಪ್ಪ ಗಾರ್ಡನ್, ಬಿಎಚ್‌ಇಎಲ್ ಬಡಾವಣೆ, ಗುರಪ್ಪನ ಪಾಳ್ಯ, ಬಿಸ್ಮಿಲ್ಲಾನಗರ, ಪುಟ್ಟೇನಹಳ್ಳಿ, ಜರಗನಹಳ್ಳಿ, ಆರ್‌ಬಿಐ ಬಡಾವಣೆ, ಪಾಂಡುರಂಗ ನಗರ, ಅರಕೆರೆ, ಕೋಣನಕುಂಟೆ, ರೋಟರಿ ನಗರ, ಅಗರ, ಮಂಗಮ್ಮನ ಪಾಳ್ಯ, ಐಟಿಐ ಬಡಾವಣೆ, ಹೊಸಪಾಳ್ಯ, ಬಂಡೆ ಪಾಳ್ಯ, ಚಂದ್ರ ಬಡಾವಣೆ, ನಾಗರಬಾವಿ, ಅನ್ನಪೂರ್ಣೇಶ್ವರಿ ನಗರ, ವಿಶ್ವೇಶ್ವರಯ್ಯ ಬಡಾವಣೆ, ಬಿಇಎಲ್ ಬಡಾವಣೆ, ಮಲ್ಲತ್ತಹಳ್ಳಿ, ಉಲ್ಲಾಳ, ಡಿ ಗ್ರೂಪ್ ಬಡಾವಣೆ, ಬ್ಯಾಡರಹಳ್ಳಿ, ರಾಜಾಜಿನಗರ, ರಾಜಾಜಿನಗರ 6ನೇ ಬ್ಲಾಕ್, ನಂದಿನಿ ಲೇಔಟ್, ಮಂಜುನಾಥನಗರ, ಬಸವೇಶ್ವರ ನಗರ, ಗೊರಗುಂಟೆ ಪಾಳ್ಯ, ಶಂಕರನಗರ, ಶಂಕರಮಠ, ಪ್ರಕಾಶ್ ನಗರ, ಕುರುಬರಹಳ್ಳಿ, ಕಮಲಾನಗರ, ಶಿವನಗರ, ಕೆ.ಎಚ್.ಬಿ.ಕಾಲೋನಿ, ಅಗ್ರಹಾರ ದಾಸರಹಳ್ಳಿ, ಪಾಪಯ್ಯ ಗಾರ್ಡನ್ ಸುತ್ತಮುತ್ತಲಿನ ಪ್ರದೇಶಗಳು

ಕಾವೇರಿ ನೀರು ಸರಬರಾಜು ಯೋಜನೆಯ 3ನೇ ಮತ್ತು 4ನೇ ಹಂತ 1ನೇ ಘಟ್ಟದಡಿ ನೀರು ಸರಬರಾಜು ಆಗುವ ಪ್ರದೇಶಗಳ ಸಂಪೂರ್ಣ ವಿವರಗಳನ್ನು ಮಂಡಳಿಯ www.bwssb.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಅಮೃತ ನಗರೋತ್ಥಾನ ಯೋಜನೆಯಡಿ ಅನುದಾನ ಬಿಡುಗಡೆ

ಮತ್ತೆ ನಾಲ್ಕು ಕ್ಷೇತ್ರಗಳಿಗೆ ₹725 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೃತ ನಗರೋತ್ಥಾನ ಯೋಜನೆಯಡಿ ರಾಜ್ಯ ಸರ್ಕಾರವು ಬಿಬಿಎಂಪಿ ವ್ಯಾಪ್ತಿಯ ವಿವಿಧ ಕ್ಷೇತ್ರಗಳ ಅಭಿವೃದ್ಧಿ ಕಾಮಗಾರಿಗಳಿಗೆ ಇದುವರೆಗೆ ಒಟ್ಟು ₹ 2,518 ಕೋಟಿ ಅನುದಾನ ಬಿಡುಗಡೆ ಮಾಡಿದೆ.

ಬಿಜೆಪಿಯ ಶಾಸಕರು ಪ್ರತಿನಿಧಿಸುವ 10 ಕ್ಷೇತ್ರಗಳಿಗೆ ಒಟ್ಟು ₹ 1,793 ಕೋಟಿ ಅನುದಾನವನ್ನು ಫೆ. 25ರಂದು ಸರ್ಕಾರ ಮಂಜೂರು ಮಾಡಿತ್ತು. ತಮ್ಮ ಕ್ಷೇತ್ರಗಳಿಗೆ ಅನುದಾನ ಮೀಸಲಿಡದ ಬಗ್ಗೆ ಕೆಲವು ಶಾಸಕರು ಅಸಮಾಧಾನ ವ್ಯಕ್ತಪಡಿಸಿದ್ದರು. ಅವರನ್ನು ಸಮಾಧಾನ ಪಡಿಸುವ ಸಲುವಾಗಿ ಸರ್ಕಾರವು ಬಿಜೆಪಿ ಶಾಸಕರು ಪ್ರತಿನಿಧಿಸುವ ನಾಲ್ಕು ಕ್ಷೇತ್ರಗಳಿಗೆ ಒಟ್ಟು ₹725 ಕೋಟಿ ಅನುದಾನ ಹಂಚಿಕೆ ಮಾಡಿದೆ.

ಯೋಜನೆ ಅಡಿ ಈವರೆಗೆ ಬಿಜೆಪಿ ಶಾಸಕರು ಪ್ರತಿನಿಧಿಸುವ 14 ಕ್ಷೇತ್ರಗಳಿಗಷ್ಟೇ ಅನುದಾನ ಬಿಡುಗಡೆ ಮಾಡಲಾಗಿದೆ. ಸಚಿವ ಅಶೋಕ ಪ್ರತಿನಿಧಿಸುವ ಪದ್ಮನಾಭನಗರ ಕ್ಷೇತ್ರವೂ ಸೇರಿದಂತೆ ಕಾಂಗ್ರೆಸ್ ಪಕ್ಷದ ಶಾಸಕರು ಪ್ರತಿನಿಧಿಸುವ 11 ಕ್ಷೇತ್ರಗಳು ಹಾಗೂ ಜೆಡಿಎಸ್ ಶಾಸಕ ಪ್ರತಿನಿಧಿಸುವ ಒಂದು ಕ್ಷೇತ್ರಕ್ಕೆ ಅನುದಾನ ಹಂಚಿಕೆ ಆಗಿಲ್ಲ. ಈ ಬಗ್ಗೆ ಕಾಂಗ್ರೆಸ್‌ನ ಹಲವು ಶಾಸಕರು ಬೇಸರ ವ್ಯಕ್ತಪಡಿಸಿದ್ದಾರೆ.

ಅಮೃತ ನಗರೊತ್ಥಾನ: ಅನುದಾನ ಬಿಡುಗಡೆ ವಿವರ

ಕ್ಷೇತ್ರ	ಅನುದಾನ (₹ ಕೋಟಿ)
ಚಿಕ್ಕಪೇಟೆ	140
ಕೆ.ಆರ್.ಪುರ	207
ಮಲ್ಲೇಶ್ವರ	170
ಮಹದೇವಪುರ	208

ಈ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ಕರೆ ಮಾಡಿ ತರಾಟೆಗೆ ತೆಗೆದುಕೊಂಡಿದ್ದಾರೆ. ತಾರತಮ್ಯ ಸರಿಪಡಿಸದಿದ್ದರೆ ಅಧಿವೇಶನದಲ್ಲಿ ಧರಣಿ ನಡೆಸುತ್ತೇವೆ ಎಂದೂ ಎಚ್ಚರಿಕೆ ನೀಡಿದ್ದಾರೆ. 2-3 ದಿನಗಳಲ್ಲಿ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡಲಾಗುತ್ತದೆ ಎಂದು ಅಧಿಕಾರಿಗಳು ಶಾಸಕರನ್ನು ಸಮಾಧಾನಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಪೀಣ್ಯ ಕೈಗಾರಿಕಾ ವಲಯವುಳ್ಳ ನನ್ನ ಕ್ಷೇತ್ರದಲ್ಲಿ ಹೆಚ್ಚಿನ ಸಮಸ್ಯೆಗಳಿವೆ. ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚುವರಿ ಅನುದಾನ ಬಿಡುಗಡೆಗೆ ಒತ್ತಾಯಿಸಿದ್ದೆ. ಅಧಿವೇಶನದಲ್ಲೂ ಗಮನ ಸೆಳೆದಿದ್ದೆ. ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡಬಾರದು. ದಾಸರಹಳ್ಳಿ ಕ್ಷೇತ್ರಕ್ಕೆ ಇನ್ನಾದರೂ ಯೋಜನೆ ಅಡಿ ಅನುದಾನ ಬಿಡುಗಡೆ ಮಾಡಬೇಕು’ ಎಂದು ಶಾಸಕ ಆರ್.ಮಂಜುನಾಥ್ ಒತ್ತಾಯಿಸಿದರು.

ಸಂಕ್ಷಿಪ್ತ ಸುದ್ದಿ

ಡಾ.ಜಿಎಸ್ಸೆಸ್ ಪ್ರಶಸ್ತಿ ಪ್ರದಾನ: ಬಸವರಾಜ ಕಲ್ಗುಡಿ, ನಟರಾಜ್ ಬೂದಾಳ್, ಪುರಸ್ಕೃತರು–ಗುರುಲಿಂಗ ಕಾಪಸೆ, ಎಚ್.ಎಸ್.ಶ್ರೀಮತಿ, ಭಾಷಣ–ಎಂ.ಎಸ್.ಆಶಾದೇವಿ, ಅತಿಥಿಗಳು–ಎಚ್. ದಂಡಪ್ಪ, ಅರ್ಪಿತಾ ವೇಣು, ಲಲಿತಾ ಶ್ರೀನಿವಾಸ್, ಆಯೋಜನೆ–ಡಾ.ಜಿಎಸ್ಸೆಸ್ ವಿಶ್ವಸ್ತ ಮಂಡಲಿ, ಸ್ಥಳ–ಸಿ.ಅಶ್ವಥ್ ಕಲಾ ಭವನ, ಎನ್.ಆರ್.ಕಾಲೊನಿ, ಬೆಳಿಗ್ಗೆ 11

ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣ ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸ್ಥಳ–ವೇಮನ ವೃತ್ತ, ಎಚ್.ಎಸ್.ಆರ್.ಬಡಾವಣೆ, ಬೆಳಿಗ್ಗೆ 11

ಶಿವರಾತ್ರಿ ಕಾರ್ಯಕ್ರಮಗಳು

ಶಿವ ರಾತ್ರಿ ಸ್ವರ ಸಂಭ್ರಮ: ಸಂಜೆ 4ಕ್ಕೆ ಗಾಯನ ಮತ್ತು ವಾದನ, ಸಂಜೆ 6.30ಕ್ಕೆ ಉದ್ಘಾಟನೆ–ಶಾಸಕ ಆರ್.ಮಂಜುನಾಥ್, ಅಧ್ಯಕ್ಷತೆ–ಪಂಡಿತ್ ಸತೀಶ್ ಹಂಪಿಹೊಳಿ, ಸಂಜೆ 7ಕ್ಕೆ



ಸಂಗೀತ ಕಾರ್ಯಕ್ರಮ, ಆಯೋಜನೆ–ಗುರುಕುಮಾರ ಪಂಚಾಕ್ಷರೇಶ್ವರ ಸಂಗೀತ ಕಲಾ ವೇದಿಕೆ, ಸ್ಥಳ–ಪಂಡಿತ್ ಆರ್. ವಿ.ಶೇಷಾದ್ರಿ ಗವಾಯಿ ಸಭಾಂಗಣ, ನೇವಿ ಬಡಾವಣೆ, ಚಿಮಣಿ ಹಿಲ್ಸ್

ಮಹಾಶಿವರಾತ್ರಿ ರಂಗ ಮಹೋತ್ಸವ: ಸಂಜೆ 6.30ಕ್ಕೆ ‘ವರಭ್ರಷ್ಠ’ ನಾಟಕ ಪ್ರದರ್ಶನ, 7.30ಕ್ಕೆ ‘ರೊಟ್ಟಿ ಋಣ’ ನಾಟಕ ಪ್ರದರ್ಶನ, ಆಯೋಜನೆ–ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ–ಸಂಸಾರ ಸದನ, ಕೆಂಪೇಗೌಡ ನಗರ.

ಶಿವರಾತ್ರಿ ನಾಟಕೋತ್ಸವ: ಸಂಜೆ 7ಕ್ಕೆ ‘36 ಅಲ್ಲ 63’ ನಾಟಕ. ರಾತ್ರಿ 9 ಗಂಟೆಗೆ ‘ಪ್ರಚಂಡ ರಾವಣ’ ನಾಟಕ ಪ್ರದರ್ಶನ, ಅತಿಥಿಗಳು–ಶಾಸಕ ಬೈರತಿ ಸುರೇಶ್, ಎನ್.ಬಿ.ನಾರಾಯಣ, ಆಯೋಜನೆ–ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ, ಸ್ಥಳ–ಈಶ್ವರ ದೇವಸ್ಥಾನ, ನಾಗಶೆಟ್ಟಿಹಳ್ಳಿ.

ಶಿವನಾಮ ಪಠಣೆ, ಭಜನೆ, ಆರತಿ: ಆಯೋಜನೆ ಮತ್ತು ಸ್ಥಳ–ಶಿವೋಹಂ ಈಶ್ವರ ದೇವಸ್ಥಾನ, ಹಳೆಯ ವಿಮಾನ ನಿಲ್ದಾಣ ರಸ್ತೆ, ಮುರುಗೇಶಪಾಳ್ಯ, (ರಾತ್ರಿ 10 ರಿಂದ ಬುಧವಾರ ಬೆಳಿಗ್ಗೆ 4 ಗಂಟೆಯವರೆಗೆ)

ಸೂರ್ಯ ಲಕ್ಷದೀಪೋತ್ಸವ (ಸಂಜೆ 6.30): ‘ಸುಂದರಕಾಂಡ ರಾಮಾಯಣ ಅಥವಾ ಹನುಮದ್ವಿಲಾಸ’ ನಾಟಕ ಪ್ರದರ್ಶನ ರಾತ್ರಿ 8ಕ್ಕೆ, ಆಯೋಜನೆ–ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್, ಸಿ.ಎನ್.ಆರ್.ಹಿತಚಿಂತನ ಚಾರಿಟಬಲ್ ಟ್ರಸ್ಟ್, ಸ್ಥಳ–ಬಸವಣ್ಣ ದೇಗುಲ, ತೋಟಗೆರೆ, ಹೆಸರಘಟ್ಟ ಬಳಿ.

ವಿಶೇಷ ಪೂಜೆ ಮತ್ತು ಕ್ಷೀರಾಭಿಷೇಕ: ಆಯೋಜನೆ ಮತ್ತು ಸ್ಥಳ–ಪಟ್ಟಾಭಿರಾಮ ಸೇವಾ ಮಂಡಳಿ, ಜಯನಗರ 4ನೇ ಟಿ ಬ್ಲಾಕ್, ಸಂಜೆ 6

ಮೃತ್ತಿಕಾ ಶಿವಲಿಂಗ ದರ್ಶನ: ಬೆಳಿಗ್ಗೆ 9ರಿಂದ ಭಜನೆ, ಸಂಜೆ 6.30ಕ್ಕೆ ರುದ್ರಾಭಿಷೇಕ, ಆಯೋಜನೆ ಮತ್ತು ಸ್ಥಳ–ನಂಜನಗೂಡು ಶ್ರೀಕಂಠೇಶ್ವರ ಸೇವಾ ಸಂಘ, ಮಲ್ಲೇಶ್ವರ, (ರಾತ್ರಿ 12ಗಂಟೆಯವರೆಗೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ)

ಶಿವರಾತ್ರಿ ಮಹೋತ್ಸವ–ಜಾಗರಣೆ ಪ್ರಯುಕ್ತ ಅಹೋರಾತ್ರಿ ಸಂಗೀತ ನೃತ್ಯೋತ್ಸವ: ಆಯೋಜನೆ ಮತ್ತು ಸ್ಥಳ–ಮಹಾಯಾಗ ಕ್ಷೇತ್ರ ಗಾಯತ್ರೀ ದೇವಸ್ಥಾನ, ಯಶವಂತಪುರ, (ಸಂಜೆ 6.30ರಿಂದ ಮಂಗಳವಾರ ಬೆಳಿಗ್ಗೆ 6 ಗಂಟೆಯವರೆಗೆ)

ನೃತ್ಯ ಶಿವರಾತ್ರಿ: ಆಯೋಜನೆ–ಸೃಷ್ಟಿ ಕಲಾವಿದರು, ಸ್ಥಳ–ಶೇಷ ಮಹಾಗಣಪತಿ ದೇವಸ್ಥಾನ, ಹನುಮಂತನಗರ, ರಾತ್ರಿ 9

ಭಕ್ತಿಗೀತೆಗಳ ಭಜನೆ: ಆಯೋಜನೆ–ಮುನೇಶ್ವರ ಸ್ವಾಮಿ ದೇವಸ್ಥಾನ, ಜ್ಞಾನಭಾರತಿ ಆವರಣ, ರಾತ್ರಿ 10.30ರಿಂದ

ನೃತ್ಯ ಶಿವರಾತ್ರಿ: ಎ.ವಿ.ಸತ್ಯನಾರಾಯಣ, ಅರ್ಚನಾ ಎಸ್.ರಾವ್, ಚೈತನ್ಯ, ವಿಭಾ, ಸೃಷ್ಟಿ ಅವರಿಂದ ನೃತ್ಯ ಪ್ರದರ್ಶನ, ಆಯೋಜನೆ ಮತ್ತು ಸ್ಥಳ–ಶೇಷ ಮಹಾಬಲಮುರಿ ಗಣಪತಿ ಸೇವಾ ಸಮಿತಿ ಟ್ರಸ್ಟ್, ಹನುಮಂತನಗರ, ರಾತ್ರಿ 9

ನಟ ಚೇತನ್‌ಗೆ ಜಾಮೀನು

ಬೆಂಗಳೂರು: 'ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಚೋದನಕಾರಿ ಬರಹ ಪ್ರಕಟಿಸಿದ್ದಾರೆ' ಎಂಬ ಆರೋಪದಡಿ ಬಂಧಿಸಲಾಗಿದ್ದ ನಟ ಎ.ಚೇತನ್ ಕುಮಾರ್ ಅವರು ಜಾಮೀನು ಮೇಲೆ ಸೋಮವಾರ ಸಂಜೆ ಬಿಡುಗಡೆ ಆಗಿದ್ದಾರೆ.

ಫೆ. 22ರಂದು ಚೇತನ್ ಅವರನ್ನು ಶೇಷಾದ್ರಿಪುರ ಪೊಲೀಸರು ಬಂಧಿಸಿದ್ದರು. 14 ದಿನಗಳವರೆಗೆ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಅವರಿದ್ದರು.

8ನೇ ಎಸಿಎಂಎಂ ನ್ಯಾಯಾಲಯ, ಚೇತನ್ ಅವರಿಗೆ ಜಾಮೀನು ಮಂಜೂರು ಮಾಡಿ ಫೆ. 25ರಂದು ಆದೇಶ ಹೊರಡಿಸಿತ್ತು. ಆದರೆ, ಜಾಮೀನಿನ ಷರತ್ತುಗಳನ್ನು ಪೂರೈಸಲು ಶುಕ್ರವಾರ ಸಾಧ್ಯವಾಗಿರಲಿಲ್ಲ. ಹೀಗಾಗಿ, ಸೋಮವಾರ ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿದ ನಂತರವೇ ಚೇತನ್ ಜೈಲಿನಿಂದ ಬಿಡುಗಡೆಗೊಂಡರು.

'ಜಾತಿ, ಧರ್ಮ ಹಾಗೂ ಎರಡು ಗುಂಪಿನ ನಡುವೆ ದ್ವೇಷ ಉಂಟು ಮಾಡುವ ಹೇಳಿಕೆ ಪ್ರಚುರಪಡಿಸಿದ (ಐಪಿಸಿ 505 (2) ಹಾಗೂ ಅಪರಾಧ ಕೃತ್ಯ ಕೈಗೊಳ್ಳಲು ಪ್ರಚೋದನೆ (ಐಪಿಸಿ 504) ನೀಡಿದ್ದಾರೆ' ಎಂಬ ಆರೋಪದಡಿ ಚೇತನ್ ವಿರುದ್ಧ ಶೇಷಾದ್ರಿಪುರ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿದ್ದರು.



ಶಿವರಾತ್ರಿ ಪ್ರಯುಕ್ತ ಹನುಮಂತನಗರದ ಶ್ರೀಶೇಷ ಮಹಾಬಲಮುರಿ ಗಣಪತಿ, ಶಿವ ದೇವಸ್ಥಾನವನ್ನು ಢಮರುಗ ಹಾಗೂ ತ್ರಿಶೂಲಗಳಿಂದ ವಿಶೇಷವಾಗಿ ಅಲಂಕರಿಸುತ್ತಿದ್ದ ದೃಶ್ಯ ಸೋಮವಾರ ಕಂಡು ಬಂತು –ಪ್ರಜಾವಾಣಿ ಚಿತ್ರ



ಶಿವರಾತ್ರಿ ಪ್ರಯುಕ್ತ ಕೆ.ಆರ್‌.ಮಾರುಕಟ್ಟೆಯಲ್ಲಿ ಹೂವು ಮಾರಾಟದಲ್ಲಿ ತೊಡಗಿದ್ದ ವ್ಯಾಪಾರಿಗಳು –ಪ್ರಜಾವಾಣಿ ಚಿತ್ರ

ಶಿವರಾತ್ರಿ ಆಚರಣೆಗೆ ಸಜ್ಜು

ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಕಾರ್ಯಕ್ರಮಗಳಿಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವರಾತ್ರಿ ಹಬ್ಬದ ಆಚರಣೆಗೆ ನಗರದ ಜನರು ಸಜ್ಜಾಗಿದ್ದಾರೆ. ಬಹುತೇಕ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಅಭಿಷೇಕ ಸೇರಿದಂತೆ ಧಾರ್ಮಿಕ ಕಾರ್ಯಕ್ರಮಗಳಿಗೆ ಸಿದ್ಧತೆಗಳು ಭರದಿಂದ ಸಾಗಿವೆ.

ಎರಡು ವರ್ಷಗಳಿಂದ ಶಿವರಾತ್ರಿ ಸಂಭ್ರಮಕ್ಕೆ ಕೋವಿಡ್ ಅಡ್ಡಿಯಾಗಿತ್ತು. ಈ ಬಾರಿ ಆಚರಣೆಗೆ ಜನರು ಎಲ್ಲ ರೀತಿಯ ಸಿದ್ಧತೆ ಮಾಡಿಕೊಂಡಿದ್ದಾರೆ. ಮಂಗಳವಾರ ಹಾಗೂ ಬುಧವಾರ ಶಿವರಾತ್ರಿಯ ಆಚರಣೆ ನಡೆಯಲಿದ್ದು, ಮೊದಲ ದಿನ ಉಪವಾಸ ಆಚರಿಸಿ, ರಾತ್ರಿಯಿಡೀ ಜಾಗರಣೆ ಇರುತ್ತಾರೆ. ಮರುದಿನ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ಬಳಿಕ ಆಹಾರ ಸೇವಿಸುವುದು ವಾಡಿಕೆ.

ಗವಿಪುರದ ಗವಿ ಗಂಗಾಧರೇಶ್ವರ ದೇವಾಲಯ, ಮಲ್ಲೇಶ್ವರದ ಕಾಡು ಮಲ್ಲೇಶ್ವರ ದೇವಾಲಯ, ದಕ್ಷಿಣಮುಖ ನಂದಿ ತೀರ್ಥ, ಹಲಸೂರಿನ ಸೋಮೇಶ್ವರ ದೇವಸ್ಥಾನ, ಜರಗನಹಳ್ಳಿ ಗಂಗಾಧರೇಶ್ವರ ಸ್ವಾಮಿ ದೇವಸ್ಥಾನ, ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನ, ಚಂದ್ರಚೂಡೇಶ್ವರ ದೇವಸ್ಥಾನ, ಚಾಮರಾಜಪೇಟೆಯ ಮಲೆಮಹದೇಶ್ವರ ದೇವಸ್ಥಾನ, ಮುರುಗೇಶ ಪಾಳ್ಯದ ಶಿವೋಹಂ ಶಿವ ದೇವಸ್ಥಾನ, ಕೋಟೆ ಜಲಕಂಟೇಶ್ವರ ದೇವಸ್ಥಾನ ಸೇರಿ ವಿವಿಧ ಶಿವಾಲಯಗಳು ಮಹಾಶಿವರಾತ್ರಿ ಆಚರಣೆಗೆ ಸಜ್ಜಾಗಿವೆ.

ದೇವಸ್ಥಾನಗಳಲ್ಲಿ ವಿಶೇಷಪೂಜೆ, ರುದ್ರಾಭಿಷೇಕ, ಕ್ಷೀರಾಭಿಷೇಕ, ಬಿಲ್ವಪತ್ರೆ ಅರ್ಪಣೆ, ಮಹಾ ಮಂಗಳಾರತಿ ಸೇರಿದಂತೆ ವಿವಿಧ ಧಾರ್ಮಿಕ ವಿಧಿ ವಿಧಾನಗಳಿಗೆ ಭರದ ಸಿದ್ಧತೆಯಾಗಿದೆ. ಭಕ್ತರಿಗೆ ಶಿವನಾಮ ಸ್ಮರಣೆ, ಜಪ, ತಪಗಳಿಗೆ ವ್ಯವಸ್ಥೆ ಮಾಡಲಾಗಿದೆ.

ಜಾಗರಣೆ ನಿಮಿತ್ತ ನಾಟಕೋತ್ಸವ, ಸಂಗೀತ–ನೃತ್ಯ, ಲಕ್ಷ ದೀಪೋತ್ಸವ, ವಿಶೇಷ ಧಾರ್ಮಿಕ ಕಾರ್ಯಕ್ರಮಗಳನ್ನು ದೇವಸ್ಥಾನಗಳಲ್ಲಿ ಹಮ್ಮಿಕೊಳ್ಳಲಾಗಿದೆ. ತಳಿರು, ತೋರಣ ಹಾಗೂ ವಿದ್ಯುತ್ ದೀಪಗಳಿಂದ ದೇವಸ್ಥಾನಗಳು ಅಲಂಕಾರಗೊಂಡಿವೆ.

ಹಬ್ಬಕ್ಕಾಗಿ ಹೂವು, ಹಣ್ಣು, ತರಕಾರಿ ಹಾಗೂ ಹಬ್ಬಕ್ಕೆ ಅಗತ್ಯ ವಸ್ತುಗಳ ಖರೀದಿ ಸೋಮವಾರ ಗರಿಗೆದರಿತು. ಪ್ರಮುಖ ಮಾರುಕಟ್ಟೆಗಳೆಲ್ಲ ಗ್ರಾಹಕರಿಂದ ತುಂಬಿತ್ತು. ಶಿವಪೂಜೆಗೆ ಪ್ರಧಾನವಾಗಿ ಬಳಸುವ ಬಿಲ್ವಪತ್ರೆ, ವಿಭೂತಿ, ಹೂವು, ಹಣ್ಣುಗಳ ಖರೀದಿ ಜೋರಾಗಿತ್ತು. ಮಂಕುಕವಿದಂತಿದ್ದ ಮಾರುಕಟ್ಟೆಗಳು ಖರೀದಿಯಿಂದ ಕಳೆಗಟ್ಟಿವೆ.

ಕೆ.ಆರ್.ಮಾರುಕಟ್ಟೆ ಆವರಣದಲ್ಲಿ ಹಬ್ಬಕ್ಕಾಗಿ ತಾತ್ಕಾಲಿಕ ಮಳಿಗೆಗಳು ತಲೆ ಎತ್ತಿವೆ. ಯಶವಂತಪುರ, ಗಾಂಧಿ ಬಜಾರ್, ಮಲ್ಲೇಶ್ವರ, ಬಸವನಗುಡಿ, ಜಯನಗರ, ವಿಜಯನಗರ, ಮಡಿವಾಳ, ಕೆ.ಆರ್.ಪುರ, ಯಲಹಂಕ, ಕೆಂಗೇರಿ ಸೇರಿದಂತೆ ನಗರದ ಪ್ರಮುಖ ಬಡಾವಣೆಗಳಲ್ಲಿ ಪೂಜಾ ಸಾಮಗ್ರಿಗಳು, ಹೂವು ಮತ್ತು ಹಣ್ಣಿನ ಮಳಿಗೆಗಳನ್ನು ತೆರೆಯಲಾಗಿದೆ.

'ಬಿಲ್ವಪತ್ರೆ, ಎಕ್ಕದ ಹೂವಿನ ಹಾರ, ತುಳಸಿ, ಸುಗಂಧರಾಜ ಹೂವು ಬಳಕೆ ಹೆಚ್ಚಿರುವುದರಿಂದ ಇವುಗಳಿಗೆ ಬೇಡಿಕೆ ಇರುತ್ತದೆ. ಉಳಿದ ಹೂಗಳ ದರ ಸಾಮಾನ್ಯವಾಗಿರುತ್ತವೆ. ಎರಡು ದಿನ ವ್ಯಾಪಾರ ನೀರಸವಾಗಿತ್ತು. ಮಂಗಳವಾರದ ವೇಳೆಗೆ ಗ್ರಾಹಕರು ಹೆಚ್ಚಾಗುವ ನಿರೀಕ್ಷೆ ಇದೆ' ಎಂದು ಕೆ.ಆರ್.ಮಾರುಕಟ್ಟೆಯ ಹೂವಿನ ವರ್ತಕ ದಿವಾಕರ್ ಹೇಳಿದರು.

ಹಣ್ಣುಗಳ ವ್ಯಾಪಾರ ಜೋರು: ಹಣ್ಣಿನ ದರಗಳೆಲ್ಲ ತುಸು ಏರಿದೆ. ಹಾಪ್‌ಕಾಮ್ಸ್‌ನಲ್ಲೂ ಶಿವರಾತ್ರಿಗಾಗಿ ದ್ರಾಕ್ಷಿ ಮತ್ತು ಕಲ್ಲಂಗಡಿಯನ್ನು ವಿಶೇಷ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

ಮೆಣಸಿನಕಾಯಿ ತುಟ್ಟಿ: ಹಸಿ ಮೆಣಸಿನಕಾಯಿ ದರ ಗಣನೀಯವಾಗಿ ಏರಿದ್ದು, ಕೆ.ಜಿ.ಗೆ ₹80ರಿಂದ ₹125ರವರೆಗೆ ಮಾರಾಟ ಆಗುತ್ತಿದೆ. ದಪ್ಪ ಮೆಣಸಿನಕಾಯಿ ದರವೂ (ಕ್ಯಾಪ್ಸಿಕಂ) ₹80ರಂತೆ ಇದೆ. 'ಭಾರಿ ಮಳೆಯಿಂದಾಗಿ ಮೆಣಸಿನಕಾಯಿ ಬೆಳೆ ಹಾಳಾಗಿತ್ತು. ನಂತರ ಬೆಳೆದ ಮೆಣಸಿನಕಾಯಿ ಮಾರುಕಟ್ಟೆಗಳಿಗೆ ಪೂರೈಕೆಯಾಗುವುದು ವಿಳಂಬವಾಗಿದೆ. ಹಾಗಾಗಿ, ನಿರಂತರವಾಗಿ ಬೆಲೆ ಏರಿದೆ' ಎಂದು ಕಲಾಸಿಪಾಳ್ಯ ಸಗಟು ಮಾರುಕಟ್ಟೆಯ ತರಕಾರಿ ವರ್ತಕ ರಮೇಶ್ ಹೇಳಿದರು.

ಹಬ್ಬದಂದು ಮಾರುಕಟ್ಟೆಯಲ್ಲಿನ ದರಗಳು (ಪ್ರತಿ ಕೆ.ಜಿ.ಗೆ ₹ಗಳಲ್ಲಿ)



ತರಕಾರಿ	ಹಾಪ್‌ಕಾಮ್ಸ್ ದರ	ಚಿಲ್ಲರೆ ದರ
ಮೆಣಸಿನಕಾಯಿ	118	80
ಬೆಳ್ಳುಳ್ಳಿ	80	70
ಕ್ಯಾರೆಟ್	84	70
ಅವರೆಕಾಯಿ	70	60
ದಪ್ಪ ಮೆಣಸಿನಕಾಯಿ	80	70
ಈರುಳ್ಳಿ	47	30
ಆಲೂಗಡ್ಡೆ	30	20
ಶುಂಠಿ	36	30
ಬೀಟ್‌ರೂಟ್	43	30
ಬದನೆ	41	30
ಬೆಂಡೆಕಾಯಿ	36	20
ಹೂಕೋಸು	26	20
ಎಲೆಕೋಸು	26	20
ಬೀನ್ಸ್	25	20
ಟೊಮೆಟೊ	17	15

ಹೂವಿನ ದರ	
ಕನಕಾಂಬರ	900
ಮಲ್ಲಿಗೆ	800
ಕಾಕಡ	600
ಗುಲಾಬಿ	200
ಸುಗಂಧರಾಜ	200
ಸೇವಂತಿಗೆ	180
ತುಳಸಿ	250 (ಕಟ್ಟಿಗೆ)
ಬಿಲ್ವಪತ್ರೆ	50 (ಕಟ್ಟಿಗೆ)

ಹಣ್ಣುಗಳು	ಹಾಪ್‌ಕಾಮ್ಸ್ ದರ	ಚಿಲ್ಲರೆ ದರ
ದಾಳಿಂಬೆ	237	150
ಸೇಬು	210	150
ಸೀಬೆ	75	60
ಕಿತ್ತಳೆ	88	70
ದ್ರಾಕ್ಷಿ	54	70
ಸಪೋಟ	48	50
ಏಲಕ್ಕಿಬಾಳೆ	58	50
ಸೀತಾಫಲ	51	40
ಪಚ್ಚಬಾಳೆ	28	20
ಕಲ್ಲಂಗಡಿ	24	20

ಪೊಲೀಸ್ ಇಲಾಖೆಯ ಸಹಕಾರಕ್ಕಾಗಿ ಮನವಿ

ಫ್ಲೆಕ್ಸ್ ತೆರವು ಚುರುಕುಗೊಳಿಸಿ: ಗೌರವ್ ಗುಪ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಅನಧಿಕೃತವಾಗಿ ಅಳವಡಿಸಿರುವ ಫ್ಲೆಕ್ಸ್, ಬ್ಯಾನರ್‌ಗಳು, ಬಂಟಿಂಗ್‌ಗಳನ್ನು ತೆರವುಗೊಳಿಸುವ ಕಾರ್ಯವನ್ನು ಇನ್ನಷ್ಟು ಚುರುಕುಗೊಳಿಸಬೇಕು. ಅಧಿಕಾರಿಗಳು ತಕ್ಷಣ ಕಾರ್ಯಪ್ರವೃತ್ತರಾಗಿ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ತೆರವು ಕಾರ್ಯಾಚರಣೆ ನಡೆಸಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ ಜಾಹಿರಾತುಗಳ ತೆರವುಗೊಳಿಸುವಿಕೆ ಬಗ್ಗೆ ಸೋಮವಾರ ವರ್ಚುವಲ್ ರೂಪದಲ್ಲಿ ನಡೆದ ಸಭೆಯಲ್ಲಿ ಅವರು ಮಾತನಾಡಿದರು.


'ಚುನಾವಣೆಯ ಸಂದರ್ಭದಲ್ಲಿ ನಗರವು ಹೇಗೆ ಜಾಹೀರಾತುಗಳಿಂದ ಮುಕ್ತವಾಗಿರುತ್ತದೆಯೋ, ಅಂತಹದ್ದೇ ವಾತಾವರಣ ವರ್ಷ ಪೂರ್ತಿ ಇರಬೇಕು. ಪೊಲೀಸರು ಹಾಗೂ ಮಾರ್ಷಲ್‌ಗಳನ್ನು ಬಳಸಿಕೊಂಡು ಅನಧಿಕೃತ ಜಾಹೀರಾತು ತೆರವು ಕಾರ್ಯಾಚರಣೆ ನಡೆಸಬೇಕು. ಪಾಲಿಕೆಯ ಟ್ರ್ಯಾಕ್ಟರ್, ಪ್ರಹಾರಿ ವಾಹನವನ್ನು ಇದಕ್ಕೆ ಬಳಸಬಹುದು. ಅಗತ್ಯ ಬಿದ್ದರೆ ಹೆಚ್ಚುವರಿಯಾಗಿ ವಾಹನಗಳನ್ನು ಹಾಗೂ ಸಿಬ್ಬಂದಿಯನ್ನು ನಿಯೋಜನೆ ಮಾಡಿಕೊಳ್ಳಬಹುದು. ಅನಧಿಕೃತ ಬ್ಯಾನರ್ ಹಾಗೂ ಫ್ಲೆಕ್ಸ್‌ಗಳನ್ನು ಅಳವಡಿಸಿದವರ ವಿರುದ್ಧ ಸ್ಥಳೀಯ ಅಧಿಕಾರಿಗಳು ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಿಸಬೇಕು' ಎಂದರು.

'ನಗರದಲ್ಲಿ ಅನಧಿಕೃತ ಜಾಹೀರಾತು ತೆರವುಗೊಳಿಸುವ ವೇಳೆ ಅಹಿತಕರ ಘಟನೆ ನಡೆಯದಂತೆ ನೋಡಿಕೊಳ್ಳಬೇಕು. ಇದಕ್ಕೆ ಪೊಲೀಸ್ ಇಲಾಖೆಗೆ ಸಹಕಾರ ಒದಗಿಸಬೇಕು' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಗೌರವ ಗುಪ್ತ ಮನವಿ ಮಾಡಿದರು. 'ತೆರವು ಕಾರ್ಯಾಚರನೆ ವೇಳೆ ಪಾಲಿಕೆ ಅಧಿಕಾರಿಗಳಿಗೆ ಪೊಲೀಸ್ ಇಲಾಖೆಯಿಂದ ಅಗತ್ಯ ನೆರವು ನೀಡುತ್ತೇವೆ' ಎಂದು ಕಮಲ ಪಂತ್ ಭರವಸೆ ನೀಡಿದರು.

ಪಾಲಿಕೆಯ ಹಣಕಾಸು ವಿಭಾಗದ ಹೆಚ್ಚುವರಿ ಆಯುಕ್ತ ವೆಂಕಟೇಶ್ ಎಸ್., ಎಲ್ಲ ವಲಯಗಳ ಆಯುಕ್ತರು, ಜಂಟಿ ಆಯುಕ್ತರು, ಮುಖ್ಯ ಎಂಜಿಯರ್‌ಗಳು, ಕಾರ್ಯಪಾಲಕ ಎಂಜಿನಿಯರ್‌ಗಳು ಸಭೆಯಲ್ಲಿ ಭಾಗವಹಿಸಿದ್ದರು.

ಡಿ.ಜೆ.ಹಳ್ಳಿ, ಕೆ.ಜಿ.ಹಳ್ಳಿ ಹಿಂಸಾಚಾರ ಜಾಮೀನು ಅರ್ಜಿ ತಿರಸ್ಕಾರ

ಪ್ರಜಾವಾಣಿ ವಾರ್ತೆ



ನವದೆಹಲಿ: ಬೆಂಗಳೂರಿನ ಡಿ.ಜೆ. ಹಳ್ಳಿ ಹಾಗೂ ಕೆ.ಜಿ.ಹಳ್ಳಿ ಪ್ರದೇಶದಲ್ಲಿ 2020ರಲ್ಲಿ ನಡೆದಿದ್ದ ಹಿಂಸಾಚಾರ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪ ಎದುರಿಸುತ್ತಿರುವ ನಿವೃತ್ತ ಎಂಜಿನಿಯರ್, ಮತ್ತಿತರರ ಜಾಮೀನು ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ತಿರಸ್ಕರಿಸಿದೆ.

ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆ (ಯುಎಪಿಎ) ಅಡಿ ಆರೋಪಿಗಳಾದ 68 ವರ್ಷದ ನಿವೃತ್ತ ಎಂಜಿನಿಯರ್ ಮೊಹಮ್ಮದ್ ಕಲೀಂ ಅಹ್ಮದ್ ಹಾಗೂ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಮತ್ತು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಕೆಲವು ಸದಸ್ಯರ ವಿರುದ್ದದ ವಿಚಾರಣೆ ಬಾಕಿ ಇರುವಾಗ ಈ ಅರ್ಜಿಯನ್ನು ಪರಿಗಣಿಸಲು ಸಾಧ್ಯವಿಲ್ಲ ಎಂದು ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ ಮತ್ತು ವಿಕ್ರಮ್ ನಾಥ್ ಅವರಿದ್ದ ಪೀಠ ಹೇಳಿತು.

ಆರೋಪಿ ಕಲೀಂ ಅಹ್ಮದ್ ಅವರು 14 ತಿಂಗಳಿಂದ ನ್ಯಾಯಾಂಗ ಬಂಧನದಲ್ಲಿದ್ದು, ಮೂಲ ಎಫ್‌ಐಆ‌ರ್‌ನಲ್ಲಿ ಅವರ ಹೆಸರಿರಲಿಲ್ಲ. ಆದರೆ, ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಗೆ ವಹಿಸಿದ ನಂತರ ಅವರ ಹೆಸರು ಸೇರಿಸಲಾಗಿದೆ. ಘಟನಾ ಸ್ಥಳದ ಬಳಿ ಅವರ ಔಷಧ ಅಂಗಡಿ ಇದ್ದುದರಿಂದ ವಾಹನವೊಂದನ್ನು ಸುಟ್ಟ ಆರೋಪದಡಿ ಯುಎಪಿಎ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಅವರ ಪರ ವಾದ ಮಂಡಿಸಿದ ವಕೀಲ ಸಿದ್ದಾರ್ಥ್ ಲೂತ್ರಾ ತಿಳಿಸಿದರು.

ಕಳೆದ 16 ತಿಂಗಳಿಂದ ಜೈಲಿನಲ್ಲಿರುವ ಆರೋಪಿಗಳ ವಿರುದ್ಧ ಕೇವಲ ಬೈಕ್ ಸುಟ್ಟ ಆರೋಪ ಇದೆ. ಆದರೂ ಯುಎಪಿಎ ಅಡಿ ಪ್ರಕರಣ ದಾಖಲಾಗಿದೆ ಎಂದು ಇತರ ಅರ್ಜಿದಾರರ ಪರ ವಕೀಲ ಗೌರವ್ ಅಗರವಾಲ್ ಹೇಳಿದರು.

'ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಹೈಕೋರ್ಟ್ ಈಗಾಗಲೇ ವಿವರವಾದ ಆದೇಶ ನೀಡಿದೆ. ಆರೋಪಿಗಳ ವಿರುದ್ದ ಯುಎಪಿಎ ಅಡಿ ಪ್ರಕರಣ ದಾಖಲಾಗಿದೆ. ಪೋಲೀಸರೇ ಇವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. 154 ಸಾಕ್ಷ್ಯಗಳಿವೆ ಎಂದು ತಿಳಿಸಲಾಗಿದೆ. ಸಾರ್ವಜನಿಕ ಆಸ್ತಿಗಳಿಗೆ ಹಾನಿಯಾಗಿದ್ದು, ಇಂಥ ಬೆಳವಣಿಗೆ ಸಹಿಸಲಾಗದು' ಎಂದು ಹೇಳಿ ಅರ್ಜಿ ವಜಾಗೊಳಿಸಿತು.

ಜಾಮೀನು ಅರ್ಜಿಯನ್ನು ತಿರಸ್ಕರಿಸಿರುವ ಕರ್ನಾಟಕ ಹೈಕೋರ್ಟ್ ಆದೇಶ ಕುರಿತು ಮಧ್ಯ ಪ್ರವೇಶಿಸಲು ನ್ಯಾಯ ಪೀಠ ನಿರಾಕರಿಸಿತು.

ಬೆಂಗಳೂರಿನ ದೇವರಜೀವನಹಳ್ಳಿ (ಡಿ.ಜೆ. ಹಳ್ಳಿ) ಹಾಗೂ ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಪ್ರದೇಶದಲ್ಲಿ 2020ರ ಆಗಸ್ಟ್ 12ರಂದು ನಡೆದ ಹಿಂಸಾಚಾರದಲ್ಲಿ ನಾಲ್ವರು ಮೃತಪಟ್ಟಿದ್ದರು. ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪಾರ್ಹ ಪೋಸ್ಟ್ ಪ್ರಕಟಿಸಲಾಗಿದೆ ಎಂಬ ಆಕ್ರೋಶ ವ್ಯಕ್ತಪಡಿಸಿದ್ದ 3,000ಕ್ಕೂ ಹೆಚ್ಚಿದ್ದ ಉದ್ರಿಕ್ತರ ಗುಂಪು ಕಾಂಗ್ರೆಸ್ ಶಾಸಕ ಶ್ರೀನಿವಾಸ ಮೂರ್ತಿ ಅವರ ನಿವಾಸಕ್ಕೆ ಬೆಂಕಿ ಹಚ್ಚಿತ್ತು.

ಶಾಸಕರ ಸಂಬಂಧಿ ಅಡಗಿರಬಹುದು ಎಂಬ ಶಂಕೆಯಿಂದ ಡಿ.ಜೆ. ಹಳ್ಳಿ ಮತ್ತು ಕೆ.ಜಿ. ಹಳ್ಳಿ ಪೊಲೀಸ್ ಠಾಣೆ ಗಳಿಗೂ ಉದ್ರಿಕ್ತರು ಬೆಂಕಿ ಹಚ್ಚಿದ್ದರು.

ಅತ್ಯಾಚಾರ: ಜೈಲು ಶಿಕ್ಷೆ ಕಾಯಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪ್ರಾಪ್ತ ಪುತ್ರಿಯ ಮೇಲೆ ಅತ್ಯಾಚಾರ ಎಸಗಿದ್ದ ತಂದೆಗೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ 10 ವರ್ಷಗಳ ಜೈಲು ಶಿಕ್ಷೆಯನ್ನು ಹೈಕೋರ್ಟ್ ಕಾಯಂಗೊಳಿಸಿದೆ.

'ವಿಚಾರಣಾ ನ್ಯಾಯಾಲಯ ವಿಧಿಸಿರುವ ಶಿಕ್ಷೆ ರದ್ದುಪಡಿಸಬೇಕು' ಎಂದು ಕೋರಿ ಆರೋಪಿಯಾಗಿದ್ದ ತಂದೆಯು ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಎಸ್. ಮುದಗಲ್ ಅವರಿದ್ದ ಏಕಸದಸ್ಯ ನ್ಯಾಯ ಪೀಠ ಈ ಕುರಿತಂತೆ ತೀರ್ಪು ನೀಡಿದೆ.

'ದೂರು ದಾಖಲಿಸುವಲ್ಲಿ ವಿಳಂಬವಾಗಿದೆ ಎಂಬ ಕಾರಣಕ್ಕೆ, ಪ್ರಾಸಿಕ್ಯೂಷನ್ ದುರ್ಬಲವಾಗಿದೆ ಎನ್ನುವಂತಿಲ್ಲ. ಎಫ್‌ಐಆರ್ ವಿಶ್ವಕೋಶ ಆಗಿರಬೇಕು ಎಂದು ಬಯಸಲೂ ಸಾಧ್ಯವಿಲ್ಲ. ಅತ್ಯಾಚಾರ ಪ್ರಕರಣಗಳಲ್ಲಿ ಸಂತ್ರಸ್ತೆಯ ಹೇಳಿಕೆಯಲ್ಲಿ ಅಷ್ಟೊ-ಇಷ್ಟೊ ಏರುಪೇರಿದೆ ಎಂಬ ಕಾರಣಕ್ಕೆ ಒಟ್ಟಾರೆ ಆರೋಪಗಳೇ ಸುಳ್ಳು ಎಂಬ ಅಭಿಪ್ರಾಯಕ್ಕೆ ಬರಲು ಆಗದು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣದ ಹಿನ್ನೆಲೆ: '13 ವರ್ಷದ ಪುತ್ರಿಯ ಮೇಲೆ ತಂದೆಯೇ 2014ರ ಸೆಪ್ಟೆಂಬರ್ 27ರ ರಾತ್ರಿ ಅತ್ಯಾಚಾರ ಎಸಗಿದ್ದಾನೆ' ಎಂದು ಸಂತ್ರಸ್ತೆ ಯ ಚಿಕ್ಕಮ್ಮ ದೂರು ನೀಡಿದ್ದರು. ಈ ದೂರಿನ ಮೇರೆಗೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು.

ಅಪರಾಧ ಸಾಬೀತಾದ ಹಿನ್ನೆಲೆಯಲ್ಲಿ ವಿಚಾರಣಾ ನ್ಯಾಯಾಲಯವು 2016ರ ಸೆಪ್ಟೆಂಬರ್ 22 ರಂದು, ಐಪಿಸಿ ಸೆಕ್ಷನ್ 376 (ಅತ್ಯಾಚಾರ) ಹಾಗೂ ಪೋಕ್ಸೊ ಕಾಯ್ದೆ- 2012ರ ಸೆಕ್ಷನ್ 5, 6ರ ಅಡಿ 10 ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ₹ 2,000 ದಂಡ ವಿಧಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ತಂದೆ ಹೈಕೋರ್ಟ್ ಮೆಟ್ಟಿಲೇರಿದ್ದ.

ಆನ್‌ಲೈನ್ ಖರೀದಿ: ₹ 2.92 ಲಕ್ಷ ವಂಚನೆ

ಬೆಂಗಳೂರು: ₹ 2 ಸಾವಿರ ಮೌಲ್ಯದ ವೈನ್ ಖರೀದಿಸಲು ಮುಂದಾಗಿದ್ದ 34 ವರ್ಷದ ವ್ಯಕ್ತಿಯೊಬ್ಬರು ₹ 2.92 ಲಕ್ಷ ಕಳೆದು ಕೊಂಡಿದ್ದು, ಈ ಬಗ್ಗೆ ವೈಟ್‌ಫೀಲ್ಡ್ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವೈನ್ ಖರೀದಿಸಲು ಗೂಗಲ್ ಮೂಲಕ ವೈನ್ ಮಾರಾಟಗಾರರೊಬ್ಬರ ನಂಬರ್ ತಿಳಿದುಕೊಂಡು, ಕರೆ ಮಾಡಿದ್ದರು. ಕರೆ ಸ್ವೀಕರಿಸಿದ್ದ ವ್ಯಕ್ತಿ 'ವೈನ್ ಲಭ್ಯವಿದೆ. ಮನೆಗೆ ತಂದು ಕೊಡಲಾಗುವುದು. ಆನ್‌ಲೈನ್‌ನಲ್ಲೇ ಹಣ ಪಾವತಿಸಬೇಕು' ಎಂದಿದ್ದರು. '₹ 2,000 ಬೆಲೆಯ ವೈನ್ ಖರೀದಿಸಿ, ಆನ್‌ಲೈನ್ ಮೂಲಕ ಹಣ ಪಾವತಿಸಲು ಮುಂದಾಗಿದ್ದರು. ಕ್ರೆಡಿಟ್ ಕಾರ್ಡ್ ಹಾಗೂ ಒಟಿಪಿ (ಒನ್ ಟೈಮ್ ಪಾಸ್‌ವರ್ಡ್) ವಿವರವನ್ನು ಆರೋಪಿಗೆ ತಿಳಿಸಿದ್ದರು. ಆ ಬಳಿಕ ಹಂತ ಹಂತ ವಾಗಿ ಖಾತೆಯಿಂದ ಹಣ ಕಡಿತವಾಗಿದೆ.

'ಗಿಫ್ಟ್ ವೋಚರ್': ₹ 5 ಲಕ್ಷ ವಂಚನೆ

ಬೆಂಗಳೂರು: ಅಮೆಜಾನ್ ಆನ್‌ಲೈನ್ ಶಾಪಿಂಗ್ ಜಾಲತಾಣದ ಉಡುಗೊರೆ ಕೂಪನ್ (ಗಿಫ್ಟ್ ವೋಚರ್) ಹೆಸರಿನಲ್ಲಿ ನಗರದ ನಿವೃತ್ತ ನೌಕರರೊಬ್ಬರಿಂದ ₹ 5 ಲಕ್ಷ ಪಡೆದು ವಂಚಿಸಲಾಗಿದೆ.

'ಯಲಹಂಕ ನ್ಯೂ ಟೌನ್ ನಿವಾಸಿ, 63 ವರ್ಷದ ನಿವೃತ್ತ ನೌಕರ ಈ ಬಗ್ಗೆ ದೂರು ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ. 'ದೂರುದಾರ, ಕೆಲಸ ಮಾಡುತ್ತಿದ್ದ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರ ಹೆಸರಿನಲ್ಲಿ ಇ-ಮೇಲ್ ಕಳುಹಿಸಿದ್ದ ವಂಚಕರು, 'ಅಮೆಜಾನ್ ಗಿಫ್ಟ್ ವೋಚರ್ ಕಳುಹಿಸಿದ್ದೇನೆ. ಸ್ವೀಕರಿಸಿ' ಎಂದಿದ್ದರು. ದೂರುದಾರ ಇ- ಮೇಲ್‌ನಲ್ಲಿ ಉಲ್ಲೇಖಿಸಿದ್ದ ಲಿಂಕ್‌ನಲ್ಲಿ ಬ್ಯಾಂಕ್ ಖಾತೆ ವಿವರ ಭರ್ತಿ ಮಾಡಿದ್ದರು. ನಂತರ ₹ 5 ಲಕ್ಷ ಕಡಿತವಾಗಿದೆ.' 'ಈ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರನ್ನು ಕೇಳಿದಾಗ, ತಾವು ಸಂದೇಶ ಕಳುಹಿಸಿಲ್ಲವೆಂದು ಹೇಳಿದ್ದರು' ಎಂದೂ ಪೊಲೀಸರು ತಿಳಿಸಿದ್ದಾರೆ.

₹ 1.85 ಲಕ್ಷ ಪಡೆದು ನಾಪತ್ತೆ

ಬೆಂಗಳೂರು: ಮಾಲ್ಟಾ ದೇಶದಲ್ಲಿ ಉದ್ಯೋಗ ಕೊಡಿಸುವ ಆಮಿಷವೊಡ್ಡಿ ನಗರದ ಶುಶ್ರೂಷಕಿಯೊಬ್ಬರಿಂದ ₹ 1.85 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೆಂಪಾಪುರದ ನಿವಾಸಿ, ಶುಶ್ರೂಷಕಿ ಆಗಿರುವ 39 ವರ್ಷದ ಮಹಿಳೆ ಈ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ. 'ಸೆಂಥಿಲ್ ವಿನೋದ್ ಎಂದು ಪರಿಚಯಿಸಿಕೊಂಡಿದ್ದ ವ್ಯಕ್ತಿ 'ಮಾಲ್ಟಾದಲ್ಲಿ ಉದ್ಯೋಗ ಖಾಲಿ ಇದೆ. ಕೆಲ ಶುಲ್ಕ ಪಾವತಿಸಿದರೆ, ಉದ್ಯೋಗ ಕೊಡಿಸುತ್ತೇನೆ' ಎಂದಿದ್ದರು. ಮಾತು ನಂಬಿದ್ದ ಮಹಿಳೆ, ಹಂತ ಹಂತವಾಗಿ ₹ 1.85 ಲಕ್ಷ ತುಂಬಿದ್ದರು. ಅದಾದ ನಂತರ ಆರೋಪಿ ನಾಪತ್ತೆಯಾಗಿದ್ದಾನೆ' ಎಂದೂ ಮೂಲಗಳು ತಿಳಿಸಿವೆ.

ಸಲುಗೆ ಬೆಳೆಸಿ ₹12 ಲಕ್ಷ ಮೋಸ

ಅಪರಾಧ ಸುದ್ದಿ

ಬೆಂಗಳೂರು: 'ವೈವಾಹಿಕ ಜಾಲ ತಾಣದಲ್ಲಿ ಪರಿಚಯವಾಗಿದ್ದ ಸೋನಿ ಅಲಿಯಾಸ್ ರೋಹಿತ್ ಎಂಬಾತ, ಮದುವೆಯಾಗುವುದಾಗಿ ನಂಬಿಸಿ ₹ 12 ಲಕ್ಷ ಪಡೆದು ವಂಚಿಸಿದ್ದಾನೆ' ಎಂದು ಯುವತಿಯೊಬ್ಬರು ಈಶಾನ್ಯ ವಿಭಾಗ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿ ದ್ದಾರೆ.

'ವಿದ್ಯಾರಣ್ಯಪುರ ನಿವಾಸಿ ಯಾಗಿರುವ ಯುವತಿ ಇತ್ತೀಚೆಗೆ ದೂರು ಕೊಟ್ಟಿದ್ದಾರೆ. ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆತ ನಕಲಿ ಖಾತೆ ತೆರೆದು ಯುವತಿಯನ್ನು ವಂಚಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಖಾಸಗಿ ಕಂಪನಿ ಉದ್ಯೋಗಿ ಆಗಿರುವ ಯುವತಿ, ವರನಿಗಾಗಿ ಹುಡುಕಾಡುತ್ತಿದ್ದರು. 'ಬೆಟರ್‌ಹಾಫ್' ವೈವಾಹಿಕ ಜಾಲತಾಣದಲ್ಲಿ ಖಾತೆ ತೆರೆದಿದ್ದರು. ರಿಕ್ವೆಸ್ಟ್ ಕಳುಹಿಸಿದ್ದ ಆರೋಪಿ, ಮದುವೆ ಪ್ರಸ್ತಾಪ ಮುಂದಿ ಟ್ಟಿದ್ದ. ಯುವತಿ ಒಪ್ಪಿಕೊಂಡಿದ್ದರು.ನಂತರ, ಇಬ್ಬರೂ ಮೊಬೈಲ್ ನಂಬರ್ ವಿನಿಮಯ ಮಾಡಿಕೊಂಡು ಮಾತನಾಡಲಾರಂಭಿಸಿದ್ದರು.' 'ಯುವತಿ ಜೊತೆ ಸಲುಗೆಯಿಂದ ವರ್ತಿಸಿದ್ದ ಆರೋಪಿ, ಅದನ್ನು ಚಿತ್ರೀಕರಿಸಿಟ್ಟು ಕೊಂಡಿದ್ದ' ಎಂದೂ ಮೂಲಗಳು ತಿಳಿಸಿವೆ. 'ಆರ್ಥಿಕ ಸಂಕಷ್ಟದಲ್ಲಿರುವುದಾಗಿ ಹೇಳಿದ್ದ ಆರೋಪಿ, ಯುವತಿಯಿಂದ ಹಣ ಪಡೆದಿದ್ದ. ಇತ್ತೀಚೆಗೆ ಯುವತಿ, ಮದುವೆ ಯಾವಾಗ? ಎಂದು ಪ್ರಶ್ನಿಸಿದ್ದರು. 'ಆರೋಪಿ ಹಿನ್ನೆಲೆ ಕೆದಕಿದಾಗ, ಆತನಿಗೆ ಮದುವೆಯಾಗಿ ಮಗು ಇರುವುದು ಗೊತ್ತಾಗಿತ್ತು. ಯುವತಿ, ಹಣ ಹಿಂದಿರುಗಿಸಲು ಆಗ್ರಹಿಸಿದ್ದರು. ಆಗ ಆರೋಪಿ, ಅರೆನಗ್ನ ಫೋಟೊ ಹಾಗೂ ವಿಡಿಯೊ ಇದ್ದು, ಹಣ ಕೇಳಿದರೆ, ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುವುದಾಗಿ ಹೆದರಿಸಿದ್ದ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಡಿಐಎಫ್‌ಸಿ DIFC COURTS

ಕ್ಲೈಮ್ ನಮೂನೆ – ಪ್ರಥಮ ದರ್ಜೆ ನ್ಯಾಯಾಲಯ

ನೀಡಿದ ದಿನಾಂಕ: 07.06.2020

ಕ್ಲೈಮ್ ಸಂಖ್ಯೆ : ಸಿಎಫ್‌ಐ-047-2020

ಗ್ರೌಂಡ್ ಲೆವೆಲ್, ಕಟ್ಟಡ 4, ದಿ ಗೇಟ್ ಡಿಸ್ಟ್ರಿಕ್ಟ್, ದುಬೈ ಅಂತರಾಷ್ಟ್ರೀಯ ಹಣಕಾಸು ಕೇಂದ್ರ, ಅಂಚೆ ಪೆಟ್ಟಿಗೆ 211724, ದುಬೈ ಯುಎಇ, ದೂರವಾಣಿ ++971 4 427 3333 ಫ್ಯಾಕ್ಸ್ +971 4 427 3330, www.difccourts.ae

ಹಕ್ಕುದಾರ (ರು)

ಹೆಸರು	:	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಡಿಐಎಫ್‌ಸಿ
ಯುಎಇ ನಿವಾಸಿಯ	:	ಹೌದು
ಎಮಿರೇಟ್ಸ್ ಐಡಿ	:	784–1970–7518432–1
ವಿಳಾಸ ಸಾಲು 1	:	C/o ನಿಖತ್ ಎಸ್ ಖಾನ್ / ಕೊಚ್ಚಾರ್ ಮತ್ತು ಕಂ ಇಂಕ್, ಕಾನೂನು ಸಲಹೆಗಾರರು (ದುಬೈಶಾಖೆ), ಸಿಟಾಡೆಲ್ ಟವರ್, 14ನೇ ಮಹಡಿ, 1410
ವಿಳಾಸ ಸಾಲು 2	:	ಬಿಸಿನೆಸ್ ಬೇ
ಸ್ಥಳ	:	ಯುನೈಟೆಡ್ ಅರಬ್ ಎಮಿರೇಟ್ಸ್
ಅಂಚೆ ಕೋಡ್ / ಪಿಒ ಬಾಕ್ಸ್	:	113297
ಇಮೇಲ್	:	nikhat@kochhardubai.com

ಪ್ರತಿವಾದಿಗ(ಳು)

ಹೆಸರು	:	[redacted]
ಯುಎಇ ನಿವಾಸಿಯ	:	
ವಿಳಾಸ ಸಾಲು 1	:	
ಇ–ಮೇಲ್	:	
ವಿಳಾಸ ಸಾಲು 2	:	
ಸ್ಥಳ	:	
ಅಂಚೆ ಕೋಡ್/ಪಿಒ ಬಾಕ್ಸ್	:	
ಇಮೇಲ್	:	
ಹೆಸರು	:	
ಯುಎಇ ನಿವಾಸಿಯೇ	:	
ವಿಳಾಸ ಸಾಲು 1	:	
ವಿಳಾಸ ಸಾಲು 2	:	
ಹೆಸರು	:	
ಯುಎಇ ನಿವಾಸಿಯೇ	:	
ವಿಳಾಸ ಸಾಲು 1	:	
ವಿಳಾಸ ಸಾಲು 2	:	
ಸ್ಥಳ	:	
ಇಮೇಲ್	:	
ಹೆಸರು	:	
ಯುಎಇ ನಿವಾಸಿಯೇ	:	
ವಿಳಾಸ ಸಾಲು 1	:	
ವಿಳಾಸ ಸಾಲು 2	:	
ಸ್ಥಳ	:	
ಇಮೇಲ್	:	
ಹೆಸರು	:	ಶ್ರೀ ಭಾವಗುತ್ತು ರಘುರಾಮ ಶೆಟ್ಟಿ
ಯುಎಇ ನಿವಾಸಿಯೇ	:	ಹೌದು
ವಿಳಾಸ ಸಾಲು 1	:	ಪೆಂಟ್ ಹೌಸ್ 1, ಇ–4/01 ಸಿ88, ಎಲೆಕ್ಟ್ರಾ ಸ್ಟ್ರೀಟ್, ಪಿಒ ಬಾಕ್ಸ್ 6222, ಅಬುಧಾಬಿ, ಯುಎಇ.
ಇಮೇಲ್	:	chairmanoffice@brsholding.com, [redacted]
ವಿಳಾಸ ಸಾಲು 2	:	ದೂರವಾಣಿ: +97126179272, ಫ್ಯಾಕ್ಸ್: +97126311099
ಸ್ಥಳ	:	ಅಬುಧಾಬಿ
ಇಮೇಲ್	:	[redacted]
ಕ್ಷೇಮು ರೀತಿ		
ಕ್ಷೇಮಿನ ರೀತಿ	:	ಪಿ7
ಕ್ಷೇಮಿನ ಮೌಲ್ಯ		
ಕರೆನ್ಸಿ	:	ಯುಎಸ್‌ಡಿ
ಮೊತ್ತ	:	31,439,784.42
ನ್ಯಾಯಾಲಯದ ಶುಲ್ಕ ($)	:	102,159.68

ಕ್ಲೈಮ್‌ನ ಸಂಕ್ಷಿಪ್ತ ವಿವರಗಳು: (ಮುಂದೆ ನಮೂದಿಸಲಾಗುವುದು)

ಹಕ್ಕುದಾರರಿಂದ ಮೊದಲ ಪ್ರತಿವಾದಿಗೆ (ಮಂಜೂರಾತಿ ಪತ್ರ) 11 ಡಿಸೆಂಬರ್ 2018 ರ ಮಂಜೂರಾತಿ ಪತ್ರವನ್ನು ನೀಡಲಾಗಿದೆ. ಹಕ್ಕುದಾರರು ತೇವಣಿ ಅವಧಿಯ ಸಾಲ ಸೌಲಭ್ಯಗಳನ್ನು 50,000,000 (ಯುನೈಟೆಡ್ ಸ್ಟೇಟ್ಸ್ ಡಾಲರ್ ಐವತ್ತು ಮಿಲಿಯನ್ ಮಾತ್ರ) ಕ್ಕೆ ನೀಡಲು ಒಪ್ಪಿಕೊಂಡಿದ್ದು ("ಸೌಲಭ್ಯಗಳು / ಅವಧಿ ಸಾಲ") 25 ಡಿಸೆಂಬರ್ 2018 ರ ಫೆಸಿಲಿಟಿ ಒಪ್ಪಂದದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಕ್ಲೈಮುದಾರರು ಮತ್ತು ಮೊದಲ ಪ್ರತಿವಾದಿಗಳು ಸರಿಯಾಗಿ ಸಹಿ ಮಾಡಿದ್ದಾರೆ ("ಫೆಸಿಲಿಟಿ ಒಪ್ಪಂದ) ಕ್ರೆಡಿಟ್ ಸೌಲಭ್ಯ ಮತ್ತು ಸೌಲಭ್ಯ ಒಪ್ಪಂದದ ನಿಯಮಗಳ ಅನುಸಾರವಾಗಿ ಮೊದಲ ಪ್ರತಿವಾದಿಯು ಬಾಕಿಯಿರುವ ಎಲ್ಲಾ ಮೊತ್ತಗಳ ಮರು ಪಾವತಿಯನ್ನು ಪಡೆದುಕೊಂಡು ಅಥವಾ ಈ ಕೆಳಗಿನವುಗಳನ್ನು ಒಳಗೊಂಡಿರುವ ಹಣಕಾಸು ದಾಖಲೆಗಳ ಅನುಸಾರವಾಗಿ ಆಗಬಹುದು. ನಗದು ಮೇಲಾಧಾರ 12% ಅಂದರೆ ಯುಎಸ್ ಡಾಲರ್ 6 ಮಿಲಿಯನ್ ಅನ್ನು ಸ್ಥಿರ ಠೇವಣಿಯಾಗಿ ಇರಿಸಲಾಗುವುದು, [redacted] ಯಿಂದ 50 ಮಿಲಿಯನ್ ಯುಎಸ್‌ಡಿ ಸಾಲದ ಮೊತ್ತದ ಖಾತೆಯಿಂದ ಚೆಕ್ ಪಾವತಿ (ಶ್ರೀ ಬಿ ಆರ್ ಶೆಟ್ಟಿ ಅವರ ಸಹಿ), ಶ್ರೀ ಬಾವಗುತ್ತು ರಘುರಾಮ ಶೆಟ್ಟಿಯವರ ವೈಯಕ್ತಿಕ ಗ್ಯಾರಂಟಿ, [redacted] ("ಭದ್ರತಾ ದಾಖಲೆಗಳು") ಗ್ಯಾರಂಟಿಗೆ, ಮತ್ತು ಅಥವಾ ಸೌಲಭ್ಯ ಒಪ್ಪಂದದ ಅಡಿಯಲ್ಲಿ, ಪಾವತಿಸದ ಮೊತ್ತದ ಎಲ್ಲಾ ಅಥವಾ ಯಾವುದೇ ಭಾಗವನ್ನು ಸುರಕ್ಷಿತಗೊಳಿಸಿ, ಇದರಲ್ಲಿ ಎಲ್ಲಾ ಬಡ್ಡಿಗಳು, ಶುಲ್ಕಗಳು, ಫೀಸುಗಳು, ವೆಚ್ಚಗಳು, ಡೆಬಿಟ್ ಸರ್ವಿಸ್ ರಿಸರ್ವ್ ಅಕೌಂಟ್ (ಡಿಎಸ್‌ಆರ್‌ಎ) ನಿರ್ವಹಣೆ, ವೆಚ್ಚಗಳು ಮತ್ತು ಸೌಲಭ್ಯ ಒಪ್ಪಂದದ ನಿಯಮಗಳಿಗೆ ಅನ್ವಯವಾಗುವ .... ಎಲ್ಲಾ ಮೊತ್ತಗಳು, ಬಾಧ್ಯತೆಗಳು ಮತ್ತು ಹೊಣೆಗಾರಿಕೆಗಳನ್ನು ಒಟ್ಟಾಗಿ "ಭದ್ರತಾ ಹೊಣೆಗಾರಿಕೆಗಳು" ಎಂದು ಕರೆಯಲಾಗುತ್ತದೆ. 25 ಡಿಸೆಂಬರ್ 2018 ರಂದು, ಕಾರ್ಪೊರೇಟ್ ಗ್ಯಾರಂಟಿಗಳನ್ನು [redacted] ಎರಡನೇ, ಮೂರನೇ ಮತ್ತು ನಾಲ್ಕನೇ ಪ್ರತಿವಾದಿಗಳೂ ಜಾರಿಗೊಳಿಸಿದರು. ಐದನೇ ಪ್ರತಿವಾದಿಯ ವೈಯಕ್ತಿಕ ಗ್ಯಾರಂಟಿಯನ್ನು 25 ನೇ ಡಿಸೆಂಬರ್ 2018 ರಂದು ಕಾರ್ಯಗತಗೊಳಿಸಲಾಯಿತು. ಕಾರ್ಪೊರೇಟ್ ಮತ್ತು ವೈಯಕ್ತಿಕ ಗ್ಯಾರಂಟಿಗಳ ಅನುಸಾರವಾಗಿ, ಎರಡನೇ, ಮೂರನೇ, ನಾಲ್ಕನೇ ಮತ್ತು ಐದನೇ ಪ್ರತಿವಾದಿಯು ಮೊದಲ ಪ್ರತಿವಾದಿಯ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಮೊದಲ ಪ್ರತಿವಾದಿಗೆ ಬದ್ಧರಾಗಿರಲು ಒಪ್ಪಿಕೊಂಡು ಪಾವತಿ ಮಾಡದಿರುವುದು ಅಥವಾ ಮೊದಲ ಪ್ರತಿವಾದಿಯು ನೀಡಬೇಕಾದ ಯಾವುದೇ ಮತ್ತು ಎಲ್ಲಾ ಹಣ ಅಥವಾ ಇತರ ಹೊಣೆಗಾರಿಕೆಗಳ ತೃಪ್ತಿಯಿಲ್ಲದ ಮೇಲೆ ಮತ್ತು ಕ್ಲೈಮುದಾರರ ಮೊದಲ ಬೇಡಿಕೆಯ ಮೇಲೆ ಮತ್ತು ಬಡ್ಡಿ ಮತ್ತು ಇತರ ವೆಚ್ಚಗಳ ಜೊತೆಗೆ ಕ್ಲೈಮುದಾರರಿಂದ ಕಾಲ ಕಾಲಕ್ಕೆ ಬೇಡಿಕೆಯಿರುವ ಮೊತ್ತಕ್ಕೆ ಸೌಲಭ್ಯ ಒಪ್ಪಂದ ಮತ್ತು ಗ್ಯಾರಂಟಿಯ ಅಡಿಯಲ್ಲಿ, 50,000,000 (ಯುನೈಟೆಡ್ ಸ್ಟೇಟ್ಸ್ ಡಾಲರ್ ಐವತ್ತು ದಶಲಕ್ಷ ಮಾತ್ರ) ಅವಧಿ ಸಾಲ ಮಿತಿಯನ್ನು 28.12.2018 ರಂದು SWIFT ಸಂದೇಶದ ಮೂಲಕ ತಲಾ 25 ದಶಲಕ್ಷ ಯುಎಸ್‌ಡಿಯ: 20 ತ್ರೈಮಾಸಿಕ ಕಂತುಗಳಲ್ಲಿ ಮಂಜೂರು ಮಾಡಲಾಯಿತು. ಮತ್ತು ವಿತರಿಸಲಾಗಿದೆ, ಸಾಲದ ಅವಧಿಯು ತಲಾ 2.5 ದಶಲಕ್ಷ ಯುಎಸ್‌ಡಿ ಯ 20 ತ್ರೈಮಾಸಿಕ ಕಂತುಗಳಲ್ಲಿ ಮರುಪಾವತಿಸಲ್ಪಡುತ್ತದೆ ಮತ್ತು ಬಡ್ಡಿಯನ್ನು ಮಾಸಿಕ ಮಧ್ಯಂತರದಲ್ಲಿ ಪಾವತಿಸಬೇಕಾಗುತ್ತದೆ. ಮೊದಲ ಪ್ರತಿವಾದಿಯು ಯುಎಸ್‌ಡಿ 2.50 ಮಿಲಿಯನ್‌ನ ನಾಲ್ಕು ಕಂತುಗಳನ್ನು ಸಮಯಕ್ಕೆ ಸರಿಯಾಗಿ ಇತ್ಯರ್ಥಗೊಳಿಸಿದನು. ಅದು ಮಾರ್ಚ್, ಜೂನ್, ಸೆಪ್ಟೆಂಬರ್ ಮತ್ತು ಡಿಸೆಂಬರ್ 2019 ಕ್ಕೆ ಕೊನೆಗೊಳ್ಳುವ ತ್ರೈಮಾಸಿಕಕ್ಕೆ ಕುಸಿದಿದೆ. ಡಿಸೆಂಬರ್ 2019 ರಂದು, ಮಡ್ಡಿ ವಾಟರ್ಸ್ ಕ್ಯಾಪಿಟಲ್ ಕಾರ್ಪೊರೇಟ್ ಗ್ಯಾರಂಟರ್ [redacted] ಆಸ್ತಿಗಳನ್ನು ಹೆಚ್ಚಿಸಿದೆ. ನಗದು ಬಾಕಿ ಮತ್ತು ಕಡಿಮೆ ಮೊತ್ತದ ಸಾಲವನ್ನು ಮಾಡಿದೆ ಎಂದು ಆರೋಪಿಸಿದರು ಮತ್ತು ಅಂದಿನಿಂದ ಪ್ರತಿವಾದಿಗಳ ಒಟ್ಟಾರೆ ಮೌಲ್ಯವು ಕುಸಿಯುತ್ತಿದೆ. ಪರಿಣಾಮವಾಗಿ, 28 ಜನವರಿ 2020 ರಂದು ಕ್ಲೈಮುದಾರನು ಸೌಲಭ್ಯದ ನಿಯಮಗಳನ್ನು ಪರಿಷ್ಕರಿಸಿದರ ಮತ್ತು ಮೊದಲ ಪ್ರತಿವಾದಿಯ ಹೆಚ್ಚುವರಿ ನಗದು ಮೇಲಾಧಾರ ಮೊತ್ತವನ್ನು ರವಾನಿಸಲು ಏರ್ಪಾಡು ಮಾಡಿರುತ್ತಾರೆ. 13 ಫೆಬ್ರವರಿ 2020 ರಂದು ಮೊದಲ ಪ್ರತಿವಾದಿಯು ಬೆಲೆ ಮತ್ತು ಹೆಚ್ಚುವರಿ ನಗದು ಮೇಲಾಧಾರಕ್ಕೆ ಸಂಬಂಧಿಸಿದಂತೆ ಪರಿಷ್ಕೃತ ನಿಯಮಗಳಲ್ಲಿನ ಬದಲಾವಣೆಗಳನ್ನು ಒಪ್ಪಿಕೊಂಡರು.

ಕ್ಲೈಮುದಾರರರು ಅಲ್ವೇರಜ್ ಮತ್ತು ಮಾರ್ಸ್‌ಲ್ (ಜಂಟಿ ಆಡಳಿತಾಧಿಕಾರಿಗಳ) ರವರಿಂದ 20 ಏಪ್ರಿಲ್ 2020 ರಂದು ಪತ್ರವನ್ನು ಪಡೆದಿದ್ದು, ಅದರಲ್ಲಿ [redacted] ಹೆಸರಿನ ಗ್ಯಾರಂಟರು ಆಡಳಿತವನ್ನು ಪ್ರವೇಶಿಸಿದ್ದಾರೆ (ಪತ್ರ) ಎಂದು ಸಾಲಗಾರರಿಗೆ ತಿಳಿಸಿರುತ್ತಾರೆ ಮತ್ತು ಜಂಟಿ ಆಡಳಿತಾಧಿಕಾರಿಗಳ ನೇಮಕಾತಿ ಮತ್ತು ಸಂಪರ್ಕದ ವಿವರಗಳನ್ನು ಒದಗಿಸಲಾಗಿದೆ. ಮತ್ತು ಜಂಟಿ ಆಡಳಿತಾಧಿಕಾರಿ ಒಪ್ಪಿಗೆ ನೀಡದ ಹೊರತು ಅಥವಾ ನ್ಯಾಯಾಲಯವು ಅನುಮತಿಸದೆ ಯಾವುದೇ ಸಾಲಗಾರನು ಕಾನೂನು ಕ್ರಮವನ್ನು ಆರಂಭಿಸಲು ಅಥವಾ ಮುಂದುವರಿಸಲು, ಭದ್ರತೆಯನ್ನು ಜಾರಿಗೊಳಿಸಲು ಅಥವಾ ಕಂಪನಿಯು ಹೊಂದಿರುವ ಯಾವುದೇ ಸರಕುಗಳನ್ನು ಹಿಂಪಡೆಯಲು ಸಾಧ್ಯವಿಲ್ಲ. ಆದ್ದರಿಂದ ಕ್ಲೈಮುದಾರನು [redacted] ಯನ್ನು ಪ್ರತಿವಾದಿಯಾಗಿ ಸೇರಿಸಲಿಲ್ಲ. ನಿಯಮಗಳ ಭಾಗ 20 ರ ಪ್ರಕಾರ ಪ್ರಕರಣದ ಪ್ರತಿವಾದಿಯಾಗಿ ನಂತರದ ಹಂತದಲ್ಲಿ [redacted] ಯನ್ನು ಸೇರಿಸುವ ಹಕ್ಕನ್ನು ಹಕ್ಕುದಾರರು ಕಾಯ್ದಿರಿಸಿದ್ದಾರೆ. ಮೊದಲ ಪ್ರತಿವಾದಿಯು 30 ಜನವರಿ 2020 ರ ವರೆಗೆ ನಿಗದಿತ ದಿನಾಂಕದಂದು ಬಡ್ಡಿಯನ್ನು ಪಾವತಿಸಿದ್ದಾರೆ. ಆದಾಗ್ಯೂ 27 ಫೆಬ್ರವರಿ 2020 ರಂದು ಮೊದಲ ಪ್ರತಿವಾದಿಯು ಬಡ್ಡಿಯನ್ನು ಪಾವತಿಸಲಿಲ್ಲ. ಮಾರ್ಚ್ 2020 ರ ತ್ರೈಮಾಸಿಕದಲ್ಲಿ ಯುಎಸ್‌ಡಿ 2.5 ಮಿಲಿಯನ್ ಹೆಚ್ಚಿನ ಕಂತನ್ನು ಸಹ ಪಾವತಿಸಲಾಗಿಲ್ಲ. ಇದರ ಪರಿಣಾಮವಾಗಿ, ಮಾರ್ಚ್ 2020 ರ ಬಡ್ಡಿಯನ್ನು ಡಿಎಸ್‌ಆರ್‌ಐ ಖಾತೆಯಿಂದ 5 ಮಾರ್ಚ್ 2020 ಮತ್ತು 14 ಏಪ್ರಿಲ್ 2020 ರಂದು ಸ್ವಾಧೀನಪಡಿಸಿಕೊಳ್ಳಲಾಯಿತು. ಆದಾಗ್ಯೂ, ಮೊದಲು ಪ್ರತಿವಾದಿಯು ಏಪ್ರಿಲ್ 2020 ರ ವೇಳೆಗೆ ಡಿಎಸ್‌ಆರ್‌ಎ ಸಮತೋಲನವನ್ನು ಕಾಯ್ದುಕೊಳ್ಳಲಿಲ್ಲ, ಇದರ ಪರಿಣಾಮವಾಗಿ, ಕೈಮುದಾರರು ಯುಎಸ್‌ಡಿ 6,198,966.77 ನಗದು ಮೇಲಾಧಾರವನ್ನು ಹೊಂದಬೇಕಾಯಿತು. ಇದಲ್ಲದೆ, ಮೊದಲ ಪ್ರತಿವಾದಿ ಮತ್ತು ಗ್ಯಾರಂಟರುಗಳು ತಮ್ಮ ವರದಿಗಳು ಮತ್ತು ಹಣಕಾಸು ಹೇಳಿಕೆಗಳನ್ನು ತಪ್ಪಾಗಿ ಪ್ರತಿನಿಧಿಸಿದ್ದಾರೆ ಎಂದು ಆರೋಪಿಸಲಾಗಿದೆ ಮತ್ತು ಆಡಳಿತಗಾರರಲ್ಲಿ ಒಬ್ಬರನ್ನು [redacted] 9 ಏಪ್ರಿಲ್ 2020 ರಂದು ನೇಮಿಸಲಾಯಿತು. ಡೀಫಾಲ್ಟ್ ಘಟನೆಗಳ ನಿರಂತರ ಸರಣಿಯಿಂದಾಗಿ ("ಉಲ್ಲಂಘನೆ / ಡೀಫಾಲ್ಟ್ ಘಟನೆಗಳು") ಕ್ಲೈಮುದಾರರು ಈ ಪ್ರಕರಣವನ್ನು ದಾಖಲಿಸುವ ಮೂಲಕ ತನ್ನ ಆಸಕ್ತಿಯನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಕ್ಲೈಮುದಾರರು ಪ್ರತಿವಾದಿಗಳಿಗೆ ನೋಟಿಸುಗಳನ್ನು ಕಳುಹಿಸಿ, ಇದರಲ್ಲಿ ಸೌಲಭ್ಯದ ವಿಸ್ತರಣೆಗೆ ಸಂಬಂಧಿಸಿದಂತೆ ಡೀಫಾಲ್ಟ್ ಘಟನೆ ಸಂಭವಿಸಿದೆ ಎಂದು ಸೂಚಿಸಲಾಗಿದೆ. ಡೀಫಾಲ್ಟ್ ಘಟನೆ ಸಂಭವಿಸಿದ ನಂತರ, ಪ್ರತಿವಾದಿಗಳು ಕ್ಲೈಮುದಾರರಿಗೆ ಹಿಂಜರಿಕೆಯಿಲ್ಲದೆ ಪಾವತಿಸಲು ನಿರ್ಬಂಧವನ್ನು ಹೊಂದಿರುತ್ತಾರೆ. ಬೇಡಿಕೆಯ ಮೇಲೆ ಮೊದಲ ಪ್ರತಿವಾದಿಯಿಂದ ಬಾಕಿ ಇರುವ ಎಲ್ಲಾ ಮೊತ್ತಗಳು 30 ಏಪ್ರಿಲ್ 2020 ರಂತೆ 31,439,784.42 (ಯುನೈಟೆಡ್ ಸ್ಟೇಟ್ಸ್ ಡಾಲರ್ ಮೂವತ್ತೊಂದು ಮಿಲಿಯನ್ ನಾಲ್ಕು ನೂರ ಮೂವತ್ತೊಂಬತ್ತು ಸಾವಿರದ ಏಳು ನೂರ ಎಂಭತ್ತನಾಲ್ಕು ಮತ್ತು ನಲವತ್ತೆರಡು ಸೆಂಟ್ಸ್ ಮಾತ್ರ) ("ಬಾಕಿ ಮೊತ್ತ") ಅನ್ನು ಬಾಕಿ ಎಂದು ಘೋಷಿಸಿಲಾಗಿದೆ ಮತ್ತು ತಕ್ಷಣವೇ ಬಡ್ಡಿಯೊಂದಿಗೆ ಪಾವತಿಸಲಾಗುತ್ತದೆ ಮತ್ತು ಕೆಳಗಿನಂತೆ ದಂಡದ ಬಡ್ಡಿ : ಯುಎಸ್‌ಡಿ 30,792,944.45 (ಯನೈಟೆಡ್ ಸ್ಟೇಟ್ಸ್ ಡಾಲರ್ ಮೂವತ್ತು ಮಿಲಿಯನ್ ಏಳು ನೂರ ತೊಂಬತ್ತೆರಡು ಸಾವಿರದ ಒಂಬೈನೂರ ನಲವತ್ತನಾಲ್ಕು ಮತ್ತು ನಲವತ್ತೈದು ಸೆಂಟ್ಸ್) ಪ್ರಧಾನ ಮೊತ್ತ ಮತ್ತು ಯುಎಸ್‌ಡಿ 213,294.00 (ಯುನೈಟೆಡ್ ಸ್ಟೇಟ್ಸ್ ಡಾಲರ್ ಎರಡು ನೂರ ಹದಿಮೂರು ಸಾವಿರದ ಇನ್ನೂರ ತೊಂಬತ್ತನಾಲ್ಕು ಮಾತ್ರ) 30.03.2020 ರಿಂದ 30 ಏಪ್ರಿಲ್ 2020 (ಕಟ್ ಆಫ್ ದಿನಾಂಕ) ಮತ್ತು ಸೌಲಭ್ಯ ಒಪ್ಪಂದದ ಷರತ್ತು 8 ರ ಅಡಿಯಲ್ಲಿ 6.78% ಕ್ಲಮ್ ಮತ್ತು (ಯುಎಸ್ಡಿ 433,545.97 (ಯುನೈಟೆಡ್ ಸ್ಟೇಟ್ಸ್ ಡಾಲರ್ ನಾಲ್ಕು ನೂರ ಮೂವತ್ತು ಮೂರು ಸಾವಿರದ ಐನೂರು ನಲವತ್ತೈದು ಮತ್ತು ತೊಂಬತ್ತೇಳು ಸೆಂಟ್ಸ್) 30.03.2020 ರಿಂದ 30 ಏಪ್ರಿಲ್ 2020 (ಕಟ್ ಆಫ್ ದಿನಾಂಕ ಮತ್ತು ಒಂದು ಬಾರಿ ವಿರಾಮಕ್ಕೆ ಸೌಲಭ್ಯ ಒಪ್ಪಂದದ ಷರತ್ತು 8.3 ರ ಅಡಿಯಲ್ಲಿ ದಂಡ ಬಡ್ಡಿಯ 2% ಕ್ಲೈಮ್ ಮಾಡಿದಂತೆ ಸೂಚನೆಗಳ ಹೊರತಾಗಿಯೂ, ಪ್ರತಿವಾದಿಗಳು ಕ್ಲೈಮುದಾರರ ಬಾಕಿ ಮೊತ್ತವನ್ನು ಪಾವತಿಸುವ ಬೇಡಿಕೆಗಳನ್ನು ಪೂರೈಸಲು ವಿಫಲರಾದರು ಮತ್ತು ಇದರ ಪರಿಣಾಮವಾಗಿ ಸಮಸ್ಯೆ ಬಗೆ ಹರಿಯದೆ ನಿಂತಿದೆ ("ವಿವಾದ"), ಪ್ರತಿವಾದಿಗಳು ಸೇವೆಯ ಸ್ವೀಕೃತಿಯನ್ನು ಸಲ್ಲಿಸಿದರೆ ಡಿಐಎಫ್‌ಸಿ ನ್ಯಾಯಾಲಯಗಳ ನಿಯಮಗಳ ನಿಯಮ 7.31 ರ ಅನುಸಾರವಾಗಿ ಅನುಸರಿಸುವ ಕ್ಲೈಮ್‌ನ ವಿವರಗಳಲ್ಲಿ ಹೆಚ್ಚಿನ ವಿವರಗಳನ್ನು ನೀಡಲಾಗುವುದು. ಇದು ಅವರು ಈ ಹಕ್ಕನ್ನು ಸಮರ್ಥಿಸಿಕೊಳ್ಳುವ ಉದ್ದೇಶವನ್ನು ಸೂಚಿಸುತ್ತದೆ. 30.03.2020 (ದಿನಾಂಕ) ರಿಂದ 30 ಏಪ್ರಿಲ್ 2020 (ಕಟ್ ಆಫ್ ದಿನಾಂಕ) ಮತ್ತು ಸೌಲಭ್ಯ ಒಪ್ಪಂದದ ಷರತ್ತು 8 ರ ಅಡಿಯಲ್ಲಿ 6.78% ಕ್ಲೈಮ್ ಮತ್ತು ಸೌಲಭ್ಯ ಒಪ್ಪಂದದ ಷರತ್ತು 8.3 ರ ಅಡಿಯಲ್ಲಿ 30.03.2020 ರಿಂದ 30 ಏಪ್ರಿಲ್ 2020 (ಕಟ್ ಆಫ್ ದಿನಾಂಕ ಮತ್ತು ಒನ್ ಟೈಮ್ ಬ್ರೇಕ್ ವೆಚ್ಚದ ಅಡಿಯಲ್ಲಿ 2% ದಂಡದ ಬಡ್ಡಿ ಪಡೆಯಲಾಗುತ್ತದೆ.

ನ್ಯಾಯವ್ಯಾಪ್ತಿ:

ಕಾನೂನು

Default Jurisdiction

ವಿವಾದವನ್ನು ನಿಯಂತ್ರಿಸುವ ಕಾನೂನು ಸೌಲಭ್ಯ ಒಪ್ಪಂದದ ಅನುಚ್ಛೇದ 32 ಹೇಳುವುದೇನೆಂದರೆ – ಈ ಒಪ್ಪಂದ, ಮತ್ತು ಈ ಒಪ್ಪಂದದಿಂದ ಅಥವಾ ಅದಕ್ಕೆ ಸಂಬಂಧಿಸಿದ ಎಲ್ಲಾ ಒಪ್ಪಂದೇತರ ಬಾಧ್ಯತೆಗಳನ್ನು ಡಿಐಎಫ್ಸಿ ಕಾನೂನುಗಳಿಂದ ನಿಯಂತ್ರಿಸಲಾಗುತ್ತದೆ. ಕಾರ್ಪೊರೇಟ್ ಗ್ಯಾರಂಟಿಯ ಕಲಂ 27 ಹೇಳುವುದೇನೆಂದರೆ – ದುಬೈ ಅಂತರಾಷ್ಟ್ರೀಯ ಹಣಕಾಸು ಕೇಂದ್ರದ ನ್ಯಾಯಾಲಯಗಳು ಈ ಗ್ಯಾರಂಟಿಯಿಂದ ಉದ್ಭವಿಸುವ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ವಿವಾದವನ್ನು ಬಗೆಹರಿಸಲು ವಿಶೇಷ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ ಎಂದು ಗ್ಯಾರಂಟರು ಒಪ್ಪಿಕೊಳ್ಳುತ್ತಾರೆ. (ಅಸ್ತಿತ್ವ, ಸಿಂಧುತ್ವ ಅಥವಾ ಗ್ಯಾರಂಟಿಯ ಮುಕ್ತಾಯದ ಕುರಿತು ವಿವಾದ ಸೇರಿದಂತೆ) (ವಿವಾದ) ವೈಯಕ್ತಿಕ ಗ್ಯಾರಂಟಿಯ ಅನುಚ್ಛೇದ 20 ಹೇಳುತ್ತದೆ. ಈ ಗ್ಯಾರಂಟಿಯನ್ನು ದುಬೈ ಅಂತರಾಷ್ಟ್ರೀಯ ಹಣಕಾಸು ಕೇಂದ್ರದ ಕಾನೂನುಗಳು ನಿಯಂತ್ರಿಸುತ್ತದೆ.

ಡಿಐಎಫ್‌ಸಿ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಕಾನೂನು ಏರಿಕೆ:– ಸೌಲಭ್ಯ ಒಪ್ಪಂದದ 33 ಡಿಐಎಫ್‌ಸಿ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯನ್ನು ಹೇಳುತ್ತದೆ, ಡಿಐಎಫ್‌ಸಿ ನ್ಯಾಯಾಲಯಗಳು ಈ ಒಪ್ಪಂದದಿಂದ ಉಂಟಾದ ಯಾವುದೇ ವಿವಾದವನ್ನು ಬಗೆಹರಿಸಲು ವಿಶೇಷ ಅಧಿಕಾರ ವ್ಯಾಪ್ತಿಯನ್ನು ಹೊಂದಿವೆ (ಈ ಒಪ್ಪಂದದಿಂದ ಉಂಟಾದ ಯಾವುದೇ ಒಪ್ಪಂದದ ಬಾಧ್ಯತೆಗೆ ಸಂಬಂಧಿಸಿದ ಯಾವುದೇ ವಿವಾದ ಮತ್ತು ಅಸ್ತಿತ್ವ, ಸಿಂಧುತ್ವ ಅಥವಾ ಗ್ಯಾರಂಟಿಯ ಮುಕ್ತಾಯದ ಕುರಿತು ವಿವಾದ, ಸೇರಿದಂತೆ) (ವಿವಾದ) ಕಾರ್ಪೊರೇಟ್ ಗ್ಯಾರಂಟಿಯ ಷರತ್ತು 27 ಡಿಐಎಫ್‌ಸಿ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯು ಈ ಗ್ಯಾರಂಟಿಯಿಂದ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ವಿವಾದವನ್ನು ಇತ್ಯರ್ಥಗೊಳಿಸಲು ವಿಶೇಷವಲ್ಲದ ಅಧಿಕಾರವನ್ನು ಹೊಂದಿರುತ್ತದೆ ಮತ್ತು ಕ್ಷೇಮುದಾರರು ನ್ಯಾಯ ವ್ಯಾಪ್ತಿಯೊಂದಿಗೆ ಯಾವುದೇ ಇತರ ನ್ಯಾಯಾಲಯಗಳಲ್ಲಿ ವಿವಾದಕ್ಕೆ ಸಂಬಂಧಿಸಿದ ವಿಚಾರಣೆಗಳನ್ನು ತೆಗೆದುಕೊಳ್ಳುವುದನ್ನು ತಡೆಯುವುದಿಲ್ಲ. ವೈಯಕ್ತಿಕ ಗ್ಯಾರಂಟಿಯ ಷರತ್ತು 20 ಡಿಐಎಫ್‌ಸಿ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಈ ಗ್ಯಾರಂಟಿಯಿಂದ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ವಿವಾದವನ್ನು ಇತ್ಯರ್ಥಗೊಳಿಸಲು ವಿಶೇಷವಲ್ಲದ ಅಧಿಕಾರವನ್ನು ಹೊಂದಿರುತ್ತದೆ. ಮತ್ತು ಕ್ಲೈಮುದಾರರು ನ್ಯಾಯ ವ್ಯಾಪ್ತಿಯೊಂದಿಗೆ ಯಾವುದೇ ಇತರ ನ್ಯಾಯಾಲಯಗಳಲ್ಲಿ ವಿವಾದಕ್ಕೆ ಸಂಬಂಧಿಸಿದ ವಿಚಾರಣೆಗಳನ್ನು ತೆಗೆದುಕೊಳ್ಳುವುದನ್ನು ತಡೆಯುವುದಿಲ್ಲ.

ಕೋರಿರುವ ಪರಿಹಾರ:

ಅವಧಿ ಸಾಲದ ಘೋಷಣೆ ಯುಎಸ್‌ಡಿ 31,439,784.42 (ಯುನೈಟೆಡ್ ಸ್ಟೇಟ್ಸ್ ಡಾಲರ್ ಮೂವತ್ತೊಂದು ಮಿಲಿಯನ್ ನಾಲ್ಕು ನೂರ ಮೂವತ್ತೊಂಬತ್ತು ಸಾವಿರದ ಏಳು ನೂರ ಎಂಭತ್ತನಾಲ್ಕು ಮತ್ತು ನಲವತ್ತೆರಡು ಸೆಂಟ್ಸ್ ಮಾತ್ರ) "ಕ್ಷೇಮ್ ಮೊತ್ತ" ಬಾಕಿ ಉಳಿದಿದೆ. ಮತ್ತು ಭಾಗಗಳು 2 ಮತ್ತು 8 ಸೇರಿದಂತೆ ಡಿಐಎಫ್‌ಸಿ ಕಾನೂನು, 2005 ರ ಸಂಖ್ಯೆ 5ರ ಡಿಐಎಫ್ಸಿ ಕಾನೂನು ಅಡಿಯಲ್ಲಿ ಬಡ್ಡಿ ಮತ್ತು ದಂಡದ ಬಡ್ಡಿಯೊಂದಿಗೆ ತಕ್ಷಣೇ ಪಾವತಿಸಬೇಕು. 30 ಏಪ್ರಿಲ್ 2020 ರಂತೆ 31,439,784.42 (ಯುನೈಟೆಡ್ ಸ್ಟೇಟ್ಸ್ ಡಾಲರ್ ಮೂವತ್ತೊಂದು ಮಿಲಿಯನ್ ನಾಲ್ಕು ನೂರ ಮೂವತ್ತೊಂಬತ್ತು ಸಾವಿರದ ಏಳು ನೂರ ಎಂಭತ್ತನಾಲ್ಕು ಮತ್ತು ನಲವತ್ತೆರಡು ಸೆಂಟ್ಸ್) ಮಾತ್ರ ಬಾಕಿ ಮೊತ್ತ" ಅನ್ನು ಬಾಕಿ ಎಂದು ಘೋಷಿಸಲಾಗಿದೆ ಮತ್ತು ತಕ್ಷಣವೇ ಬಡ್ಡಿಯೊಂದಿಗೆ ಪಾವತಿಸಲಾಗುತ್ತದೆ ಮತ್ತು ಕೆಳಗಿನಂತೆ ದಂಡದ ಬಡ್ಡಿ ಯುಎಸ್‌ಡಿ 30,792,944.45 (ಯುನೈಟೆಡ್ ಸ್ಟೇಟ್ಸ್ ಡಾಲರ್ ಮೂವತ್ತು ಮಿಲಿಯನ್ ಏಳು ನೂರ ತೊಂಬತ್ತೆರಡು ಸಾವಿರದ ಒಂಬೈನೂರ ನಲವತ್ತನಾಲ್ಕು ಮತ್ತು ನಲವತ್ತೈದು ಸೆಂಟ್ಸ್) ಪ್ರಧಾನ ಮೊತ್ತ ಮತ್ತು ಯುಎಸ್ಡಿ 213,294.00 (ಯುನೈಟೆಡ್ ಸ್ಟೇಟ್ಸ್ ಡಾಲರ್ ಎರಡು ನೂರ ಹದಿಮೂರು ಸಾವಿರದ ಇನ್ನೂರ ತೊಂಬತ್ತನಾಲ್ಕು ಮಾತ್ರ) 30.03.2020 ರಿಂದ 30 ಏಪ್ರಿಲ್ 2020 (ಕಟ್ ಆಫ್ ದಿನಾಂಕ) ಮತ್ತು ಸೌಲಭ್ಯ ಒಪ್ಪಂದದ ಷರತ್ತು 8 ರ ಅಡಿಯಲ್ಲಿ 6,78% ಕ್ಲೈಮ್ ಮತ್ತು (ಯುಎಸ್‌ಡಿ 433,545,97 (ಯುನೈಟೆಡ್ ಸ್ಟೇಟ್ಸ್ ಡಾಲರ್ ನಾಲ್ಕು ನೂರ ಮೂವತ್ತು ಮೂರು ಸಾವಿರದ ಐನೂರು ನಲವತ್ತೈದು ಮತ್ತು ತೊಂಬತ್ತೇಳು ಸೆಂಟ್ಸ್) 30.03.2020 ರಿಂದ 30 ಏಪ್ರಿಲ್ 2020 (ಕಟ್ ಆಫ್ ದಿನಾಂಕ) ಮತ್ತು ಈ ಕ್ಲೈಮ್ ವಿವರಗಳನ್ನು ಸಲ್ಲಿಸುವ ದಿನಾಂಕದಂದು ಕ್ಲೈಮು 102160 ಮೊತ್ತದಲ್ಲಿ ಯುನೈಟೆಡ್ ಸ್ಟೇಟ್ಸ್ ಡಾಲರ್ ಒಂದು ನೂರ ಎರಡು ಸಾವಿರದ ನೂರ ಅರವತ್ತು ಮಾತ್ರ ಒಂದು ಕಾನೂನು ವೆಚ್ಚವನ್ನು ಅಂದಾಜು ಕಾನೂನು ವೆಚ್ಚಗಳಂತೆ (ಫೈಲಿಂಗ್ ಶುಲ್ಕವನ್ನು ಹೊರತು ಪಡಿಸಿ) (ಕಾನೂನು ವೆಚ್ಚ) ಕ್ಲೈಮುದಾರರು ತೀರ್ಪನ್ನು ನಮೂದಿಸಿದ ದಿನಾಂಕದಿಂದ 9% (ಒಂಬತ್ತು ಪ್ರತಿಶತ) ದರದಲ್ಲಿ ಅಥವಾ 2017 ರ ಪ್ರಾಕ್ಟೀಸ್ ನಿರ್ದೇಶನ 4 (ತೀರ್ಪಿನ ಮೇಲೆ ಬಡ್ಡಿ ಮತ್ತು ಶುಲ್ಕಗಳು ಮತ್ತು ಇತರ ವೆಚ್ಚಗಳನ್ನು ಸಲ್ಲಿಸುವ ಇತರ ದರದಲ್ಲಿ ಸರಳ ಬಡ್ಡಿಯನ್ನು ಪಡೆಯುತ್ತಿದ್ದಾರೆ ಮತ್ತು ಪರಿಹಾರಗಳು.

ಸೇವೆಯ ಸ್ಥಳ	:	ದುಬೈ ಹೊರಗೆ
ಸತ್ಯದ ಹೇಳಿಕೆ	:	ನಮ್ಮ ಕಕ್ಷಿದಾರ ಈ ಕ್ಷೇಮ್ ನಮೂನೆಯಲ್ಲಿ ಹೇಳಿರುವ ಸಂಗತಿಗಳು ಸತ್ಯವೆಂದು ನಂಬುತ್ತಾರೆ.
ಪೂರ್ತಿ ಹೆಸರು	:	ನಿಖತ್ ಸರ್ದಾರ್ ಖಾನ್
ಸಹಿ	:	ನಿಖತ್ ಸರ್ದಾರ್ ಖಾನ್

ಕಾನೂನು ಪ್ರತಿನಿಧಿ:

ಸಂಸ್ಥೆ/ಹೆಸರು	:	ಕೊಚ್ಚಾರ್ ಮತ್ತು ಕಂ, ಕಾನೂನು ಸಲಹೆಗಾರರು
ನ್ಯಾಯಾಲಯದ ನೋಂದಣಿ ಸಂಖ್ಯೆ	:	927ಎ
ವಿಳಾಸ	:	ಪಿಒ ಬಾಕ್ಸ್ 113297, ಸಿಟಾಡಲ್ ಟವರ್ 14ನೇ ಮಹಡಿ, ಸೂಟ್ 1410, ಬಿಸಿನೆಸ್ ಬೇ
ಇಮೇಲ್	:	nikhat@kochhardubai.com, anjulis@kochhardubai.com
ದೂರವಾಣಿ	:	+971 (04) 2776075
ನಿಮ್ಮ ಉಲ್ಲೇಖ	:	ಕ್ಲೈಮ್ ನಮೂನೆ ಎಸ್‌ಬಿಐ ವಿರುದ್ಧ [redacted] ಮತ್ತು ಇತರರು

ನಿಮ್ಮ ಕ್ಲೈಮ್ ನಮೂನೆಯನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ ನಿಮ್ಮ ಕ್ಲೈಮ್‌ಅನ್ನು ಸ್ವೀಕರಿಸಲು ಮತ್ತು ಪ್ರಗತಿ ಸಾಧಿಸುವ ಮೊದಲು ನೀವು ದೃಢೀಕರಣ ಮತ್ತು ಇನ್ವಾಯ್ಸ್ ಅನ್ನು ಸ್ವೀಕರಿಸುತ್ತೀರಿ. ನಿಮ್ಮ ಸಲ್ಲಿಕೆ ವಿಫಲವಾದರೆ ದೋಷ ಮತ್ತು ಅದನ್ನು ಹೇಗೆ ಸರಿಪಡಿಸಬೇಕು ಎಂದು ವಿವರಿಸುವ ಸಂದೇಶವನ್ನು ನೀವು ಸ್ವೀಕರಿಸುತ್ತೀರಿ.

ನಮೂನೆಯನ್ನು ಸಲ್ಲಿಸುವಲ್ಲಿ ನಿಮಗೆ ಯಾವುದೇ ಸಮಸ್ಯೆಗಳಿದ್ದರೆ ಅಥವಾ ಹೆಚ್ಚಿನ ಸಹಾಯದ ಅಗತ್ಯವಿದ್ದರೆ ದಯವಿಟ್ಟು ನಮ್ಮನ್ನು ಸಂಪರ್ಕಿಸಿ: +97144273333 ಅಥವಾ ಇಮೇಲ್ ಮೂಲಕ registry@difccourts.ae

ಡಿಐಎಫ್‌ಸಿ ನ್ಯಾಯಾಲಯಗಳು ಭಾನುವಾರದಿಂದ ಗುರುವಾರದವರೆಗೆ ಬೆಳ್ಳಿಗೆ 10 ರಿಂದ ಸಂಜೆ 4 ರವರೆಗೆ ತೆರೆದಿರುತ್ತವೆ. ದಯವಿಟ್ಟು ರಿಜಿಸ್ಟ್ರಿಯ ನ್ಯಾಯಾಲಯದೊಂದಿಗೆ ಎಲ್ಲಾ ಪತ್ರ ವ್ಯವಹಾರಗಳು ಪರಿಹರಿಸಿ ಮತ್ತು ನೀವು ಇನ್ನೂ ಕೇಸ್ ಸಂಖ್ಯೆ ಹೊಂದಿಲ್ಲದಿದ್ದರೆ ಪ್ರಕರಣ ಸಂಖ್ಯೆಯನ್ನು ಉಲ್ಲೇಖಿಸಿ,

ಜಲ ಕಾಳಜಿ ಸಾರುತ್ತಿರುವ 'ನಮ್ಮ ಮೆಟ್ರೊ' ನಿಲ್ದಾಣದ ಗೋಡೆ • ಕಲಾಕೃತಿಗಳ ಮೂಲಕ ಜನ ಜಾಗೃತಿ

ಬತ್ತಿದ ಒರತೆಯ ಮತ್ತೆ ತುಂಬುವ ಭಿತ್ತಿಚಿತ್ರಗಳು

• ಪ್ರವೀಣ್ ಕುಮಾರ್ ಪಿ.ವಿ.



ಕಬ್ಬನ್ ಉದ್ಯಾನದ ಮೆಟ್ರೊ ನಿಲ್ದಾಣದಲ್ಲಿರುವ ಭಿತ್ತಿಚಿತ್ರ– ಪ್ರಜಾವಾಣಿ ಚಿತ್ರ

ಬೆಂಗಳೂರು: ನೀರಿನ ಜೊತೆಗೆ ಬೆಸೆದುಕೊಂಡಿರುವ ಜನಪದ ನಂಬಿಕೆಗಳು, ಭೂಮಿಯೊಳಗಿನ ಗಂಗೆಯನ್ನು ಬಾವಿಗಿಳಿಸುವ ಬೋವಿ ಜನಾಂಗದವರ ಚಮತ್ಕಾರಿಕೆ, ಕೊಳವೆ ಬಾವಿಗಳಿಂದಾಗಿ ನೀರಿನ ಸೆಲೆಗೆ ಎದುರಾಗಿರುವ ಆಪತ್ತು...

ನಗರದ ನೀರಿನ ನಂಟು ಹಾಗೂ ಅದಕ್ಕೆ ಬೆಸೆದುಕೊಂಡಿರುವ ಹತ್ತಾರು ಜನಪದ ಕತೆಗಳು ನಗರದ ಕಬ್ಬನ್ ಉದ್ಯಾನದ 'ನಮ್ಮ ಮೆಟ್ರೊ' ನೆಲದಡಿಯ ನಿಲ್ದಾಣದ ಗೋಡೆಗಳಲ್ಲಿ ಕಲಾಕೃತಿಗಳಾಗಿ ಅರಳಿವೆ. ನೀರನ್ನು ಜತನವಾಗಿ ಬಳಸಬೇಕಾದ ಕಳಕಳಿಯನ್ನೂ ಇವು ಸಾರುತ್ತಿವೆ.

'ನಗರದಲ್ಲಿ ಅಂತರ್ಜಲ ಮಟ್ಟ ಪಾತಾಳಕ್ಕಿಳಿಯುತ್ತಿದೆ. ಕೊಳವೆ ಬಾವಿಗಳು ಜಾಸ್ತಿಯಾಗಿರುವುದು ಹಾಗೂ ಮೇಲ್ಮೈನಲ್ಲಿ ಹರಿವ ನೀರನ್ನು ಭೂಮಿಯೊಳಕ್ಕಿಳಿಸುವ ಬಾವಿಗಳು ಕಡಿಮೆಯಾಗಿರುವುದೂ ಇದಕ್ಕೆ ಕಾರಣ. ನಗರಲ್ಲಿ ಬಾವಿಗಳನ್ನು ತೋಡುವ ಕಾಯಕದಲ್ಲಿ ತೊಡಗಿದ್ದ ಬೋವಿ ಜನಾಂಗದವರೂ ಇಲ್ಲಿ ಅಂತರ್ಜಲ ಮಟ್ಟವನ್ನು ಜತನವಾಗಿ ಕಾಪಾಡಲು ನೆರವಾಗುತ್ತಿದ್ದರು. ಅವರ ಪರಿಣತಿ ಬಳಸಿ ಬಯೋಮ್ ಎನ್‌ವಿರಾನ್‌ಮೆಂಟಲ್ ಟ್ರಸ್ಟ್ ಕಬ್ಬನ್ ಉದ್ಯಾನದಲ್ಲಿ ನೂರಾರು ಇಂಗುಗುಂಡಿಗಳನ್ನು ನಿರ್ಮಿಸಿದೆ. ಅಂತರ್ಜಲ ಸಂರಕ್ಷಣೆಯ ಮಹತ್ವ ಸಾರಲು ಈ ಕಲಾಕೃತಿಗಳನ್ನು ನಿರ್ಮಿಸುತ್ತಿದ್ದೇವೆ' ಎಂದು ಕಲಾವಿದ ಗೌತಮ್ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಜಾವಾಣಿ ವಿಶೇಷ

ಪ್ಲೇಸ್ ಆರ್ಟ್ ಯೂತ್ ಕಲೆಕ್ಷನ್, ಯಲಹಂಕದ ಸೃಷ್ಟಿ ಕಾಲೇಜಿನ ಆರ್ಟ್ ಆ್ಯಂಡ್ ಟ್ರಾನ್ಸಿಟ್ ಕಾರ್ಯಕ್ರಮದಡಿ 10 ಕಲಾ ವಿದ್ಯಾರ್ಥಿಗಳು ಈ ಕಲಾಕೃತಿಗಳನ್ನು ರಚನೆಯಲ್ಲಿ ತೊಡಗಿದ್ದಾರೆ.

ಕಲಾಕೃತಿಗಳಿಗೆ ಕಾವ್ಯದ ವೆರುಗು: ಈ ನೆಲದ ನೀರಿನ ನಂಟಿನ ಜೊತೆಗೆ ಬೆಸೆದುಕೊಂಡಿರುವ ಜಾನಪದ ಕಥನಗಳಿಗೆ ಕಾವ್ಯಸಂಜೆ ಬಳಗದವರು ಪದ್ಯದ ರೂಪ ನೀಡಿದ್ದಾರೆ. ಈ ಪದ್ಯಗಳಿಗೆ ಪೂರಕವಾಗಿ ರಚಿಸಲಾದ ಭಿತ್ತಿಚಿತ್ರಗಳು ಭೂಮಿ ಒಡಲ ತುಂಬಾ ಜುಳು ಜುಳು ಹರಿಯುವ ನೆನಪುಗಳನ್ನು ಕಟ್ಟಿಕೊಡುತಿವೆ.

> ಕಬ್ಬನ್ ಉದ್ಯಾನ ಮೆಟ್ರೊ ನಿಲ್ದಾಣವನ್ನು ಕಲಾತ್ಮಕವಾಗಿ ರೂಪಿಸಲಾಗಿದೆ. ಅಂತರ್ಜಲ ಸಂರಕ್ಷಣೆಯ ಬಗ್ಗೆ ಕಾಳಜಿ ಮೂಡಿಸುವುದು ನಮ್ಮ ಉದ್ದೇಶ
>
> **ಸಾರ್ಥಕ ಎ.ಎಸ್.ಶಂಕರ್**
> ಕಾರ್ಯನಿರ್ವಾಹಕ ನಿರ್ದೇಶಕ, ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗ, ಬಿಎಂಆರ್‌ಸಿಎಲ್

'ನಂದಿ ಬೆಟ್ಟದ ಒಡೆಯ ಶಿವೆಯ ಜೊತೆ ಬಂದಿಳಿದು, ಜಟೆಗೆದರಿ ಚೆಲ್ಲಿದನು ಹಿಡಿದಿಟ್ಟ ಶಿವೆಯ, ಆರು ನದಿಗಳು ಹರಿದು ಊರೆಲ್ಲ ತೊಯ್ದು, ಮಳೆ ಸುರಿದು ಬೆಳೆಯಾಗಿ ಭೂಮಿ ಬಂಗಾರ....'

ನಂದಿ ಬೆಟ್ಟದಲ್ಲಿ ಹುಟ್ಟುವ ನದಿಗಳು ನಗರದ ನೀರಿನ ಒರತೆಯನ್ನು ಹೆಚ್ಚಿಸಿದ ಬಗೆಯನ್ನು ಸಾರುವ ಈ ಪದ್ಯಕ್ಕೆ ಪೂರಕವಾದ ಭಿತ್ತಿಚಿತ್ರಗಳು ಇಲ್ಲಿವೆ.

'ಕರಗದ ಕುಂಟೆಯಿಂದ ಹೊರಟಳು ಗಂಗೆತಿಗಳರ ಮನೆ ಹಾದು ಹೂ ಹಾರ ಲಿಂಬೆ ಹಣ್ಣ ಪಡೆದು,ಮಂದಿರ ಮಸೀದಿಯ ಹೊಕ್ಕು ಹಾದಿಯುದ್ದಕ್ಕೂ ಮನೆ ಮನೆ ಮಕ್ಕಳ ಹರಸಿ, ಬದುಕಲಿ ಬಾಯಾರಿದ ನಮಗೆ ಪ್ರೀತಿ ಹಂಚಿದಳು'

ಐತಿಹಾಸಿಕ ಕರಗಕ್ಕೂ, ನೀರು ಹರಿವಿನ ಜಾಡಿಗೂ ಇರುವ ನಂಟನ್ನು ಹೇಳುವ ಈ ಪದ್ಯಕ್ಕೆ ಪೂರಕವಾದ ಭವ್ಯ ಕಲಾಕೃತಿಯೂ ಇಲ್ಲಿನ ಗೋಡೆಯಲ್ಲಿ ರಾರಾಜಿಸುತ್ತಿದೆ.



ಭಿತ್ತಿಚಿತ್ರ ರಚನೆಯಲ್ಲಿ ತೊಡಗಿರುವ ಕಲಾವಿದ ಗೌತಮ್

'ಬಾವಿ ತೋಡಿದ ಬೋವಿ ದೇವರ ಬಾಗಿಲೊಳಗಡೆ ಬಿಡದೆ ಹೊರಗಿಟ್ಟವರ ಬಾಯಾರಿಕೆ ತಣಿಸಲು ಕಂಚಿನ ಕೊಡದ ತುಂಬಾ ಸಿಹಿನೀರು'

ಜನರಿಗೆ ಸಿಹಿ ನೀರನುಣಿಸಿಯೂ ಮನೆ ಬಾಗಿಲಿನೊಳಗಡೆ ಪ್ರವೇಶ ಸಿಗದ ಬೋವಿ ಜನಾಂಗದವರನ್ನು ಸಮಾಜ ಹೇಗೆ ನಡೆಸಿಕೊಂಡಿತು ಎಂಬುದನ್ನೂ ಮನಃಕಲಕುವಂತೆ ಕಟ್ಟಿಕೊಡುತ್ತದೆ ಈ ಪದ್ಯ.

'ರಾಟೆಗೆ ಹಗ್ಗ ಕಟ್ಟಿ ಕೊಡವ ನೇತು ಬಿಟ್ಟು ಬಾವಿಯ ಅಂತರಾಳದ ನೀರ ಹೊರಕ್ಕೆಳೆವ ಪರಿಯಲ್ಲಿ ಮನದಾಳಕ್ಕೂ ಪಾತಾಳ ಗರಡಿಯ ಬಿಟ್ಟು ಕಲ್ಮಶವ ಹುಡುಕಿ ಹೊರ ತೆಗೆದು ಕಾಯವ್ವ'

ಎಂಬ ಪದ್ಯದ ಸಾಲುಗಳಲ್ಲಿ ಕದಡಿದ ಮನಸ್ಸುಗಳಲ್ಲಿರುವ ಕಲ್ಮಶ ತಿಳಿಯಾಗಲಿ ಎಂಬ ಆಶಯ ವ್ಯಕ್ತವಾಗಿದೆ.

'ನಳದ ಬಂಧನದೊಳಗೆ ನರಳಿ ಹರಿಯುವ ನೀರು ಯಾವ ನೆನಪುಗಳನ್ನೂ ಮರೆತಿಲ್ಲವಲ್ಲ ಇಳೆಯೊಡಲ ತುಂಬೆಲ್ಲಾ ಕಿಕ್ಕಿರಿದು ತುಂಬಿರುವ ಹೀರುಕೊಳವೆಗಳ ಗಾಯ ಆರುತಿಲ್ಲ'

ಈ ಪದ್ಯದ ಸಾಲುಗಳು ಕೊಳವೆಬಾವಿಗಳಿಂದ ಭೂಮಿಯ ಅಂತರಾಳದಲ್ಲಿ ಸೃಷ್ಟಿಯಾಗುತ್ತಿರುವ ಗಾಯ ಭವಿಷ್ಯದಲ್ಲಿ ಸೃಷ್ಟಿಸುವ ನೋವನ್ನೂ ಕಟ್ಟಿಕೊಡುತ್ತಲೇ, ವಹಿಸಬೇಕಾದ ಎಚ್ಚರದ ಬಗ್ಗೆ ತಿಳಿ ಹೇಳುತ್ತಿದೆ.

ಕಬ್ಬನ್ ಉದ್ಯಾನ ನಿಲ್ದಾಣಕ್ಕೆ ಬರುವ ಪ್ರಯಾಣಿಕರು ಪುರುಸೊತ್ತಿದ್ದರೆ ಈ ಭಿತ್ತಿಚಿತ್ರಗಳತ್ತ ಕಣ್ಣುಹಾಯಿಸಿ ಎನ್ನುತ್ತಾರೆ ಬಿಎಂಆರ್‌ಸಿಎಲ್ ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗದ ಕಾರ್ಯನಿರ್ವಾಹಕನಿರ್ದೇಶಕ ಎ.ಎಸ್.ಶಂಕರ್.

ಬಾವಿಯ ಮಣ್ಣೇ ಭಿತ್ತಿಚಿತ್ರಕ್ಕೆ ಬಣ್ಣ

ಕಬ್ಬನ್ ಉದ್ಯಾನದಲ್ಲಿ ಅಂತರ್ಜಲ ಮರುಪೂರಣಕ್ಕಾಗಿ ಇಂಗುಬಾವಿಗಳನ್ನು ನಿರ್ಮಿಸಲು ಹೊರ ತೆಗೆದ ಮಣ್ಣು ಈ ಭಿತ್ತಿಚಿತ್ರಗಳನ್ನು ರಚಿಸಲು ಬಣ್ಣವಾಗಿ ಬಳಕೆ ಆಗಿದೆ. ಹಾಗಾಗಿ ಈ ಭಿತ್ತಿ ಚಿತ್ರಗಳಲ್ಲಿ ಕಬ್ಬನ್ ಉದ್ಯಾನದ ಮಣ್ಣಿನ ಘಮಲೂ ಇದೆ.

'ಕೆಂಪು, ಹಳದಿ, ಕಪ್ಪು ಮಣ್ಣುಗಳಲ್ಲಿ ಐದು ಬಗೆಯ ಬಣ್ಣಗಳನ್ನು ತಯಾರಿಸಿದ್ದೇವೆ. ಅದನ್ನೇ ಬಳಸಿ ಭಿತ್ತಿಚಿತ್ರಗಳನ್ನು ರಚಿಸಿದ್ದೇವೆ' ಎಂದು ಕಲಾವಿದ ಗೌತಮ್ ತಿಳಿಸಿದರು.

ಸಾಂಗ್ಲಿಯಾನ ಬಡಾವಣೆ ಫಲಕ ಬದಲು

ಬೆಂಗಳೂರು: ಹೊರಮಾವು ಅಗರದಲ್ಲಿನ 'ಎಚ್.ಟಿ.ಸಾಂಗ್ಲಿಯಾನ ಬಡಾವಣೆ'ಯ ನಾಮಫಲಕಗಳನ್ನು 'ತಿರುಮಲ ಬಡಾವಣೆ' ಎಂದು ಬದಲಾಯಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಎಚ್.ಟಿ. ಸಾಂಗ್ಲಿಯಾನ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ದೂರಿದ್ದಾರೆ.

ವೈಯಕ್ತಿಕ ಹಿತಾಸಕ್ತಿಗಾಗಿ ಕೆಲವರು ಫಲಕಗಳನ್ನು ಬದಲಾಯಿಸುತ್ತಿದ್ದು, ಈ ಮೂಲಕ ನಿವಾಸಿಗಳ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ. ಕಾನೂನುಬಾಹಿರವಾಗಿ ಫಲಕಗಳನ್ನು ಬದಲಾಯಿಸುವ ಕಾರ್ಯದಲ್ಲಿ ತೊಡಗಿರುವವರ ವಿರುದ್ಧ ಕ್ರಮ ಕೈಗೊಂಡು ಯಥಾಸ್ಥಿತಿ ಕಾಪಾಡಬೇಕು ಎಂದು ಒತ್ತಾಯಿಸಿದ್ದಾರೆ.

2008ರಲ್ಲಿ ಈ ಬಡಾವಣೆ ನಿರ್ಮಿಸಲಾಗಿದೆ.ಅಂದಿನಿಂದಅಂಚೆವಿಳಾಸ,ಮತದಾರರ ಗುರುತಿನ ಚೀಟಿ, ವಿದ್ಯುತ್ ಬಿಲ್ ಸೇರಿ ಎಲ್ಲ ದಾಖಲೆಗಳಲ್ಲಿ ಎಚ್.ಟಿ.ಸಾಂಗ್ಲಿಯಾನ ಬಡಾವಣೆ ಎಂದೇ ದಾಖಲಾಗಿದೆ. ಬಿಬಿಎಂಪಿ ಕೈಗೊಂಡಿರುವ ಕಾಮಗಾರಿಗಳಲ್ಲಿಯೂ ಇದೇ ಹೆಸರು ಬಳಸಲಾಗಿದೆ ಎಂದು ವಿವರಿಸಿದ್ದಾರೆ.



ಬಡವಾಣೆಯ ಬದಲಾದ ಹೆಸರಿನ ಫಲಕ

ಬಿಬಿಎಂಪಿ ಸಹ 'ಎಚ್.ಟಿ. ಸಾಂಗ್ಲಿಯಾನ ಬಡಾವಣೆ' ಎನ್ನುವ ಫಲಕಗಳನ್ನು ಅಳವಡಿಸಿದೆ. ಆದರೆ, ವ್ಯಕ್ತಿಯೊಬ್ಬರು ಫಲಕ ಬದಲಾಯಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಈ ಬಗ್ಗೆ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್, ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ.

ಸಾಂಗ್ಲಿಯಾನ ಅವರು ಸಂಸದರಾಗಿದ್ದಾಗ ಈ ಬಡಾವಣೆ ನಿರ್ಮಿಸಲಾಗಿತ್ತು. ನೀರು ವಿದ್ಯುತ್ ಸೇರಿದಂತೆ ಎಲ್ಲ ಮೂಲಸೌಕರ್ಯಗಳನ್ನು ಕಲ್ಪಿಸಲು ಸಾಂಗ್ಲಿಯಾನ ಅವರು ಶ್ರಮಿಸಿದ್ದರಿಂದ ಅವರ ಹೆಸರಿಡಲಾಗಿತ್ತು. ಎನ್.ಮಂಜುನಾಥ್ ಪ್ರಸಾದ್ ಬಿಬಿಎಂಪಿ ಹಿಂದಿನ ಆಯುಕ್ತರಾಗಿದ್ದಾಗ ನಾಮಕರಣ ಆದೇಶವನ್ನು ಹೊರಡಿಸಿದ್ದರು. ಬಡಾವಣೆ ಜಮೀನಿನ ಮೂಲ ಹಿಡುವಳಿದಾರರಾದ ಗೊಲ್ಲರ ಹಳ್ಳಿ ಲಕ್ಷಮಯ್ಯ ತಿಳಿಸಿದರು. ಬಡಾವಣೆಯಲ್ಲಿನ 2 ಕೊಳವೆಬಾವಿಗಳ ದುರಸ್ತಿ, ನಿರ್ವಹಣಾ ವೆಚ್ಚವನ್ನು ಸದಸ್ಯರೇ ಭರಿಸುತ್ತಿದ್ದಾರೆ ಎಂದು ತಿಳಿಸಿದರು.



ರಾಷ್ಟ್ರೀಯ ವಿಜ್ಞಾನ ದಿನ

ಗಂಗಾನಗರದ ಸರ್ಕಾರಿ ಕನ್ನಡ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ ನಡೆದ ರಾಷ್ಟ್ರೀಯ ವಿಜ್ಞಾನ ದಿನ ಕಾರ್ಯಕ್ರಮದಲ್ಲಿ ಚಂದ್ರ ಗ್ರಹಣ ಮತ್ತು ಸೂರ್ಯ ಗ್ರಹಣದ ವಿವರಣೆಯನ್ನು ವಿದ್ಯಾರ್ಥಿಗಳು ಕುತೂಹಲದಿಂದ ಕೇಳಿಸಿಕೊಂಡರು –ಪ್ರಜಾವಾಣಿ ಚಿತ್ರ

'ಕಾಂಗ್ರೆಸ್ ಪಾದಯಾತ್ರೆ ಕಪಟ ನಾಟಕ'

ಬೆಂಗಳೂರು: 'ರಾಜ್ಯದ ಮುಖ್ಯಮಂತ್ರಿ ಆಗಿಬಿಡಬೇಕೆಂಬ ಹುಚ್ಚು ಡಿ.ಕೆ. ಶಿವಕುಮಾರ್ ಅವರನ್ನು ಆವರಿಸಿಕೊಂಡಿದೆ. ಅದಕ್ಕಾಗಿ ಅವರು ಸಿದ್ದರಾಮಯ್ಯ ಅವರನ್ನು ಬದಿಗೊತ್ತಲು ಮೇಕೆದಾಟು ಯೋಜನೆಯ ಹೆಸರಿನಲ್ಲಿ ಪಾದಯಾತ್ರೆಯ ಕಪಟ ನಾಟಕ ಆಡುತ್ತಿದ್ದಾರೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಲೇವಡಿ ಮಾಡಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಪಾದಯಾತ್ರೆಯಿಂದ ಬಿಜೆಪಿಗೇ ಲಾಭ ಆಗಲಿದೆ' ಎಂದರು.

'ಶಿವಕುಮಾರ್ ಏಳು ಬಾರಿ ಶಾಸಕರಾಗಿದ್ದಾರೆ. ಅವರ ಸಹೋದರ ಸಂಸದರಾಗಿದ್ದಾರೆ. ಈಗ ಮೇಕೆದಾಟು ಜಪ ಮಾಡುತ್ತಿರುವ ಅವರಿಬ್ಬರೂ ಇಷ್ಟು ವರ್ಷ ಏನನ್ನು ಕಡಿದು ಕಟ್ಟೆ ಹಾಕುತ್ತಿದ್ದರು?' ಎಂದು ಪ್ರಶ್ನಿಸಿದರು.

'ಮೇಕೆದಾಟು ಯೋಜನೆಯನ್ನು ಬಿಜೆಪಿ ಸರ್ಕಾರ ಸಮರೋಪಾದಿಯಲ್ಲಿ ಕೈಗೆತ್ತಿಕೊಂಡಿದೆ. ಅದನ್ನು ಕಂಡು ಶಿವಕುಮಾರ್‌ಗೆ ಭವಿಷ್ಯದ ಬಗ್ಗೆ ಆತಂಕವಾಗಿದೆ.



ಅಶ್ವತ್ಥನಾರಾಯಣ

ಅವರ ಪಾದಯಾತ್ರೆ ಕೇವಲ ನಡಿಗೆ ಆಗಬಹುದೇ ಹೊರತು ಅವರೊಂದಿಗೆ ಜನರು ಹೋಗುತ್ತಿಲ್ಲ. ಜೊತೆಯಲ್ಲಿ ಕಾಣಿಸಿಕೊಳ್ಳುತ್ತಿರುವವರು ಭಟ್ಟಂಗಿಗಳಷ್ಟೆ' ಎಂದರು.

'ಕಾಂಗ್ರೆಸ್ ಪಕ್ಷ ನೀರಿನ ವಿಚಾರದಲ್ಲಿ ರಾಜಕೀಯ ನಾಟಕ ಆಡುತ್ತಿದ್ದು, ರಾಜ್ಯದ ಜನರಿಗೆ ದ್ರೋಹ ಎಸಗುತ್ತಿದೆ. ನೆಲ, ಜಲದ ವಿಚಾರಗಳಲ್ಲಿ ರಾಜಕೀಯಪ್ರೇರಿತ ಹೋರಾಟ ಖಂಡನೀಯ. ರಾಜ್ಯ ಮತ್ತು ಕೇಂದ್ರ ಬಿಜೆಪಿ ಸರ್ಕಾರ ಯೋಜನೆಯ ಅನುಷ್ಠಾನಕ್ಕೆ ಬದ್ಧವಾಗಿವೆ. ತಮಿಳುನಾಡಿನಲ್ಲಿ ಡಿಎಂಕೆ ಜತೆ ಇರುವ ಕಾಂಗ್ರೆಸ್ ಪಕ್ಷಕ್ಕೆ ಸಂಪೂರ್ಣ ಬಹುಮತ ಬಂದು ಯಾವುದೋ ಕಾಲವಾಗಿದೆ. ಇಂಥ ದುರವಸ್ಥೆಯಲ್ಲಿರುವ ಪಕ್ಷದ ಅಧ್ಯಕ್ಷರು, ಮೇಕೆದಾಟು ಯೋಜನೆ ಬಗ್ಗೆ ಮಾತನಾಡುತ್ತಿರುವುದು ಹಾಸ್ಯಾಸ್ಪದ. ಆದರೆ, ನಮಗೆ ಸಂಘರ್ಷದಲ್ಲಿ ನಂಬಿಕೆ ಇಲ್ಲ' ಎಂದರು.

ಶಾಲಾ ಮಕ್ಕಳಿಂದ 'ಪುನೀತ್' ಉಪಗ್ರಹ

ಯೋಜನೆಗೆ ₹ 1.90 ಕೋಟಿ ವಿನಿಯೋಗ– ಸಚಿವ ಅಶ್ವತ್ಥನಾರಾಯಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಾತಂತ್ರ್ಯದ 75ನೇ ವರ್ಷಾಚರಣೆ ಅಂಗವಾಗಿ ಐಟಿಸಿಎ (ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್ ಅಸೋಸಿಯೇಷನ್) 75 ಉಪಗ್ರಹಗಳನ್ನು ಉಡಾಯಿಸುತ್ತಿದೆ. ಈ ಪೈಕಿ ಒಂದು ಉಪಗ್ರಹವನ್ನು ರಾಜ್ಯ ಸರ್ಕಾರದ ಸಹಕಾರದಲ್ಲಿ ಸರ್ಕಾರಿ ಶಾಲೆಗಳ ಮಕ್ಕಳು ನಿರ್ಮಿಸುತ್ತಿದ್ದು, ಇದಕ್ಕೆ ₹ 1.90 ಕೋಟಿ ವಿನಿಯೋಗಿಸಲಾಗುತ್ತಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಮಲ್ಲೇಶ್ವರದಲ್ಲಿರುವಸರ್ಕಾರಿಪದವಿ ಪೂರ್ವ ಕಾಲೇಜಿನಲ್ಲಿ ಸೋಮವಾರ ನಡೆದ 'ರಾಷ್ಟ್ರೀಯ ವಿಜ್ಞಾನ ದಿನ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಈ ಉಪಗ್ರಹಕ್ಕೆ ನಟ ಪುನೀತ್ ರಾಜಕುಮಾರ್ ಹೆಸರು ಇಡಲಾಗುತ್ತಿದೆ' ಎಂದರು.

ಇದೇ ಸಂದರ್ಭದಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್) ಮತ್ತು ಭಾರತೀಯ ತಂತ್ರಜ್ಞಾನ ಸಮಾವೇಶ ಒಕ್ಕೂಟ (ಐಟಿಸಿಎ) ಮಾಡಿಕೊಂಡ ಒಡಂಬಡಿಕೆಯನ್ನು ವಿನಿಮಯ ಮಾಡಿಕೊಳ್ಳಲಾಯಿತು.



ವಿದ್ಯಾರ್ಥಿ ಉಪಗ್ರಹ ಉಡಾವಣೆ ಯೋಜನೆಗೆ ಡಾ. ಸಿ.ಎನ್. ಅಶ್ವತ್ಥನಾರಾಯಣ ಚಾಲನೆ ನೀಡಿದರು. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ನಿರ್ದೇಶಕ (ತಾಂತ್ರಿಕ) ಎ.ಬಿ ಬಸವರಾಜು, ನ್ಯಾನೋ ತಂತ್ರಜ್ಞಾನ ದಾರ್ಶನಿಕ ಸಮೂಹ ಡೀನ್ ಪ್ರೊ. ನವಕಾಂತ ಭಟ್, ಸಂಸದ ಡಿ.ವಿ ಸದಾನಂದಗೌಡ, ಯೋಜನೆಯ ನಿರ್ದೇಶಕ ಕೆ. ಗೋಪಾಲಕೃಷ್ಣ ಇದ್ದರು – ಪ್ರಜಾವಾಣಿ ಚಿತ್ರ

'ಉದ್ದೇಶಿತ ಉಪಗ್ರಹ 1.50 ಕಿಲೋ ತೂಕ ಇರಲಿದ್ದು, ಯೋಜನೆಯ ಉಡಾವಣೆಯ ಸ್ಥಳವು (ಗ್ರೌಂಡ್ ಸ್ಟೇಷನ್) ಮಲ್ಲೇಶ್ವರದ ಕಾಲೇಜಿನ ಆವರಣದಲ್ಲಿ ಇರಲಿದೆ. ನಿರ್ವಹಣೆಯೂ ಇಲ್ಲಿಂದಲೇ ಆಗಲಿದೆ. ಯೋಜನೆಗೆ 20 ಸರ್ಕಾರಿ ಶಾಲೆಗಳ 100 ಮಕ್ಕಳನ್ನು ನಾನಾ ಸ್ಪರ್ಧೆ ಮತ್ತು ಪರೀಕ್ಷೆ ಮೂಲಕ ಆಯ್ಕೆ ಮಾಡಲಾಗಿದೆ' ಎಂದರು.

'ಈ ವಿದ್ಯಾರ್ಥಿಗಳಿಗೆ ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಆನ್‌ಲೈನ್, ಆಫ್‌ಲೈನ್, ಹ್ಯಾಂಡ್ಸ್ ಆನ್ ಮತ್ತು ಟ್ಯುಟೋರಿಯಲ್ ಮಾದರಿಗಳಲ್ಲಿ ಪರಿಚಯಾತ್ಮಕ ಕಾರ್ಯಕ್ರಮಗಳನ್ನು ನಡೆಸಲಾಗುವುದು. ಜೊತೆಗೆ, ಎರಡೂ ಭಾಷೆಗಳಲ್ಲಿ ಅಗತ್ಯ ಪಠ್ಯಗಳ ವೆಬ್ ಲಿಂಕ್ ಒದಗಿಸಲಾಗುವುದು. ಈ ಸಂಬಂಧದ ತರಗತಿಗಳು ಏ. 22ರಿಂದ ಆರಂಭವಾಗಲಿವೆ' ಎಂದು ಮಾಹಿತಿ ನೀಡಿದರು.

ತರಬೇತಿಯಲ್ಲಿ ಉಪಗ್ರಹ ಪೇಲೋಡ್ ತಿಳಿವಳಿಕೆ, ನ್ಯಾನೊ ಉಪಗ್ರಹಗಳ ಪರಿಚಯ, ಬೆಂಗಳೂರಿನಲ್ಲಿರುವ ವೈಜ್ಞಾನಿಕ ಸಂಸ್ಥೆಗಳಿಗೆ ಭೇಟಿ, ಉಡಾವಣೆ ಸಮಯದಲ್ಲಿ ಶ್ರೀಹರಿ ಕೋಟಾಗೆ ಭೇಟಿ, ವಿಜ್ಞಾನಿಗಳೊಂದಿಗೆ ಸಂವಾದ, ಗ್ರೌಂಡ್ ಸ್ಟೇಷನ್‌ನಲ್ಲಿ ತರಬೇತಿ, ಅಗತ್ಯ ಪುಸ್ತಕಗಳ ಪ್ರಕಟಣೆ ಮುಂತಾದ ಚಟುವಟಿಕೆ ಇರಲಿವೆ' ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಸಂಸದ ಡಿ.ವಿ. ಸದಾನಂದ ಗೌಡ, 'ಸಮಾಜದ ಸಬಲೀಕರಣಕ್ಕೆ ವಿಜ್ಞಾನದ ಆವಿಷ್ಕಾರಗಳಲ್ಲಿ ಪರಿಹಾರೋಪಾಯಗಳಿವೆ. ಆದ್ದರಿಂದ, ಯುವಜನರಲ್ಲಿ ಮೊದಲಿನಿಂದಲೇ ವೈಜ್ಞಾನಿಕ ಕುತೂಹಲ ಬೆಳೆಸಬೇಕು' ಎಂದರು.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅಧ್ಯಕ್ಷ ಪ್ರೊ. ಎಸ್.ಅಯ್ಯಪ್ಪನ್ ಮಾತನಾಡಿ, 'ದೇಶದಲ್ಲಿ ಪ್ರತಿ ಒಂದು ಕೋಟಿ ಜನಸಂಖ್ಯೆಗೆ 2,500 ಸಂಶೋಧಕರು ಮಾತ್ರ ಇದ್ದಾರೆ. ಜಾಗತಿಕ ಚಿಂತನೆ ಮತ್ತು ಸ್ಥಳೀಯ ವರ್ತನೆ ಎನ್ನುವ ಸೂತ್ರ ನಮ್ಮದಾಗಬೇಕು' ಎಂದರು.

ರಾಜ್ಯ ಸರ್ಕಾರದ ನ್ಯಾನೋ ತಂತ್ರಜ್ಞಾನ ವಿಷನ್ ಗ್ರೂಪ್ ಅಧ್ಯಕ್ಷ ಡಾ. ನವಕಾಂತ ಭಟ್, ಪ್ರೊ.ಎಚ್.ಎಸ್. ನಾಗರಾಜು, ಡಾ. ಹೇಮಂತಕುಮಾರ್, ಅಶೋಕ್ ರಾಯಚೂರು ಇದ್ದರು. ಇದೇ ಸಂದರ್ಭದಲ್ಲಿ ವಿಜ್ಞಾನ ಕಿಟ್ ಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಯಿತು.

ಅನುಕರಣೀಯ ಸೇವೆ: ರೋಟರಿ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಅನುಕರಣೀಯ ಸಾಮಾಜಿಕ ಕಾರ್ಯಗಳನ್ನು ಕೈಗೊಂಡಿರುವ ವ್ಯಕ್ತಿಗಳಿಗೆ 'ಡೆಕ್ಕನ್ ಹೆರಾಲ್ಡ್' ಸಹಯೋಗದಲ್ಲಿ ಬೆಂಗಳೂರು ರೋಟರಿ ಕ್ಲಬ್ (ಆರ್‌ಸಿಬಿ) ನೀಡುವ ಪ್ರಶಸ್ತಿಗಳಿಗೆ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರಮುಖವಾಗಿ ಬೆಂಗಳೂರು ನಗರ ಮತ್ತು ರಾಜ್ಯದ ಇತರೆಡೆ ವಿಭಿನ್ನವಾಗಿ ಕೈಗೊಂಡಿರುವ ಕಾರ್ಯಗಳನ್ನು ಗುರುತಿಸಿ ಈ ಪ್ರತಿಷ್ಠಿತ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ.

ಜಾಗತಿಕವಾಗಿ ಬೆಂಗಳೂರಿನ ಹೆಮ್ಮೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರನ್ನು ಗುರುತಿಸಲು ಉದ್ದೇಶಿಸಲಾಗಿದೆ. ಜತೆಗೆ, ಕೋವಿಡ್–19 ಸಂದರ್ಭದಲ್ಲಿ ವಿವಿಧ ತೊಡಕುಗಳ ನಡುವೆಯೂ ಶ್ಲಾಘನೀಯ ಸೇವೆ ಕೈಗೊಂಡಿರುವವರನ್ನು ಗೌರವಿಸಲಾಗುವುದು. 3 ಸದಸ್ಯರು ಸಮಿತಿಯು ಅರ್ಹರನ್ನು ಗುರುತಿಸಲಿದೆ. ಮಾರ್ಚ್ 5ರ ಒಳಗೆ ಅರ್ಜಿಗಳನ್ನು ಸಲ್ಲಿಸಬೇಕು. ಮಾರ್ಚ್ 14ರಂದು ಪ್ರಶಸ್ತಿ ಸಮಾರಂಭ ನಡೆಯಲಿದೆ.

ಪ್ರಶಸ್ತಿ ವಿಭಾಗಗಳು:

- ಅಸಾಧಾರಣ ನಾಗರಿಕ–ನಗರಕ್ಕೆ ಕೀರ್ತಿ ತರಲು ಪರಿಣಾಮಕಾರಿಯಾಗಿ ಶ್ರಮಿಸಿದ ಅಸಾಧಾರಣ ವ್ಯಕ್ತಿಗಳು.
- **ಕಾರ್ಪೋರೇಟ್ ಸಿಟಿಜನ್:** ಸಮಾಜದಲ್ಲಿ ವಿಭಿನ್ನ ಕಾರ್ಯಗಳನ್ನು ಕೈಗೊಂಡಿರುವ ಸಂಸ್ಥೆಗಳು.
- **ಹೆಮ್ಮೆಯ ಕಾಯಕ:** ಪೊಲೀಸ್ ಅಧಿಕಾರಿಗಳು, ಬಸ್ ಚಾಲಕರು ಸೇರಿದಂತೆ ಯಾವುದೇ ವಲಯದಲ್ಲಿ ತಮ್ಮ ಕೆಲಸಕ್ಕೆ ಸೀಮಿತವಾಗದೆ ಅವಿರತವಾಗಿ ಶ್ರಮಿಸುತ್ತಿರುವವರು.
- **ಅಸಾಧಾರಣ ಸರ್ಕಾರೇತರ ಸಂಸ್ಥೆ:** ಆರೋಗ್ಯ, ಶಿಕ್ಷಣ, ಬುಡಕಟ್ಟು ಜನರ ರಕ್ಷಣೆ ಮುಂತಾದ ಕಾರ್ಯಗಳಲ್ಲಿ ತೊಡಗಿರುವ ಸಂಸ್ಥೆಗಳು.
- **ಯೂಥ್ ಐಕಾನ್:** 30 ವರ್ಷದ ಒಳಗಿನವರಾಗಿದ್ದು, ವಿಶಿಷ್ಟ ಮತ್ತು ವಿಭಿನ್ನ ಕಾರ್ಯಗಳಿಂದ ಯುವಕರಿಗೆ ಮಾದರಿಯಾಗಿರಬೇಕು.
- **ಪರಿಸರ ಸಂರಕ್ಷಣೆ:** ಪರಿಸರ, ಜಲ, ವನ್ಯಜೀವಿ ಸಂರಕ್ಷಣೆಯಲ್ಲಿ ಪರಿಣಾಮಕಾರಿ ಕಾರ್ಯಗಳನ್ನು ಕೈಗೊಂಡಿರುವ ವ್ಯಕ್ತಿಗಳು.
- **ಯಶಸ್ವಿ ನವೋದ್ಯಮ:** ವಿಭಿನ್ನ ಕಲ್ಪನೆಗಳ ಉದ್ಯಮದಲ್ಲಿ ಯಶಸ್ವಿಯಾಗುವ ಮೂಲಕ ಸಮಾಜದಲ್ಲಿ ಸಕಾರಾತ್ಮಕ ಪರಿಣಾಮ ಬೀರಿರುವುದು.

ರಾಮನ್ ಸಂಶೋಧನಾ ಸಂಸ್ಥೆಯಲ್ಲಿ ವಿಜ್ಞಾನಿಗಳ ಜತೆ ವಿದ್ಯಾರ್ಥಿಗಳ ಸಂವಾದ

'ಉತ್ತಮ ವಿಜ್ಞಾನಿಯಾಗುವುದು ಹೇಗೆ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉತ್ತಮ ವಿಜ್ಞಾನಿಯಾಗುವುದು ಹೇಗೆ? ಅರ್ಹತೆಗಳೇನು? ಆಯಸ್ಕಾಂತಗಳ ರಚನೆ ಹೇಗೆ?....' ರಾಮನ್ ಸಂಶೋಧನಾ ಸಂಸ್ಥೆಯಲ್ಲಿ ಸೋಮವಾರ ವಿದ್ಯಾರ್ಥಿಗಳು ವಿಜ್ಞಾನಿಗಳಿಗೆ ಇಂತಹ ಹತ್ತಾರು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದರು.

ವಿಜ್ಞಾನ ದಿನದ ಅಂಗವಾಗಿ ಆಯೋಜಿಸಲಾಗಿದ್ದ ಮುಕ್ತ ದಿನದ ಕಾರ್ಯಕ್ರಮದಲ್ಲಿ ಆಯ್ದ ಶಾಲೆಗಳ ವಿದ್ಯಾರ್ಥಿಗಳನ್ನು ಆಹ್ವಾನಿಸಿ ಸಂಸ್ಥೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಸಂಶೋಧನೆಯ ಅಭಿರುಚಿ ಬೆಳೆಸುವ ನಿಟ್ಟಿನಲ್ಲಿ ಉಪನ್ಯಾಸ ಮತ್ತು ರಸಪ್ರಶ್ನೆ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಮಲ್ಲೇಶ್ವರದ ಸರ್ಕಾರಿ ಬಾಲಕಿಯರ ಪ್ರೌಢಶಾಲೆ, ಕೇಂದ್ರೀಯ ವಿದ್ಯಾಲಯ ಐಐಎಸ್ಸಿ, ಕೇಂದ್ರೀಯ ವಿದ್ಯಾಲಯ ಹೆಬ್ಬಾಳ ಮತ್ತು ಸ್ಟೆಲ್ಲಾ ಮೇರಿಸ್ ಪ್ರೌಢಶಾಲೆ ವಿದ್ಯಾರ್ಥಿಗಳು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು.

ವಿದ್ಯಾರ್ಥಿಗಳು ಪ್ರಯೋಗಾಲಯಗಳಿಗೆ ಭೇಟಿ ನೀಡಿ ವಿಜ್ಞಾನಿಗಳ ಜತೆ ಸಮಾಲೋಚನೆ ನಡೆಸಿದರು. ಇದೇ ಸಂದರ್ಭದಲ್ಲಿ ಸಿ.ವಿ. ರಾಮನ್ ವಸ್ತು ಸಂಗ್ರಹಾಲಯಕ್ಕೂ ಭೇಟಿ ನೀಡಿದರು.



ರಾಮನ್ ಸಂಶೋಧನಾ ಸಂಸ್ಥೆಯಲ್ಲಿ ಆಯೋಜಿಸಲಾಗಿದ್ದ ರಸಪ್ರಶ್ನೆಯಲ್ಲಿ ಬಹುಮಾನ ಪಡೆದ ಕೇಂದ್ರೀಯ ವಿದ್ಯಾಲಯ ಹೆಬ್ಬಾಳದ ವಿದ್ಯಾರ್ಥಿಗಳು – ಪ್ರಜಾವಾಣಿ ಚಿತ್ರ

ವಿವಿಧೆಡೆ ವಿಜ್ಞಾನ ದಿನ ಆಚರಣೆ: ಬೆಂಗಳೂರು: ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಪಿಇಎಸ್ ಕಾಲೇಜಿನ ವಿಜ್ಞಾನ ಮತ್ತು ಮಾನವಿಕ ವಿಭಾಗದಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಉಪನ್ಯಾಸ ನೀಡಿದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಖ್ಯಾತ ವಿಜ್ಞಾನಿ ಡಾ.ಕೋಟೇಶ್ವರ ರಾವ್, 'ಭಾರತೀಯ ಭೌತಶಾಸ್ತ್ರಜ್ಞ ಸರ್ ಸಿ.ವಿ. ರಾಮನ್ ಅವರ ಹೆಸರಿನಲ್ಲಿ ಪ್ರತಿ ವರ್ಷ ಫೆಬ್ರುವರಿ 28 ರಂದು ರಾಷ್ಟ್ರೀಯ ವಿಜ್ಞಾನ ದಿನ ಆಚರಿಸಲಾಗುತ್ತಿದೆ. ಸಿ.ವಿ. ರಾಮನ್ ಅವರು ಆಧುನಿಕ ವಿಜ್ಞಾನಕ್ಕೆ ಅಪಾರ ಕೊಡುಗೆ ನೀಡಿದರು' ಎಂದು ಬಣ್ಣಿಸಿದರು.

ಡಿಆರ್‌ಡಿಒ ಹಿರಿಯ ವಿಜ್ಞಾನಿ ಪರಮಹಂಸ, 'ಕಳೆದ ವರ್ಷ ಇದೇ ದಿನ ಸಿಂಧು ನೇತ್ರ ಉಪಗ್ರಹ ಯಶಸ್ವಿ ಉಡಾವಣೆಯಾಗಿತ್ತು. ಬಾಹ್ಯಾಕಾಶದಲ್ಲಿ ಒಂದು ವರ್ಷ ಪೂರೈಸಿರುವ ಉಪಗ್ರಹವು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ' ಎಂದರು. ಎಂಜಿನಿಯರಿಂಗ್ ಪ್ರಥಮ ವರ್ಷದ ವಿದ್ಯಾರ್ಥಿ ತೇಜಸ್ ಅವರು ತಾವು ಅಭಿವೃದ್ಧಿಪಡಿಸಿರುವ ಮಿನಿ ಆಕ್ಸಿಜನ್ ಪ್ಲಾಂಟ್ ಬಗ್ಗೆ ವಿವರ ಹಂಚಿಕೊಂಡರು.

ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎಸ್.ರಾಧಾಕೃಷ್ಣನ್, ಪಿಇಎಸ್ ವಿಶ್ವವಿದ್ಯಾಲಯದ ಕುಲಸಚಿವ ಡಾ.ಕೆ.ಎಸ್. ಶ್ರೀಧರ್, ವಿದ್ಯಾರ್ಥಿ ವ್ಯವಹಾರಗಳ ಡೀನ್ ಡಾ.ವಿ.ಕೃಷ್ಣ, ಕೋರಿ ಲ್ಯಾಬ್‌ನ ನಿರ್ದೇಶಕ ಡಾ.ನಾಗೇಂದ್ರರಾವ್, ವಿಜ್ಞಾನ ಮತ್ತು ಮಾನವಿಕ ವಿಭಾಗದ ಪ್ರೊ.ಅನಿತಾ ಇದ್ದರು.

ಸುದ್ದಿ 2 ನಿಮಿಷ

'ಅಕ್ರಮ ಸಕ್ರಮ' ಸರ್ಕಾರದ ಯೂ ಟರ್ನ್: ಬಿ.ಕೆ. ಚಂದ್ರಶೇಖರ್

ಬೆಂಗಳೂರು: 'ಪ್ರತಿಷ್ಠಿತರ ಒತ್ತಾಯಕ್ಕೆ ಮಣಿದು ರಾಜ್ಯ ಸರ್ಕಾರ 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಯ 362 ಅಭ್ಯರ್ಥಿಗಳ 'ಅಕ್ರಮ' ಆಯ್ಕೆಯನ್ನು 'ಸಕ್ರಮ'ಗೊಳಿಸಿದೆ. ಈ ನಡೆ 'ಕಾನೂನಾತ್ಮಕ ಆಡಳಿತ'ಕ್ಕೆ ವಿರುದ್ಧವಾಗಿದ್ದು, ಸರ್ಕಾರದ ಮೇಲೆ ಕಪ್ಪು ಚುಕ್ಕೆಯಂತಿದೆ. ಈ ನಿರ್ಧಾರ ಕೋರ್ಟಿನಲ್ಲಿ ಊರ್ಜಿತವಾಗಲು ಸಾಧ್ಯವೇ ಇಲ್ಲ' ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಅಭಿಪ್ರಾಯಪಟ್ಟಿದ್ದಾರೆ.

'ಕೆಲವು ಜಾತಿಗಳ ಮುಖಂಡರ ತೀವ್ರ ಒತ್ತಾಯಕ್ಕೆ ಮಣಿದು ರಾಜ್ಯ ಸರ್ಕಾರ ಈ ವಿಷಯದಲ್ಲಿ 'ಯೂ ಟರ್ನ್' ಮಾಡಿರುವುದು ಮೇಲ್ನೋಟಕ್ಕೇ ಸ್ಪಷ್ಟವಾಗಿದೆ' ಎಂದು ಅವರು ದೂರಿದ್ದಾರೆ.



'ಈ ಸಾಲಿನಲ್ಲಿ ಅಧಿಕಾರಿಗಳ ನೇಮಕಾತಿಗೆ ಕೆಪಿಎಸ್‌ಸಿ ನಡೆಸಿದ್ದ ಪರೀಕ್ಷೆಯಲ್ಲಿ ಆಯೋಗದ ಅಧ್ಯಕ್ಷ ಮತ್ತು ಸದಸ್ಯರಿಗೆ ಸುವ್ಯವಸ್ಥಿತವಾಗಿ ಕೈತುಂಬ ಹಣ ಬರುವಂತೆ ಭ್ರಷ್ಟಾಚಾರದ ಜಾಲ ಹೆಣೆಯಲಾಗಿತ್ತು. ಕೆಲವು ಮೊಬೈಲ್ ಫೋನ್‌ನಲ್ಲಿ ದಾಖಲಾಗಿದ್ದ ಆ ನಾಚಿಕೆಗೇಡಿನ ಸಂದರ್ಭದ ಸಂಭಾಷಣೆಗಳನ್ನು ನಾನು ಖುದ್ದಾಗಿ ಕೇಳಿದ್ದೆ. ನಂತರ ಈ ಸಾಲಿನ ಪ್ರಕ್ರಿಯೆ ರದ್ದುಗೊಳಿಸಬೇಕೆಂದು ಒತ್ತಾಯಿಸಿದ್ದೆ' ಎಂದು ಹೇಳಿದ್ದಾರೆ.

'ಈ ಪ್ರಕರಣದಲ್ಲಿ ವಿಡಿಯೊ ದಾಖಲೆ ಬದಲಾಯಿಸಿರುವುದು ಸಾಕ್ಷ್ಯ ನಾಶಪಡಿಸುವ ಉದ್ದೇಶದಿಂದಲೇ ಎಂಬ ಹೈಕೋರ್ಟ್ ಅಭಿಪ್ರಾಯ ಸರಿ ಇದೆ. ಆಯ್ಕೆ ಪ್ರಕ್ರಿಯೆಯನ್ನು ಸರ್ಕಾರ ರದ್ದುಪಡಿಸಿದ್ದು ಸರಿಯಾದ ಕ್ರಮ' ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಈಗ ಒತ್ತಡಗಳಿಗೆ ಮಣಿದು ಆಯೋಗದ ಅಧ್ಯಕ್ಷ, ಸದಸ್ಯರ ವಿರುದ್ಧ ತಾನೇ ಅನುಮತಿ ನೀಡಿದ್ದ ಕ್ರಿಮಿನಲ್ ಪ್ರಕ್ರಿಯೆಯನ್ನು ಸರ್ಕಾರ ಹಿಂಪಡೆದಿದೆ' ಎಂದೂ ಹೇಳಿದ್ದಾರೆ.

ಸಚಿವ ರಾಜೀವ್ ಚಂದ್ರಶೇಖರ್ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು: 'ಕಂಪನಿ ಮತ್ತು ಸಿಬ್ಬಂದಿ ಮಾಡಿದ ಕೃತ್ಯಕ್ಕೆ ವ್ಯವಸ್ಥಾಪಕ ನಿರ್ದೇಶಕ ಹೊಣೆಗಾರ ಅಲ್ಲ' ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ವಿರುದ್ಧದ ಮಾನನಷ್ಟ ಮೊಕದ್ದಮೆಯನ್ನು ರದ್ದುಗೊಳಿಸಿದೆ.

ಈ ಸಂಬಂಧ ಚಂದ್ರಶೇಖರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

2012ರ ಮಾರ್ಚ್ 14ರಂದು ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ಈ ಘಟನೆ ನಡೆದಿತ್ತು. ಈ ಗಲಭೆಗೆ ಸಂಬಂಧಿಸಿದಂತೆ ಸುದ್ದಿ ವಾಹಿನಿಯ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ರಾಜೀವ್ ಚಂದ್ರಶೇಖರ್ ವಿರುದ್ಧ ಬಳ್ಳಾರಿಯ ಬಿ.ಕೋಟೇಶ್ವರ ರಾವ್ ಮಾನನಷ್ಟ ಮೊಕದ್ದಮೆ ಹೂಡಿದ್ದರು.

ಮೈಸೂರು ರೇಸ್

ಎವರ್ಲಿ ಗೆಲ್ಲುವ ನಿರೀಕ್ಷೆ

ಮೈಸೂರು ಸಿಟಿ ಗೋಲ್ಡ್ ಕಪ್ ಮಂಗಳವಾರ ಮುಕ್ತಾಯಗೊಳ್ಳಲಿರುವ ಮೈಸೂರು ಚಳಿಗಾಲದ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎವರ್ಲಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಆಶ್ ವಂಡರ್ 12, ಹೈಲ್ಯಾಂಡ್ ಪಾರ್ಕ್ 3, ಇಂಟ್ರಪಿಡ್ ವಾರಿಯರ್ 1
2ನೇ ರೇಸ್: ಇಂಡಿಯನ್ ಡ್ರೀಮ್ಸ್ 1, ಸ್ಪಿರಿಚ್ಯುಯಲ್ ಫೋರ್ಸ್ 8, ಬ್ರೇಕಿಂಗ್ ನ್ಯೂಸ್ 3
3ನೇ ರೇಸ್: ಬ್ಲೂ ಬ್ಲಾಸಮ್ 7, ಅಭಿನಂದನ್ 1, ಡಿ ಥರ್ಟೀನ್ ಟ್ವೆಲ್ವ್ 4
4ನೇ ರೇಸ್: ಸ್ಟ್ಯಾಂಡ್‌ಔಟ್ 6, ಡ್ಯಾಗೋಬಾರ್ಟ್ 5, ಸರ್‌ಪ್ರೈಸ್ ಪ್ಯಾಕೇಜ್ (8)
5ನೇ ರೇಸ್: ಶೀಈಸ್ ಎ ಟೈಗರ್ 1, ಫ್ಲಾಶ್ ಬಾಂಡ್ 3, ಸಾಕ್ರೆಟಸ್ 8
6ನೇ ರೇಸ್: ಸೂಪರ್ ಸೆಕ್ಸಿ 5, ಶಿವಾಲಿಕ್ ಸೌಂಡ್ 11, ಡಿ ಫೈಟರ್ 8
7ನೇ ರೇಸ್: ಎವರ್ಲಿ 1, ಫಾರೆಸ್ಟ್ ವ್ಯೂ 4, ಫ್ಲೆಮಿಂಗೊ ಡ್ಯಾನ್ಸರ್ 2
8ನೇ ರೇಸ್: ರಿಕಾಲ್ ಆಫ್ ಯೂ 9, ಗೋಲ್ಡ್ ಫೀಲ್ಡ್ 3, ಮಾರ್ಚ್ ಟು ವಿಕ್ಟರಿ 12
9ನೇ ರೇಸ್: ಬ್ರೇಕ್ ಅವೇ 2, ಗೋಲ್ಡ್ ಚಾರ್ಮ್ 3, ಸ್ಯಾಂಡ್ ಡ್ಯೂನ್ 6

ಉತ್ತಮ ಬೆಟ್: ಸ್ಟ್ಯಾಂಡ್‌ಔಟ್

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್	3ನೇ ಟ್ರಬಲ್
5,6,7,8,9	1,2,3	4,5,6	7,8,9

ಉಕ್ರೇನ್‌ನಿಂದ ಮರಳಿದ ಭಾರತೀಯರಿಗೆ ಉಚಿತ ಪ್ರಯಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಕ್ರೇನ್‌ನಿಂದ ಹಿಂದಿರುಗಿದ ಭಾರತೀಯರು, ಅದರಲ್ಲೂ ವಿದ್ಯಾರ್ಥಿಗಳು ವಿಮಾನ ನಿಲ್ದಾಣಗಳಿಂದ ಅವರ ವಾಸಸ್ಥಳದ ಊರುಗಳಿಗೆ ಉಚಿತವಾಗಿ ಪ್ರಯಾಣಿಸಲು ಕೆಎಸ್‌ಆರ್‌ಟಿಸಿ ಅವಕಾಶ ಕಲ್ಪಿಸಿದೆ.

ರಾಜ್ಯದ ಎಲ್ಲ ವಿಮಾನ ನಿಲ್ದಾಣದೊಳಗಿನ ನೋಡಲ್ ಅಧಿಕಾರಿಗಳು ಮತ್ತು ಸಾರಿಗೆ ಸಂಸ್ಥೆಯ ಅಧಿಕಾರಿಗಳು ಸಮನ್ವಯ ಸಾಧಿಸಿ ಉಚಿತ ಪ್ರಯಾಣಕ್ಕೆ ಅನುವು ಮಾಡಿಕೊಡಲಿದ್ದಾರೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಚಿತ್ರಾವಳಿ



ಯಲಹಂಕ ಸಮೀಪದ ಸಿಂಗನಾಯಕನಹಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕ ಎಸ್‌ಆರ್‌.ವಿಶ್ವನಾಥ್ ಅವರು ವಿಶೇಷ ಸಾಮರ್ಥ್ಯದವರಿಗೆ ಸಾಧನ ಸಲಕರಣೆಗಳನ್ನು ವಿತರಿಸಿದರು. ರಾಜ್ಯಸಭಾ ಸದಸ್ಯ ನಾರಾಯಣ ಕೊರಗುಪ್ಪ, ಬೆಂಗಳೂರುನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಹಾಗೂ ಸ್ಥಳೀಯ ಮುಖಂಡರು ಇದ್ದರು.



ಸ್ವಾತಂತ್ರ್ಯ ಹೋರಾಟಗಾರ ಚಂದ್ರಶೇಖರ್ ಆಜಾದ್ ಅವರ ಪುಣ್ಯಸ್ಮರಣೆ ಅಂಗವಾಗಿ ಮಹಾಲಕ್ಷ್ಮೀ ಬಡಾವಣೆಯ ಪ್ರಸನ್ನ ವೀರಾಂಜನೇಯ ಯೋಗ ಕೇಂದ್ರ ಹಾಗೂ ಲಯನ್ಸ್ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರಕ್ಕಾಗಿ ಯೋಗ ಕೇಂದ್ರಕ್ಕೆ ಪ್ರಶಂಸಾಪತ್ರ ನೀಡಲಾಯಿತು. ಕೇಂದ್ರದ ಪ್ರಾಂಶುಪಾಲ ಕೆ.ಎನ್.ನಾಗೇಶ್ ರಾವ್, ಶಾಂತಕುಮಾರ್, ವೈದ್ರೆ ಜಯಶ್ರೀ, ಲಯನ್ಸ್ ಸಂಸ್ಥೆಯ ಅಲ್ಫಾನ್ಸ್ ಕುರಿಯನ್ ಹಾಗೂ ಪದಾಧಿಕಾರಿಗಳು ಇದ್ದಾರೆ.



ಬಸವೇಶ್ವರ ವೃತ್ತದಲ್ಲಿನ ಪಾದಚಾರಿ ಮೇಲ್ಸೇತುವೆ ಬಳಕೆಯಾಗದಿರುವುದು
—ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್‌.ಜಿ.

ಸ್ಕೈವಾಕ್ ಪಾದಚಾರಿಗಳಿಗೆ ದೂರ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಸರಸರನೆ ನುಗ್ಗುವ ವಾಹನಗಳ ನಡುವೆ ಪಾದಚಾರಿಗಳು ಜೀವ ಬಿಗಿ ಹಿಡಿದು ರಸ್ತೆ ದಾಟುವುದು ಒಂದೆಡೆಯಾದರೆ, ಅಗತ್ಯವೇ ಇಲ್ಲದ ಕಡೆ ಪಾದಚಾರಿ ಮೇಲ್ಸೇತುವೆಗಳು (ಸ್ಕೈವಾಕ್) ನಿರ್ಮಾಣವಾಗಿವೆ. ಕೆಲ ಸ್ಕೈವಾಕ್‌ಗಳಂತೂ ಜಾಹೀರಾತು ಫಲಕಗಳ ಪ್ರದರ್ಶನಕ್ಕಷ್ಟೇ ಸೀಮಿತವಾಗಿವೆ.

ತುಮಕೂರು ರಸ್ತೆ, ಹೊರ ವರ್ತುಲ ರಸ್ತೆ, ಕೆ.ಜಿ. ರಸ್ತೆಯಲ್ಲಿನ ಸ್ಕೈವಾಕ್‌ಗಳನ್ನು ಪಾದಚಾರಿಗಳು ಬಳಕೆ ಮಾಡುತ್ತಿದ್ದಾರೆ. ಅಪಘಾತ ತಪ್ಪಿಸುವಲ್ಲಿ ಅವುಗಳು ಪಾತ್ರ ವಹಿಸುತ್ತಿವೆ. ಆದರೆ, ಬಹುತೇಕ ಸೇತುವೆಗಳನ್ನು ಪಾದಚಾರಿಗಳಿಗೆ ಉಪಯೋಗಕ್ಕೆ ಬಾರದ ಜಾಗದಲ್ಲಿ ನಿರ್ಮಿಸಲಾಗಿದೆ. ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಬಿಬಿಎಂಪಿ ನಿರ್ಮಿಸಿದ ಸ್ಕೈವಾಕ್‌ಗಳಲ್ಲಿ ಹೆಚ್ಚಿನವು ಪಾದಚಾರಿಗಳ ಅನುಕೂಲಕ್ಕಿಂತ ಹೆಚ್ಚಾಗಿ ಜಾಹೀರಾತು ಪ್ರದರ್ಶನಕ್ಕೆ ಆದ್ಯತೆ ನೀಡುವಂತಿವೆ ಎಂಬ ಆರೋಪವೂ ಇದೆ.

ಪಾದಚಾರಿಗಳು ಸಾಮಾನ್ಯವಾಗಿ ರಸ್ತೆ ದಾಟುವುದು ಜಂಕ್ಷನ್‌ಗಳ ಬಳಿ. ಆದರೆ, ಇಂತಹ ಜಂಕ್ಷನ್‌ಗಳ ಬಳಿ ಪಾದಚಾರಿ ಮೇಲ್ಸೇತುವೆಗಳು ಇರುವುದು ವಿರಳ. ಜನರು ಅವು ಇರುವಲ್ಲಿಗೆ ನಡೆದುಕೊಂಡು ಹೋಗಿ ಮೆಟ್ಟಿಲು ಹತ್ತಿ, ಇಳಿಯಬೇಕಾಗುತ್ತದೆ. ಈ ಸಾಹಸದ ನಡುವೆ ರಸ್ತೆ ದಾಟಲು ಕನಿಷ್ಠ 20 ನಿಮಿಷ ಬೇಕಾಗುತ್ತದೆ. ಇಷ್ಟು ತಾಳ್ಮೆ ಮತ್ತು ಸಮಯ ಬೆಂಗಳೂರಿನ ಜನರಿಗೆ ಇಲ್ಲ. ಈ ಕಾರಣದಿಂದಾಗಿಯೇ ಬಹುತೇಕ ಸೇತುವೆಗಳನ್ನು ಪಾದಚಾರಿಗಳು ಬಳಸದಂತಾಗಿವೆ.

ಬಸವೇಶ್ವರ ವೃತ್ತ, ಕಂಠೀರವ ಕ್ರೀಡಾಂಗಣ, ನೆಹರೂ ತಾರಾಲಯ, ದೊಮ್ಮಲೂರು ಜಂಕ್ಷನ್, ಮಹಾರಾಣಿ ಕಾಲೇಜು, ಯಶವಂತಪುರ ಬಳಿ ಇರುವ ಸ್ಕೈವಾಕ್‌ಗಳು ಇದಕ್ಕೆ ಉದಾಹರಣೆ. ಈ ರೀತಿಯ ನೂರಾರು ಸ್ಕೈವಾಕ್‌ಗಳು ಜನ ಬಳಕೆಗೆ ಯೋಗ್ಯವಾದ ಜಾಗದಲ್ಲಿ ಇಲ್ಲವಾಗಿವೆ.

ಈ ಬಗ್ಗೆ 2019ರಲ್ಲೇ ಬಿಬಿಎಂಪಿಗೆ ಪತ್ರ ಬರೆದಿದ್ದ ಸಂಚಾರ ವಿಭಾಗದ ಹೆಚ್ಚುವರಿ ಪೊಲೀಸ್ ಕಮಿಷನರ್, 'ಜನರಿಗೆ ಅನುಕೂಲ ಇರುವ ಕಡೆಗಳಲ್ಲಿ ಬಿಟ್ಟು, ಅನುಕೂಲವಲ್ಲದ ಜಾಗದಲ್ಲಿ ಪಾದಚಾರಿ ಮೇಲ್ಸೇತುವೆಗಳನ್ನು ನಿರ್ಮಿಸಲಾಗಿದೆ. ಒತ್ತಡಗಳಿಗೆ ಒಳಗಾಗಿ ಸಾರ್ವಜನಿಕರ ಹಿತಾಸಕ್ತಿ ಕಡೆಗಣಿಸಿ ಎಲ್ಲೆಂದರಲ್ಲಿ ಅಧಿಕಾರಿಗಳು ಸ್ಕೈವಾಕ್ ನಿರ್ಮಿಸಿದ್ದಾರೆ' ಎಂದು ಆರೋಪಿಸಿದ್ದರು.

'ಪೊಲೀಸರು ಗುರುತಿಸಿದ ಜಾಗದಲ್ಲಿ ಸ್ಕೈವಾಕ್‌ಗಳು ನಿರ್ಮಾಣವಾಗಿಲ್ಲ. ಕೆಲವು ಸ್ಕೈವಾಕ್‌ಗಳನ್ನು ಸ್ಥಳಾಂತರ ಮಾಡಬೇಕು. ಸ್ಕೈ ವಾಕ್ ನಿರ್ಮಿಸುವಾಗ ಸಂಚಾರ ಪೊಲೀಸರ ಸಲಹೆ ಪಡೆದುಕೊಳ್ಳಬೇಕು' ಎಂದು ತಿಳಿಸಿದ್ದರು. 34 ಸಂಚಾರ ಠಾಣೆಗಳ ವ್ಯಾಪ್ತಿಯಲ್ಲಿ 109 ಜಾಗಗಳನ್ನು ಸ್ಕೈವಾಕ್ ನಿರ್ಮಾಣಕ್ಕೆ ಅವರು ಗುರುತಿಸಿದ್ದರು.

ಪೊಲೀಸರು ನೀಡಿದ್ದ ಸಲಹೆಗಳೇನು

- ಪೊಲೀಸರು ಗುರುತಿಸಿದ ಸ್ಥಳ ಸೂಕ್ತವಲ್ಲ ಎನಿಸಿದರೆ ಬಿಬಿಎಂಪಿ ಮತ್ತು ಪೊಲೀಸರು ಜಂಟಿ ಪರಿವೀಕ್ಷಣೆ ಕೈಗೊಂಡು ನಂತರ ಸ್ಕೈವಾಕ್ ನಿರ್ಮಿಸಬೇಕು.
- ಸ್ಕೈವಾಕ್‌ಗಳನ್ನು ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ವಿನ್ಯಾಸಗೊಳಿಸಬೇಕು.
- ಅತ್ಯಾವಶ್ಯ ಇರುವ ಜಾಗದಲ್ಲಿ ಮಾತ್ರ ಸ್ಕೈವಾಕ್ ನಿರ್ಮಾಣ ಮಾಡಬೇಕು.
- ಮುಖ್ಯರಸ್ತೆಗೆ ಅಡಚಣೆ ಆಗದ ರೀತಿಯಲ್ಲಿ ಸ್ಕೈವಾಕ್ ನಿರ್ಮಾಣ ಕಾಮಗಾರಿ ನಿರ್ವಹಿಸಬೇಕು.

ಕೆಂಗೇರಿಯಲ್ಲಿ ಜನರ ಪರದಾಟ

ಕೆಂಗೇರಿಯಲ್ಲಿ ಮೆಟ್ರೊ ರೈಲು ನಿಲ್ದಾಣದ ಪಕ್ಕದಲ್ಲೇ ಬಿಎಂಟಿಸಿ ಟರ್ಮಿನಲ್ ಕೂಡ ಇದೆ. ಮೈಸೂರು ಕಡೆಯಿಂದ ಬರುವ ಬಸ್‌ಗಳನ್ನು ಇಳಿಯುವ ಜನರು ರಸ್ತೆ ದಾಟಲು ನಿತ್ಯ ಪರದಾಡುತ್ತಾರೆ. ಇಲ್ಲಿ ಪಾದಚಾರಿ ಮೇಲ್ಸೇತುವೆ ನಿರ್ಮಿಸುವ ಅಗತ್ಯ ಇದೆ. ಆದರೆ, ಈ ಜಾಗದಲ್ಲಿ ಈವರೆಗೆ ಮೇಲ್ಸೇತುವೆ ತಲೆ ಎತ್ತಿಲ್ಲ.

ನಿಲ್ದಾಣದಿಂದ ಹೊರಗೆ ಬರುವ ಪ್ರವೇಶ ದ್ವಾರದಲ್ಲೇ ಬಸ್‌ಗಳು ಅಡ್ಡಾದಿಡ್ಡಿಯಾಗಿ ನಿಲ್ಲುತ್ತವೆ. ಪಾದಚಾರಿಗಳು ನಿಲ್ದಾಣ ಪ್ರವೇಶಿಸಲು ಈ ಬಸ್‌ಗಳ ಸಂದುಗಳಲ್ಲಿ ನುಸುಳಿ ಸರ್ಕಸ್ ಮಾಡಿ ಸಾಗಬೇಕು. ಪಾದಚಾರಿ ಮಾರ್ಗ ಇದ್ದರೂ ಅದರ ಮೇಲೆ ವ್ಯಾಪಾರ ವಹಿವಾಟು ವಿಸ್ತರಿಸಿಕೊಂಡಿದೆ.

ಮೈಸೂರು, ಮಂಡ್ಯ, ರಾಮನಗರ ಕಡೆಯಿಂದ ಬರುವ ಎಲ್ಲ ಕೆಎಸ್‌ಆರ್‌ಟಿಸಿ ಮತ್ತು ಖಾಸಗಿ ಬಸ್‌ಗಳಿಗೂ ಕೆಂಗೇರಿಯಲ್ಲಿ ನಿಲುಗಡೆಗೆ ಅವಕಾಶ ಇದೆ. ಅಲ್ಲಿ ಬಸ್ ಇಳಿದು ಬಿಎಂಟಿಸಿ ಬಸ್ ಅಥವಾ ಮೆಟ್ರೊ ರೈಲು ನಿಲ್ದಾಣ ಪ್ರವೇಶಿಸಬೇಕೆಂದರೆ ರಸ್ತೆ ದಾಟಲೇಬೇಕು.

ಪಾದಚಾರಿ ಮೇಲ್ಸೇತುವೆ ನಿರ್ಮಾಣ ಕಾರ್ಯವನ್ನು ಬಿಬಿಎಂಪಿ ಆರಂಭಿಸಿ ಅರ್ಧಕ್ಕೆ ನಿಲ್ಲಿಸಿದೆ. ರಸ್ತೆಯ ಎರಡೂ ಬದಿ ಮತ್ತು ರಸ್ತೆ ವಿಭಜಕದ ಮೇಲೆ ಕಬ್ಬಿಣದ ಕಂಬಗಳನ್ನು ನಿಲ್ಲಿಸಲಾಗಿದೆ. ಪಾದಚಾರಿ ಮಾರ್ಗ ಅಳವಡಿಕೆ ಮಾಡಲು ಸಿದ್ಧಪಡಿಸಿ ತಂದಿರುವ ಸಲಕರಣೆಗಳನ್ನು ರಸ್ತೆ ಬದಿಯಲ್ಲೇ ಬಿಸಾಡಲಾಗಿದೆ. ಈ ಕಾಮಗಾರಿಯನ್ನು ಮತ್ತೆ ಆರಂಭಿಸಿ ಕೂಡಲೇ ಪೂರ್ಣಗೊಳಿಸಬೇಕು ಎಂಬುದು ಸ್ಥಳೀಯರ ಒತ್ತಾಯ.

'ವರಮಾನ ಸಂಗ್ರಹವೇ ಅದ್ಯತೆಯಾಗಬಾರದು'

'ಪಾದಚಾರಿಗಳ ಮೇಲ್ಸೇತುವೆಗಳಿಂದ ಪಾಲಿಕೆ ವರಮಾನವನ್ನಷ್ಟೇ ನೋಡಬಾರದು. ಪಾದಚಾರಿಗಳಿಗೆ ಅನುಕೂಲ ಕಲ್ಪಿಸುವುದು ಮೊದಲ ಆದ್ಯತೆಯಾಗಿರಬೇಕು' ಎಂದು ನಗರ ಸಂಚಾರ ತಜ್ಞ ಎಚ್.ಎಸ್.ಸುಧೀರ್ ಹೇಳಿದರು.

'ಯಾವುದೇ ವಾಹನ ಸವಾರನಾದರೂ, ಕೊನೆಯ ತಾಣದಲ್ಲಿ ಪಾದಚಾರಿಯೇ ಆಗಿರುತ್ತಾನೆ. ಹಾಗಾಗಿ, ಪಾದಚಾರಿ ಮಾರ್ಗಗಳು ಸರಿಯಾಗಿರಬೇಕು. ರಾಷ್ಟ್ರೀಯ ನಗರ ಸಾರಿಗೆ ನೀತಿ ಪ್ರಕಾರ, ಪಾದಚಾರಿಗಳ ಸಂಚಾರಕ್ಕೆ ಅನುಕೂಲ ಕಲ್ಪಿಸುವುದು ಮೊದಲ ಆದ್ಯತೆ ಆಗಬೇಕು. ಆದರೆ, ರಸ್ತೆ, ಮೇಲ್ಸೇತುವೆ, ಕೆಳ ಸೇತುವೆಗೆ ಕೊಡುವ ಆದ್ಯತೆಯನ್ನು ಪಾದಚಾರಿ ಮಾರ್ಗಗಳಿಗೆ ನೀಡುತ್ತಿಲ್ಲ' ಎಂದರು.

ನಾಗರಿಕರನ್ನು ಗ್ರಾಹಕರೆಂದು ಪರಿಗಣಿಸುವುದು ಹೆಚ್ಚುತ್ತಿದೆ. ಆದ್ದರಿಂದಲೇ ಈ ರೀತಿಯ ಯೋಜನೆಗಳು ನಿರುಪಯುಕ್ತವಾಗುತ್ತಿವೆ. ಇರುವ ಪಾದಚಾರಿ ಮೇಲ್ಸೇತುವೆಗಳಲ್ಲಿ ಕೆಲವು ಕಡೆ ಲಿಫ್ಟ್ ಇಲ್ಲ, ಇರುವ ಕಡೆ ಅವು ಸುಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ಬಳಕೆ ಕೂಡ ಕಡಿಮೆಯಾಗುತ್ತಿದೆ ಎಂದು ಹೇಳಿದರು.

'ಪಾದಚಾರಿ ಎಂದರೆ ನಡೆಯಲು ಶಕ್ತಿ ಇರುವ ಸದೃಢರಷ್ಟೇ ಅಲ್ಲ. ವೃದ್ಧರು, ಅಂಗವಿಕಲರು, ಮಕ್ಕಳು ಸರಾಗವಾಗಿ ನಡೆದುಕೊಂಡು ಹೋಗುವ ವ್ಯವಸ್ಥೆ ಇರಬೇಕು. ಈ ರೀತಿಯ ಪಾದಚಾರಿ ಮಾರ್ಗಗಳು ಬೆಂಗಳೂರಿನಲ್ಲಿ ವಿರಳ' ಎಂದು ಬೇಸರ ವ್ಯಕ್ತಪಡಿಸಿದರು.

ಖಾಸಗಿ ಸಹಭಾಗಿತ್ವ: ಜಾಹೀರಾತು ಪ್ರದರ್ಶನಕ್ಕೆ ಒತ್ತು

ಬಹುತೇಕ ಪಾದಚಾರಿ ಮೇಲ್ಸೇತುವೆಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಲಾಗಿದೆ. ಇವುಗಳ ನಿರ್ಮಾಣಕ್ಕೆ ಬೇಕಿರುವ ವೆಚ್ಚವನ್ನು ಖಾಸಗಿ ಕಂಪನಿಗಳು ನೋಡಿಕೊಳ್ಳುತ್ತವೆ ಎಂಬ ಕಾರಣಕ್ಕೆ ಬಿಬಿಎಂಪಿ ಅಧಿಕಾರಿಗಳು ಮುಲಾಜಿಗೆ ಒಳಗಾಗುತ್ತಾರೆ. ಇದರ ಪರಿಣಾಮ ಜನರಿಗೆ ಬೇಡವಾದ ಕಡೆಗಳಲ್ಲಿ ಪಾದಚಾರಿ ಮೇಲ್ಸೇತುವೆಗಳು ತಲೆ ಎತ್ತಿವೆ ಎಂದು ಸಾರಿಗೆ ತಜ್ಞರು ಆರೋಪಿಸುತ್ತಾರೆ.

'ವೃತ್ತಗಳ ಬಳಿಯಲ್ಲಿ ಸ್ಕೈವಾಕ್‌ಗಳಿದ್ದರೆ ಜನ ಬಳಕೆ ಮಾಡುತ್ತಾರೆ. ದೂರದಲ್ಲಿದ್ದರೆ ಹುಡುಕಿಕೊಂಡು ಹೋಗಿ ರಸ್ತೆ ದಾಟಲು ಸಾಧ್ಯವೇ. ಪಾದಚಾರಿಗಳ ಅನುಕೂಲಕ್ಕಿಂತ ಜಾಹೀರಾತುಗಳು ದೊಡ್ಡದಾಗಿ ಕಾಣಿಸುವಂತಹ ಜಾಗವನ್ನು ಖಾಸಗಿ ಕಂಪನಿಗಳು ಆಯ್ಕೆ ಮಾಡುತ್ತವೆ. ಹೀಗಾಗಿ ಜನರಿಗೆ ಅನುಕೂಲ ಆಗುತ್ತಿಲ್ಲ' ಎಂಬುದು ತಜ್ಞರ ಅಭಿಪ್ರಾಯ.



ರಾಜಭವನ ರಸ್ತೆಯ ನೆಹರು ತಾರಾಲಯದ ಬಳಿ ನಿರ್ಮಾಣವಾಗಿರುವ ಪಾದಚಾರಿ ಮೇಲ್ಸೇತುವೆ ಬಳಕೆಯಾಗದಿರುವುದು

'ಸಂಚಾರ ಪೊಲೀಸರು ಬಿಬಿಎಂಪಿಗೆ 2019ರಲ್ಲೇ ವರದಿ ನೀಡಿದ್ದರು. ಎಲ್ಲವನ್ನೂ ಸ್ಥಳಾಂತರ ಮಾಡಲು ಸಲಹೆ ನೀಡಿದ್ದರು. ಬೆಂಗಳೂರಿನಲ್ಲಿ 150ಕ್ಕೂ ಸ್ಕೈವಾಕ್‌ಗಳಿವೆ. ಒಂದು ಸ್ಕೈವಾಕ್‌ಗೆ ₹2 ಕೋಟಿಯಿಂದ ₹3 ಕೋಟಿ ವೆಚ್ಚವಾಗಿದೆ. ನಿರ್ಮಾಣಕ್ಕೂ ಮುನ್ನ ಸಮೀಕ್ಷೆಯನ್ನಾಗಲೀ, ಅಧ್ಯಯನವನ್ನಾಗಲೀ ಬಿಬಿಎಂಪಿ ಅಧಿಕಾರಿಗಳು ನಡೆಸುವುದಿಲ್ಲ. ಆದ್ದರಿಂದ ಖರ್ಚು ಮಾಡಿರುವ ಹಣ ವ್ಯರ್ಥವಾಗಿದೆ' ಎಂದು ಬಿಟಿಎಂ ಲೇಔಟ್‌ನ ಅನಿಲ್ ಆರೋಪಿಸುತ್ತಾರೆ.

4000 ಆಶಾ ಕಾರ್ಯಕರ್ತೆಯರು • 1800 ಕಾರ್ಯಕ್ರಮ ಅಧಿಕಾರಿಗಳ ನೇಮಕಾತಿಗೆ ಸಜ್ಜಾಗಿದೆ ಬಿಬಿಎಂಪಿ ಪ್ರಸ್ತಾವ

ಆರೋಗ್ಯ ಸೌಕರ್ಯ ಬಲವರ್ಧನೆ– ಸರ್ಕಾರದ ನೆರವಿನತ್ತ ಚಿತ್ತ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಆರೋಗ್ಯ ಸೇವೆಯ ಬಲವರ್ಧನೆಗೆ ರೂಪರೇಷೆ ಸಿದ್ಧಪಡಿಸಿರುವ ಬಿಬಿಎಂಪಿ, ಈ ಸಲುವಾಗಿ 1800 ಕಾರ್ಯಕ್ರಮ ಅಧಿಕಾರಿಗಳನ್ನು ಹಾಗೂ 4 ಸಾವಿರ ಆಶಾ ಕಾರ್ಯಕರ್ತೆಯರ ನೇಮಕಾತಿಗೆ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಿದ್ಧತೆ ನಡೆಸಿದೆ.

ಸಮುದಾಯದ ಸಹಭಾಗಿತ್ವದಲ್ಲಿ ಕೈಗೊಳ್ಳಬೇಕಾದ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನ, ಗರ್ಭಿಣಿಯರ, ಬಾಣಂತಿಯರ ಹಾಗೂ ಶಿಶುಗಳ ಆರೋಗ್ಯ ಕಾಳಜಿಗೆ ಸಲಹೆ ನೀಡುವುದು, ಆರೋಗ್ಯದ ಬಗ್ಗೆ, ಪೌಷ್ಠಿಕ ಆಹಾರ ಸೇವನೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಆಶಾ ಕಾರ್ಯಕರ್ತೆಯರ ಪಾತ್ರ ಮಹತ್ವದ್ದು. ಆರೋಗ್ಯ ಇಲಾಖೆಯ 30ಕ್ಕೂ ಅಧಿಕ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಕಾರ್ಯಕ್ರಮ ಅಧಿಕಾರಿಗಳಿಗೆ ಹೆಚ್ಚಿನ ಹೊಣೆ ಇದೆ. ಆಶಾ ಕಾರ್ಯಕರ್ತೆಯರು ಹಾಗೂ ಕಾರ್ಯಕ್ರಮ ಅಧಿಕಾರಿಗಳ ಕೊರತೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಆರೋಗ್ಯ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ಮೇಲೂ ಪರಿಣಾಮ ಬೀರುತ್ತಿದೆ. ಹಾಗಾಗಿ ಆರೋಗ್ಯ ಸೌಕರ್ಯ ವರ್ಧನೆಗೆ 2022–23ನೇ ಸಾಲಿನ ಬಜೆಟ್‌ನಲ್ಲಿ ವಿಶೇಷ ಅನುದಾನ ಒದಗಿಸುವಂತೆ ಸರ್ಕಾರವನ್ನು ಕೋರಲು ಬಿಬಿಎಂಪಿ ತೀರ್ಮಾನಿಸಿದೆ.



ಡಾ.ಕೆ.ವಿ. ತ್ರಿಲೋಕಚಂದ್ರ

'ಜಿಲ್ಲೆಗಳಲ್ಲಿ ಪ್ರತಿ 1000 ಮಂದಿಗೆ ಒಬ್ಬರಂತೆ ಆಶಾ ಕಾರ್ಯಕರ್ತೆಯರನ್ನು ನೇಮಿಸಲಾಗುತ್ತದೆ. ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದ ಪ್ರಕಾರ ನಗರ ಪ್ರದೇಶದಲ್ಲಿ ಪ್ರತಿ 2,500 ಮಂದಿಗೆ ಒಬ್ಬರು ಆಶಾ ಕಾರ್ಯಕರ್ತೆಯರು ಇರಬೇಕು. ಆದರೆ, ನಗರದಲ್ಲಿ 1.30 ಕೋಟಿ ಜನಸಂಖ್ಯೆಗೆ 1000 ಆಶಾ ಕಾರ್ಯಕರ್ತೆಯರೂ ಇಲ್ಲ. 4 ಸಾವಿರದಷ್ಟು ಆಶಾ ಕಾರ್ಯಕರ್ತೆಯರ ಕೊರತೆ ಇದೆ. ಇವರ ಸಂಖ್ಯಾ ಬಲವನ್ನು ಹೆಚ್ಚಿಸಲೇಬೇಕಾದ ಅನಿವಾರ್ಯ ಇದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ ಡಾ.ಕೆ.ವಿ.ತ್ರಿಲೋಕಚಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

ಬಿಬಿಎಂಪಿಯಲ್ಲಿ ಪ್ರಸ್ತುತ ಪ್ರತಿ 13 ಸಾವಿರ ಜನಸಂಖ್ಯೆಗೆ ಒಬ್ಬರಂತೆ ಒಟ್ಟು 978 ಆಶಾ ಕಾರ್ಯಕರ್ತೆಯರು ಇದ್ದಾರೆ. ಪ್ರತಿ ಆಶಾ ಕಾರ್ಯಕರ್ತೆಗೆ ತಿಂಗಳಿಗೆ ₹ 4 ಸಾವಿರ ಗೌರವ ಧನ ಹಾಗೂ ಪ್ರೋತ್ಸಾಹಕ ಭತ್ಯೆಗಳನ್ನು ನೀಡಲಾಗುತ್ತದೆ. ಪ್ರತಿ 100 ಆಶಾ ಕಾರ್ಯಕರ್ತೆಯರಿಗೆ ಒಬ್ಬರು ಮೇಲ್ವಿಚಾರಕರನ್ನು ನೇಮಿಸಬೇಕು. ಆಶಾ ಕಾರ್ಯಕರ್ತೆಯರ ಹಾಗೂ ಮೇಲ್ವಿಚಾರಕರ ಕೊರತೆ ನೀಗಿಸಲು ವಾರ್ಷಿಕ ₹ 74 ಕೋಟಿ ಅನುದಾನದ ಅಗತ್ಯ ಇದೆ ಎಂದು ಬಿಬಿಎಂಪಿ ಅಂದಾಜಿಸಿದೆ.

'ನಗರದಲ್ಲಿ ಪ್ರಸ್ತುತ 200 ಕಾರ್ಯಕ್ರಮ ಅಧಿಕಾರಿಗಳು ಮಾತ್ರ ಇದ್ದಾರೆ. ಇಲ್ಲಿನ ಜನಸಂಖ್ಯೆಗೆ ಕನಿಷ್ಠ 2000 ಕಾರ್ಯಕ್ರಮ ಅಧಿಕಾರಿಗಳಾದರೂ ಬೇಕು. ಹೆಚ್ಚುವರಿಯಾಗಿ 1800 ಕಾರ್ಯಕ್ರಮ ಅಧಿಕಾರಿಗಳನ್ನು ನೇಮಿಸಿಕೊಳ್ಳಲು ಪ್ರಸ್ತಾವನೆ ಸಿದ್ಧಪಡಿಸಿದ್ದೇವೆ. ಇವರ ವೇತನ ಹಾಗೂ ಇತರ ಸೌಕರ್ಯಗಳಿಗಾಗಿ ₹ 100 ಕೋಟಿ ಅನುದಾನದ ಅಗತ್ಯ ಇದೆ' ಎಂದು ತ್ರಿಲೋಕಚಂದ್ರ ತಿಳಿಸಿದರು.

'ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಆಶಾ ಕಾರ್ಯಕರ್ತೆಯರು ಹಾಗೂ ಕಾರ್ಯಕ್ರಮ ಅಧಿಕಾರಿಗಳ ಪಾತ್ರ ಮಹತ್ವದ್ದು. ಕೋವಿಡ್ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಂಡಾಗ ತಾತ್ಕಾಲಿಕ ನೆಲೆಯಲ್ಲಿ ವೈದ್ಯರನ್ನು ಹಾಗೂ ತಳಮಟ್ಟದ ಸಿಬ್ಬಂದಿಯನ್ನು ನೇಮಿಸಿಕೊಂಡು ಪರಿಸ್ಥಿತಿಯನ್ನು ಹೇಗೋ ನಿಭಾಯಿಸಲಾಗಿತ್ತು. ಜನಸಂಖ್ಯೆ ನಿಯಂತ್ರಣ, ಕುಷ್ಠ ರೋಗ ನಿವಾರಣೆ, ಕ್ಷಯ ರೋಗ ನಿಯಂತ್ರಣ, ಏಯ್ಡ್ಸ್ ನಿಯಂತ್ರಣ, ಮಲೇರಿಯಾ, ಡೆಂಗೆಯಂತಹ ಸಾಂಕ್ರಾಮಿಕ ರೋಗಗಳ ಹತೋಟಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಪಾಲಿಕೆಯ ಆರೋಗ್ಯ ವಿಭಾಗವನ್ನು ಬಲಪಡಿಸಲೇ ಬೇಕಾದ ಅಗತ್ಯ ಇದೆ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

ಪಾಲಿಕೆಯ ಪಾಲಿಕ್ಲಿನಿಕ್‌ಗಳು ಶೀಘ್ರವೇ ಜನಬಳಕೆಗೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ಸದ್ಯಕ್ಕೆ 143 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಾತ್ರ ಇವೆ. 15ನೇ ಹಣಕಾಸು ಆಯೋಗದ ನಿಧಿಯನ್ನು ಬಳಸಿಕೊಂಡು ಹೆಚ್ಚುವರಿಯಾಗಿ 57 ಪಾಲಿಕ್ಲಿನಿಕ್‌ಗಳನ್ನು ಸ್ಥಾಪಿಸಲು ಬಿಬಿಎಂಪಿ ಕ್ರಮ ಕೈಗೊಂಡಿದೆ. ಕೆಲವು ಪಾಲಿಕ್ಲಿನಿಕ್‌ಗಳನ್ನು ಬಾಡಿಗೆ ಕಟ್ಟಡದಲ್ಲಿ ಹಾಗೂ ಇನ್ನು ಕೆಲವನ್ನು ಸ್ವಂತ ಕಟ್ಟಡದಲ್ಲಿ ಆರಂಭಿಸಲು ಬಿಬಿಎಂಪಿ ಸಿದ್ಧತೆ ನಡೆಸಿದೆ. ಮಾರ್ಚ್ ಅಂತ್ಯದಲ್ಲಿ ಅಥವಾ ಏಪ್ರಿಲ್ ಮೊದಲ ವಾರದಲ್ಲಿ ಪಾಲಿಕ್ಲಿನಿಕ್‌ಗಳ ಉದ್ಘಾಟನೆಗೆ ಪಾಲಿಕೆ ಯೋಜನೆ ರೂಪಿಸಿಕೊಂಡಿದೆ.

'ಪ್ರತಿ ಪಾಲಿ ಕ್ಲಿನಿಕ್‌ನಲ್ಲಿ ಒಬ್ಬರು ಎಂಬಿಬಿಎಸ್ ವೈದ್ಯರು, ಸ್ತ್ರೀರೋಗ ತಜ್ಞರು, ಮಕ್ಕಳ ಆರೋಗ್ಯ ತಜ್ಞರು ಹಾಗೂ ಶಸ್ತ್ರಚಿಕಿತ್ಸಾ ತಜ್ಞರು ಇರುತ್ತಾರೆ. ಅಲ್ಲದೇ ಇಬ್ಬರು ಶುಶ್ರೂಷಕರು ಹಾಗೂ ಇಬ್ಬರು ಡಿ ಗುಂಪಿನ ನೌಕರರು ಇರುತ್ತಾರೆ. ಎಲ್ಲ ರೀತಿಯ ಆರೋಗ್ಯ ಸೇವೆಗಳೂ ಇಲ್ಲಿ ಲಭಿಸಲಿವೆ. ಜೊತೆಗೆ, ಯೋಗ ಹಾಗೂ ಆರೋಗ್ಯ ಕಾಳಜಿಯ ಸಲಹೆಗಳನ್ನೂ ಇಲ್ಲಿ ಒದಗಿಸಲಾಗುತ್ತದೆ' ಎಂದು ಡಾ.ತ್ರಿಲೋಕಚಂದ್ರ ತಿಳಿಸಿದರು.

ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಕೆ


ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಸೋಮವಾರ ಮತ್ತಷ್ಟು ಇಳಿಕೆಯಾಗಿದೆ. 5623 ಸೋಂಕಿತರು ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಭಾನುವಾರ 6,488 ಸಕ್ರಿಯ ಪ್ರಕರಣಗಳು ವರದಿಯಾಗಿದ್ದವು.

ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆಯೂ 268ಕ್ಕೆ ಇಳಿಕೆಯಾಗಿದೆ. ಸೋಂಕು ದೃಢ ಪ್ರಮಾಣ ಶೇ 0.70ಕ್ಕೆ ಇಳಿಕೆಯಾಗಿದೆ.

ಬಾಗಲಕೋಟೆ, ಗದಗ, ಹಾವೇರಿ, ಮಂಡ್ಯ, ರಾಯಚೂರು, ರಾಮನಗರ, ಯಾದಗಿರಿ ಜಿಲ್ಲೆಗಳಲ್ಲಿ ಸೋಂಕು ಪ್ರಕರಣಗಳು ವರದಿಯಾಗಿಲ್ಲ. 18 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಒಂದಂಕಿಗೆ ಇಳಿಕೆ ಕಂಡಿದೆ. ಬೆಂಗಳೂರಿನಲ್ಲಿ 161 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಈವರೆಗೆ ದೃಢಪಟ್ಟ ಒಟ್ಟು ಪ್ರಕರಣಗಳ ಸಂಖ್ಯೆ 39.41 ಲಕ್ಷಕ್ಕೆ ಏರಿಕೆಯಾಗಿದೆ.

ಸೋಂಕಿತರ ಪೈಕಿ ಬೆಂಗಳೂರಿನಲ್ಲಿ 550 ಮಂದಿ ಸೇರಿದಂತೆ ರಾಜ್ಯದಲ್ಲಿ 1119 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 38.95 ಲಕ್ಷಕ್ಕೆ ತಲುಪಿದೆ.

ಕೊರೊನಾ ಸೋಂಕಿತರಲ್ಲಿ 14 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ 10 ಮತ್ತು ಬಳ್ಳಾರಿ, ಹಾಸನ, ಕೊಪ್ಪಳ, ಮಂಡ್ಯದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 5.22 ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 39,950ಕ್ಕೆ ತಲುಪಿದೆ.



ಚಿತ್ರಾವಳಿ



ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಮಧ್ಯಂತರ ಲಾಭಾಂಶವಾಗಿ ಕೇಂದ್ರ ಸರ್ಕಾರಕ್ಕೆ ₹ 186.89 ಕೋಟಿ ಪಾವತಿಸಿದೆ. ಬಿಇಎಲ್‌ನ ಅಧ್ಯಕ್ಷೆ ಮತ್ತು ವ್ಯವಸ್ಥಾಪಕ ನಿರ್ದೇಶಕಿ ಆನಂದಿ ರಾಮಲಿಂಗಂ ಮತ್ತು ಕಂಪನಿಯ ಹಣಕಾಸು ವಿಭಾಗದ ನಿರ್ದೇಶಕ ದಿನೇಶ್ ಕುಮಾರ್ ಬಾತ್ರಾ ಅವರು ಮಧ್ಯಂತರ ಲಾಭಾಂಶದ ಚೆಕ್‌ಅನ್ನು ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರಿಗೆ ಹಸ್ತಾಂತರಿಸಿದರು. ರಕ್ಷಣಾ ಇಲಾಖೆ ಜಂಟಿ ಕಾರ್ಯದರ್ಶಿ ಅನುರಾಗ್ ಬಾಜಪೇಯಿ, ರಕ್ಷಣಾ ಖಾತೆಯ ರಾಜ್ಯ ಸಚಿವ ಅಜಯ್ ಭಟ್, ಹೆಚ್ಚುವರಿ ಕಾರ್ಯದರ್ಶಿ ಸಂಜಯ್ ಜಾಜು, ಬಿಇಎಲ್‌ನ ರಾಷ್ಟ್ರೀಯ ಮಾರುಕಟ್ಟೆ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕ ಮನೋಜ್ ಕುಮಾರ್ ಚಿತ್ರದಲ್ಲಿದ್ದಾರೆ.



ಪೀಣ್ಯ ದಾಸರಹಳ್ಳಿಯ ಮಲ್ಲಸಂದ್ರದ ಶಕ್ತಿ ಚಾರಿಟಬಲ್ ಟ್ರಸ್ಟ್‌ನ ಅಂಧರ ಆಶ್ರಮಕ್ಕೆ ಜೀವ ಸ್ಪಂದನ ಸೇವಾ ಟ್ರಸ್ಟ್ ಅಧ್ಯಕ್ಷ ಜೀವನ್ ಕಿಶೋರ್ ದವಸ ಧಾನ್ಯ ವಿತರಿಸಿದರು. ಶಕ್ತಿ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕಿ ಸವಿತಾ ಇದ್ದರು.

ಅಶ್ಲೀಲ ಫೋಟೊ ಕಳುಹಿಸಿ ಯುವತಿಗೆ ಬ್ಲ್ಯಾಕ್‌ಮೇಲ್

ಬೆಂಗಳೂರು: 'ಸ್ನೇಹಿತನ ಸೋಗಿನಲ್ಲಿ ಪರಿಚಯಿಸಿಕೊಂಡಿದ್ದ ಯುವಕನೊಬ್ಬ, ಅಶ್ಲೀಲ ಫೋಟೊಗಳನ್ನು ಕಳುಹಿಸಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾನೆ' ಎಂದು ಆರೋಪಿಸಿ ಯುವತಿಯೊಬ್ಬರು ದೂರು ನೀಡಿದ್ದಾರೆ.

'ವಿದ್ಯಾರಣ್ಯಪುರದ 22 ವರ್ಷದ ಯುವತಿ ಇತ್ತೀಚೆಗೆ ದೂರು ಕೊಟ್ಟಿದ್ದಾರೆ. ಆರೋಪಿ ಎನ್ನಲಾದ ಶರತ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಯುವತಿಯ ಫೋಟೊಗಳನ್ನು ಮಾರ್ಫಿಂಗ್ ಮಾಡಿ, ಅಶ್ಲೀಲ ಫೋಟೊ ಸಿದ್ಧಪಡಿಸಿದ್ದ. ಅವುಗಳನ್ನು ಯುವತಿ ವಾಟ್ಸ್‌ಆ್ಯಪ್‌ಗೆ ಕಳುಹಿಸಿ. 'ನಾನು ನಿನ್ನ ಕಾಲೇಜು ಸ್ನೇಹಿತೆಯ ಗೆಳೆಯ. ನನಗೆ ಹಣ ಬೇಕು. ಅದು ಸಿಗುವವರೆಗೂ ಫೋಟೊ ಅಳಿಸುವುದಿಲ್ಲ' ಎಂಬುದಾಗಿ ಆರೋಪಿ ಹೇಳಿದ್ದ. ಇದರಿಂದ ಕಿರಿಕಿರಿ ಅನುಭವಿಸಿದ ಯುವತಿ, ಠಾಣೆಗೆ ಬಂದು ದೂರು ನೀಡಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಗ್ರಾಮಸಭೆ: ಬೆಸ್ಕಾಂ ಅಧಿಕಾರಿಗಳಿಗೆ ತರಾಟೆ

ಕೆಂಗೇರಿ: 'ಹಗಲಿನ ವೇಳೆ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವ ಬದಲು ರಾತ್ರಿ ಹೊತ್ತು ಸರಬರಾಜು ಮಾಡಲಾಗುತ್ತಿದೆ. ರಾತ್ರಿ ವೇಳೆ ಬೆಳೆಗಳಿಗೆ ನೀರು ಕಟ್ಟುವುದು ಹೇಗೆ ಎಂಬುದನ್ನು ಸ್ವಲ್ಪ ತೋರಿಸಿ' ಎಂದು ಬೆಸ್ಕಾಂ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಘಟನೆ ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ ಗ್ರಾಮ ಸಭೆಯಲ್ಲಿ ನಡೆಯಿತು.

ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮ ಸಭೆಯನ್ನು ಸೂಲಿವಾರ ಗ್ರಾಮದಲ್ಲಿ ಆಯೋಜಿಸಲಾಗಿತ್ತು. ಚಿರತೆ ಕಾಟ, ಕಂದಾಯ ಇಲಾಖೆ ಸಮಸ್ಯೆ ಸೇರಿ,ವಿವಿಧ ಸಮಸ್ಯೆಗಳ ಬಗ್ಗೆ ಜನರು ಪಂಚಾಯಿತಿಯ ಗಮನಕ್ಕೆ ತಂದರು.

ಈ ವೇಳೆ ಗೊಲ್ಲಹಳ್ಳಿ ನಿವಾಸಿಯೊಬ್ಬರು ವಿದ್ಯುತ್ ಸಮಸ್ಯೆ ಬಗ್ಗೆ ಮಾತನಾಡಿ ಬೆಸ್ಕಾಂ ಅಧಿಕಾರಿಯನ್ನು ಪೇಚಿಗೆ ಸಿಲುಕಿಸಿದರು. ಸಿಂಗಲ್ ಫೇಸ್ ವಿದ್ಯುತ್ ಪೂರೈಕೆಯಿಂದ ಕೃಷಿಗೆ ತೊಂದರೆ ಆಗುತ್ತಿದೆ ಎಂದು ಗೊಲ್ಲಹಳ್ಳಿ ಗ್ರಾಮದ ರಮೇಶ್ ಹೇಳಿದರೆ, ಸೂಲಿವಾರ, ಚಿಕ್ಕನಹಳ್ಳಿ, ಕುರುಬರಪಾಳ್ಯ, ಇಸ್ರೊ ಗೇಟ್ ಸುತ್ತ ಮುತ್ತ ಚಿರತೆ ಹಾವಳಿ ಇದೆ. ಪ್ರಾಣ ಹಾನಿಯಾದರೆ ಅರಣ್ಯ ಇಲಾಖೆ ಹೊಣೆಯಾಗಬೇಕಾಗುತ್ತದೆ ಎಂದು ಗ್ರಾಮಸ್ಥರು ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತ ಪಡಿಸಿದರು.


ಗ್ರಾಮಸ್ಥರ ಅಹವಾಲಿಗೆ ಸ್ಪಂದಿಸಿ ಮಾತನಾಡಿದ ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಸವರಾಜು, 'ಸ್ಥಳೀಯ ಶಾಸಕರು ಸಮರ್ಪಕ ಹಾಗೂ ಗುಣಮಟ್ಟದ ವಿದ್ಯುತ್ ಪೂರೈಕೆಗೆ ಅಗತ್ಯ ಕ್ರಮ ಕೈಗೊಂಡಿದ್ದಾರೆ. ಕುಂಬಳಗೋಡಿನ ಬಳಿ 320 ಕೆ.ವಿ. ಸಾಮರ್ಥ್ಯದ ವಿದ್ಯುತ್ ಘಟಕ ನಿರ್ಮಾಣ ಮಾಡಲಾಗುತ್ತಿದೆ. ನಂತರ ವಿದ್ಯುತ್ ಸಮಸ್ಯೆ ನಿವಾರಣೆಯಾಗಲಿದೆ' ಎಂದರು.

ಪಂಚಾಯಿತಿ ವತಿಯಿಂದ 50 ಆಸ್ತಿಗಳಿಗೆ ಇ-ಖಾತಾ ವಿತರಣೆ, 41 ಅಂಗವಿಕಲರಿಗೆ ಸಹಾಯ ಧನ ಹಾಗೂ ಕೋವಿಡ್ ನಿಂದ ಮೃತಪಟ್ಟ ಕುಟುಂಬಗಳಿಗೆ ಪರಿಹಾರ ಧನ ವಿತರಣೆ, ಆರೋಗ್ಯ ಕಾರ್ಡ್ ವಿತರಣೆ, ದೊಡ್ಡೇರಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಕ್ರೀಡಾ ಪರಿಕರಗಳನ್ನು ವಿತರಿಸಲಾಯಿತು.

ಗ್ರಾಮ ಪಂಚಾಯತಿ ಉಪಾಧ್ಯಕ್ಷೆ ಭಾಗ್ಯಮ್ಮ, ಗ್ರಾಮ ಪಂಚಾಯಿತಿ ಸದಸ್ಯರು, ವಿವಿಧ ಇಲಾಖಾಧಿಕಾರಿಗಳು ಉಪಸ್ಥಿತರಿದ್ದರು.



ಪಂಚಾಯಿತಿ ವತಿಯಿಂದ ಸರ್ಕಾರಿ ಶಾಲಾ ಮಕ್ಕಳಿಗೆ ಕ್ರೀಡಾ ಪರಿಕರ ವಿತರಿಸಲಾಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷ ಬಸವರಾಜು, ಉಪಾಧ್ಯಕ್ಷೆ ಭಾಗ್ಯಮ್ಮ ಮತ್ತಿತರರು ಇದ್ದಾರೆ



ಬಿಟ್ ಕಾಯಿನ್: ಜಾಮೀನು ರದ್ದತಿಗೆ ನಕಾರ

ಬೆಂಗಳೂರು: ಬಿಟ್ ಕಾಯಿನ್ ಖರೀದಿ ವ್ಯವಹಾರಕ್ಕೆ ಸಂಬಂಧಿಸಿ ನಗರದ ನಿವಾಸಿಯೊಬ್ಬರಿಗೆ ₹ 75 ಲಕ್ಷ ವಂಚಿಸಿದ ಆರೋಪ ಪ್ರಕರಣದಲ್ಲಿ ಬಿಹಾರದ ಶಂತನು ಸಿನ್ಹಾ ಅವರಿಗೆ ವಿಚಾರಣಾ ನ್ಯಾಯಾಲಯ ನೀಡಿದ್ದ ಜಾಮೀನು ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ದೂರುದಾರ ನಾಗಸಂದ್ರದ ಟಿ.ವೆಂಕಟೇಶಮೂರ್ತಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಬಿಟ್ ಕಾಯಿನ್ ವ್ಯವಹಾರದಲ್ಲಿ 2,500ಕ್ಕೂ ಹೆಚ್ಚು ಜನ ಹಣ ಹೂಡಿಕೆ ಮಾಡಿದ್ದು, ಸುಮಾರು ₹1,500 ಕೋಟಿ ವಂಚನೆಯಾಗಿದೆ. ಈ ಪ್ರಕರಣದಲ್ಲಿ ಶಂತನು ಸಿನ್ಹಾ ಸಂಬಂಧ ಹೊಂದಿದ್ದಾರೆ' ಎಂದು ವೆಂಕಟೇಶಮೂರ್ತಿ ದೂರು ಸಲ್ಲಿಸಿದ್ದರು. ದೂರಿನ ಅನುಸಾರ ಸಿಐಡಿ ಸೈಬರ್ ಅಪರಾಧ ಠಾಣೆ ಪೊಲೀಸರು ಶಂತನು ಸಿನ್ಹಾ ಅವರನ್ನು ಬಂಧಿಸಿದ್ದರು.

ಅಪಘಾತ: ಎಂಜಿನಿಯರಿಂಗ್ ವಿದ್ಯಾರ್ಥಿ ಸೇರಿ ಇಬ್ಬರ ಸಾವು

ಬೆಂಗಳೂರು: ಪ್ರತ್ಯೇಕ ಅಪಘಾತಗಳಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿ ಸೇರಿ ಇಬ್ಬರು ಮೃತಪಟ್ಟಿದ್ದಾರೆ. ವಿಜಯನಗರದ ಹೊಸಹಳ್ಳಿ ನಿವಾಸಿ ಯತೀಶ್ ಕುಮಾರ್ (23), ನಾಗನಾಥಪುರದ ನಿವಾಸಿ ಮಾರಪ್ಪ (28) ಮೃತರು. ಈ ಬಗ್ಗೆ ಕ್ರಮವಾಗಿ ಕಾಮಾಕ್ಷಿಪಾಳ್ಯ ಹಾಗೂ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ.

'ಎಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದ ಯತೀಶ್, ಸ್ನೇಹಿತ ಭಾನುವಾರ ರಾತ್ರಿ ಬೈಕ್‌ನಿಂದ ಉರುಳಿಬಿದ್ದು, ಮೃತಪಟ್ಟಿದ್ದಾರೆ. ಹಿಂಬದಿ ಕುಳಿತಿದ್ದ ಸ್ನೇಹಿತನಿಗೂ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸ್ ಹೇಳಿದರು.

ರಸ್ತೆ ವಿಭಜಕಕ್ಕೆ ಗುದ್ದಿದ ಟಾಟಾ ಏಸ್: ಸೋಮವಾರ ನಸುಕಿನಲ್ಲಿ ಹೊಸೂರು ರಸ್ತೆಯ ವೀರಸಂದ್ರ ಜಂಕ್ಷನ್‌ನಲ್ಲಿ ಸಂಭವಿಸಿದ ಇನ್ನೊಂದು ಅಪಘಾತದಲ್ಲಿ ಟಾಟಾ ಏಸ್ ವಾಹನ ಚಾಲಕ ಮಾರಪ್ಪ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.


ಶಿವರಾತ್ರಿಗೆ ಧರ್ಮಸ್ಥಳಕ್ಕೆ ಭಕ್ತರ ದಂಡು: ಮಾರ್ಗದಲ್ಲಿ ಸೌಕರ್ಯ ಕೊರತೆ

ಚಾರ್ಮಾಡಿ ಘಾಟಿ ರಸ್ತೆ ಇಕ್ಕೆಲ ಪ್ಲಾಸ್ಟಿಕ್–ಕಸಮಯ

• ಬಿ.ಜೆ. ಧನ್ಯಪ್ರಸಾದ್

ಪ್ರಜಾವಾಣಿ ವಿಶೇಷ





ಚಿಕ್ಕಮಗಳೂರು ಜಿಲ್ಲೆಯ ಚಾರ್ಮಾಡಿ ಘಾಟಿ ಮಾರ್ಗದಲ್ಲಿನ ಅಣ್ಣಪ್ಪ ಸ್ವಾಮಿ ದೇಗುಲ ಪ್ರದೇಶದಲ್ಲಿ ತಟ್ಟೆ, ಲೋಟ, ಬಾಟಲಿಗಳನ್ನು ಎಸೆದಿರುವುದು (ಎಡಚಿತ್ರ), ಕೊಟ್ಟಿಗೆಹಾರದಲ್ಲಿ ರಸ್ತೆ ಪಕ್ಕದಲ್ಲಿ ಪ್ಲಾಸ್ಟಿಕ್ ಬಿಸಾಕಿರುವುದು. ಪ್ರಜಾವಾಣಿ ಚಿತ್ರಗಳು/ಎ.ಎನ್.ಮೂರ್ತಿ

ಚಿಕ್ಕಮಗಳೂರು: ಶಿವರಾತ್ರಿ ಸಮಯದಲ್ಲಿ ಧರ್ಮಸ್ಥಳಕ್ಕೆ ಪಾದಯಾತ್ರೆ ನಡೆಸುವ ಸಾವಿರಾರು ಭಕ್ತರು ಮಾರ್ಗದಲ್ಲಿ ನದಿ, ಹಳ್ಳ, ಝರಿಗಳಲ್ಲಿ ಸ್ನಾನ ಮಾಡಿ ಬಟ್ಟೆಗಳನ್ನು ಅಲ್ಲೇ ಬಿಡುವುದು, ಬಯಲಲ್ಲೇ ಮಲಮೂತ್ರ ವಿಸರ್ಜನೆ ಮಾಡುವುದು, ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಎಸೆಯುವುದರಿಂದ ಚಾರ್ಮಾಡಿ ಘಾಟಿ ಪ್ರದೇಶದಲ್ಲಿ ಮಾಲಿನ್ಯ ಉಂಟಾಗುತ್ತಿದೆ.

ಪ್ರತಿ ವರ್ಷವೂ ವಿವಿಧ ಜಿಲ್ಲೆಗಳ ಸಹಸ್ರಾರು ಭಕ್ತರು ಮೂಡಿಗೆರೆ, ಕೊಟ್ಟಿಗೆಹಾರ, ಚಾರ್ಮಾಡಿ ಘಾಟಿ ಮಾರ್ಗವಾಗಿ (ಕೆ.ಎಂ. ರಸ್ತೆ) ಮಂಜುನಾಥ ಸ್ವಾಮಿ ಸನ್ನಿಧಿಗೆ ಕಾಲ್ನಡಿಗೆ ಪ್ರಯಾಣ ಬೆಳೆಸಿದ್ದಾರೆ. ಹೀಗಿದ್ದರೂ ಜಿಲ್ಲಾಡಳಿತವಾಗಲಿ, ಅರಣ್ಯ ಇಲಾಖೆಯಾಗಲಿ ಅಥವಾ ಸ್ಥಳೀಯ ಆಡಳಿತವಾಗಲಿ ಮಾರ್ಗದಲ್ಲಿ ಕಸದ ತೊಟ್ಟಿಗಳ ವ್ಯವಸ್ಥೆ ಮಾಡಿಲ್ಲ. ಸ್ನಾನ ಗೃಹ, ಶೌಚಾಲಯ ಕಲ್ಪಿಸಿಲ್ಲ. ಕಸ ವಿಲೇವಾರಿಗೂ ಗಮನ ಹರಿಸಿಲ್ಲ. ಸ್ವಚ್ಛತೆಯ ಅರಿವು ಮೂಡಿಸುವ ಫಲಕಗಳನ್ನು ಸಹ ಅಳವಡಿಸಿಲ್ಲ. ರಸ್ತೆಯ ಬದಿಯಲ್ಲಿ ಶೌಚಾಲಯಗಳ ನಿರ್ಮಾಣ, ಕಸದ ತೊಟ್ಟಿಗಳನ್ನು ಇಡುವ ಕೆಲಸ ತುರ್ತಾಗಿ ಆಗಬೇಕಾಗಿದೆ ಎನ್ನುತ್ತಾರೆ ಪಾದಯಾತ್ರಿಗಳು.

ಭಕ್ತರು ಆಹಾರ, ನೀರು, ಮಜ್ಜಿಗೆ, ಪಾನೀಯ, ಹಣ್ಣು ಹಂಪಲು ಸೇವಿಸಿ ಪ್ಲೇಟು, ಲೋಟ, ಖಾಲಿ ಬಾಟಲಿ, ಪೊಟ್ಟಣಗಳನ್ನು ರಸ್ತೆ ಬದಿಯಲ್ಲಿ ಬಿಸಾಕಿದ್ದಾರೆ. ಕೆ.ಎಂ. ರಸ್ತೆಯ ಇಕ್ಕೆಲಗಳಲ್ಲೂ ತ್ಯಾಜ್ಯದ್ದೇ ರಂಪಾಟವಾಗಿದೆ. ರಸ್ತೆ ಬದಿಯ ಚರಂಡಿಗಳು ಬಳಸಿ ಎಸೆದ ಪ್ಲಾಸ್ಟಿಕ್ ತಟ್ಟೆಗಳು ನೀರಿನ ಬಾಟಲ್‌ಗಳಿಂದ ತುಂಬಿವೆ. ಜಲಮೂಲಗಳೆಲ್ಲ ಹಳೆಯ ಬಟ್ಟೆ, ಮಲಮೂತ್ರಗಳಿಂದ ಗಲೀಜಾಗಿವೆ.

ಸುಮಾರು 10 ದಿನಗಳಿಂದ ಮಾರ್ಗದಲ್ಲಿ ನೂರಾರು ಕಿಲೊ ಪ್ಲಾಸ್ಟಿಕ್ ಬಾಟಲಿ, ಲೋಟ, ತಟ್ಟೆಗಳು, ಮಜ್ಜಿಗೆ ಪೊಟ್ಟಣ, ಹಣ್ಣು ತರಕಾರಿ ಸಿಪ್ಪೆ ರಾಶಿ ಬಿದ್ದಿದೆ. ಕೆಲವೆಡೆ ಹಣ್ಣು ತರಕಾರಿ ಸಿಪ್ಪೆಗಳು, ಪೊಟ್ಟಣಗಳ ತ್ಯಾಜ್ಯ ರಾಶಿಗಳನ್ನು ಬೀಡಾಡಿ ಪ್ರಾಣಿಗಳು ಎಳೆದಾಡಿವೆ.

ರಸ್ತೆ ಬದಿಯ ತ್ಯಾಜ್ಯ ಹೆಕ್ಕಿ, ವಿಲೇವಾರಿ ಮಾಡಲು ವ್ಯವಸ್ಥೆ ಕಲ್ಪಿಸಿಲ್ಲ. ಚಾರ್ಮಾಡಿ ಘಾಟಿಯು ದಟ್ಟ ಕಾನನ ಪ್ರದೇಶವಾಗಿದೆ. ಘಾಟಿ ಮಾರ್ಗದ ಬದಿಗಳಲ್ಲಿ ಎಸೆದ ತ್ಯಾಜ್ಯ ಕಾಡು, ಪ್ರಪಾತ, ಹರಿಯುವ ನೀರಿಗೆ ಸೇರಿದೆ. ಪರಿಸರ ಮಾಲಿನ್ಯಕ್ಕೆ ಎಡೆಯಾಗಿದೆ.

‘ಪ್ರತಿವರ್ಷ ಧರ್ಮಸ್ಥಳಕ್ಕೆ ಪಾದಯಾತ್ರೆ ತೆರಳುತ್ತೇವೆ. ಮಾರ್ಗದಲ್ಲಿ ಶೌಚಾಲಯ, ಸ್ನಾನಗೃಹ ವ್ಯವಸ್ಥೆ ಇಲ್ಲದಿರುವುದು ಸಮಸ್ಯೆಯಾಗಿದೆ. ಅಣ್ಣಪ್ಪ ದೇಗುಲದ ಪ್ರದೇಶದಲ್ಲಿ ಗಲೀಜು ಮಾಡಿದ್ದಾರೆ.

ದೇಗುಲದ ಬಳಿ ಶೌಚಾಲಯ ಇದ್ದರೂ ಬಳಕೆಗೆ ಯೋಗ್ಯವಾಗಿಲ್ಲ. ಜಿಲ್ಲಾಡಳಿತವು ಸೌಕರ್ಯಗಳನ್ನು ಕಲ್ಪಿಸಲು, ಸ್ವಚ್ಛತೆ ನಿರ್ವಹಣೆಗೆ ಕ್ರಮ ವಹಿಸಬೇಕು’ ಎಂದು ಪಾದ ಯಾತ್ರಿ, ಹಾಸನದ ವಿನುತಾ ಒತ್ತಾಯಿಸುತ್ತಾರೆ.



ಪಾದಯಾತ್ರಿಗಳು ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಪೊಟ್ಟಣ, ಬಾಟಲಿಗಳನ್ನು ಬಿಸಾಕುವುದರಿಂದ ಕಾಡಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ವನ್ಯಜೀವಿಗಳಿಗೂ ಮಾರಕ.

ಜಿ.ವೀರೇಶ್, ಪರಿಸರಾಸಕ್ತ– ಗೌರವ ವನ್ಯಜೀವಿ ಪರಿಪಾಲಕ, ಚಿಕ್ಕಮಗಳೂರು



ಅರಣ್ಯ ಇಲಾಖೆ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವ ಕಾರ್ಯದಲ್ಲಿ ತೊಡಗಿದೆ. ಸ್ಥಳೀಯರು, ಸ್ವಯಂ ಸೇವಕರ ನೆರವಿನಿಂದ ನೈರ್ಮಲ್ಯ ನಿರ್ವಹಣೆ, ಕಸ ವಿಲೇವಾರಿಗೆ ನಿಗಾ ವಹಿಸಲಾಗುವುದು.

ಎನ್‌.ಇ. ಕ್ರಾಂತಿ

ಡಿಎಫ್‌ಒ, ಚಿಕ್ಕಮಗಳೂರು

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಸುದ್ದಿ 2 ನಿಮಿಷ

ಕಾಫಿರರನ್ನು ಕೊಂದರೆ ಸ್ವರ್ಗ ಸಿಗುತ್ತದೆಯೇ?: ಸಿ.ಟಿ. ರವಿ

ಶಿವಮೊಗ್ಗ: ‘ಕಾಫಿರರನ್ನು ಕೊಂದರೆ ಸ್ವರ್ಗ ಸಿಗುತ್ತದೆ ಎನ್ನುವ ಇಸ್ಲಾಂ ಧರ್ಮದ ನಂಬಿಕೆಗಳು ಬದಲಾಗದಿದ್ದರೆ ಹರ್ಷನಂತಹ ಸಾವಿರ ಹಿಂದೂ ಕಾರ್ಯಕರ್ತರ ಹತ್ಯೆಯಾದರೂ ಮಾನವೀಯತೆಗೆ ಬೆಲೆ ಇಲ್ಲವಾಗುತ್ತದೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಪ್ರತಿಪಾದಿಸಿದರು.

ಮೃತ ಹರ್ಷನ ಮನೆಗೆ ಸೋಮವಾರ ಭೇಟಿ ನೀಡಿದ ನಂತರ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಸಾಲು ಸಾಲು ಹಿಂದೂ ಕಾರ್ಯಕರ್ತರ ಹತ್ಯೆಗೆ ಸಮಾಜ ಚಿಂತಾಕ್ರಾಂತವಾಗಿದೆ. ಇಸ್ಲಾಂನ ದಾರುಲ್ ಅರಬ್ಬಿ ಮತ್ತು ದಾರುಲ್ ಇಸ್ಲಾಂ ಎಂದರೆ ಏನು? ಹಿಂದೂ, ಬೌದ್ಧ, ಸಿಖ್ ಧರ್ಮಗಳಲ್ಲಿ ಪರೋಪಕಾರ ಮಾಡಿದರೆ ಸ್ವರ್ಗ ಸಿಗುವ ಪರಿಕಲ್ಪನೆ ಇದೆ. ಆದರೆ, ಇಸ್ಲಾಂನಲ್ಲಿ ಕಾಫಿರರನ್ನು ಕೊಂದರೆ ಸ್ವರ್ಗ ಸಿಗಲಿದೆಯಾ? ಒಂದೇ ಧರ್ಮದವರನ್ನು ಹೊರತುಪಡಿಸಿ ಇತರೆ ಜನರು ಭೂಮಿಯ ಮೇಲೆ ಇರಬಾರದು ಎಂಬ ಭಾವನೆ ಇದೆ. ಇಂತಹ ವಿಷಯಗಳ ಕುರಿತು ಸಾರ್ವಜನಿಕ ಚರ್ಚೆಯಾಗಬೇಕು ಎಂದು ಆಗ್ರಹಿಸಿದರು.

ಪ್ರಶ್ನಿಸುವುದು ಭಾರತೀಯರ ಪರಂಪರೆ. ಇಸ್ಲಾಂನಲ್ಲಿ ಪ್ರಶ್ನಿಸಿದರೆ ಕೊಲ್ಲುವ ಭಯವಿದೆ. ಪ್ರಶ್ನಿಸಿದರೆ ಧರ್ಮ ಬಿದ್ದು ಹೋಗುತ್ತದೆ ಎಂಬ ಭೀತಿಯಿಂದ ಸಮಾಜದಲ್ಲಿ ಅತಂಕ ಸೃಷ್ಟಿಸುವ ಕೆಲಸ ನಡೆಯುತ್ತಿದೆ. ಧರ್ಮದ ನ್ಯೂನತೆ ಪ್ರಶ್ನಿಸಿದವರನ್ನು ಕೊಲ್ಲುತ್ತಾ ಬರಲಾಗಿದೆ. ಗಾಂಧೀಜಿ ಕೈಯಲ್ಲೇ ಇಸ್ಲಾಂ ಅನುಯಾಯಿಗಳನ್ನು ಬದಲಿಸಲು ಸಾಧ್ಯವಾಗಲಿಲ್ಲ. ರಘುಪತಿ ರಾಘವ ರಾಜಾರಾಂ ಎಂಬ ಹಾಡಿನಲ್ಲೇ ರಾಮ ಮತ್ತು ರಹೀಂ ಇದ್ದಾರೆ. ಆದರೆ, ಬದಲಾವಣೆ ಸಾಧ್ಯವಾಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.



ರಮ್ಮನಹಳ್ಳಿಯಲ್ಲಿ ಸಾರ್ವಜನಿಕ ವೈ–ಫೈ

ಮೈಸೂರು: ಸಾರ್ವಜನಿಕ ವೈ–ಫೈ ನೀತಿಯಡಿ ರಾಜ್ಯದಲ್ಲಿ ಬಿಎಸ್‌ಎನ್‌ಎಲ್ ಮೊದಲ ‘ಸಾರ್ವಜನಿಕ ದತ್ತಾಂಶ ಕೇಂದ್ರ’ವನ್ನು (ಪಿಡಿಒ) ತಾಲ್ಲೂಕಿನ ರಮ್ಮನಹಳ್ಳಿಯಲ್ಲಿ ಸ್ಥಾಪಿಸಿದೆ. ಇಡೀ ಗ್ರಾಮವು ವೈ–ಫೈ ವಲಯವಾಗಿದ್ದು, ವಿವಿಧ ಯೋಜನೆಯಡಿ 50 ಎಂಬಿಪಿಎಸ್ ವೇಗದವರೆಗೆ ಇಂಟರ್‌ನೆಟ್ ಸಂಪರ್ಕ ಪಡೆಯಬಹುದು.

ಬಿಎಸ್‌ಎನ್‌ಎಲ್ ಮೈಸೂರು ದೂರಸಂಪರ್ಕ ವೃತ್ತವು ಆಪ್ಟಿಕಲ್ ಫೈಬರ್ ಸಂಪರ್ಕದ ಮೂಲಕ ಎಂಟು ಕಡೆ ವೈಫೈ ಕೇಂದ್ರ ಸ್ಥಾಪಿಸಿದ್ದು, 32 ಕಡೆ ವೈ–ಫೈ ಹಾಟ್‌ಸ್ಪಾಟ್ ಲಭ್ಯವಿರಲಿವೆ.

‘ಬಿಎಸ್‌ಎನ್‌ಎಲ್ ವೈಫೈ 69’, ‘ಬಿಎಸ್‌ಎನ್‌ಎಲ್ ವೈಫೈ 9’ ಸೇರಿ ಐದು ಯೋಜನೆಗಳಿದ್ದು, ಮೊಬೈಲ್ ಫೋನ್ ಅಥವಾ ಲ್ಯಾಪ್‌ಟಾಪ್ ಮೂಲಕ ಸಂಪರ್ಕ ಪಡೆಯಬಹುದು’ ಎಂದು ಬಿಎಸ್‌ಎನ್‌ಎಲ್ ಮೈಸೂರು ವೃತ್ತದ ಹಿರಿಯ ಪ್ರಧಾನ ವ್ಯವಸ್ಥಾಪಕ ರಾಜಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಇಂಟರ್‌ನೆಟ್ ಸಂಪರ್ಕವನ್ನು ಬಿಎಸ್‌ಎನ್‌ಎಲ್ ಮಂಡಳಿಯ ನಿರ್ದೇಶಕ ವಿವೇಕ್ ಬನ್ಜಾಲ್ ಮಂಗಳವಾರ ಉದ್ಘಾಟಿಸಲಿದ್ದಾರೆ. ಕರ್ನಾಟಕ ದೂರಸಂಪರ್ಕ ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕ ದೇವೇಶ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಪರಿಶಿಷ್ಟರ ಮೇಲೆ ಹಲ್ಲೆ ಕಬ್ಬಿನ ಗಾಡಿಗೆ ಹಾನಿ

ಕೊಣನೂರು (ಅರಕಲಗೂಡು ತಾಲ್ಲೂಕು): ಕಬ್ಬಿನ ಗಾಡಿ ನಿಲ್ಲಿಸುವ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಪರಿಶಿಷ್ಟ ಜಾತಿಯ ಅಪ್ಪ–ಮಗನ ಮೇಲೆ ಹಲ್ಲೆ ನಡೆಸಿ, ಜಾತಿ ನಿಂದನೆ ಮಾಡಲಾಗಿದೆ.

ಗಂಗೂರು ಹ್ಯಾಂಡ್ ಪೋಸ್ಟ್ ಬಳಿ ರುದ್ರಪಟ್ಟಣದ ಚಂದ್ರ ಮತ್ತು ಅವರ ಮಗ ನಿತಿನ್ ಕಬ್ಬಿನ ಗಾಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು. ಭಾನುವಾರ ಬೆಳಿಗ್ಗೆ ಗಂಗೂರು ಗ್ರಾಮದ ರಾಜೇಶ್, ತಂಜೀಮ್ ಪಾಷಾ ಅವರು ಗಾಡಿ ಬಳಿ ತೆರಳಿ, ‘ಇಲ್ಲಿ ಯಾಕೆ ಗಾಡಿ ಹಾಕಿದ್ದೀರಾ, ನೀವು ಕೊಟ್ಟ ಕಬ್ಬಿನ ಹಾಲನ್ನು ನಾವು ಕುಡಿಯಬೇಕೆ?’ ಎಂದು ಜಾತಿ ನಿಂದನೆ ಮಾಡಿದ್ದರು. ‘ರಸ್ತೆ ಬದಿಯಲ್ಲಿ ಗಾಡಿ ನಿಲ್ಲಿಸಿಕೊಂಡು ವ್ಯಾಪಾರ ಮಾಡಲು ಯಾರ ಅಪ್ಪಣೆಯೂ ಬೇಡ. ನಿನ್ನ ಜಾಗ ಆಗಿದ್ದರೆ ಖಾಲಿ ಮಾಡುವೆ’ ಎಂದು ಚಂದ್ರ ಹೇಳಿದ್ದರು.

ಅದರಿಂದ ಕೋಪಗೊಂಡ ರಾಜೇಶ್ ಗ್ರಾಮದಿಂದ ಸ್ನೇಹಿತರಾದ ಶೇಖರ್, ಸುನಿಲ್, ಮಂಜೇಗೌಡ, ಸಾಗರ್, ರವಿಚಂದ್ರ ಅವರನ್ನು ಕರೆಸಿಕೊಂಡು, ಅಪ್ಪ, ಮಗನ ಮೇಲೆ ಹಲ್ಲೆ ನಡೆಸಿದ್ದಾರೆ. ಕಬ್ಬಿನ ಜಲ್ಲೆಗಳನ್ನು ಬಿಸಾಡಿ, ಗಾಡಿಗೂ ಹಾನಿ ಮಾಡಿದ್ದಾರೆ. ಕೊಣನೂರು ಠಾಣೆಯಲ್ಲಿ 7 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

‘ಸಮಾನತೆ ಜಾರಿಯಾದರೆ ದೇಶ ಅವನತಿ’

ಚಿತ್ರದುರ್ಗ: ‘ಭಾರತದಲ್ಲಿ ಸಮಾನತೆ ಇಲ್ಲ. ಆದರೆ, ಏಕತೆ ಇದೆ. ಸಮಾನತೆ ಅನುಷ್ಠಾನಕ್ಕೆ ಬಂದರೆ ದೇಶದ ಅವನತಿ ಶುರುವಾಗುತ್ತದೆ’ ಎಂದು ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಸಹ ಕಾರ್ಯವಾಹ ಪಟ್ಟಾಭಿರಾಂ ಹೇಳಿದರು.

ನಗರದ ಕಬೀರಾನಂದ ಆಶ್ರಮದಲ್ಲಿ ಶಿವಲಿಂಗಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುತ್ತಿರುವ 92ನೇ ಶಿವರಾತ್ರಿ ಮಹೋತ್ಸವದ ನಾಲ್ಕನೇ ದಿನವಾದ ಸೋಮವಾರದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸ್ವಾಮಿ ವಿವೇಕಾನಂದ ಅವರು ಸಮಾನತೆಯ ಬಗ್ಗೆ ವಿದೇಶದಲ್ಲಿ ಪ್ರತಿಪಾದಿಸಿದ್ದಾರೆ. ಇದನ್ನು ಕೇಳಿದರೆ ವಿಚಾರವಾದಿಗಳ ರಾಜಕಾರಣಿಗಳ ಎದೆ ಒಡೆದುಹೋಗುತ್ತದೆ. ಅನೇಕ ಜಾತಿ, ಪಂಥ, ಧರ್ಮ, ಪಕ್ಷಗಳಿದ್ದರೂ ನಾವೆಲ್ಲ ಒಂದೇ ಎಂಬ ಭಾವನೆ ಇದೆ. ಹಿಂದೂ ಎಂಬುದು ಜೀವನ ಶೈಲಿಯೇ ಹೊರತು ಧರ್ಮವಲ್ಲ’ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ಮುಖಂಡ ಹೊದಿಗೆರೆ ರಮೇಶ್, ‘ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಧರ್ಮಕ್ಕಿಂತ ಮಾನವ ಧರ್ಮ ದೊಡ್ಡದು. ಯಾವುದೇ ಧರ್ಮದಲ್ಲಿ ಹುಟ್ಟಿದರೂ ಮಾನವೀಯತೆ ಬೆಳೆಸಿಕೊಂಡು, ಸಮಾನತೆ ನೆಲೆಸಿದರೆ ದೇಶ ಅಭಿವೃದ್ಧಿಯಾಗುತ್ತದೆ’ ಎಂದು ಪ್ರತಿಪಾದಿಸಿದರು.

ಹರ್ಷ ಕುಟುಂಬಕ್ಕೆ ಮಂತ್ರಾಲಯ ಮಠದಿಂದ ₹50 ಸಾವಿರ

ರಾಯಚೂರು: ‘ಶಿವಮೊಗ್ಗದಲ್ಲಿ ಹತ್ಯೆಯಾದ ಬಜರಂಗ ದಳ ಕಾರ್ಯಕರ್ತ ಹರ್ಷ ಅವರ ಕುಟುಂಬಕ್ಕೆ ಮಂತ್ರಾಲಯ ಮಠದಿಂದ ಪ್ರಸಾದ ರೂಪದಲ್ಲಿ ₹50 ಸಾವಿರ ನೀಡಲಾಗುವುದು’ ಎಂದು ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥ ಸ್ವಾಮೀಜಿ ತಿಳಿಸಿದ್ದಾರೆ.

'ಸನಾತನ ಧರ್ಮ ಸಂರಕ್ಷಿಸಲು ಹರ್ಷ ಪ್ರಾಣ ಅರ್ಪಿಸಿದ್ದು, ಅವರ ಕುಟುಂಬಕ್ಕೆ ಆತ್ಮ ಸ್ಥೈರ್ಯ ತುಂಬಲು ಭಕ್ತರ ಮೂಲಕ ಈ ನೆರವು ನೀಡಲಾಗುವುದು' ಎಂದು ಶ್ರೀಗಳು ತಿಳಿಸಿದ್ದಾರೆ.



ಶ್ರೀಸುಬುಧೇಂದ್ರ ತೀರ್ಥ ಸ್ವಾಮೀಜಿ

₹ 3,972 ಕೋಟಿ ಮೊತ್ತದಲ್ಲಿ 238 ಕಿ.ಮೀ. ಹೆದ್ದಾರಿ ಯೋಜನೆಗಳಿಗೆ ಶಂಕುಸ್ಥಾಪನೆ

‘ರಾಜ್ಯದಲ್ಲಿ ಅಮೆರಿಕ ಮಾದರಿ ಹೆದ್ದಾರಿ ನಿರ್ಮಾಣ’

ಪ್ರಜಾವಾಣಿ ವಾರ್ತೆ

ಬೆಳಗಾವಿ/ಹುಬ್ಬಳ್ಳಿ: ‘ರಾಜ್ಯ ಸರ್ಕಾರವು ತ್ವರಿತವಾಗಿ ಭೂಸ್ವಾಧೀನ ಮಾಡಿಕೊಟ್ಟರೆ, ಅಗತ್ಯ ಅನುಮತಿ ಮೊದಲಾದವುಗಳಲ್ಲಿ ಸಹಕರಿಸಿದರೆ 2024ರ ವೇಳೆಗೆ ಕರ್ನಾಟಕದಲ್ಲೂ ಅಮೆರಿಕಕ್ಕೆ ಸರಿಸಮನಾಗಿ ಹೆದ್ದಾರಿಗಳನ್ನು ನಿರ್ಮಿಸಿಕೊಡಲಾಗುವುದು’ ಎಂದು ಕೇಂದ್ರ ಭೂಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ಬೆಳಗಾವಿ ಹಾಗೂ ವಿಜಯಪುರ ಜಿಲ್ಲೆಗಳ ವ್ಯಾಪ್ತಿಯಲ್ಲಿ ₹3,972 ಕೋಟಿ ಮೊತ್ತದಲ್ಲಿ ಕೈಗೊಂಡಿರುವ ವಿವಿಧ 5 ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

‘9 ಸಾವಿರ ಕಿ.ಮೀ. ಉದ್ದದ ಗ್ರೀನ್‌ಫೀಲ್ಡ್ ಹಾಗೂ ಹೆದ್ದಾರಿ ಕಾರಿಡಾರ್ ಯೋಜನೆಯನ್ನು ₹3 ಲಕ್ಷ ಕೋಟಿಗೂ ಅಧಿಕ ವೆಚ್ಚದಲ್ಲಿ ಜಾರಿಗೊಳಿಸಲಾಗುತ್ತಿದೆ. ಇದರಲ್ಲಿ ಬೆಂಗಳೂರು-ಚೆನ್ನೈ ಯೋಜನೆ ಕೂಡ ಸೇರಿದೆ. ಇದರಿಂದ ಎರಡು ನಗರಗಳ ನಡುವಿನ ಪ್ರಯಾಣ ಅವಧಿ 12 ಗಂಟೆಗೆ ಇಳಿಕೆಯಾಗಲಿದೆ’ ಎಂದು ಹೇಳಿದರು.

‘ಬೆಂಗಳೂರಿನ ಸಂಚಾರ ದಟ್ಟಣೆ ಹಾಗೂ ನಗರೀಕರಣದ ಒತ್ತಡ ನಿಯಂತ್ರಿಸುವ ದೃಷ್ಟಿಯಿಂದ ಹೆದ್ದಾರಿಗಳ ಪಕ್ಕದಲ್ಲಿ ಭೂಸ್ವಾಧೀನ ಮಾಡಿಕೊಂಡು ಸ್ಮಾರ್ಟ್ ವಿಲೇಜ್ ಹಾಗೂ ಕೈಗಾರಿಕೆ ಸ್ಥಾಪಿಸಿ ಪರ್ಯಾಯ ಮಾರ್ಗ ಕಂಡುಕೊಳ್ಳಬಹುದು. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಯೋಜನೆ ರೂಪಿಸಿದರೆ ಕೇಂದ್ರದಿಂದ ಎಲ್ಲ ರೀತಿಯ ನೆರವು ನೀಡಲಾಗುವುದು’ ಎಂದರು.

‘ರಾಜ್ಯ ಸರ್ಕಾರವು ರಸ್ತೆ ಯೋಜನೆಗಳಿಗೆ ಭೂಸ್ವಾಧೀನ ಮಾಡಿಕೊಟ್ಟರೆ ಪ್ರವಾಸೋದ್ಯಮ ಹಾಗೂ ಕೈಗಾರಿಕೆಗಳ ಅಭಿವೃದ್ಧಿಗೆ ಪೂರಕ ಯೋಜನೆಗಳ ಅನುಷ್ಠಾನಕ್ಕೆ ಆದ್ಯತೆ ನೀಡಲಾಗುವುದು. ಭಾರತ ಮಾಲಾ-2 ಯೋಜನೆಯಲ್ಲಿ ಪುಣೆ-ಬೆಂಗಳೂರು ರಸ್ತೆಯ ಈಗಿನ ಅಂತರವನ್ನು 100 ಕಿ.ಮೀ. ಕಡಿಮೆಗೊಳಿಸುವ ಯೋಜನೆ ರೂಪಿಸಲಾಗಿದೆ. ಮುಂದೆ ಇದು ಬೆಂಗಳೂರು-ಚೆನ್ನೈ ಹೆದ್ದಾರಿಗೆ ಸಂಪರ್ಕ ಕಲ್ಪಿಸಲಿದೆ’ ಎಂದು ವಿವರಿಸಿದರು.

ಹುಬ್ಬಳ್ಳಿಯಲ್ಲಿ ನಡೆದ, 26 ರಾಷ್ಟ್ರೀಯ ಹೆದ್ದಾರಿಗಳ ಕಾಮಗಾರಿ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದ ರಸ್ತೆ ಕಾಮಗಾರಿಗಳಿಗೆ ಇಬ್ಬರೂ 50:50 ಅನುಪಾತದಲ್ಲಿ ಅನುದಾನ ಒದಗಿಸಬೇಕು. ಇದಕ್ಕೆ ಪೂರಕ ಸೂತ್ರವೊಂದನ್ನು ಮುಂದಿಟ್ಟಿರುವ ಗಡ್ಕರಿ ಅವರು, ಭೂ ಸ್ವಾಧೀನಕ್ಕೆ ಶೇ 25 ಅನುದಾನ ನೀಡಿ ಎಂದು ಸೂಚಿಸಿದ್ದಾರೆ’ ಎಂದರು.

‘ಸಿಮೆಂಟ್, ಕಬ್ಬಿಣ ಮತ್ತಿತರ ಅಗತ್ಯ ವಸ್ತುಗಳ ಮೇಲಿನ ಕೇಂದ್ರದ ಪಾಲಿನ ಜಿಎಸ್‌ಟಿ ತೆರಿಗೆಯಲ್ಲಿ ವಿನಾಯಿತಿ ಹಾಗೂ ಜಲ್ಲಿ, ಉಸುಕು ಮತ್ತಿತರ ಸಣ್ಣ ಖನಿಜಗಳ ಮೇಲಿನ ರಾಜಸ್ವಕ್ಕೆ ವಿನಾಯಿತಿ ನೀಡಲು ಸೂಚಿಸಿದ್ದಾರೆ. ಈ ಕುರಿತು ರಾಜ್ಯ ಮತ್ತು ಕೇಂದ್ರದ ನಡುವಿನ ಒಪ್ಪಂದಕ್ಕೆ ಶೀಘ್ರ ಸಹಿ ಮಾಡಲಿದ್ದೇನೆ’ ಎಂದು ಅವರು ಹೇಳಿದರು.

ಖರ್ಗೆ ಶ್ಲಾಘನೆ: ‘ಅಭಿವೃದ್ಧಿ ಪರವಾಗಿ ಕೆಲಸ ಮಾಡುವ ಸಚಿವ ನಿತಿನ್ ಗಡ್ಕರಿ ಅವರ ಬಗ್ಗೆ ನನಗೆ ವಿಶೇಷ ಗೌರವವಿದೆ. ರಾಜಕೀಯ ಬದಿಗಿಟ್ಟು ಅವರ ಕೆಲಸಗಳಿಗೆ ಮೆಚ್ಚುಗೆ ವ್ಯಕ್ತಪಡಿಸಲು ಇಲ್ಲಿಗೆ ಬಂದಿರುವೆ’ ಎಂದು ಹುಬ್ಬಳ್ಳಿಯ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಗಡ್ಕರಿ ಅವರನ್ನು ಶ್ಲಾಘಿಸಿದರು.



ಹುಬ್ಬಳ್ಳಿಯಲ್ಲಿ ಸೋಮವಾರ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ರಾಜ್ಯದ ವಿವಿಧ ಭಾಗಗಳಲ್ಲಿ 26 ರಾಷ್ಟ್ರೀಯ ಹೆದ್ದಾರಿಗಳ ಶಂಕುಸ್ಥಾಪನೆ ಹಾಗೂ ವಿವಿಧ ಹೆದ್ದಾರಿಗಳ ಲೋಕಾರ್ಪಣೆಗೆ ರಿಮೋಟ್ ಮೂಲಕ ಚಾಲನೆ ನೀಡಿದರು. ಸಚಿವರಾದ ಬಿ. ಶ್ರೀರಾಮುಲು, ಸಿ.ಸಿ. ಪಾಟೀಲ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಎ. ನಾರಾಯಣಸ್ವಾಮಿ, ಶಾಸಕ ಜಗದೀಶ ಶೆಟ್ಟರ್, ಜಿಲ್ಲಾ ಉಸ್ತುವಾರಿ ಸಚಿವ ಹಾಲಪ್ಪ ಆಚಾರ್, ಸಂಸದ ಶಿವಕುಮಾರ ಉದಾಸಿ ಇದ್ದಾರೆ – ಪ್ರಜಾವಾಣಿ ಚಿತ್ರ

ಕರ್ನಾಟಕ–ಮಹಾರಾಷ್ಟ್ರದ ಜಗಳ ಬಗೆಹರಿಸಲಾಗಲಿಲ್ಲ: ಗಡ್ಕರಿ ವಿಷಾದ

ಬೆಳಗಾವಿ: ‘ನಾನು ಕೇಂದ್ರ ಜಲಸಂಪನ್ಮೂಲ ಸಚಿವನಾಗಿದ್ದಾಗ ದೇಶದಲ್ಲಿ 20 ಅಂತರರಾಜ್ಯ ವಿವಾದಗಳಿದ್ದವು. ಅವುಗಳಲ್ಲಿ ಹದಿಮೂರನ್ನು ಪರಿಹರಿಸಿದ್ದೆ. ಆದರೆ, ಕರ್ನಾಟಕ– ಮಹಾರಾಷ್ಟ್ರ ನಡುವಿನ ವಿವಾದವನ್ನು ಬಗೆಹರಿಸಲು ನನ್ನಿಂದ ಸಾಧ್ಯವಾಗಲಿಲ್ಲ’ ಎಂದು ಕೇಂದ್ರ ಭೂಸಾರಿಗೆ ಹಾಗೂ ರಾಷ್ಟ್ರೀಯ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅಸಹಾಯಕತೆ ವ್ಯಕ್ತಪಡಿಸಿದರು.

‘ಅಂತರರಾಜ್ಯ ಜಲ ವಿವಾದಗಳ ಸಭೆ ನಡೆಯುವಾಗ ನಾನು ಬಾಗಿಲು ಹಾಕುವುದಕ್ಕೆ ಸೂಚಿಸುತ್ತಿದ್ದೆ. ಚರ್ಚೆ ಸಫಲ ಆಗುವವರೆಗೂ ಬಾಗಿಲು ತೆಗೆಸುತ್ತಿರಲಿಲ್ಲ. ಇದರಿಂದಾಗಿ ಬಹಳಷ್ಟು ವಿವಾದಗಳು ಬಗೆಹರಿದವು’ ಎಂದರು.

ಜಲಶಕ್ತಿ ಯೋಜನೆ: ಮುಖ್ಯಮಂತ್ರಿ ಘೋಷಣೆ

‘ಕಿತ್ತೂರಿನಿಂದ ಬೆಳಗಾವಿ ಮೂಲಕ ಮಹಾರಾಷ್ಟ್ರ ಗಡಿಯವರೆಗಿನ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಸಂಪೂರ್ಣವಾಗಿ ‘ಜಲಶಕ್ತಿ’ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಬೆಳಗಾವಿ ಜಿಲ್ಲೆಯಿಂದ ಆರಂಭಿಸಲಾಗುವ ಈ ಯೋಜನೆಯನ್ನು ಮುಂಬರುವ ದಿನಗಳಲ್ಲಿ ರಾಜ್ಯದಾದ್ಯಂತ ಅನುಷ್ಠಾನಗೊಳಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ರಾಜ್ಯದಲ್ಲಿ ಹೆದ್ದಾರಿಗಳು ಮತ್ತು ವರ್ತುಲ ರಸ್ತೆಯ ಅಭಿವೃದ್ಧಿಗಾಗಿ ಸರ್ಕಾರದಿಂದ ಜಿಎಸ್‌ಟಿ ವಿನಾಯಿತಿ, ಭೂಸ್ವಾಧೀನ ಮತ್ತಿತರ ಸಹಕಾರ ನೀಡಲಾಗುವುದು

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ



ನಿಧನ ವಾರ್ತೆ

ನಟ ರವಿಚಂದ್ರನ್‌ಗೆ ಮಾತೃವಿಯೋಗ

ಬೆಂಗಳೂರು: ಚಿತ್ರನಟ ವಿ. ರವಿಚಂದ್ರನ್ ಅವರ ತಾಯಿ ಪಟ್ಟಮ್ಮಾಳ್ ವೀರಸ್ವಾಮಿ (83) ಸೋಮವಾರ ಮುಂಜಾನೆ ನಿಧನರಾದರು.

ನಿರ್ಮಾಪಕ ದಿವಂಗತ ಎನ್. ವೀರಸ್ವಾಮಿ ಅವರ ಪತ್ನಿಯಾಗಿದ್ದ ಪಟ್ಟಮ್ಮಾಳ್ ಅವರು ಕಳೆದ ಹತ್ತು ವರ್ಷಗಳಿಂದ ಮರೆವಿನ ಕಾಯಿಲೆ ಹಾಗೂ ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು.

ರವಿಚಂದ್ರನ್ ಅವರು ಸೇರಿದಂತೆ ಇಬ್ಬರು ಗಂಡು ಮಕ್ಕಳು ಹಾಗೂ ಮೂವರು ಹೆಣ್ಣು ಮಕ್ಕಳು ಪಟ್ಟಮ್ಮಾಳ್ ಅವರಿಗೆ ಇದ್ದಾರೆ. ಪಾರ್ಥಿವ ಶರೀರವನ್ನು ರವಿಚಂದ್ರನ್ ಅವರ ಮನೆಯಲ್ಲೇ ಸೋಮವಾರ ಸಂಜೆಯವರೆಗೂ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ನಟರಾದ ರಾಘವೇಂದ್ರ ರಾಜ್‌ಕುಮಾರ್, ದರ್ಶನ್ ಸೇರಿದಂತೆ ಚಿತ್ರರಂಗದ ಹಲವರು ಅಂತಿಮ ದರ್ಶನ ಪಡೆದರು. ಹರಿಶ್ಚಂದ್ರಘಾಟ್‌ನಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಿತು.



ಪಟ್ಟಮ್ಮಾಳ್

ಪೌಷ್ಟಿಕ ಆಹಾರ ಸೇವಿಸಿ

ಮುಂಬೈ: ರಾಜ್ಯಪಾಲ ಕೋಶ್ಯಾರಿ ಹೇಳಿಕೆಗೆ ತೀವ್ರ ಆಕ್ಷೇಪ

ಮುಂಬೈ (ಪಿಟಿಐ): ಸಮರ್ಥ ರಾಮದಾಸ್ ಅವರು ಛತ್ರಪತಿ ಶಿವಾಜಿ ಮಹಾರಾಜರ ಗುರು ಎಂದು ರಾಜ್ಯಪಾಲ ಭಗತ್‌ಸಿಂಗ್ ಕೋಶ್ಯಾರಿ ಅವರ ಹೇಳಿಕೆಗೆ ಬಿಜೆಪಿ ಸಂಸದ ಉದಯರಾಜೇ ಭೋಸಲೆ ಸೇರಿದಂತೆ ಮಹಾರಾಷ್ಟ್ರದ ಹಲವು ರಾಜಕಾರಣಿಗಳು ಸೋಮವಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಶಿವಾಜಿ ಮಹಾರಾಜರ ವಂಶಸ್ಥರಾದ ಭೋಸಲೆ ಅವರು, ‘ಈ ಹೇಳಿಕೆಯು ಶಿವಾಜಿಯವರ ಅನುಯಾಯಿಗಳು ಮತ್ತು ಮಹಾರಾಷ್ಟ್ರದ ಜನರ ಭಾವನೆಗಳಿಗೆ ನೋವುಂಟು ಮಾಡಿದೆ. ತಕ್ಷಣವೇ ಅವರು ಹೇಳಿಕೆಯನ್ನು ಹಿಂತೆಗೆದುಕೊಳ್ಳಬೇಕು’ ಎಂದು ರಾಜ್ಯಪಾಲರನ್ನು ಒತ್ತಾಯಿಸಿದ್ದಾರೆ.

ಔರಂಗಾಬಾದ್‌ನಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಕೋಶ್ಯಾರಿ ಅವರು ಈ ಹೇಳಿಕೆ ನೀಡಿದ್ದರು.

‘ಶಿವಾಜಿಗೆ ನಿಜವಾದ ಗುರು ಅವರ ತಾಯಿ ರಾಜಮಾತಾ ಜೀಜಾಮಾತಾ ಆಗಿದ್ದರು’ ಎಂದು ಭೋಸಲೆ ಹೇಳಿದ್ದಾರೆ. ಶಿವಸೇನಾ ಸಂಸದ ಸಂಜಯ್ ರಾವುತ್, ಎನ್‌ಸಿಪಿ ಸಂಸದೆ ಸುಪ್ರಿಯಾ ಸುಳೆ ಹಾಗೂ ಕಾಂಗ್ರೆಸ್‌ನ ರಾಜ್ಯ ಘಟಕದ ಅಧ್ಯಕ್ಷ ನಾನಾ ಪಟೋಲೆ ಅವರು ಸಹ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಮೇಕೆದಾಟು ಪಾದಯಾತ್ರೆಗೆ ವಿವಿಧ ಮಠಾಧೀಶರ ಬೆಂಬಲ • ಬಿಡದಿಯಿಂದ ಕೆಂಗೇರಿವರೆಗೂ ಟ್ರಾಫಿಕ್ ಜಾಮ್

ರಾಜಧಾನಿ ತಲುಪಿದ ನೀರಿಗಾಗಿ ನಡಿಗೆ

• ಆರ್. ಜಿತೇಂದ್ರ

ರಾಮನಗರ: ಕುಡಿಯುವ ನೀರಿನ ಹಕ್ಕಿಗಾಗಿ ನಡೆಯುತ್ತಿರುವ ಮೇಕೆದಾಟು ಪಾದಯಾತ್ರೆಯು ಸೋಮವಾರ ರಾಜಧಾನಿ ಪ್ರವೇಶಿಸಿದ್ದು, ಮುಂದಿನ ಮೂರು ದಿನಗಳ ಕಾಲ ಬೆಂಗಳೂರಿನಲ್ಲಿ ಕಾಂಗ್ರೆಸ್ ಶಕ್ತಿ ಪ್ರದರ್ಶನ ನಡೆಯಲಿದೆ.

ಎರಡನೇ ಹಂತದ ಎರಡನೇ ದಿನದ ಪಾದಯಾತ್ರೆಗೆ ಬಿಡದಿಯಿಂದ ಚಾಲನೆ ದೊರೆಯಿತು. ಬರೋಬ್ಬರಿ 20 ಕಿ.ಮೀ ಉದ್ದಕ್ಕೆ ಪಾದಯಾತ್ರಿಗರು ಹೆಜ್ಜೆ ಹಾಕಿದ್ದು, ರಾತ್ರಿ ಕೆಂಗೇರಿ ತಲುಪಿ ನಿಟ್ಟುಸಿರು ಬಿಟ್ಟರು. ಬೆಳಿಗ್ಗೆ 10ಕ್ಕೆ ದಿನದ ನಡಿಗೆ ಆರಂಭಗೊಂಡಿದ್ದು, ಹೊತ್ತು ಕಳೆದಂತೆಲ್ಲ ಬಿಸಿಲ ತಾಪ ಹೆಚ್ಚಿ ಪಾದಯಾತ್ರಿಗರ ಮೈಯಲ್ಲಿ ಬೆವರು ಬಹಳ ಹರಿದಿತ್ತು. ಹೆಜ್ಜಾಲ ಬಳಿಯ ರಾಜಕುಮಾರ್ ಫಾರಂನಲ್ಲಿ ಮಧ್ಯಾಹ್ನ ಊಟದ ಜೊತೆಗೆ ದಣಿವಾರಿಸಿಕೊಂಡ ನಾಯಕರು ಮತ್ತೆ ಹೆಜ್ಜೆ ಹಾಕಿದರು.

ಸೋಮವಾರ ತುಮಕೂರು ಜಿಲ್ಲೆಯ ಕಾಂಗ್ರೆಸ್ ನಾಯಕರು ತಮ್ಮೂರಿನ ಜನರನ್ನು ಪಾದಯಾತ್ರೆಗೆ ಕರೆ ತಂದಿದ್ದರು. ಮಾಜಿ ಉಪ ಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ, ಮಾಜಿ ಸಚಿವ ಟಿ.ಬಿ. ಜಯಚಂದ್ರ ಆದಿಯಾಗಿ ಜಿಲ್ಲೆಯ ನಾಯಕರ ದಂಡೇ ಇತ್ತು. ಮಧ್ಯಾಹ್ನ ಊಟದ ಬಳಿಕ ಹೆಚ್ಚಿನ ಕಾರ್ಯಕರ್ತರು ಪಾದಯಾತ್ರೆಯಿಂದ ಕಾಲ್ಕಿತ್ತು ತಮ್ಮೂರಿಗೆ ಹೊರಟಿದ್ದ ಬಸ್ ಏರಿದರು. ಬಿಡದಿಯಿಂದ ಕೆಂಗೇರಿವರೆಗೂ ಟ್ರಾಫಿಕ್ ಜಾಮ್ ಆಗಿದ್ದು, ವಾಹನ ಸವಾರರು ಪರದಾಡಬೇಕಾಯಿತು.

ಪಾದಯಾತ್ರೆಯು ಎಚ್.ಡಿ. ಕುಮಾರಸ್ವಾಮಿ ವಾಸವಿರುವ ಕೇತಗಾನಹಳ್ಳಿ ಬಳಿ ಬರುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು ಡಿಕೆಶಿಗೆ ಹೂವಿನ ಮಳೆ ಗೆರೆದು ಜೈಕಾರ ಹಾಕಿದರು. ವಿಪಕ್ಷ ನಾಯಕ ಸಿದ್ದರಾಮಯ್ಯ ಬೆಳಿಗ್ಗೆ ಕೊಂಚ ತಡವಾಗಿ ಪಾದಯಾತ್ರೆಗೆ ಸೇರಿಕೊಂಡಿದ್ದು, ಒಂದಿಷ್ಟು ಕಿ.ಮೀ. ನಡೆದು ಕಾರು ಏರಿ ರಾಜಕುಮಾರ್ ಫಾರಂನತ್ತ ತೆರಳಿದರು. ಅಲ್ಲಿ ಊಟದ ಬಳಿಕ ಮತ್ತೆ ನಡೆದರು. ಶಿವಕುಮಾರ್ ಒಡೆತನದ ಐಕಾನ್ ಕಾಲೇಜಿನ ವಿದ್ಯಾರ್ಥಿಗಳೂ ಪಾದಯಾತ್ರೆಯಲ್ಲಿ ಭಾಗಿಯಾದರು.

ಮಠಾಧೀಶರ ಬೆಂಬಲ: ರಾಜ್ಯದ ವಿವಿಧ ಭಾಗಗಳ ಮಠಾಧೀಶರು ಪಾದಯಾತ್ರೆಯಲ್ಲಿ ಪಾಲ್ಗೊಂಡು ಬೆಂಬಲ ಸೂಚಿಸಿದರು. ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು, ಮಾದಾರ ಚನ್ನಯ್ಯ ಸ್ವಾಮೀಜಿ, ಮಡಿವಾಳ ಸ್ವಾಮೀಜಿ, ಗಂಗಾವತಿ, ಹಾವೇರಿ, ಹರಿಹರ ಮೊದಲಾದ ಭಾಗಗಳ ಸ್ವಾಮೀಜಿಗಳು ಕೇತಗಾನಹಳ್ಳಿ ಬಳಿ ಶಿವಕುಮಾರ್ ಅವರ ಜೊತೆ ಹೆಜ್ಜೆ ಹಾಕಿದರು.

'ರಾಜ್ಯದಲ್ಲಿ ಮೇಕೆದಾಟು, ಮಹದಾಯಿ ಸೇರಿದಂತೆ ನೀರಿಗಾಗಿ ಹಲವು ಹೋರಾಟಗಳು ನಡೆಯುತ್ತಲೇ ಇವೆ. ನೀರಿನ ಹಕ್ಕಿಗಾಗಿ ಹೋರಾಟ ಮಾಡಬೇಕಾಗಿರುವುದು ಈ ಕಾಲಘಟ್ಟದ ಅನಿವಾರ್ಯ. ಇಂತಹ ಸತ್ಕಾರ್ಯಕ್ಕೆ ನಮ್ಮ ಬೆಂಬಲ ಇರಲಿದೆ' ಎಂದು ಮುರುಘಾ ಶರಣರು ಹೇಳಿದರು.

ಮುಖ್ಯಾಂಶಗಳು

- ಬಾಲಗಂಗಾಧರನಾಥ ಶ್ರೀ ಹುಟ್ಟೂರು ಬಾನಂದೂರು ಮಠದಲ್ಲಿ ಡಿಕೆಶಿ ಪೂಜೆ
- ಹೆದ್ದಾರಿಯಲ್ಲಿ ರಂಗೋಲಿ ಬಿಡಿಸಿ ಶುಭ ಕೋರಿದ ಸಾರ್ವಜನಿಕರು
- ವಾಹನ ಸಂಚಾರಕ್ಕೆ ತೊಂದರೆ: ಪ್ರಯಾಣಿಕರ ಪರದಾಟ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ



ಮೇಕೆದಾಟು ಪಾದಯಾತ್ರೆಯ ಎರಡನೇ ದಿನವಾದ ಸೋಮವಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರೊಂದಿಗೆ ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು, ಮಾದಾರ ಚನ್ನಯ್ಯ ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧೀಶರು ಹೆಜ್ಜೆ ಹಾಕಿದರು

'ಕಾಂಗ್ರೆಸ್ ಹೋರಾಟ ಯಾರ ವಿರುದ್ಧ?'

ಬೆಳಗಾವಿ: 'ಮೇಕೆದಾಟು ಯೋಜನೆಯ ವಿಷಯ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವಾಗ ಕಾಂಗ್ರೆಸ್‌ನವರು ಪಾದಯಾತ್ರೆ ಮೂಲಕ ಹೋರಾಟ ನಡೆಸುತ್ತಿರುವುದು ಯಾರ ವಿರುದ್ಧ ಎನ್ನುವುದನ್ನು ಸ್ಪಷ್ಟಪಡಿಸಲಿ' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಸವಾಲು ಹಾಕಿದರು.

ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಕಾಂಗ್ರೆಸ್ 2ನೇ ಹಂತದ ಪಾದಯಾತ್ರೆ ನಡೆಸುತ್ತಿದೆ. ಆ ಪಕ್ಷದ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಅವರೂ ಪಾಲ್ಗೊಂಡಿರುವುದು ಅಚ್ಚರಿ ಮೂಡಿಸಿದೆ' ಎಂದು ಹೇಳಿದರು.

'ಅಧಿಕಾರದಲ್ಲಿದ್ದಾಗ ಕ್ರಮ ಕೈಗೊಳ್ಳದ ಕಾಂಗ್ರೆಸ್‌ನವರು, ಈಗ ಪಾದಯಾತ್ರೆಯ ನಾಟಕ ಮಾಡುತ್ತಿದ್ದಾರೆ. ನನ್ನನ್ನೇ ಗುರಿಯಾಗಿಸಿಕೊಂಡು ಹೊಟ್ಟೆಪಾಡಿಗಾಗಿ ಬಿಜೆಪಿಗೆ ಹೋಗಿದ್ದಾರೆ ಎಂದು ಟೀಕಿಸಿದ್ದಾರೆ' ಎಂದರು.

38 ಮಂದಿ ವಿರುದ್ಧ ಎಫ್‌ಐಆರ್

ರಾಮನಗರ: ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿ ಪಾದಯಾತ್ರೆ ನಡೆಸಿದ ಆರೋಪದ ಮೇಲೆ 38 ಮಂದಿ ವಿರುದ್ಧ ರಾಮನಗರದ ಐಜೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಪ್ರಕರಣದಲ್ಲಿ ಮೊದಲ ಆರೋಪಿಯಾಗಿಸಲಾಗಿದೆ. ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ ಅವರ ಹೆಸರೂ ಆರೋಪಿಗಳ ಪಟ್ಟಿಯಲ್ಲಿದೆ. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸಂಸದ ಡಿ.ಕೆ. ಸುರೇಶ್, ಮುಖಂಡರಾದ ಆರ್. ಧ್ರುವನಾರಾಯಣ, ಸಲೀಂ ಅಹಮ್ಮದ್, ಮೊಹಮ್ಮದ್ ನಲಪ್ಪಾಡ್ ಹ್ಯಾರಿಸ್, ಈಶ್ವರ ಖಂಡ್ರೆ, ರಾಮಲಿಂಗಾರೆಡ್ಡಿ, ಎಂ.ಬಿ. ಪಾಟೀಲ, ಯು.ಟಿ. ಖಾದರ್, ಕೆ.ಎಚ್. ಮುನಿಯಪ್ಪ, ಚಿತ್ರ ನಟರಾದ ಸಾಧುಕೋಕಿಲ, 'ನೆನಪಿರಲಿ' ಪ್ರೇಮ್ ಮತ್ತಿತರರ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಕಾಂಗ್ರೆಸ್‌ನಲ್ಲಿ ಸದ್ಯ ಮುಖ್ಯಮಂತ್ರಿ ವಿಚಾರ ಚರ್ಚೆಯಲ್ಲಿ ಇಲ್ಲ. ಅದಕ್ಕಾಗಿ ನಾವು ಪಾದಯಾತ್ರೆ ಹಮ್ಮಿಕೊಂಡಿಲ್ಲ

ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ

ಎಸ್‌ಡಿಪಿಐ ಸಂಘಟನೆಯು ರಾಜ್ಯದಲ್ಲಿ ಬಿಜೆಪಿಯ 'ಬಿ' ಟೀಮ್‌ನಂತಿದೆ. ಬೇಕಂತಲೇ ಅವರನ್ನು ಎತ್ತಿ ಕಟ್ಟಲಾಗುತ್ತಿದೆ. ತಾಕತ್ತಿದ್ದರೆ ಸಂಘಟನೆಯನ್ನು ಬ್ಯಾನ್ ಮಾಡಿ

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಮಹದಾಯಿ, ಕೃಷ್ಣಾ ಹಾಗೂ ಮೇಕೆದಾಟು ಯೋಜನೆಗಳನ್ನು ಅನುಷ್ಠಾನಕ್ಕೆ ತಂದೇ ತೀರುತ್ತೇವೆ. ಈ ಬಗ್ಗೆ ಮಾತನಾಡುವುದಕ್ಕೆ ಕಾಂಗ್ರೆಸ್ ನಾಯಕರಿಗೆ ನೈತಿಕತೆ ಇಲ್ಲ

ಗೋವಿಂದ ಕಾರಜೋಳ, ಜಲಸಂಪನ್ಮೂಲ ಸಚಿವ

ಮೇಕೆದಾಟು ಯೋಜನೆಗೆ ಆಗ್ರಹಿಸಿ ಕಾಂಗ್ರೆಸ್ ನಡೆಸುತ್ತಿರುವ ಪಾದಯಾತ್ರೆಯು ಅಕ್ರಮವಾಗಿ ಸಂಪಾದಿಸಿರುವ ಸಂಪತ್ತಿನ ಕುರೂಪಿ ಪ್ರದರ್ಶನ

ವಿ.ಶ್ರೀನಿವಾಸ ಪ್ರಸಾದ್, ಬಿಜೆಪಿ ಸಂಸದ

'ಕೌಟುಂಬಿಕ ಕಾಯ್ದೆಯಡಿ ಜೀವನಾಂಶ ಹೆಚ್ಚಳ ಸಾಧ್ಯವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪತಿಯಿಂದ ಪರಿತ್ಯಕ್ತಗೊಂಡ ಮಹಿಳೆಗೆ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ - 2015ರ ಅಡಿ ನಿಗದಿಪಡಿಸಲಾದ ಜೀವನಾಂಶವನ್ನು ಅಪರಾಧ ದಂಡ ಸಂಹಿತೆ (ಸಿಆರ್‌ಪಿಸಿ) ಕಲಂ 127ರ ಅಡಿಯಲ್ಲಿ ಹೆಚ್ಚಳ ಮಾಡಲು ಸಾಧ್ಯವಿಲ್ಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಕುರಿತಂತೆ ಶಿವಾನಂದ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.



'ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿ ಜೀವನಾಂಶ ನಿಗದಿಪಡಿಸಿದರೆ ಅದೇ ಕಾಯ್ದೆಯಲ್ಲಿ ಅದರ ಹೆಚ್ಚಳಕ್ಕೆ ಅವಕಾಶವಿಲ್ಲ. ಸಿಆರ್‌ಪಿಸಿಯಲ್ಲಿ ಜೀವನಾಂಶ ನಿಗದಿಯಾಗಿದ್ದರೆ ಮಾತ್ರ ಅದೇ ಕಾಯ್ದೆಯ ಬೇರೆ ಕಲಂನಲ್ಲಿ ಹೆಚ್ಚಳಕ್ಕೆ ಅವಕಾಶವಿದೆ. ಹೀಗಾಗಿ ಈ ಪ್ರಕರಣದಲ್ಲಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಹೊರಡಿಸುವ ಆದೇಶ ಕಾನೂನು ಬಾಹಿರವಾಗಿದೆ' ಎಂದು ನ್ಯಾಯಪೀಠ ಹೇಳಿದೆ.

ವಿಶ್ವನಾಥ್ ಮನೆ ಸ್ವಚ್ಛಗೊಳಿಸಿದ ಮುಸ್ಲಿಂ ಯುವಕರು

ಒಂದನೇ ಪುಟದಿಂದ

'ನಗರದ ಶ್ಯಾಮ್ ಅವರ ಬಳಿ ಕೆಲಸ ಮಾಡುತ್ತಿರುವೆ. ಮನೆಗಳಿಗೆ ಬಣ್ಣ ಬಳಿಯುವ ಕಾಯಕದಿಂದಲೇ ಜೀವನ ಸಾಗಿಸುತ್ತಿರುವೆ. ಇಲ್ಲಿಗೆ ಬಂದು ಮನೆಯನ್ನು ನೋಡಿದೆ. ಮನೆಯ ಮೇಲೆ, ಒಳಗೆ ಸಾಕಷ್ಟು ಮಣ್ಣು ಕೂತಿದೆ. ಸ್ವಚ್ಛಗೊಳಿಸದೆ ಎರಡು ವರ್ಷಗಳಾಗಿವೆ. ಮನೆಯ ಚಾವಣಿ ಮೇಲೆ ಸಂಗ್ರಹವಾಗಿರುವ ದೂಳನ್ನು ಸಚ್ಛಗೊಳಿಸುತ್ತಿದ್ದೇವೆ. ಮೀನಾಕ್ಷಮ್ಮ ಅವರ ಸ್ಥಿತಿ ನೋಡಿ ಮರುಕ ಬರುತ್ತದೆ. ಜಾತಿ, ಧರ್ಮ ಯಾವುದೇ ಇರಲಿ; ಮನುಷ್ಯತ್ವ ಮುಖ್ಯ' ಎಂದು ಜಬೀಉಲ್ಲಾ ಹೇಳುತ್ತಾರೆ.

ಶಿಕ್ಷಣಕ್ಕೆ ನೆರವು ನೀಡಿದ ನಟ ಪ್ರಥಮ್: ನಟ ಪ್ರಥಮ್, ಧ್ರುವ ಸರ್ಜಾ, ಮತ್ತಿತರ ಕಲಾವಿದರು ₹ 50 ಸಾವಿರ ಠೇವಣಿ ಹಣವನ್ನು ವಿಶ್ವನಾಥ ಶೆಟ್ಟಿ ಅವರ ಪುತ್ರ ಆದಿತ್ಯನ ವಿದ್ಯಾಭ್ಯಾಸಕ್ಕೆ ನೀಡಿದ್ದಾರೆ. ಎಂ.ಶ್ರೀಕಾಂತ್ ಅವರು ಮನೆಗೆ ವಿದ್ಯುತ್, ನಲ್ಲಿ ಸಂಪರ್ಕ ಕಲ್ಪಿಸಿಕೊಟ್ಟಿದ್ದಾರೆ. ಸ್ವಚ್ಛತಾ ಕಾರ್ಯಕ್ಕೆ ನೆರವಾಗಿದ್ದಾರೆ. ಕರವೇ ಯುವ ಸೇನೆ ಅಧ್ಯಕ್ಷ ಕಿರಣ್‌ಕುಮಾರ್ ಅಡುಗೆ ಅನಿಲ ಸಂಪರ್ಕ, ದಿನಸಿ ಕೊಡಿಸಿದ್ದಾರೆ. ತಮ್ಮ ಪರಿಚಯವನ್ನೇ ಮಾಡಿಕೊಳ್ಳದ ದಾನಿಯೊಬ್ಬರು ಅವರ ಮನೆಗೆ ಬಂದು ಮೀನಾಕ್ಷಮ್ಮ ಅವರಿಗೆ ₹ 10 ಸಾವಿರ ನಗದು ನೀಡಿ ಹೋಗಿದ್ದಾರೆ.

'ದೃಢಸಂಕಲ್ಪದ ಭಕ್ತಿಯಿಂದ ದೇವರ ಸಾಕ್ಷಾತ್ಕಾರ'

ಪ್ರಜಾವಾಣಿ ವಾರ್ತೆ

ಉಜಿರೆ: 'ಪರಿಶುದ್ಧ ಮನಸ್ಸಿನಿಂದ, ಪಂಚೇಂದ್ರಿಯಗಳ ನಿಯಂತ್ರಣದೊಂದಿಗೆ ವಿಕಲ್ಪವಿಲ್ಲದೆ ದೃಢಸಂಕಲ್ಪದಿಂದ ಮಾಡುವ ಭಕ್ತಿಗೆ ವಿಶೇಷ ಶಕ್ತಿಯಿದ್ದು, ದೇವರ ಸಾಕ್ಷಾತ್ಕಾರವಾಗಿ ಭಕ್ತರು ವಿಶೇಷ ಅನುಗ್ರಹಕ್ಕೆ ಪಾತ್ರರಾಗುತ್ತಾರೆ' ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಹೇಳಿದರು.

ಸೋಮವಾರ ಧರ್ಮಸ್ಥಳದಲ್ಲಿ ಪ್ರವಚನ ಮಂಟಪದಲ್ಲಿ ಶಿವರಾತ್ರಿ ಸಂದರ್ಭ ಪಾದಯಾತ್ರೆಯಲ್ಲಿ ಬಂದ ಭಕ್ತರನ್ನು ಗೌರವಿಸಿ ಅವರು ಮಾತನಾಡಿದರು.

'ನಿತ್ಯವೂ ನಿಗದಿತ ಸಮಯದಲ್ಲಿ ದೇವರ ಭಕ್ತಿ, ಧ್ಯಾನ, ಪ್ರಾರ್ಥನೆ ಮಾಡಿದಲ್ಲಿ ಎಲ್ಲ ಸಮಸ್ಯೆಗಳು ಸುಲಲಿತವಾಗಿ ಪರಿಹಾರವಾಗುತ್ತವೆ. ದೇವರು ಸದಾ ಭಕ್ತರ ಜೊತೆಯಲ್ಲೇ ಇರುತ್ತಾರೆ' ಎಂದರು.

ಪ್ರತಿವರ್ಷವೂ ದೃಢಸಂಕಲ್ಪದೊಂದಿಗೆ ಜಾತಿ, ಮತ, ಅಂತಸ್ತಿನ ಭೇದ–ಭಾವ ಮರೆತು ದೈಹಿಕ ಶ್ರಮದೊಂದಿಗೆ ಶಿವರಾತ್ರಿ ಸಂದರ್ಭ ಧರ್ಮಸ್ಥಳಕ್ಕೆ ಬರುವ ಪಾದಯಾತ್ರಿಗಳು ಮಂಜುನಾಥ ಸ್ವಾಮಿಯ ಪರಮ ಭಕ್ತರಾಗಿದ್ದು, ವಿಶೇಷ ಅನುಗ್ರಹಕ್ಕೆ ಪಾತ್ರರಾಗುತ್ತಾರೆ ಎಂದು ಹೇಳಿದರು.

ಪಾದಯಾತ್ರೆಯ ಮಾರ್ಗದರ್ಶಕ ಬೆಂಗಳೂರಿನ ಹನುಮಂತಪ್ಪ ಸ್ವಾಮೀಜಿ, ಹಾಸನದ ಸಂದೇಶ ಗೌಡ, ರಂಗೇಗೌಡ, ಸಿದ್ದಪ್ಪ ಗೌಡ, ಮೋಹನ ಗೌಡ, ಸುರೇಶ ಗೌಡ ಮೊದಲಾದವರನ್ನು ಗೌರವಿಸಲಾಯಿತು. ಪಾದಯಾತ್ರಿಗಳ ವತಿಯಿಂದ ಹೆಗ್ಗಡೆ ಅವರನ್ನು ಅಭಿನಂದಿಸಲಾಯಿತು.



ಧರ್ಮಸ್ಥಳದಲ್ಲಿ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರು ಸೋಮವಾರ ಪಾದಯಾತ್ರಿಗಳನ್ನು ಗೌರವಿಸಿ ಮಾತನಾಡಿದರು

ಪರೀಕ್ಷೆ ಬರೆಯದೇ ಹಿಂತಿರುಗಿದ ವಿದ್ಯಾರ್ಥಿನಿಯರು

ಶಿವಮೊಗ್ಗ: ಹಿಜಾಬ್ ಧರಿಸಲು ಅವಕಾಶ ನೀಡದ ಕಾರಣ ಡಿವಿಎಸ್ ಪಿಯು ಕಾಲೇಜಿನ 20 ವಿದ್ಯಾರ್ಥಿನಿಯರು ಸೋಮವಾರ ಪ್ರಾಯೋಗಿಕ ಪರೀಕ್ಷೆ ಬಹಿಷ್ಕರಿಸಿ ಮನೆಗೆ ಮರಳಿದರು.

ಬಜರಂಗದಳದ ಕಾರ್ಯಕರ್ತ ಹರ್ಷ ಹತ್ಯೆಯ ನಂತರ ಒಂದು ವಾರ ನಗರದ ಪಾಲಿಕೆ ವ್ಯಾಪ್ತಿಯ ಶಾಲಾ, ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಸೋಮವಾರ ಶಾಲಾ, ಕಾಲೇಜುಗಳು ಪುನರಾರಂಭವಾದರೂ ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳ ಹಾಜರಾತಿ ಅತ್ಯಂತ ಕಡಿಮೆ ಇತ್ತು. ಡಿವಿಎಸ್ ಕಾಲೇಜಿಗೆ ಬಂದಿದ್ದ ವಿದ್ಯಾರ್ಥಿನಿಯರು ಹಿಜಾಬ್ ತೆಗೆಯಲು ನಿರಾಕರಿಸಿದರು. ಆವರಣದಲ್ಲೇ ಸ್ವಲ್ಪ ಸಮಯ ಕಳೆದರು. ನಿಷೇಧಾಜ್ಞೆ ಕಾರಣ ಗುಂಪುಗೂಡದಂತೆ ಪೊಲೀಸರು ತಾಕೀತು ಮಾಡಿದರು. ನಂತರ ವಿದ್ಯಾರ್ಥಿನಿಯರು ಮನೆಗೆ ಮರಳಿದರು.

ನಿಷೇಧಾಜ್ಞೆ ಮುಂದುವರಿಕೆ: ನಗರದಲ್ಲಿ ಕರ್ಫ್ಯೂ ತೆರವಾಗಿದ್ದರೂ, ನಿಷೇಧಾಜ್ಞೆ ಮುಂದುವರಿದಿದೆ. ಬೆಳಿಗ್ಗೆ 6ರಿಂದ ಸಂಜೆ 7ರ ವರೆಗೆ ವ್ಯಾಪಾರ–ವಹಿವಾಟಿಗೆ ಅವಕಾಶ ನೀಡಲಾಗಿದೆ. ಶಿವರಾತ್ರಿ ಪ್ರಯುಕ್ತ ಸೂಕ್ಷ್ಮ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ.

ದ್ವಿತೀಯ ಪಿಯು ಪ್ರಾಯೋಗಿಕ ಪರೀಕ್ಷೆ ಬರೆಯದೆ ಕೆಲವು ವಿದ್ಯಾರ್ಥಿನಿಯರು ಕಾಲೇಜಿನಿಂದ ಹೊರನಡೆದ ಘಟನೆಗಳು ವರದಿಯಾಗಿವೆ.

'ಪರೀಕ್ಷೆಗೆ ಅವಕಾಶ ನಿರಾಕರಿಸಬೇಡಿ'

ಬೆಂಗಳೂರು: ಹಿಜಾಬ್ ಕಾರಣವನ್ನು ಮುಂದಿಟ್ಟುಕೊಂಡು ಮುಸ್ಲಿಂ ವಿದ್ಯಾರ್ಥಿನಿಯರಿಗೆ ಪರೀಕ್ಷೆ ಬರೆಯಲು ಅವಕಾಶ ನಿರಾಕರಿಸಬಾರದು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಆಗ್ರಹಿಸಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷೆ ದೇವಿ ಮತ್ತು ಪ್ರಧಾನ ಕಾರ್ಯದರ್ಶಿ ಗೌರಮ್ಮ, 'ಮುಸ್ಲಿಂ ವಿದ್ಯಾರ್ಥಿನಿಯರು ಪರೀಕ್ಷೆ ಬರೆಯುವ ಅವಕಾಶದಿಂದ ವಂಚಿತರಾಗದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದರು.

'ರಾಜ್ಯದಲ್ಲಿ ಶಿಕ್ಷಣ ಮುಂದುವರಿಕೆಗೆ ಪದವಿಪೂರ್ವ ಪರೀಕ್ಷೆಗಳು ನಿರ್ಣಾಯಕ ಘಟ್ಟ. ಇಡೀ ವರ್ಷದ ಕಲಿಕೆಯ ಕೊನೆಯ ಘಟ್ಟವಾದ ಪರೀಕ್ಷೆಗಳನ್ನು ಬರೆಯಲು ಮುಸ್ಲಿಂ ವಿದ್ಯಾರ್ಥಿನಿಯರಿಗೆ ಅವಕಾಶ ನಿರಾಕರಿಸುವುದು ಸರಿಯಲ್ಲ. ಅನಗತ್ಯ ವಿವಾದ ಸೃಷ್ಟಿಸಿ ಮುಸ್ಲಿಂ ವಿದ್ಯಾರ್ಥಿನಿಯರನ್ನು ಪದವಿ ಶಿಕ್ಷಣದಿಂದ ಹೊರದಬ್ಬಲಾಗುತ್ತಿದೆ' ಎಂದು ದೂರಿದ್ದಾರೆ.

'ಈಗ ನ್ಯಾಯಾಲಯದ ತೀರ್ಪಿಗಾಗಿ ಕಾಯಲಾಗುತ್ತಿದೆ. ಈ ಮಧ್ಯದಲ್ಲೇ ಪರೀಕ್ಷೆ ನಡೆಸುವುದು ಅನಿವಾರ್ಯ ಎನಿಸಿದರೆ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಪರೀಕ್ಷೆಗಳನ್ನು ಬರೆಯಲು ಅವಕಾಶ ಮಾಡಿಕೊಡಬೇಕು. ಇಲ್ಲವಾದರೆ ಪರೀಕ್ಷೆ ಮುಂದೂಡಬೇಕು' ಎಂದರು

'ಪರೀಕ್ಷೆ ಬರೆಯಲು ಅಡ್ಡಿ ಬೇಡ'

ಬೆಂಗಳೂರು: 'ಪರೀಕ್ಷಾ ಸಮಯ ಸಮೀಪಿಸುತ್ತಿರುವುದರಿಂದ ರಾಜ್ಯದ ಶಾಲಾ, ಕಾಲೇಜುಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಭದ್ರತೆ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಫ್ರಾಟರ್ನಿಟಿ ಮೂವ್‌ಮೆಂಟ್ ಆಫ್ ಇಂಡಿಯಾ ಸಂಘಟನೆ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ರಾಷ್ಟ್ರೀಯ ಮಂಡಳಿ ಸದಸ್ಯ ನಿಜಾಮುದ್ದೀನ್, 'ಹಿಜಾಬ್ ವಿವಾದ ಕುರಿತು ಕೋರ್ಟ್ ಮಧ್ಯಂತರ ಆದೇಶ ನೀಡಿದೆ. ಆದರೂ ಈ ಕುರಿತು ವಿದ್ಯಾರ್ಥಿನಿಯರಿಗೆ ತೊಂದರೆ ಮಾಡಲಾಗುತ್ತಿದೆ' ಎಂದರು.

ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಫ್ರೀನ್ ಫಾತಿಮಾ, 'ಮುಸ್ಲಿಂ ವಿದ್ಯಾರ್ಥಿನಿಯರು ಶಾಲಾ, ಕಾಲೇಜುಗಳಿಗೆ ಮರಳಲು ಸರ್ಕಾರ ವಿಶೇಷ ನಿಯಮಗಳನ್ನು ರೂಪಿಸಬೇಕು. ಅವರಿಗೆ ಯಾವುದೇ ತೊಂದರೆಗಳು ಆಗಬಾರದು' ಎಂದು ಒತ್ತಾಯಿಸಿದರು.

ಆಸ್ತಿ ತೆರಿಗೆ ಸಂಗ್ರಹದಲ್ಲೇ ₹ 500 ಕೋಟಿ ಅಕ್ರಮ ಪತ್ತೆ

ಒಂದನೇ ಪುಟದಿಂದ

ಬಹುರಾಷ್ಟ್ರೀಯ ಕಂಪನಿಗಳಿಗೆ ಸೇರಿದ ಕಟ್ಟಡಗಳು, ಕೆಲವು ಮಾಲ್‌ಗಳು ಮತ್ತು ಅಪಾರ್ಟ್‌ಮೆಂಟ್‌ಗಳಿಗೆ ಅಕ್ರಮವಾಗಿ ಸ್ವಾಧೀನ ಪ್ರಮಾಣಪತ್ರ (ಒ.ಸಿ) ನೀಡಿರುವುದು ದಾಖಲಾತಿಗಳ ಪರಿಶೀಲನೆ ವೇಳೆ ಕಂಡುಬಂದಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಭಾರಿ ಪ್ರಮಾಣದ ನಷ್ಟವಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ನಕಲಿ ಬಿಲ್ ಸೃಷ್ಟಿಸಿ ಲೂಟಿ: ಪಾಲಿಕೆಯ ಎಂಜಿನಿಯರಿಂಗ್ ವಿಭಾಗದಲ್ಲಿ ಒಂದೇ ಕಾಮಗಾರಿಗೆ ಹಲವು ಬಿಲ್‌ಗಳನ್ನು ಸೃಷ್ಟಿಸಿ, ಹಣ ಲೂಟಿ ಮಾಡಿರುವುದು ಪತ್ತೆಯಾಗಿದೆ. ಕೆಲವು ಕಡೆಗಳಲ್ಲಿ ಕಾಮಗಾರಿಯನ್ನೇ ನಡೆಸದೇ ಬಿಲ್ ಸೃಷ್ಟಿಸಿ, ಹಣ ಪಾವತಿಸಲಾಗಿದೆ ಎಂದು ತನಿಖಾ ತಂಡ ತಿಳಿಸಿದೆ.

ಕೆಲವು ಕಡೆಗಳಲ್ಲಿ ಟೆಂಡರ್ ಷರತ್ತುಗಳನ್ನು ಅನುಸರಿಸದೇ ಕಳಪೆ ಕಾಮಗಾರಿ ಮಾಡಿದ್ದರೂ, ಹೆಚ್ಚಿನ ಮೊತ್ತದ ಬಿಲ್ ಮಂಜೂರು ಮಾಡಿರುವುದಕ್ಕೆ ದಾಖಲೆಗಳು ಲಭ್ಯವಾಗಿವೆ ಎಂದು ಎಸಿಬಿ ಮಾಹಿತಿ ನೀಡಿದೆ.

ಸುಳ್ಳಾದ 'ಬ್ರಹ್ಮಾಂಡ' ರೇಡಿಯೊ ತರಂಗ ಸಂದೇಶ!

ಒಂದನೇ ಪುಟದಿಂದ

ಸಂಶೋಧನೆಯ ಲೇಖನವು ಅಂತರರಾಷ್ಟ್ರೀಯ ವಿಜ್ಞಾನ ಜರ್ನಲ್ 'ನೇಚರ್ ಆಸ್ಟ್ರಾನಮಿ'ಯಲ್ಲಿ ಪ್ರಕಟವಾಗಿದೆ.

'ನೀರಿನ ಮೇಲೆ ತೇಲುವ ಸಾಮರ್ಥ್ಯ ಹೊಂದಿರುವ ಸರಾಸ್-3 ನಿಂದ ಅಚ್ಚರಿಯ ಫಲಿತಾಂಶಗಳು ದೊರೆತಿವೆ. ಈ ಸಂಶೋಧನೆ ಮೂಲಕ ಅಮೆರಿಕದ ಎಂಐಟಿ ಮತ್ತು ಅರಿಜೋನಾದ ಸ್ಟೇಟ್ ಯೂನಿವರ್ಸಿಟಿ (ಎಎಸ್‌ಯು) ಸಂಶೋಧಕರು ರೇಡಿಯೊ ತರಂಗಗಳ ಕುರಿತು ಕೈಗೊಂಡಿದ್ದ ಪ್ರಯೋಗದ ಫಲಿತಾಂಶ ನಿಜವಲ್ಲ ಎಂಬುದು ಮಹತ್ವದ ಸಾಧನೆ' ಎಂದು ಸಂಸ್ಥೆಯ ನಿರ್ದೇಶಕ ಪ್ರೊ. ತರುಣ್ ಸೌರದೀಪ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಅಮೆರಿಕಾ ವಿಜ್ಞಾನಿಗಳ ಸಂಶೋಧನೆಯು ಜಗತ್ತಿನಾದ್ಯಂತ ಖಗೋಳ ವಿಜ್ಞಾನಿಗಳ ಸಮುದಾಯದಲ್ಲಿ ಅಪಾರ ಉತ್ಸಾಹವನ್ನೇ ಸೃಷ್ಟಿಸಿತ್ತು. ಈ ಆವಿಷ್ಕಾರವನ್ನು ಹಾರ್ವರ್ಡ್ ಖಗೋಳ ವಿಜ್ಞಾನಿ ಅವಿ ಲೋಬ್ ಅವರು ಎರಡು ನೊಬೆಲ್ ಪ್ರಶಸ್ತಿಗಳಿಗೆ ಅರ್ಹ ಎಂದು ಶ್ಲಾಘಿಸಿದ್ದರು. ಆದರೆ, ಈ ಸಂಶೋಧನೆಯ ಫಲಿತಾಂಶದ ದೃಢೀಕರಣಕ್ಕಾಗಿ ಖಗೋಳ ವಿಜ್ಞಾನಿಗಳ ಸಮುದಾಯ ಕಾಯುತ್ತಿತ್ತು. ನಮ್ಮ ಸಂಸ್ಥೆಯ ಖಗೋಳ ವಿಜ್ಞಾನಿಗಳು ವೈಜ್ಞಾನಿಕ ಪುರಾವೆಗಳ ಸಮೇತ ಅವರ ವಾದವನ್ನು ತಿರಸ್ಕರಿಸಿದ್ದಾರೆ' ಎಂದು ವಿವರಿಸಿದರು.

ಸಂಶೋಧನೆಯ ಬಗ್ಗೆ ವಿವರ ನೀಡಿದ ಸಂಸ್ಥೆಯ ಸಂಶೋಧನಾ ವಿಜ್ಞಾನಿ ಸೌರಭ್ ಸಿಂಗ್, 'ರೇಡಿಯೊ ತರಂಗಗಳನ್ನು ಪತ್ತೆ ಮಾಡಲು ಅಗತ್ಯವಾದ ನಿಖರತೆಯನ್ನು ಒದಗಿಸುವ ಹೊಸ ಪ್ರಯತ್ನವಾಗಿ ಸರಾಸ್ ರೇಡಿಯೊ ದೂರದರ್ಶಕವನ್ನು ಭಾರತದಲ್ಲಿ ವಿನ್ಯಾಸಗೊಳಿಸಿ, ನಿರ್ಮಿಸಿ ಮತ್ತು ಕಾರ್ಯರೂಪಕ್ಕೆ ತಂದಿರುವುದು ಹೆಮ್ಮೆಯ ವಿಷಯ' ಎಂದು ತಿಳಿಸಿದರು.

'ಹೈಡ್ರೋಜನ್ ಪರಮಾಣುಗಳಿಂದ 21 ಸೆಂಟಿ ಮೀಟರ್ ತರಂಗಾಂತರದಲ್ಲಿ (1.4 ಗಿಗಾ ಹರ್ಟ್ಸ್) ಹೊರಹೊಮ್ಮುವ ವಿಕಿರಣಗಳ ಅನ್ವೇಷಣೆ ಕೈಗೊಳ್ಳುವುದು ಈ ಉಪಕರಣದ ಮೂಲ ಉದ್ದೇಶ. ರೇಡಿಯೊ ದೂರದರ್ಶಕವನ್ನು ಹಲವು ಸ್ಥಳಗಳಲ್ಲಿ ಪರೀಕ್ಷೆ ಕೈಗೊಳ್ಳಲಾಯಿತು. ಮೊದಲ ಬಾರಿ ಅನಂತಪುರ ಜಿಲ್ಲೆಯ ಟಿಂಬಕ್ಟುನಲ್ಲಿ ಪರೀಕ್ಷೆ ನಡೆಸಲಾಯಿತು. ನಂತರ, ಭಾರತೀಯ ಖಗೋಳ ವೀಕ್ಷಣಾಲಯದ ನೆರವಿನಿಂದ ಲಡಾಕ್‌ನಲ್ಲಿ ಪ್ರಯೋಗ ಕೈಗೊಳ್ಳಲಾಯಿತು' ಎಂದು ಅವರು ವಿವರಿಸಿದರು.

ಸಂಶೋಧಕರ ತಂಡ

ಪ್ರೊ. ರವಿ ಸುಬ್ರಹ್ಮಣ್ಯನ್, ಪ್ರೊ. ಎನ್. ಉದಯಶಂಕರ್, ಡಾ. ಸೌರಭ ಸಿಂಗ್, ಟಿ. ಜಿಷ್ಣು ನಂಬಿಸ್ಸಾನ್, ಬಿ.ಎಸ್. ಗಿರೀಶ್, ಡಾ. ಎ. ರಘುನಾಥನ್, ಆರ್. ಸೋಮಶೇಖರ್, ಕೆ.ಎಸ್. ಶ್ರೀವಾಣಿ, ಡಾ. ಮಯೂರಿ ಸತ್ಯನಾರಾಯಣ ರಾವ್

ಸಂಶೋಧನೆಯು ಸವಾಲಿನಿಂದ ಕೂಡಿತ್ತು. 20 ವರ್ಷಗಳಿಂದ ಕೈಗೊಂಡಿದ್ದ ಪ್ರಯೋಗಗಳಿಂದ ಉತ್ತಮ ಫಲಿತಾಂಶ ದೊರೆತಿದೆ. ನಾವು ಸಾಗಬೇಕಾದ ದಾರಿ ಇನ್ನೂ ಇದೆ

ಪ್ರೊ. ರವಿ ಸುಬ್ರಹ್ಮಣ್ಯನ್, ವಿಜ್ಞಾನಿ

ಚಿಕ್ಕಬಳ್ಳಾಪುರದಲ್ಲಿ ಮೊದಲ ಪರೀಕ್ಷೆ

'ಸರಾಸ್ ದೂರದರ್ಶಕದ ಪರೀಕ್ಷೆಯನ್ನು 2020ರ ಆರಂಭದಲ್ಲಿ ಚಿಕ್ಕಬಳ್ಳಾಪುರದ ದಂಡಿಗಾನಹಳ್ಳಿ ಕೆರೆ ಪ್ರದೇಶದಲ್ಲಿ ಮತ್ತು ಶರಾವತಿ ಹಿನ್ನೀರಿನ ಪ್ರದೇಶಗಳಲ್ಲಿ ಕೈಗೊಳ್ಳಲಾಯಿತು. ಆಕಾಶದಿಂದ ಹೊರಹೊಮ್ಮುವ ರೇಡಿಯೊ ತರಂಗಗಳ ಮಾಹಿತಿಯನ್ನು ನಿಖರವಾಗಿ ಸಂಗ್ರಹಿಸಲು ಈ ಪ್ರಯೋಗಗಳು ನೆರವಾದವು' ಎಂದು ಸೌರಭ್ ಸಿಂಗ್ ಹೇಳಿದರು.

'ಈ ವಿಶ್ಲೇಷಣೆಗಳಲ್ಲಿ ಎಂಐಟಿ ಮತ್ತು ಎಎಸ್‌ಯು ಪ್ರಯೋಗಗಳಲ್ಲಿ ಕಂಡುಬಂದ ಸಂಕೇತಗಳ ಕುರಿತು ಯಾವುದೇ ಸಾಕ್ಷ್ಯಗಳು ದೊರೆಯಲಿಲ್ಲ. ಹೀಗಾಗಿ, ಈ ಬಗ್ಗೆ ಎಚ್ಚರಿಕೆಯಿಂದ ಮೌಲ್ಯಮಾಪನ ನಡೆಸಿ ಅಮೆರಿಕ ವಿಶ್ವವಿದ್ಯಾಲಯಗಳ ಸಂಶೋಧಕರ ಪ್ರಯೋಗವನ್ನು ತಿರಸ್ಕರಿಸಲಾಯಿತು. ಉಪಕರಣ ಮಾಪನದ ತಪ್ಪಿನಿಂದ ಕಂಡುಬಂದ ಸಂಕೇತಗಳನ್ನೇ ರೇಡಿಯೊ ತರಂಗಗಳೆಂದು ಅಮೆರಿಕದ ಸಂಶೋಧಕರು ಪರಿಗಣಿಸಿದ್ದಾರೆ' ಎಂದು ಅವರು ಹೇಳಿದರು.

ಪಶ್ಚಿಮವಾಹಿನಿ ಯೋಜನೆ ₹4,099 ಕೋಟಿ 'ಮಾಸ್ಟರ್ ಪ್ಲಾನ್'

ಶಿವಮೊಗ್ಗ ಜಿಲ್ಲೆಯ ಶರಾವತಿ, ಉಪನದಿಗಳ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಶ್ಚಿಮವಾಹಿನಿ ಯೋಜನೆ'ಗೆ ದಕ್ಷಿಣ ಕನ್ನಡ, ಉಡುಪಿ, ಕೊಡಗು ಉತ್ತರ ಕನ್ನಡ ಅಲ್ಲದೆ ಶಿವಮೊಗ್ಗ ಜಿಲ್ಲೆಯನ್ನೂ ಸೇರಿಸಿ ಒಟ್ಟು ₹4,099 ಕೋಟಿ ಮೊತ್ತದ ಮಾಸ್ಟರ್ ಪ್ಲಾನ್ ತಯಾರಿಸಲಾಗಿದೆ.

ಇದಕ್ಕಾಗಿ ಒಟ್ಟು 1,519 ಕಿಂಡಿ ಅಣೆಕಟ್ಟೆ, ಸೇತುವೆ ಸಹಿತ ಬ್ಯಾರೇಜ್ ಮತ್ತು ಉಪ್ಪುನೀರು ತಡೆ ಅಣೆಕಟ್ಟೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಣ್ಣ ನೀರಾವರಿ ಇಲಾಖೆ ನಿರ್ಧರಿಸಿದ್ದು, ಮುಂದಿನ ಐದು ವರ್ಷಗಳಲ್ಲಿ ಹಂತ ಹಂತವಾಗಿ ಕಾರ್ಯಗತಗೊಳಿಸಲಾಗುವುದು. ಶಿವಮೊಗ್ಗ ಜಿಲ್ಲೆಯ ಶರಾವತಿ ಮತ್ತು ಇದರ ಉಪನದಿಗಳ ಪ್ರದೇಶವನ್ನು ಈ ಯೋಜನೆಗೆ ಹೊಸದಾಗಿ ಸೇರ್ಪಡೆ ಮಾಡಲಾಗಿದೆ.

ಇದರಡಿ 171 ಕಿಂಡಿ ಅಣೆಕಟ್ಟೆ ಮತ್ತು ಸೇತುವೆ ಸಹಿತ ಬ್ಯಾರೇಜ್ ನಿರ್ಮಿಸಲು ₹111.75 ಕೋಟಿ ಪ್ರಸ್ತಾವನೆಯನ್ನು ಸಿದ್ಧಪಡಿಲಾಗಿದೆ ಎಂದು ಸಣ್ಣ ನೀರಾವರಿ ಇಲಾಖೆ ಮೂಲಗಳು ತಿಳಿಸಿವೆ.

ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪಶ್ಚಿಮಾಭಿ ಮುಖವಾಗಿ ಹರಿಯುವ ನದಿಗಳಲ್ಲಿ ಮಳೆಗಾಲದಲ್ಲಿ ಹೆಚ್ಚಿನ ನೀರು ಬಹುತೇಕವಾಗಿ ಬಳಕೆಯಾಗದೇ ಸಮುದ್ರ ಸೇರುತ್ತಿದೆ. ಈ ಪ್ರದೇಶದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿಗೂ ಸಮಸ್ಯೆ ಉಂಟಾಗುತ್ತಿದೆ. ಇಲ್ಲಿನ ಭೌಗೋಳಿಕ ಅಂಶಗಳು ಮತ್ತು ಮಣ್ಣಿನ ಗುಣಲಕ್ಷಣಗಳಿಂದ ಬೃಹತ್ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗದು. ಇಲ್ಲಿನ ನದಿಗಳಿಗೆ ಕಿಂಡಿ ಅಣೆಕಟ್ಟೆಗಳನ್ನು ನಿರ್ಮಿಸಿ ಮಳೆಗಾಲದ ಬಳಿಕ ನದಿ ಹರಿವಿನ ನೀರು ಸಂಗ್ರಹಿಸಿ ಅಕ್ಕಪಕ್ಕದ ರೈತರು ತಮ್ಮ ಹೊಲಗಳಿಗೆ ಪಂಪುಗಳ ಮೂಲಕ ನೀರು ಹಾಯಿಸಿ ನೀರಾವರಿ ಸೌಲಭ್ಯ ಕಲ್ಪಿಸಲು ಅನುಕೂಲವಾಗುತ್ತದೆ.

ಪಶ್ಚಿಮವಾಹಿನಿ ಯೋಜನೆಗಾಗಿ ಈ ಸಾಲಿನಲ್ಲಿ ₹505.50 ಕೋಟಿ ಮೀಸಲಿಡಲಾಗಿದ್ದು, ಪಶ್ಚಿಮವಾಹಿನಿ ಯೋಜನೆಯಡಿ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಮತ್ತು ಕೊಡಗು ಜಿಲ್ಲೆಗಳಿಗೆ ₹500 ಕೋಟಿ ಅಂದಾಜು ಮೊತ್ತದಲ್ಲಿ 343 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಈ ಕಾಮಗಾರಿಗಳ ಡಿಪಿಆರ್‌ಗಳನ್ನು ತಯಾರಿಸಿದ್ದು, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯೂ ಸಿಕ್ಕಿದೆ ಎಂದೂ ಮೂಲಗಳು ಹೇಳಿವೆ.

ಯೋಜನೆಗೆ ಸೇರಿರುವ ಜಿಲ್ಲೆ, ನದಿಗಳ ಪ್ರದೇಶ

- **ದಕ್ಷಿಣ ಕನ್ನಡ:** ನೇತ್ರಾವತಿ (ಉಪನದಿಗಳು ಕುಮಾರಧಾರಾ, ಗುಂಡ್ಯ ಹೊಳೆ, ಅಡ್ಡಹೊಳೆ, ಮಣಿನಾಲ್ಕೂರು, ಗೌರಿಹೊಳೆ, ಕಟ್ಟತ್ತಿಲ), ಶಾಂಭವಿ (ಉಪನದಿಗಳು ಪಾಲಡ್ಕ ಹೊಳೆ, ಕಾಂತಾವರ ಹೊಳೆ), ನಂದಿನಿ (ಉಪನದಿಗಳು ಸೂರಿಂಜೆ ಹೊಳೆ, ಕೊಂಡೆಮೂಲ ತೋಡು), ಫಲ್ಗುಣಿ (ಗುರುಪುರ) (ಉಪನದಿಗಳು ವೇಣೂರು ಹೊಳೆ, ಮೂಡುಕೋಣಾಜೆ ಹೊಳೆ), ತಲಪಾಡಿ ಹೊಳೆ, ಶಿರಿಯಾ, ಆನೆಕಲ್ಲು, ಪಯಸ್ವಿನಿ.
- **ಉಡುಪಿ:** ಸಂಕದಗುಂಡಿ ಹೊಳೆ(ಉಪನದಿಗಳು ಜಡ್ಕಲ್ ಹೊಳೆ, ಹಾಲಾಡಿ ಹೊಳೆ), ಎಡಮಾವಿನ ಹೊಳೆ, ಬೈಂದೂರು ಹೊಳೆ, ವಾರಾಹಿ (ಉಪನದಿಗಳು ಹಾಲಾಡಿ ಹೊಳೆ, ಬೇಳೂರು ಸಣ್ಣ ಹೊಳೆ, ವಂಡ್ಸೆ ಹೊಳೆ), ಚಕ್ರಾ, ಕೊಲ್ಲೂರು, ಸೀತಾ, ಸ್ವರ್ಣ ನದಿ (ಉಪನದಿಗಳು ಸಾಣೂರು ಹೊಳೆ, ಬಲ್ಲೆಬೈಲು ಹೊಳೆ), ಉದ್ಯಾವರ (ಉಪನದಿಗಳು ಹಿರೆಬೆಟ್ಟು ಹೊಳೆ, ಬಂಕೇರುಕಟ್ಟ ಹೊಳೆ), ಮಡಿಸಾಲು, ಶಾಂಭವಿ(ಉಪನದಿಗಳು ಎಣ್ಣೆಹೊಳೆ, ತೀರ್ಥಟ್ಟುಹೊಳೆ, ನಡ್ಸಾಲು ಹೊಳೆ), ಪಾಂಗಳ ಹೊಳೆ.
- **ಕೊಡಗು:** ಕುಮಾರಧಾರಾ, ಪಯಸ್ವಿನಿ
- **ಶಿವಮೊಗ್ಗ:** ಶರಾವತಿ
- **ಉತ್ತರಕನ್ನಡ:** ಕಾಳಿ, ಗಂಗಾವಳಿ, ಅಘನಾಶಿನಿ, ವರದಾ.

ಯಾವ ಜಿಲ್ಲೆಗೆ ಎಷ್ಟು ಯೋಜನೆಗಳು

ಜಿಲ್ಲೆ	ಕಾಮಗಾರಿ	ಅಂದಾಜು ಮೊತ್ತ (₹ಕೋಟಿಗಳಲ್ಲಿ)
ದಕ್ಷಿಣ ಕನ್ನಡ	446	1,511
ಉಡುಪಿ	424	1,025
ಕೊಡಗು	12	41
ಉತ್ತರ ಕನ್ನಡ	466	1,409.25
ಶಿವಮೊಗ್ಗ	171	112.75

ಬೊಳುವಾರು ಮಹಮ್ಮದ್ ಕುಂಞಿ ಅವರ 'ಮೋನುಸ್ಮೃತಿ' ಲೋಕಾರ್ಪಣೆ

ಬ್ಯಾರಿ ಸಮುದಾಯದ ತಲ್ಲಣ ಕಟ್ಟಿಕೊಟ್ಟ ಕೃತಿ

ಪ್ರಜಾವಾಣಿ ವಾರ್ತೆ

ಪುತ್ತೂರು: '22ಕ್ಕೂ ಅಧಿಕ ಕಥೆ–ಕಾದಂಬರಿಗಳನ್ನು ಬರೆದು, 28ಕ್ಕೂ ಅಧಿಕ ಪ್ರಶಸ್ತಿಗೆ ಪಾತ್ರರಾಗಿರುವ ಬೊಳುವಾರು ಮಹಮ್ಮದ್ ಕುಂಞಿ ಅವರ ಬದುಕು ಎಲ್ಲರಿಗೂ ಮಾದರಿ. ಅವರು 'ಮೋನುಸ್ಮೃತಿ' ಮೂಲಕ ಬ್ಯಾರಿ ಸಮುದಾಯದ ತಲ್ಲಣವನ್ನು ಸುಂದರವಾಗಿ ಕಟ್ಟಿಕೊಟ್ಟಿದ್ದಾರೆ' ಎಂದು ಲೇಖಕಿ ಫರ್ಝಾನ ಅಶ್ರಫ್ ಯು.ಟಿ. ತಿಳಿಸಿದರು.

ಪುತ್ತೂರಿನ ಬಹುವಚನಂನ ಪದ್ಮಿನಿ ಸಭಾಂಗಣದಲ್ಲಿ ಭಾನುವಾರ ನವಕರ್ನಾಟಕ ಪ್ರಕಾಶನ, ಬಹುವಚನಂ ಸಾಂಸ್ಕೃತಿಕ ಸಂಘಟನೆ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು 'ಮೋನುಸ್ಮೃತಿ' ಕೃತಿಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

'ಮೋನುಸ್ಮೃತಿಯನ್ನು ಸಂಪೂರ್ಣವಾಗಿ ಓದಿ ಮುಗಿಸಿದಾಗ ನನಗೆ ಮೊದಲು ಅನಿಸಿದ್ದು ಇಂತಹ ಒಬ್ಬ ಹರಾಮಿ ಅಣ್ಣ ನನಗೂ ಇರಬಾರದಾಗಿತ್ತಾ ಎಂದಾಗಿತ್ತು. ಬೊಳುವಾರು ಅವರು ತನ್ನ ಪ್ರಶ್ನಿಸುವ ಮನೋಭಾವ, ವ್ಯಕ್ತಿ ಸ್ವಾತಂತ್ರ್ಯ ಕಾಯ್ದುಕೊಳ್ಳುವುದರ ಜೊತೆಗೆ ಜೀವನದ ಹಾದಿಯಲ್ಲಿ ಪೊರೆದ ಆತ್ಮಗಳನ್ನು ನೆನಪಿಸಿಕೊಳ್ಳುವ ಕೆಲಸ ಮಾಡಿದ್ದಾರೆ. ಶಿಕ್ಷಣದ ಮೂಲಕ ಪ್ರತಿಭಾನ್ವಿತೆಯನ್ನು ಪಡೆಯಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಹತ್ತಿರ ಇದ್ದವರನ್ನು ಪೊರೆಯುವುದು ಕನ್ನಡ ನಾಡಿನ ಸಂಸ್ಕೃತಿಯಾಗಿದೆ. ಬೊಳುವಾರು ಅವರು ಈ ಭಾವನೆಯನ್ನು ಯಾವುದೇ ಕಾರಣಕ್ಕೂ ಬಲಿಕೊಡದೆ ಉಳಿಸಿಕೊಂಡಿದ್ದಾರೆ' ಎಂದರು.

ಸಾಹಿತಿ ಡಾ.ನರೇಂದ್ರ ರೈ ಕೃತಿ ಪರಿಚಯ ಮಾಡಿ, 'ಮೋನುಸ್ಮೃತಿಯ ಮೂಲಕ ಬೊಳುವಾರು ಅವರು ಸುಂದರ ಭಾರತವನ್ನು ಕಟ್ಟಿ ಕೊಟ್ಟಿದ್ದಾರೆ. ಮೋನು ಸ್ಮೃತಿಯಲ್ಲಿ ಗಾಂಧಿಯ ಭಾರತವಿದೆ. ಎಲ್ಲರೂ ಬದುಕುವ ಭಾರತವನ್ನು ನಾಟಕದಲ್ಲಿ ಕತೆಯಲ್ಲಿ ಸಾಹಿತ್ಯ ಕೃತಿಯಲ್ಲಿ ತೋರಿಸಿಕೊಟ್ಟಿದ್ದಾರೆ. ಇಡೀ ಕೃತಿಯಲ್ಲಿ ವಿಧೇಯತೆ, ವಿನಯತೆ ಇದೆ. ಮುತ್ತುಪ್ಪಾಡಿ ಒಂದು ಬಹುತ್ವದ ಭಾರತ. ನಾಗರಿಕತೆ ಗುರುತಿಸುವುದು ಕಟ್ಟಡದ ಎತ್ತರದಿಂದಲ್ಲ. ಎತ್ತರದ ಮನುಷ್ಯರಿಂದ. ಬದಲಾಗುವ ಭಾರತವೆಂದರೆ ಭೂಗೋಳ ಅಲ್ಲ. ಆದು ಭಾವಗೋಳ ಬಹುಸಂಸ್ಕೃತಿಯ ಭಾಗವಾಗಿರುವ ಭಾರತವನ್ನು ಮೋನುಸ್ಮೃತಿಯಲ್ಲಿ ತೋರಿಸಿದ್ದಾರೆ' ಎಂದು ತಿಳಿಸಿದರು.

ಕೃತಿಕಾರ ಬೊಳುವಾರು ಮಹಮ್ಮದ್ ಕುಂಞ ಅವರು, 'ನನ್ನ ಆತ್ಮಕಥೆಯಲ್ಲಿ ಒಂದೂ ಸುಳ್ಳು ಬರೆದಿಲ್ಲ. ನನಗೆ ಶಿಕ್ಷಣ ನೀಡುವಲ್ಲಿ ಕಡಬಕಾರ್ ಅಬ್ದುಲ್ ಖಾದರ್ ಹಾಜಿ ಅವರ ಶ್ರಮವಿದೆ. ನನ್ನ ಮೊದಲ ಕೃತಿಯನ್ನು ಅಪ್ಪಿ ಬಾಯಿ ಟೀಚರ್‌ಗೆ ಅರ್ಪಿಸಿದ್ದೆ. ನನ್ನನ್ನು ಶಾಲೆಗೆ ಸೇರಿಸಿ ಶಿಕ್ಷಣ ಕಲಿಯುವಂತೆ ಪ್ರೇರೇಪಿಸಿದ್ದು ಮತ್ತು ನಮಾಝ್ ಮಾಡಲು ಕಲಿಸಿದ್ದು ನನ್ನ ಅಪ್ಪ' ಎಂದು ನೆನಪಿಸಿಕೊಂಡರು.

ಬೊಳುವಾರು ಮಹಮ್ಮದ್ ಕುಂಞಿ ದಂಪತಿಯನ್ನು ಗೌರವಿಸಲಾಯಿತು. ಬಹುವಚನಂನ ಡಾ.ಶ್ರೀಶ ಕುಮಾರ್ ಎಂ.ಕೆ.ಅಧ್ಯಕ್ಷತೆ ವಹಿಸಿದ್ದರು. ಬೊಳುವಾರು ಮಹಮ್ಮದ್ ಕುಂಞಿ ಅವರ ಸಹೋದರ, ರಂಗಕರ್ಮಿ, ಐಕೆ ಬೊಳುವಾರು ಸ್ವಾಗತಿಸಿದರು.



ಪುತ್ತೂರಿನಲ್ಲಿ ನವಕರ್ನಾಟಕ ಪ್ರಕಾಶನ ಮತ್ತು ಬಹುವಚನಂ ಸಾಂಸ್ಕೃತಿಕ ಸಂಘಟನೆಯ ಸಹಯೋಗದಲ್ಲಿ ಭಾನುವಾರ ನಡೆದ ಬೊಳುವಾರು ಮಹಮ್ಮದ್ ಕುಂಞಿ ಅವರ 'ಮೋನುಸ್ಮೃತಿ' ಕೃತಿ ಲೋಕಾರ್ಪಣಾ ಸಮಾರಂಭದಲ್ಲಿ ಬೊಳುವಾರು ಶಾಲೆಯ ಶಿಕ್ಷಕಿ ನಿವೇದಿತಾ, ಪರಮೇಶ್ವರಿ ಅವರ ಮೊಮ್ಮಗ ಪ್ರಸಾದ್ ಕೌಶಲ್ ಶೆಟ್ಟಿ, ವೆಂಕಪ್ಪ ಗೌಡ ಅವರ ಪುತ್ರ ವಸಂತ ಮತ್ತು ಕಾಲೇಜು ಓದಿಸಿದ್ದ ಹಾಜಿ ಕಡಬಕಾರ್ ಅಬ್ದುಲ್ ಖಾದರ್ ಅವರ ಪುತ್ರ ಶಾಹುಲ್ ಹಮೀದ್ ಅವರನ್ನು ಗೌರವಿಸಲಾಯಿತು

ವಿದ್ಯಾರ್ಥಿಗಳ ಪ್ರಯಾಣ ಆರಂಭ

ಹರಪನಹಳ್ಳಿ: ಉಕ್ರೇನ್‌ನಲ್ಲಿ ಸಿಲುಕಿರುವ ತಾಲ್ಲೂಕಿನ ನಾಲ್ಕು ವಿದ್ಯಾರ್ಥಿಗಳು ರೈಲು, ಸಾರಿಗೆ ಬಸ್ ಮೂಲಕ ರೊಮೇನಿಯಾ ಮತ್ತು ಹಂಗೆರಿಯತ್ತ ಪ್ರಯಾಣ ಆರಂಭಿಸಿದ್ದಾರೆ.

ಇಬ್ಬರು ವಿದ್ಯಾರ್ಥಿಗಳು ಒಂದೇ ರೈಲಿನಲ್ಲಿ, ಮತ್ತಿಬ್ಬರು ಪ್ರತ್ಯೇಕವಾಗಿ ಪ್ರಯಾಣ ಬೆಳೆಸಿದ್ದಾರೆ. ಗುರುತಿನ ಪತ್ರ ಇದ್ದವರಿಗೆ ಸಿಗುತ್ತಿರುವ ಆಹಾರವನ್ನು ಪರಸ್ಪರ ಹಂಚಿಕೊಂಡು ತಿನ್ನುತ್ತಿರುವ ಸಂಗತಿಯನ್ನು ವಿದ್ಯಾರ್ಥಿಗಳು ತಮ್ಮ ಪಾಲಕರ ಬಳಿ ಹಂಚಿಕೊಂಡಿದ್ದಾರೆ.

ಕೊಲೆ: ಮಾಜಿ ಶಾಸಕರ ಪುತ್ರ ಸೇರಿ 8 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಮಳವಳ್ಳಿ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಪಂಡಿತಹಳ್ಳಿ ಬಳಿ ಫೆ.9ರಂದು ಕಂಡು ಬಂದಿದ್ದ ಅಪರಿಚಿತ ಶವ ಪತ್ತೆ ಪ್ರಕರಣ ಭೇದಿಸಿರುವ ಪೊಲೀಸರು ಕೆ.ಆರ್. ಪೇಟೆ ಕ್ಷೇತ್ರದ ಮಾಜಿ ಕಾಂಗ್ರೆಸ್ ಶಾಸಕ ಕೆ.ಬಿ. ಚಂದ್ರಶೇಖರ್ ಪುತ್ರ ಶ್ರೀಕಾಂತ್ ಸೇರಿದಂತೆ 8 ಆರೋಪಿಗಳನ್ನು ಸೋಮವಾರ ಬಂಧಿಸಿದ್ದಾರೆ.

ರೈಸ್‌ಪುಲ್ಲಿಂಗ್ ವ್ಯವಹಾರಕ್ಕೆ ಸಂಬಂಧಿಸಿ, ಕೊಳ್ಳೇಗಾಲ ಮೂಲದ ಸಲೀಂ (40) ಅವರನ್ನು ಮೈಸೂರು ತಾಲ್ಲೂಕು ಇಲವಾಲದಲ್ಲಿ ಕೊಲೆ ಮಾಡಿ ರಸ್ತೆ ಬದಿ ಬಿಸಾಡಲಾಗಿತ್ತು. ನಂತರ ಕೆ.ಆರ್.ಪೇಟೆ ಮೂಲದ ಮೂವರು ತಾವೇ ಕೊಲೆ ಮಾಡಿದ್ದಾಗಿ ಹೇಳಿ ಶರಣಾಗಿದ್ದರು. ಈ ಬಗ್ಗೆ ಶಂಕೆಯಿದ್ದ ಪೊಲೀಸರು ತನಿಖೆಯನ್ನು ತೀವ್ರಗೊಳಿಸಿದ್ದರು.

ಪ್ರಭಾವಿಯಾಗಿದ್ದ ಶ್ರೀಕಾಂತ್ ಆರೋಪದಿಂದ ಪಾರಾಗಲು ಮೂವರು ಶರಣಾಗುವಂತೆ ಮಾಡಿ, ತಪ್ಪಿಸಿಕೊಳ್ಳಲು ಯತ್ನಿಸಿದ್ದ. ತನಿಖೆಯಲ್ಲಿ ಆರೋಪ ಬಯಲಾಗಿದ್ದು ಶ್ರೀಕಾಂತ್ ಸೇರಿದಂತೆ ಗ್ರಾಮಪಂಚಾಯಿತಿ ಮಾಜಿ ಸದಸ್ಯ ಕುಮಾರ್, ಬೆಂಗಳೂರಿನ ವಜ್ರಮಣಿ, ಪುನೀತ್, ಆನಂದ್, ಹಾಸನದ ಸೋಮಶೇಖರ್ ಸೇರಿ 8 ಮಂದಿ ಬಂಧಿಸಿದ್ದಾರೆ.

ಸರ್ಕಲ್ ಇನ್‌ಸ್ಪೆಕ್ಟರ್ ಸಹಾಯ: 'ಶವವನ್ನು ಮಳವಳ್ಳಿ ಭಾಗದಲ್ಲಿ ಬಿಸಾಡುವ ಬಗ್ಗೆ ಶ್ರೀಕಾಂತ್‌ಗೆ ಹಾಗೂ ಸಹಚರರಿಗೆ ಸರ್ಕಲ್ ಇನ್‌ಸ್ಪೆಕ್ಟರ್‌ವೊಬ್ಬರು ಸಹಾಯ ಮಾಡಿದ್ದರು' ಎಂಬ ಅಂಶ ಬೆಳಕಿಗೆ ಬಂದಿದೆ.

ಸಿಪಿಐ ಅಮಾನತು: ಶವವನ್ನು ಮಳವಳ್ಳಿ ಭಾಗದಲ್ಲಿ ಬಿಸಾಡಲು ಶ್ರೀಕಾಂತ್‌ಗೆ ಸರ್ಕಲ್ ಇನ್‌ಸ್ಪೆಕ್ಟರ್ ಧನರಾಜ್ ಸಹಾಯ ಮಾಡಿದ್ದರು ಎಂಬ ಆರೋಪ ಕೇಳಿಬಂದಿದ್ದು ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

'ಆರೋಪಿಗಳಿಗೆ ನೆರವು ಆರೋಪದಡಿ ಸಿಪಿಐಅವರನ್ನು ಅಮಾನತು ಮಾಡಲಾಗಿದೆ. ಸಾಕ್ಷ್ಯ ಸಂಗ್ರಹಿಸುತ್ತಿದ್ದು ಅವಶ್ಯವಿದ್ದರೆ ಬಂಧಿಸಿ ವಿಚಾರಣೆ ಮಾಡಲಾಗುವುದು' ಎಂದು ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ತಿಳಿಸಿದರು.

ರಾಜಾ ಭಯ್ಯಾ ವಿರುದ್ಧ ದೂರು ದಾಖಲು

ಲಖನೌ (ಪಿಟಿಐ): ಉತ್ತರ ಪ್ರದೇಶದ ಮಾಜಿ ಸಚಿವ, ಪಕ್ಷೇತರ ಅಭ್ಯರ್ಥಿ ರಘುರಾಜ್ ಪ್ರತಾಪ್ ಸಿಂಗ್ ಅಲಿಯಾಸ್ ರಾಜಾ ಭಯ್ಯಾ ಹಾಗೂ ಇತರ 17 ಮಂದಿಯ ಮೇಲೆ ದೂರು ದಾಖಲಾಗಿದೆ. ಸಮಾಜವಾದಿ ಪಕ್ಷದ ಮತಗಟ್ಟೆ ಏಜೆಂಟ್ ಒಬ್ಬರನ್ನು ಥಳಿಸಿದ ಆರೋಪ ಇವರ ಮೇಲೆ ಇದೆ.

ಫೆ. 27ರಂದು ಐದನೇ ಹಂತದ ಮತದಾನದ ಸಂದರ್ಭದಲ್ಲಿ ರಾಕೇಶ್ ಕುಮಾರ್ ಪಾಸಿ ಅವರ ಮೇಲೆ ಹಲ್ಲೆ ಆಗಿತ್ತು. ಅವರನ್ನು ಎಳೆದೊಯ್ದು ಹಲ್ಲೆ ಮಾಡಿದ್ದರು ಎಂದು ಆರೋಪಿಸಲಾಗಿದೆ.

ರಾಜ್‌ಭರ್, ಚೌಹಾನ್, ಮೌರ್ಯ ಸಮುದಾಯಗಳ ಬೆಂಬಲ ಯಾರಿಗೆ?

ಬಿಜೆಪಿಯ ಒಬಿಸಿ ಮತಬ್ಯಾಂಕ್ ಛಿದ್ರ?

• ಸಂಜಯ ಪಾಂಡೆ

ಆಜಂಗಡ: ಉತ್ತರ ಪ್ರದೇಶದಲ್ಲಿ 2017ರಲ್ಲಿ ಅಧಿಕಾರಕ್ಕೆ ಏರಲು ಬಿಜೆಪಿಗೆ ಇತರ ಹಿಂದುಳಿದ ವರ್ಗಗಳ (ಒಬಿಸಿ) ಮತಬ್ಯಾಂಕ್ ನೆರವಾಗಿತ್ತು. ಆದರೆ, ಈ ಬಾರಿ ಬಿಜೆಪಿಯ ಒಬಿಸಿ ಮತಬ್ಯಾಂಕ್ ಛಿದ್ರವಾದಂತೆ ಕಾಣಿಸುತ್ತಿದೆ. ಹಾಗಾಗಿ, ಮಾರ್ಚ್ 3 ಮತ್ತು 7ರಂದು ಮತದಾನ ನಡೆಯಲಿರುವ ರಾಜ್ಯದ ಪೂರ್ವ ಭಾಗದ ಕ್ಷೇತ್ರಗಳಲ್ಲಿ ಬಿಜೆಪಿಗೆ ದೊಡ್ಡ ಸವಾಲು ಎದುರಾಗಿದೆ.

ಕಳೆದ ಚುನಾವಣೆಯಲ್ಲಿ ಬಿಜೆಪಿ ಸಣ್ಣ ಮತ್ತು ಜಾತಿ ಆಧಾರಿತ ಪಕ್ಷಗಳ ಜತೆಗೆ ಮೈತ್ರಿ ಮಾಡಿಕೊಂಡಿತ್ತು. ಸುಹೇಲ್‌ದೇವ್ ಭಾರತೀಯ ಸಮಾಜ ಪಾರ್ಟಿ (ಎಸ್‌ಬಿಎಸ್‌ಪಿ), ಅಪ್ನಾ ದಳ (ಎಡಿ) ಬಿಜೆಪಿಯ ಜತೆಗೆ ಇದ್ದವು. ಬಿಎಸ್‌ಪಿಯಲ್ಲಿದ್ದ ಒಬಿಸಿಯ ಪ್ರಭಾವಿ ನಾಯಕರಾದ ಸ್ವಾಮಿ ಪ್ರಸಾದ್ ಮೌರ್ಯ ಮತ್ತು ದಾರಾ ಸಿಂಗ್ ಚೌಹಾನ್ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಬಿಜೆಪಿಗೆ ಸಾಧ್ಯವಾಗಿತ್ತು. ಯಾದವೇತರ ಒಬಿಸಿ ಮತಗಳ ಕ್ರೋಡೀಕರಣ ಆಗಿತ್ತು. ಇದು ಬಿಜೆಪಿಗೆ ದೊಡ್ಡ ಪ್ರಮಾಣದಲ್ಲಿ ನೆರವಾಗಿತ್ತು.

ಓಂ ಪ್ರಕಾಶ್ ರಾಜ್‌ಭರ್ ನೇತೃತ್ವದ ಎಸ್‌ಬಿಎಸ್‌ಪಿಯು ರಾಜ್‌ಭರ್ ಸಮುದಾಯದ ಮತಗಳನ್ನು ಮತ್ತು ಅಪ್ನಾ ದಳವು ಕುರ್ಮಿ ಸಮುದಾಯದ ಮತಗಳನ್ನು ಬಿಜೆಪಿಗೆ ತಂದು ಕೊಟ್ಟಿದ್ದವು ಸ್ವಾಮಿ ಪ್ರಸಾದ್ ಮೌರ್ಯ ಮತ್ತು ದಾರಾ ಸಿಂಗ್ ಅವರು ಹಲವು ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವಿಗೆ ನೆರವಾಗಿದ್ದರು.

ಆದರೆ, ಈ ಬಾರಿ ಚಿತ್ರಣ ಬದಲಾಗಿದೆ. ಸಮಾಜವಾದಿ ಪಕ್ಷದ (ಎಸ್‌ಪಿ) ಜತೆಗೆ ಎಸ್‌ಬಿಎಸ್‌ಪಿ ಕೈಜೋಡಿಸಿದೆ. ಮೌರ್ಯ ಮತ್ತು ದಾರಾ ಸಿಂಗ್ ಅವರೂ ಎಸ್‌ಪಿ ಸೇರಿದ್ದಾರೆ. ಬಿಎಸ್‌ಪಿ ರಾಜ್ಯ ಘಟಕದ ಮಾಜಿ ಅಧ್ಯಕ್ಷ ರಾಮ್ ಅಚಲ್ ರಾಜ್‌ಭರ್ ಮತ್ತು ಮಾಜಿ ಸಚಿವ ಲಾಲ್‌ಜಿ ವರ್ಮಾ ಅವರನ್ನು ಬಿಎಸ್‌ಪಿಯಿಂದ ತನ್ನತ್ತ ಸೆಳೆಯುವಲ್ಲಿ ಎಸ್‌ಪಿ ಯಶಸ್ವಿಯಾಗಿದೆ.

ವಾರಾಣಸಿ, ಜಾನ್‌ಪುರ, ಆಜಂಗಡ, ಮಿರ್ಜಾಪುರ, ಅಂಬೇಡ್ಕರ್ ನಗರ, ಗೋರಖಪುರ, ದೇವರಿಯ, ಕುಶಿನಗರ, ಬಲಿಯಾ, ಮೌ ಮತ್ತು ಗಾಜಿಪುರದಲ್ಲಿ ಕೊನೆಯ ಎರಡು ಹಂತಗಳಲ್ಲಿ ಮತದಾನ ಆಗಲಿದೆ. ಈ ಪ್ರದೇಶದ ಜಾತಿ ಲೆಕ್ಕಾಚಾರದತ್ತ ಕಣ್ಣು ಹಾಯಿಸಿದರೆ ರಾಜ್‌ಭರ್, ಮೌರ್ಯ ಮತ್ತು ಚೌಹಾನ್ ಸಮುದಾಯಗಳು ಎಷ್ಟು ಮುಖ್ಯ ಎಂಬುದು ಅರ್ಥವಾಗುತ್ತದೆ.

ಸ್ವಾಮಿ ಪ್ರಸಾದ್ ಮೌರ್ಯ ಅವರು ಐದು ಬಾರಿ ಶಾಸಕರಾಗಿದ್ದಾರೆ. ತಮ್ಮ ಸಮುದಾಯದ ಮೇಲೆ ಅವರಿಗೆ ಭಾರಿ ಹಿಡಿತ ಇದೆ. ಕುಶಿನಗರ, ದೇವರಿಯ ಮತ್ತು ಗೋರಖಪುರ ಜಿಲ್ಲೆಗಳಲ್ಲಿ ಅವರ ಪ್ರಭಾವ ಇದೆ. ಮೌ, ಆಜಂಗಡ, ಗಾಜಿಪುರ ಮತ್ತು ಬಲಿಯಾ ಜಿಲ್ಲೆಗಳಲ್ಲಿರುವ ಚೌಹಾನ್ ಸಮುದಾಯದ ಮೇಲೆ ದಾರಾ ಸಿಂಗ್ ಚೌಹಾನ್ ಅವರ ಹಿಡಿತ ಇದೆ.

ರಾಜ್ಯದಲ್ಲಿ ರಾಜ್‌ಭರ್ ಸಮುದಾಯದ ಜನರ ಪ್ರಮಾಣ ಶೇ 4 ಆದರೆ, ಗಾಜಿಪುರ, ಬಲಿಯಾ, ಮೌ, ವಾರಾಣಸಿ, ಚಂದೌಲಿ, ಆಜಂಗಡ, ಅಂಬೇಡ್ಕರ್ ನಗರ ಮತ್ತು ಮಹಾರಾಜಗಂಜ್ ಜಿಲ್ಲೆಗಳಲ್ಲಿ ಈ ಸಮುದಾಯವು ಕೇಂದ್ರೀಕೃತವಾಗಿದೆ. ಈ ಜಿಲ್ಲೆಗಳಲ್ಲಿ ಈ ಸಮುದಾಯದ ಜನರ ಪ್ರಮಾಣವು ಶೇ 17ರಷ್ಟಿದೆ. ಈ ಜಿಲ್ಲೆಗಳಲ್ಲಿ ಗೆಲುವನ್ನು ನಿರ್ಧರಿಸುವಲ್ಲಿ ಈ ಸಮುದಾಯವೇ ನಿರ್ಣಾಯಕ. ಈ ಸಮುದಾಯದ ಮತಗಳು ಬೇರೆ ಪಕ್ಷಕ್ಕೆ ಹೋದರೆ, ಬಿಜೆಪಿಗೆ ಭಾರಿ ತೊಂದರೆ ಆಗಬಹುದು.

ಮತದಾರರ ಜತೆಗೆ ನಡೆಸಿದ ಮಾತುಕತೆಯು ಇದನ್ನೇ ಧ್ವನಿಸುತ್ತಿದೆ. ಆಜಂಗಡ ಜಿಲ್ಲೆಯ ದಿದಾರ್‌ಗಂಜ್‌ನ ಜಮುನಾ ರಾಜ್‌ಭರ್ ಅವರು ಕಳೆದ ಬಾರಿ ಬಿಜೆಪಿಗೆ ಮತ ಹಾಕಿದ್ದಾರೆ. ಬಿಜೆಪಿಯ ಜತೆಗೆ ಎಸ್‌ಬಿಎಸ್‌ಪಿ ಇದ್ದದ್ದು ಅದಕ್ಕೆ ಕಾರಣ. ಈ ಬಾರಿ ಜಮನಾ ಅವರ ಆಯ್ಕೆ ಎಸ್‌ಪಿ.

'ಜಾತಿ ಆಧಾರಿತ ಪಕ್ಷಗಳಿಂದ ದೊಡ್ಡ ಪಕ್ಷಗಳಿಗೆ ಭಾರಿ ಅನುಕೂಲ ಇದೆ. ಸಮುದಾಯಗಳ ಮತಗಳು ಈ ಪಕ್ಷಗಳ ಶಕ್ತಿ. ಈ ಪಕ್ಷಗಳು ಮೈತ್ರಿ ಬದಲಾಯಿಸುವುದು ಸಾಮಾನ್ಯವಾದ ಕಾರಣ ಅವುಗಳ ಹಿಡಿತದಲ್ಲಿರುವ ಮತಗಳು ಬದಲಾಗುತ್ತಲೇ ಇರುತ್ತವೆ' ಎಂದು ಆಜಂಗಡ ನಿವಾಸಿ, ನಿವೃತ್ತ ಶಿಕ್ಷಕ ದಿವಾಕರ್ ಪಾಂಡೆ ಹೇಳುತ್ತಾರೆ.



ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಉತ್ತರ ಪ್ರದೇಶದ ಸಿದ್ಧಾರ್ಥನಗರದಲ್ಲಿ ನಡೆಸಿದ ಪ್ರಚಾರ ಸಭೆ ಪಿಟಿಐ ಚಿತ್ರ

'ಪ್ರತಿಕೂಲ ಪರಿಣಾಮ ಇಲ್ಲ'

ಸಣ್ಣ ಪಕ್ಷಗಳ ಮೈತ್ರಿ ಬದಲಾವಣೆ ಮತ್ತು ಕೆಲವು ನಾಯಕರ ಪಕ್ಷಾಂತರವು ಬಿಜೆಪಿಯ ಗೆಲುವಿನ ಸಾಧ್ಯತೆ ಮೇಲೆ ಯಾವುದೇ ಪ್ರತಿಕೂಲ ಪರಿಣಾಮ ಬೀರದು ಎಂದು ಬಿಜೆಪಿ ಮುಖಂಡರು ಹೇಳುತ್ತಾರೆ. '2017ರಲ್ಲಿ ಎಲ್ಲ ಸಮುದಾಯಗಳ ಜನರು ಬಿಜೆಪಿಗೆ ಮತ ಹಾಕಿದ್ದಾರೆ. ಈ ಬಾರಿಯೂ ಎಲ್ಲ ಸಮುದಾಯಗಳ ಜನರು ನಮಗೆ ಮತ ಹಾಕಲಿದ್ದಾರೆ' ಎಂದು ಬಿಜೆಪಿಯ ಸ್ಥಳೀಯ ಮುಖಂಡ ಬಹದೂರ್ ಚೌಬೆ ಹೇಳಿದ್ದಾರೆ.

ಆದರೆ, ಫೂಲ್‌ಪುರ ಪವಾಯ್ ಕ್ಷೇತ್ರದ ಎಸ್‌ಪಿ ಅಭ್ಯರ್ಥಿ ರಮಾಕಾಂತ್ ಯಾದವ್ ಅವರದ್ದು ಭಿನ್ನ ಅಭಿಪ್ರಾಯ. 'ಒಬಿಸಿ ಸಮುದಾಯದವರು ಮಾತ್ರವಲ್ಲ, ಎಲ್ಲ ಜಾತಿಗಳ ಜನರೂ ಈ ಬಾರಿ ಬಿಜೆಪಿಯ ವಿರುದ್ಧ ಇದ್ದಾರೆ' ಎಂದು ಅವರು ಹೇಳುತ್ತಾರೆ.

2017ರ ವಿಧಾನಸಭಾ ಚುನಾವಣೆಯಲ್ಲಿ ಈ ಪ್ರದೇಶದಲ್ಲಿ ಬಿಜೆಪಿಗೆ ಶೇ 40ರಷ್ಟು ಮತ ಸಿಕ್ಕಿದೆ. ಎಸ್‌ಪಿಗೆ ಸಿಕ್ಕಿದ್ದು ಶೇ 20ರಷ್ಟು ಮತ. ಒಬಿಸಿ ಸಮುದಾಯದ ಶೇ 44ರಷ್ಟು ಮತಗಳು ಬಿಜೆಪಿಗೆ ಸಿಕ್ಕಿದ್ದವು. ಒಬಿಸಿ ಸಮುದಾಯದ ಮತಗಳು ಬೇರೆ ಪಕ್ಷಕ್ಕೆ ವರ್ಗಾವಣೆಯಾದರೆ ಬಿಜೆಪಿಯ ಗೆಲುವಿನ ಮೇಲೆ ಅದರ ಪರಿಣಾಮ ಇದ್ದೇ ಇರುತ್ತದೆ. ಒಬಿಸಿ ಸಮುದಾಯದ ಪಕ್ಷಗಳಾದ ನಿಷಾದ್ ಪಾರ್ಟಿ ಮತ್ತು ಅಪ್ನಾ ದಳದ ಒಂದು ಗುಂಪಿಗೆ ಬಿಜೆಪಿ ಹೆಚ್ಚು ಕ್ಷೇತ್ರಗಳನ್ನು ಬಿಟ್ಟುಕೊಡಲು ಇದು ಮುಖ್ಯ ಕಾರಣ.

ಮಣಿಪುರ: ಶೇ 78.03ರಷ್ಟು ಮತದಾನ

ಪ್ರಜಾವಾಣಿ ವಾರ್ತೆ

ಗುವಾಹಟಿ: ಕೆಲವು ಹಿಂಸಾಚಾರದ ಘಟನೆಗಳ ಮಧ್ಯೆಯೇ ಮಣಿಪುರ ವಿಧಾನಸಭೆಗೆ ಸೋಮವಾರ ನಡೆದ ಮತದಾನದಲ್ಲಿ ಶೇ 78.03ರಷ್ಟು ಜನರು ಮತ ಚಲಾಯಿಸಿದ್ದಾರೆ. 60 ಸದಸ್ಯ ಬಲದ ವಿಧಾನಸಭೆಗೆ ಮೊದಲ ಹಂತದಲ್ಲಿ 38 ಕ್ಷೇತ್ರಗಳಿಗೆ ಮತದಾನ ನಡೆಯಿತು. ಮಾರ್ಚ್ 5ರಂದು 22 ಕ್ಷೇತ್ರಗಳಿಗೆ ಎರಡನೇ ಹಂತದ ಮತದಾನ ನಡೆಯಲಿದೆ.

ಕಾಂಗ್‌ಪೋಕಪಿ ಜಿಲ್ಲೆಯಲ್ಲಿ ಅತಿಹೆಚ್ಚು ಅಂದರೆ, ಶೇ 82.97ರಷ್ಟು ಮತದಾನವಾಗಿದೆ. ಮುಖ್ಯಮಂತ್ರಿ ಬಿರೇನ್ ಸಿಂಗ್ ಸೇರಿದಂತೆ 173 ಅಭ್ಯರ್ಥಿಗಳು ಕಣದಲ್ಲಿದ್ದರು. 2017ರ ಚುನಾವಣೆಯಲ್ಲಿ ಬಿಜೆಪಿ 18ರಲ್ಲಿ, ಕಾಂಗ್ರೆಸ್ 16ರಲ್ಲಿ ಗೆದ್ದಿದ್ದವು.

ಅಲ್ಲಲ್ಲಿ ಹಿಂಸಾಚಾರ: ಚುರಾಚಾಂದ್‌ಪುರ ಜಿಲ್ಲೆಯಲ್ಲಿ ಎರಡು ಪಕ್ಷಗಳ ನಡುವೆ ಘರ್ಷಣೆ ನಡೆದಿದೆ. ಇಂಫಾಲ್ ಪಶ್ಚಿಮ ಜಿಲ್ಲೆಯ ಲಾಂಗ್ಥಾಬಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಕ್ವಾ ಎಂಬಲ್ಲಿ ಬಿಜೆಪಿಯ ಮತಗಟ್ಟೆ ಮಾಹಿತಿ ಕೇಂದ್ರವನ್ನು ಕಾಂಗ್ರೆಸ್ ಕಾರ್ಯಕರ್ತರು ಧ್ವಂಸ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಕೈರಾವೋ ವಿಧಾನಸಭಾ ಕ್ಷೇತ್ರದಲ್ಲಿ ಎನ್‌ಪಿಪಿ ಅಭ್ಯರ್ಥಿಯ ವಾಹನವನ್ನು ವಿರೋಧಿ ಪಾಳಯದವರು ಹಾನಿಗೊಳಿಸಿದ್ದಾರೆ.

ಮತಗಟ್ಟೆಯನ್ನು ವಶಕ್ಕೆ ಪಡೆಯಲು ಬಿಜೆಪಿ ಯತ್ನಿಸುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದ್ದರಿಂದ, ಕಾಂಗ್‌ಪೋಕಪಿ ಜಿಲ್ಲೆಯ ಕೀತಲ್‌ಮನಬಿ ಮತಗಟ್ಟೆಯಲ್ಲಿ ಜನರನ್ನು ಚದುರಿಸಲು ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿದರು.

ಚುರಾಚಾಂದ್‌ಪುರ ಜಿಲ್ಲೆಯಲ್ಲಿ ಚುನಾವಣೆಗೆ ನಿಯೋಜನೆಗೊಂಡಿದ್ದ ಪೊಲೀಸ್ ಅಧಿಕಾರಿ ನೋರೆಮ್ ಇಬೊಚೌಬ ಅವರ ಸರ್ವೀಸ್ ರಿವಾಲ್ವರ್‌ನಿಂದ ಆಕಸ್ಮಿಕವಾಗಿ ಗುಂಡು ಹಾರಿ ಮೃತಪಟ್ಟಿದ್ದಾರೆ.

ಮತದಾನಕ್ಕೂ ಮುನ್ನ ಕಾಂಗ್ರೆಸ್ ಅಭ್ಯರ್ಥಿ ಉಚ್ಚಾಟನೆ

ಇಂಫಾಲ್ (ಪಿಟಿಐ): ಮಣಿಪುರ ವಿಧಾನಸಭೆ ಚುನಾವಣೆಗೆ ಕೆಲವೇ ಗಂಟೆಗಳು ಬಾಕಿ ಇರುವಂತೆ ಕಾಂಗ್ರೆಸ್ ತನ್ನ ಒಬ್ಬ ಅಭ್ಯರ್ಥಿಯನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಿದೆ.

ವಾಂಗೋಯಿ ಎಸಿ ಕ್ಷೇತ್ರದ ಅಭ್ಯರ್ಥಿ ಸಲಾಂ ಜಾಯ್ ಸಿಂಗ್ ಅವರನ್ನು ಪಕ್ಷದಿಂದ ಉಚ್ಚಾಟಿಸಿ ಆದೇಶ ಹೊರಡಿಸಲಾಗಿದೆ. ಸಲಾಂ ಅವರು ಪಕ್ಷದ ಶಿಸ್ತು ನಿಯಮಗಳನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ತಿಳಿದು ಬಂದಿರುವ ಕಾರಣ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಂಡಿರುವುದಾಗಿ ಆದೇಶದಲ್ಲಿ ಹೇಳಲಾಗಿದೆ.

ಜೆಡಿಯು ಅಭ್ಯರ್ಥಿ ಮೇಲೆ ಗುಂಡಿನ ದಾಳಿ: ಖೆತ್ರಿಗಾವೊ ಕ್ಷೇತ್ರದ ಜನತಾ ದಳ (ಯು) ಅಭ್ಯರ್ಥಿ ವಹೆಂಗ್‌ಬಂ ರೋಜಿತ್ ಸಿಂಗ್ (42) ಅವರ ಮೇಲೆ ಅಪರಿಚಿತ ದುಷ್ಕರ್ಮಿಗಳು ಶನಿವಾರ ರಾತ್ರಿ ಗುಂಡು ಹಾರಿಸಿದ್ದಾರೆ. ಇಂಫಾಲ್‌ನ ನಹಾರುಪ್ ಮಖಾಪತ್ ಪ್ರದೇಶದಲ್ಲಿ ಶನಿವಾರ ರಾತ್ರಿ ಸುಮಾರು 11.30ಕ್ಕೆ ಮತಗಟ್ಟೆಗಳನ್ನು ಅವರು ಪರಿಶೀಲಿಸುತ್ತಿದ್ದ ವೇಳೆ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರೋಜಿತ್ ಸಿಂಗ್ ಸ್ಥಿತಿ ಗಂಭೀರವಾಗಿದೆ. ಆದರೆ ಪ್ರಾಣಾಪಾಯವಿಲ್ಲ ಎಂದು ಅಲ್ಲಿಯ ಸ್ಥಳೀಯ ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.


ಬಿಜೆಪಿ ಅಭ್ಯರ್ಥಿಯ ಪ್ರಚಾರಕ್ಕೆ ನಿರ್ಬಂಧ

ನವದೆಹಲಿ (ಪಿಟಿಐ): ಕೋಮು ಪ್ರಚೋದನಾಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ, ಉತ್ತರ ಪ್ರದೇಶದ ಡುಮರಿಯಾಗಂಜ್ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿ ರಾಘವೇಂದ್ರ ಪ್ರತಾಪ್ ಸಿಂಗ್ ಅವರು ಚುನಾವಣಾ ಪ್ರಚಾರ ನಡೆಸುವುದನ್ನು ನಿರ್ಬಂಧಿಸಲಾಗಿದೆ.

ಸೋಮವಾರ ಬೆಳಿಗ್ಗೆ 6 ಗಂಟೆಯಿಂದ 24 ಗಂಟೆಯವರೆಗೆ ಈ ಆದೇಶ ಜಾರಿಯಲ್ಲಿರಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

'ನಮ್ಮ ವಿರೋಧಿ ಪಾಳಯಕ್ಕೆ ಮತ ಹಾಕುವ ಹಿಂದೂಗಳ ಮೈಯಲ್ಲಿ ಹರಿಯುವುದು ಮುಸ್ಲಿಮರ ರಕ್ತ' ಎಂಬುದಾಗಿ ರಾಘವೇಂದ್ರ ಸಿಂಗ್ ಅವರು ಹೇಳಿದ್ದಾರೆ ಎನ್ನಲಾದ ವಿಡಿಯೊ ಪರಿಶೀಲಿಸಿದ ಬಳಿಕ ಆಯೋಗ ಈ ಕ್ರಮ ತೆಗೆದುಕೊಂಡಿದೆ. ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ವಿವರಣೆ ನೀಡಲು ಕೊಟ್ಟಿರುವ ಸಮಯ ಸಾಕಾಗುವುದಿಲ್ಲ ಎಂದಿದ್ದ ಸಿಂಗ್‌ಗೆ ಹೆಚ್ಚುವರಿ ಸಮಯ ನೀಡಲು ಆಯೋಗ ನಿರಾಕರಿಸಿದೆ. ವಿಡಿಯೊದಲ್ಲಿ ತಾವು ಹೇಳಿದ ಪೂರ್ಣ ಮಾತು ದಾಖಲಾಗಿಲ್ಲ ಎಂದಿದ್ದಾರೆ.

ಕ್ಷೇಮ ಕುಶಲ



ಆರೋಗ್ಯಕ್ಕಾಗಿ 'ಹಂ'ಬಲ

ಎಸ್. ಎನ್. ಓಂಕಾರ್

ಭ್ರಮರಿ ಪ್ರಾಣಾಯಾಮವು ವಿಶಿಷ್ಟ ಶಬ್ದದೊಂದಿಗೆ ಉಸಿರನ್ನು ಬಿಡುವ ಕ್ರಮವಾಗಿದೆ. ವೈರಾಣುಗಳು ಹಾಗೂ ತತ್ಸಂಬಂಧಿತವಾದ ಆತಂಕಗಳು ಕಾಡುತ್ತಿರುವ ಇಂದಿನ ಸನ್ನಿವೇಶದಲ್ಲಿ ಅತ್ಯಗತ್ಯವಾಗಿ ಭ್ರಮರಿ ಪ್ರಾಣಾಯಾಮವನ್ನು ಅಭ್ಯಾಸ ಮಾಡಬೇಕು.

> ಭ್ರಮರಿ ಪ್ರಾಣಾಯಾಮವು ಮನಸ್ಸು ಹಾಗೂ ನರಮಂಡಲದ ಮೇಲೆ ಹಿತವಾದ ಪರಿಣಾಮವನ್ನು ಉಂಟುಮಾಡಿ, ಮನೋದೈಹಿಕ ಆರೋಗ್ಯವನ್ನು ವೃದ್ಧಿಸುತ್ತದೆ.

ವಿಶೇಷತೆಗಳು

'ಭ್ರಮರ' ಎಂದರೆ ಕಪ್ಪು ಬಣ್ಣದ ದುಂಬಿ. ಅದು ಕಡಿಮೆ ಆವರ್ತನದ ಹಾಗೂ ಸ್ವರದ, 'ಹಂ' ಎಂಬ ಶಬ್ದವನ್ನು ಮಾಡುತ್ತದೆ. ಅದೇ ರೀತಿಯ ಶಬ್ದವನ್ನು ರೇಚಕಕ್ರಿಯೆಯಲ್ಲಿ (ಉಸಿರನ್ನು ಬಿಡುವಾಗ) ಅಳವಡಿಸಿಕೊಳ್ಳುವುದು ಭ್ರಮರಿ ಪ್ರಾಣಾಯಾಮದ ಕ್ರಮವಾಗಿದೆ.


ಇದರಲ್ಲಿನ ಆವರ್ತನವು ಸುಮಾರು 160 ಹರ್ಟ್ಸ್‌ನಿಂದ 260 ಹರ್ಟ್ಸ್‌ವರೆಗೆ ಇರುತ್ತದೆ. ಗಂಡಸರಲ್ಲಿ ಆವರ್ತನವು ಕಡಿಮೆಯಿರುತ್ತದೆ; ಹೆಂಗಸರಲ್ಲಿ ಹೆಚ್ಚಿರುತ್ತದೆ.

'ಹಂ' ಶಬ್ದದ ಉಚ್ಚಾರಣೆಯಿಂದ ರಕ್ತದಲ್ಲಿನ ನೈಟ್ರಿಕ್ ಆಕ್ಸೈಡ್‌ನ ಪ್ರಮಾಣವು ಹಲವು ಪಟ್ಟು ಹೆಚ್ಚುತ್ತದೆ; ನೈಟ್ರಿಕ್ ಆಕ್ಸೈಡ್ ಆಂತರಿಕವಾಗಿಯೇ ಉತ್ಪನ್ನಗೊಳ್ಳುತ್ತದೆ. ಇದು ವೈರಾಣು ಹಾಗೂ ಬ್ಯಾಕ್ಟೀರಿಯಾಗಳ ವಿರುದ್ಧ ಹೋರಾಡುತ್ತದೆ; ಆಂತರಿಕ ಉರಿಯೂತವನ್ನು ಶಮನಗೊಳಿಸುತ್ತದೆ.

ಗಮನಿಸಬೇಕಾದ ಅಂಶಗಳು

ಆರಂಭಿಕ ಹಂತದಲ್ಲಿ ಈ ಕ್ರಮಗಳನ್ನು ಅಭ್ಯಾಸ ಮಾಡುವಾಗ, ಎಡಗೈಯನ್ನು ಎದೆಯ ಮೇಲೂ ಹಾಗೂ ಬಲಗೈಯನ್ನು ಉದರದ ಮೇಲೂ ಇರಿಸಿಕೊಳ್ಳುವುದು ಅಪೇಕ್ಷಣೀಯ.
ಉಸಿರನ್ನು ಬಿಡುವ ಅವಧಿ, ಉಸಿರನ್ನು ತೆಗೆದುಕೊಳ್ಳುವ ಅವಧಿಯಷ್ಟಾದರೂ ಇರಬೇಕು.
'ಹಂ' ಶಬ್ದದ ಅನುರಣನ(ಶಬ್ದದ ಧ್ವನಿತರಂಗ)ವನ್ನು ಮಿದುಳಿನ ಭಾಗದಲ್ಲಿ, ವಿಶೇಷವಾಗಿ ತಲೆಬುರುಡೆಯ ಮಧ್ಯಭಾಗದಲ್ಲಿ ಗಮನಿಸಬೇಕು.

ಮಾಡುವ ವಿಧಾನ



ಭ್ರಮರಿ ಪ್ರಾಣಾಯಾಮದಲ್ಲಿ ಅನೇಕ ರೀತಿಗಳು ಇವೆಯಾದರೂ, ಈ ಲೇಖನದಲ್ಲಿ ಸರಳ ಕ್ರಮವೊಂದನ್ನು ವಿವರಿಸಲಾಗಿದೆ.

ಕುರ್ಚಿಯ ಮೇಲೆ ಅಥವಾ ದಿಂಬಿನ ಮೇಲೆ ನೇರವಾಗಿ ಕುಳಿತುಕೊಳ್ಳಿ; ಎದೆಯ ಭಾಗ ಮೇಲಕ್ಕೆತ್ತಿ. ಕಣ್ಣುಗಳನ್ನು ಮೃದುವಾಗಿ ಮುಚ್ಚಿ. ಹಸ್ತಗಳನ್ನು ಮಂಡಿಯ ಮೇಲೆ ಮೇಲ್ಮುಖವಾಗಿರಿಸಿ; ಹೆಬ್ಬೆರಳು ಮತ್ತು ತೋರ್ಬೆರಳುಗಳ ತುದಿಗಳು ಪರಸ್ಪರ ಸ್ಪರ್ಶದಲ್ಲಿರಲಿ. ಉದರ ಆಧಾರಿತ ಉಸಿರಾಟವನ್ನು ಮಾಡಬೇಕು. ಉಸಿರನ್ನು ತೆಗೆದುಕೊಳ್ಳುತ್ತಾ, ಉದರದ ಭಾಗ ಸುತ್ತಲೂ ಸಂಪೂರ್ಣವಾಗಿ ಹಿಗ್ಗಬೇಕು ಹಾಗೂ ಉಸಿರನ್ನು ಬಿಡುತ್ತಾ ಸಂಕುಚನಗೊಳ್ಳಬೇಕು. ಎದೆಯ ಗೂಡು ಸಾಧ್ಯವಾದಷ್ಟು ನಿಶ್ಚಲವಾಗಿರಬೇಕು.

ಉಸಿರನ್ನು ತೆಗೆದುಕೊಂಡು, ಉಸಿರನ್ನು ಬಿಡುತ್ತಾ, 'ಹಂ' ಶಬ್ದವನ್ನು ಆಂತರಿಕವಾಗಿ ಉಚ್ಚರಿಸಬೇಕು.

'ಹಂ' ಶಬ್ದೋಚ್ಚಾರಣೆಯ ಕಂಪನಗಳನ್ನು ವಿಶೇಷವಾಗಿ ಮಿದುಳಿನ ಭಾಗದಲ್ಲಿ ಗಮನಿಸಿ. ಸುಮಾರು 10-15 ನಿಮಿಷ ಅಭ್ಯಾಸ ಮಾಡಿ.

ಉಪಯೋಗಗಳು

- ಭ್ರಮರಿ ಪ್ರಾಣಾಯಾಮವು ಮನಸ್ಸಿನ ಪ್ರಶಾಂತತೆಗೆ ಸಹಕಾರಿ.
- ಸರಿಯಾಗಿ ನಿದ್ರೆ ಬಾರದಿರುವುದು ಹಾಗೂ ನಿನಿದ್ರತೆಯ ಸಮಸ್ಯೆಗಳಿಗೆ ಇದು ಉಪಯುಕ್ತ.
- ಮಾನಸಿಕ ಒತ್ತಡ, ಆತಂಕ ಇವುಗಳಿಂದ ದೂರವಿರುವಲ್ಲಿ ಇದು ಸಹಕಾರಿ.
- ಶಸ್ತ್ರಚಿಕಿತ್ಸೆಯ ನಂತರದ ಪುನಶ್ಚೇತನದ ಸಮಯದಲ್ಲಿ ಇದು ಗಮನೀಯ ಪಾತ್ರವನ್ನು ವಹಿಸಬಲ್ಲದು.
- ಗರ್ಭಾವಸ್ಥೆ ಮತ್ತು ಜನ್ಮಪ್ರಕ್ರಿಯೆಯಲ್ಲೂ ಇದು ಬಹಳ ಉಪಯುಕ್ತವೆಂದು ಅನೇಕ ಸಂಶೋಧನೆಗಳು ತಿಳಿಸುತ್ತವೆ.
- ಗಂಟಲಿನ ಆರೋಗ್ಯಕ್ಕೂ ಇದು ಪೋಷಕ. ನಮ್ಮ ಧ್ವನಿಯು ಸೊಗಸಾಗುತ್ತದೆ.
- ಈ ಪ್ರಾಣಾಯಾಮವು ಗರ್ಭಿಣಿ ಸ್ತ್ರೀಯರಿಗೆ ಬಹಳ ಉಪಯುಕ್ತ.

ಒಟ್ಟಾರೆ, ಭ್ರಮರಿ ಪ್ರಾಣಾಯಾಮವು ಮನಸ್ಸು ಹಾಗೂ ನರಮಂಡಲದ ಮೇಲೆ ಹಿತವಾದ ಪರಿಣಾಮವನ್ನು ಉಂಟುಮಾಡಿ, ಮನೋದೈಹಿಕ ಆರೋಗ್ಯವನ್ನು ವೃದ್ಧಿಸುತ್ತದೆ. ಯಾವ ಸಮಯದಲ್ಲಾದರೂ ಇದನ್ನು ಮಾಡಬಹುದು. ವಿಶೇಷವಾಗಿ ಬೆಳಗಿನ ಜಾವ ಹಾಗೂ ರಾತ್ರಿ ಮಲಗುವ ಮುನ್ನ ಇದರ ಅಭ್ಯಾಸವನ್ನು ಮಾಡುವುದರಿಂದ ಉತ್ತಮ ಪರಿಣಾಮಗಳನ್ನು ಪಡೆಯಬಹುದು.

ಲೇಖಕರು: ಯೋಗಗುರು



ಆಯಾಸ ದೈಹಿಕ ಎಷ್ಟು? ಮಾನಸಿಕ ಎಷ್ಟು?

ರಮ್ಯಾ ಶ್ರೀಹರಿ

ದೇಹ ಮತ್ತು ಮನಸ್ಸಿನ ನಡುವಿನ ಸಂಬಂಧ ಒಮ್ಮೊಮ್ಮೆ ನಿಗೂಢವೂ, ನಾವು ಊಹಿಸಲೂ ಸಾಧ್ಯವಿಲ್ಲದಷ್ಟು ನಿಕಟವೂ, ಅನ್ವೇಷಿಸಿದಷ್ಟೂ ಗಹನವೂ, ಹಾಗೇ ಕೆಲವೊಮ್ಮೆ ಒಂದಕ್ಕೊಂದು ವಿರುದ್ಧವೂ ಹೌದು. ದೇಹವು ಪ್ರಕೃತಿಯಾದರೆ ಮನಸ್ಸು ಸಂಸ್ಕೃತಿ. ಮನಸ್ಸಿನ ಎಲ್ಲ ಆಕೃತಿಗೂ ವಿಕೃತಿಗೂ ದೇಹ ತನ್ನದೇ ರೀತಿಯಲ್ಲಿ ಸ್ಪಂದಿಸುತ್ತದೆ. ದೇಹದ ಮಾತಿಗೆ ಮನಸ್ಸು ಕೂಡ ತನ್ನ ಮಾತುಗಳನ್ನು ಸೇರಿಸುತ್ತಲಿರುತ್ತದೆ. ಪ್ರತಿಯೊಂದು ಭಾವವೂ, ಪ್ರತಿಯೊಂದು ಆಲೋಚನೆಯೂ ನಮ್ಮ ದೇಹದ ಮೇಲೆ ತನ್ನ ಹೆಜ್ಜೆಗುರುತುಗಳನ್ನು ಮೂಡಿಸುತ್ತಲೇ ಸಾಗುತ್ತದೆ. ಬುದ್ಧಿಗೆ ನಿಲುಕುವ ಎಷ್ಟೋ ವಿಷಯಗಳನ್ನು ದೇಹ ನಿರಾಕರಿಸುತ್ತದೆ, ದೇಹಕ್ಕಾಗುವ ಸಂವೇದನೆಗಳನ್ನು ಸರಿಯಾಗಿ ಅರ್ಥೈಸುವಲ್ಲಿ ಬುದ್ಧಿಯೂ ಹಲವು ಬಾರಿ ಸೋಲುತ್ತದೆ. ದೇಹ, ಬುದ್ಧಿ, ಮನಸ್ಸು, ಆತ್ಮ ಎಲ್ಲವೂ ಒಂದಕ್ಕೊಂದು ಹೊಂದಿಕೊಂಡು ಲಯಬದ್ಧವಾಗಿ ಸಾಗುವಾಗ ಉಂಟಾಗುವ ಶಾಂತಿ, ಸ್ಥಿರತೆ, ನೆಮ್ಮದಿ ಆರೋಗ್ಯಪೂರ್ಣ ಜೀವನಕ್ಕೆ ಅತ್ಯಾವಶ್ಯಕ. ಮನಸ್ಸಿಗೆ ಉಲ್ಲಾಸ ನೀಡುವ ದೈಹಿಕ ಕೆಲಸಗಳು, ದೇಹಕ್ಕೂ ನವಚೈತನ್ಯ ತುಂಬುವ ಮಾನಸಿಕ/ಬೌದ್ಧಿಕ ಚಟುವಟಿಕೆಗಳು ದೇಹ ಮತ್ತು ಮನಸ್ಸಿನ ನಡುವಿನ ಈ ಅವಿನಾಭಾವ ಸಂಬಂಧವನ್ನು ಸಾರುತ್ತದೆ.

ಸುಂದರವಾದ ಬೆಟ್ಟಗುಡ್ಡಗಳಲ್ಲಿ ಅಲೆಯುತ್ತಾ ಹೂವು, ಹಣ್ಣು, ಗಿಡ, ಮರ, ಹಕ್ಕಿಗಳನ್ನು ಕಾಣುತ್ತ ತಂಗಾಳಿಯನ್ನು ಸವಿಯುತ್ತಾ ಇಡೀ ದಿನ ಓಡಾಡಿದರೂ ದೇಹಕ್ಕೆ ಆಯಾಸವಾದ ಅನುಭವವಾಗುತ್ತಿದ್ದರೂ, ಮನಸ್ಸಿನ ಬೆಂಬಲದಿಂದ 'ಮತ್ತಷ್ಟು ನಡೆಯೋಣ, ಮತ್ತಷ್ಟು ಪ್ರಕೃತಿಯ ಸೌಂದರ್ಯವನ್ನು ಅನುಭವಿಸೋಣ' ಎಂದು ಅನಿಸುತ್ತದೆ. ಅದೇ ಮನಸ್ಸು ಮುನಿದಾಗ ನಮ್ಮ ದೇಹವೇ ಹೊರಲಾರದ ಹೊರೆಯಂತೆ, ಹೊತ್ತು ತಿರುಗಬೇಕಾದ ಅನಿವಾರ್ಯ ಕರ್ಮದಂತೆ ಕಾಣಿಸುತ್ತದೆ. ದೇಹ ಆರೋಗ್ಯವಾಗಿದ್ದಾಗ ಮಾನಸಿಕ ಒತ್ತಡವನ್ನು ತಕ್ಕಮಟ್ಟಿಗೆ ಸಹಿಸಬಹುದು, ಒತ್ತಡವನ್ನು ನೀಗಿಸಿಕೊಳ್ಳುವ ಪ್ರಯತ್ನವನ್ನೂ ಮಾಡಬಹುದು, ದೇಹಕ್ಕೆ ಜಾಡ್ಯವಂಟಿದಾಗ ಆರೋಗ್ಯವಾಗಿದ್ದಾಗಿನ ನಮ್ಮೆಲ್ಲಾ ಹವ್ಯಾಸ, ಅಭ್ಯಾಸ, ಆಸೆಪಟ್ಟು ಮಾಡುತ್ತಿದ್ದ ಕೆಲಸಗಳಲ್ಲಿ ಆಸಕ್ತಿ ಉಳಿಯುವುದಿಲ್ಲ.

ಕೆಲವೊಮ್ಮೆ ಏನೂ ಮಾಡುವುದೇ ಬೇಡ, ಯಾಕಾದರೂ ಬೆಳಗ್ಗೆ, ರಾತ್ರಿಗಳಾಗುತ್ತವೆಯೋ, ಯಾಕಾದರೂ ಯಾವುದಾದರೂ ಕೆಲಸ ಮಾಡಬೇಕೋ ಎನಿಸುವಷ್ಟು ಜಡತ್ವ ನಮ್ಮನ್ನಾವರಿಸುತ್ತದೆ. ಎಲ್ಲದರಲ್ಲೂ ಇದ್ದಕಿದ್ದಂತೆ ಆಸಕ್ತಿ ಕಳೆದುಹೋದಂತನಿಸಿ, ಮನಸ್ಸಿಗಂಟಿದ ಆಲಸ್ಯ ತೊಳೆಯಬಲ್ಲ ನವೋಲ್ಲಾಸದ ಚಿಲುಮೆಯೊಂದು ಇರಬಹುದೆನ್ನುವ ಸಣ್ಣ ನಂಬಿಕೆಯೂ ಅಳಿದುಬಿಡುವಷ್ಟು ಬೇಸರವಾಗುತ್ತದೆ. ಕಣ್ಣ ಮುಂದೆ ಮಸುಕು ಕವಿದು, ಬುದ್ಧಿ ಮಂಕಾಗಿ, ಉಸಿರು ಕಟ್ಟಿದಂತೆ ಒದ್ದಾಡಲು ಶುರುಮಾಡುತ್ತೇವೆ. ಇಂತಹ ಎಷ್ಟೋ ಆಯಾಸಪರ್ವಗಳನ್ನು ದಾಟಿ ಚೇತರಿಸಿಕೊಂಡ ಅನುಭವವಿದ್ದರೂ ಈ ಬಾರಿಯ ಆಯಾಸ ನಮ್ಮನ್ನು ನುಂಗಿಯೇ ಬಿಡುತ್ತದೇನೋ ಎನ್ನುವ ಸಂಶಯವೂ ಕಾಡುತ್ತದೆ. ಮಾನಸಿಕ ಯಾತನೆ ದೈಹಿಕ ಆಯಾಸದಂತೆಯೇ ನಮ್ಮನ್ನು ಕಂಗೆಡಿಸುತ್ತದೆ. ಜ್ವರದಿಂದ ಕಹಿಯಾದ ನಾಲಗೆ ತನ್ನ ರುಚಿಗ್ರಹಣದ ಶಕ್ತಿಯನ್ನು ಕಳೆದುಕೊಂಡಂತೆ, ಮನಸ್ಸಿಗೆ ಹಿಡಿದ ಜ್ವರ ಜೀವನದ ರಸಗ್ರಹಣದ ಶಕ್ತಿಯನ್ನು ಕುಂದಿಸುತ್ತದೆ. ರೋಗವು ಹಸಿವನ್ನು ಕಡಿಮೆ ಮಾಡುವಂತೆ, ಚಿಂತೆ-ಬೇಸರಗಳು ಜೀವನಪ್ರೀತಿಯನ್ನು ಕಸಿದುಕೊಂಡುಬಿಡುತ್ತವೆ.

ಮಾನಸಿಕ ಆಯಾಸಕ್ಕೆ ಕಾರಣಗಳು ಹಲವಿರಬಹುದು. ದೈಹಿಕ ಅನಾರೋಗ್ಯ, ಸಂಬಂಧಗಳಲ್ಲಿನ ವಿರಸ, ಲೋಕ ಗ್ರಹಿಕೆಯ ರೀತಿ, ಒಂಟಿತನ, ಅಸಹಾಯಕತೆ, ಸೋಲು – ಇನ್ನೂ ಹಲವು. ಮನಸ್ಸು ಸುಖದಲ್ಲಿದ್ದಾಗ ದೈಹಿಕ ಆಯಾಸದಿಂದ ಆವರಿಸುವ ನಿದ್ದೆಯೂ ಚೇತೋಹಾರಿ. ವಿಶ್ರಾಂತಿಯಿಂದ ಪರಿಹಾರವಾಗುವ ದೈಹಿಕ ಆಯಾಸದಷ್ಟು ಸುಲಭೋಪಾಯಗಳಿಗೆ ಮಾನಸಿಕ ಆಯಾಸ ಬಗ್ಗದಿರಬಹುದು. ಏಕೆಂದರೆ ದೈಹಿಕ ಆಯಾಸವನ್ನು ಗುರುತಿಸಿದಷ್ಟು ಸುಲಭವಲ್ಲ ಮಾನಸಿಕ ಆಯಾಸವನ್ನು ಗುರುತಿಸುವುದು. ಆತಂಕ, ಖಿನ್ನತೆ, ಸಿಟ್ಟು, ಸೋಮಾರಿತನ, ಸಾಮಾಜಿಕ ಜಾಲತಾಣಗಳಲ್ಲಿ ಹೊತ್ತು ಗೊತ್ತಿಲ್ಲದೆ ಮುಳುಗಿರುವುದು, ಯಾವುದಕ್ಕೂ ಸ್ಪಂದಿಸಲಾರದ ನಿರ್ಭಾವುಕತನ, ನಿಷ್ಕ್ರಿಯತೆ – ಎಲ್ಲವೂ ಮಾನಸಿಕ ಆಯಾಸದ ವಿವಿಧ ಮುಖಗಳು.

ಬೇಡದ ಆಲೋಚನೆಗಳು, ಕಹಿನೆನಪುಗಳು, ಆಗಿಹೋದ ಕೆಟ್ಟ ಘಟನೆಗಳ, ಮನಸ್ತಾಪಗಳ ವಿವರಗಳು, ಚಿತ್ರಗಳು ಪದೇ ಪದೇ ಮನಸ್ಸಿಗೆ ಬಂದು ಅತಿಯಾದ ಮಾನಸಿಕ ಆಯಾಸವನ್ನುಂಟು ಮಾಡಿ ದೇಹದ ಮೇಲೂ ಪರಿಣಾಮ ಬೀರುತ್ತದೆ. ಇಂತಹ ಆಯಾಸವು ತರ್ಕಬದ್ಧವಾಗಿ ಆಲೋಚಿಸುವ, ಸಹಾನುಭೂತಿಯಿಂದ ಸ್ಪಂದಿಸುವ ನಮ್ಮ ಸಾಮರ್ಥ್ಯವನ್ನು ಕಡಿಮೆ ಮಾಡುತ್ತದೆ.

ಪ್ರವಾಸ ನಿಜಕ್ಕೂ ಮಾನಸಿಕ ಆಯಾಸಕ್ಕೆ ಅತ್ಯುತ್ತಮ ಮದ್ದು ಎನ್ನುವುದನ್ನು ಅಲ್ಲಗಳೆಯುವವರು ಯಾರಿದ್ದಾರೆ? ಪ್ರವಾಸದ ಕುರಿತಾಗಿ ಆಲೋಚಿಸುವುದು, ಮಾತನಾಡುವುದು, ಒಳ್ಳೆಯ ಪ್ರವಾಸ ಕಥನಗಳನ್ನೋದುವುದೂ ಒಂದು ಕ್ಷಣಕ್ಕೆ ನಮ್ಮನ್ನು ಯಾವುದೋ ಬಂಧನದಿಂದ ಬಿಡುಗಡೆಗೊಳಿಸುತ್ತದೆ. ಹಾಗೆಯೇ ಪ್ರೀತಿ ಎನ್ನುವುದೂ ಎಂತಹ ಜಾಡ್ಯಕ್ಕೂ ಸಂಜೀವಿನಿಯೇ ಹೌದು. ಪ್ರೀತಿಯ ಮಾತು, ಪ್ರೀತಿಯ ನೆನಪೂ, ಪ್ರೀತಿಪಾತ್ರರ ಒಡನಾಟವೂ ಬಾಡಿಹೋದ ಬದುಕಿನ ಬಳ್ಳಿಯಲ್ಲಿ ಹೊಸಚಿಗುರನ್ನು ಹುಟ್ಟಿಸಬಲ್ಲದು. ಸದಾ ವಟಗುಡುವ ಹೇಳಿದ್ದನ್ನೇ ಹೇಳಿ ಹೇಳಿ ಜೀವ ತಿನ್ನುವ, ಚಿಂತೆಯ ವಿಷವರ್ತುಲದಲ್ಲಿ ನಮ್ಮನ್ನು ಸಿಕ್ಕಿಸಿಬಿಡುವ ನಾವೇ ಕಟ್ಟಿಕೊಂಡಿರುವ ಆಲೋಚನೆಗಳ ಕೋಟೆಯಾದ ನಮ್ಮ ಮನಸ್ಸಿನಿಂದಲೇ ಕೆಲಕಾಲ ತಪ್ಪಿಸಿಕೊಂಡು ಹೊಸತನದ ಹುಡುಕಾಟದಲ್ಲಿ ನಮ್ಮನ್ನು ನಾವು ಹೊಸದಾಗಿ ಕಂಡುಕೊಳ್ಳುವುದೇ ದೈಹಿಕ, ಮಾನಸಿಕ ಆಯಾಸಕ್ಕೆ ನಾವು ಕೊಡಬಹುದಾದ ಉತ್ತರ. ಇದುವರೆಗೆ ಕೇಳಿಲ್ಲದ ರಾಗಗಳನ್ನು, ಅರ್ಥವೇ ಆಗದ ಭಾಷೆಯ ಹಾಡುಗಳನ್ನು ಕೇಳುತ್ತಾ, ಹಿಂದೆಂದೂ ಓದಿಲ್ಲದ ಜಗತ್ತಿನ ಯಾವುದೋ ಮೂಲೆಯ ಲೇಖಕರನ್ನು ಓದುತ್ತಾ, ಎಂದೂ ಮಾತನಾಡಿಸದ ಅಪರಿಚಿತರನ್ನು ಮಾತನಾಡಿಸುತ್ತಾ, ಹೆಸರೇ ಕೇಳಿ ಗೊತ್ತಿಲ್ಲದ ಹಾದಿಗಳಲ್ಲಿ ಅಲೆಯುತ್ತಾ ಹೋದರೆ ಆಯಾಸ ಕಳೆದು ಉತ್ಸಾಹ ಮೂಡುವುದು ಖಂಡಿತ.



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಅಧ್ಯಾಯ 3

ಲೋಹಗಳು ಮತ್ತು ಅಲೋಹಗಳು

ರಸಾಯನ ಶಾಸ್ತ್ರ

ಎಸ್ಸೆಸ್ಸೆಲ್ಸಿ

ಪ್ರಮುಖಾಂಶಗಳು:

ಲೋಹಗಳ ಭೌತ ಗುಣಗಳು

ಲೋಹಗಳು

-ಹೊಳೆಯುತ್ತವೆ -ಶಾಬ್ದನ ಗುಣ
-ಕುಟ್ಯತೆ ಮತ್ತು ತನ್ಯತೆ
-ಉತ್ತಮ ವಿದ್ಯುತ್ ಮತ್ತು ಉಷ್ಣವಾಹಕಗಳು
-ಹೆಚ್ಚಿನ ಕರಗುವ ಮತ್ತು ಕುದಿಬಿಂದುಗಳನ್ನು ಹೊಂದಿವೆ.

- ಹೆಚ್ಚಿನ ಲೋಹಗಳು ನೀರಿನಲ್ಲಿ ಕರಗಿದಾಗ ಪ್ರತ್ಯಾಮ್ಲೀಯ ಆಕ್ಸೈಡ್‌ಗಳನ್ನು ಹಾಗೂ ಅಲೋಹಗಳು ಆಮ್ಲೀಯ ಆಕ್ಸೈಡ್‌ಗಳನ್ನು ಉಂಟುಮಾಡುತ್ತವೆ.
- ಬಹುತೇಕ ಲೋಹಗಳು ಆಕ್ಸಿಜನ್ (O_2) ಜೊತೆ ಸಂಯೋಗ ಹೊಂದಿದಾಗ ಆಯಾ ಲೋಹಗಳ ಆಕ್ಸೈಡ್‌ಗಳಾಗುತ್ತವೆ.
- ಕೆಲವು ಲೋಹಗಳ ಆಕ್ಸೈಡ್‌ಗಳು ನೀರಿನಲ್ಲಿ ಕರಗಿ ಕ್ಷಾರಗಳನ್ನು ಉಂಟುಮಾಡುತ್ತವೆ.
- ಬಹುತೇಕ ಲೋಹಗಳು ನೀರು, ಸಾರರಿಕ್ತ ಆಮ್ಲಗಳ ಜೊತೆ ವರ್ತಿಸಿ ಹೈಡ್ರೋಜನ್ ಅನಿಲವನ್ನು ಬಿಡುಗಡೆಮಾಡುತ್ತವೆ.
- ರಾಸಾಯನಿಕವಾಗಿ ಹೆಚ್ಚು ಕ್ರಿಯಾಪಟುತ್ವ ಹೊಂದಿದ ಧಾತುಗಳು ತಮಗಿಂತ ಕಡಿಮೆ ಕ್ರಿಯಾಪಟುತ್ವ ಹೊಂದಿದ ಧಾತುಗಳನ್ನು ಅವುಗಳ ದ್ರಾವಣ/ದ್ರವಿಸಿದ ಸಂಯುಕ್ತದಿಂದ ಸ್ಥಳಾಂತರಿಸುತ್ತವೆ.
- ಲೋಹಗಳ ಕ್ರಿಯಾಶೀಲ ಸರಣಿ
  k > Na > Ca > Mg > AI > Zn > Fe > Pb > Cu > Hg > Ag > Au.
- ನೆನಪಿಡಿ

-ದ್ರವ ಲೋಹ – Hg(ಪಾದರಸ)
-ದ್ರವ ಅಲೋಹ –Br(ಬ್ರೋಮಿನ್)
-ಮೃದು ಲೋಹಗಳು – Na & K
-ಹೆಚ್ಚು ಕ್ರಿಯಾಶೀಲ ಲೋಹಗಳು -Na & K
-ಹೆಚ್ಚು ತನ್ಯ & ಕುಟ್ಯ ಲೋಹ – Au(ಚಿನ್ನ)
-ಉತ್ತಮ ಉಷ್ಣವಾಹಕ ಲೋಹಗಳು - Ag & Cu
-ಉಷ್ಣದ ದುರ್ಬಲ ವಾಹಕಗಳು–Pb & Hg
-ಕಡಿಮೆ ಕರಗುವ ಬಿಂದು ಹೊಂದಿರುವ ಲೋಹಗಳು –ಗ್ಯಾಲಿಯಂ & ಸೀಸಿಯಂ
-ಹೊಳೆಯುವ ಅಲೋಹ – I (ಅಯೋಡಿನ್)
-ವಿದ್ಯುತ್‌ವಾಹಕ ಅಲೋಹ -ಗ್ರಾಫೈಟ್ (C)

ಮಾದರಿ ಪ್ರಶ್ನೆ-ಉತ್ತರಗಳು.

1.ಕುಟ್ಯತೆ ಎಂದರೇನು?

-ಕೆಲವು ಲೋಹಗಳನ್ನು ಕುಟ್ಟಿ ತೆಳುವಾದ ಹಾಳೆಗಳನ್ನಾಗಿ ಮಾಡಬಹುದು. ಲೋಹಗಳ ಈ ಗುಣವನ್ನು ಕುಟ್ಯತೆ ಎನ್ನುವರು.

2.ತನ್ಯತೆ ಎಂದರೇನು?

-ತೆಳುವಾದ ತಂತಿಗಳನ್ನಾಗಿ ಎಳೆಯಬಹುದಾದ ಲೋಹಗಳ ಸಾಮರ್ಥ್ಯಕ್ಕೆ ತನ್ಯತೆ ಎನ್ನುವರು.

3.ಉಭಯವರ್ತಿ ಆಕ್ಸೈಡ್‌ಗಳು ಎಂದರೇನು? ಉದಾಹರಣೆ ಕೊಡಿ.

-ಕೆಲವು ಲೋಹದ ಆಕ್ಸೈಡ್‌ಗಳು ಆಮ್ಲ ಮತ್ತು ಪ್ರತ್ಯಾಮ್ಲಗಳೆರಡರ ಜೊತೆಗೂ ಪ್ರತಿವರ್ತಿಸಿ, ಲವಣ ಮತ್ತು ನೀರನ್ನು ಉತ್ಪತ್ತಿ ಮಾಡುತ್ತವೆ.
ಉದಾ|| AI_2O_3, ZnO

4.ಕ್ಷಾರಗಳು ಎಂದರೇನು? ಉದಾಹರಣೆ ಕೊಡಿ.

-ಕೆಲವು ಲೋಹಗಳ ಆಕ್ಸೈಡ್‌ಗಳು ನೀರಿನಲ್ಲಿ ಕರಗಿದಾಗ ಉಂಟಾಗುವ ಸಂಯುಕ್ತಗಳು.
ಉದಾ|| Na_2O, K_2O

5.ಅಯಾನಿಕ ಸಂಯುಕ್ತಗಳ ಗುಣಲಕ್ಷಣಗಳನ್ನು ಪಟ್ಟಿಮಾಡಿ.

-ಇವು ಘನವಸ್ತುಗಳಾಗಿದ್ದು ಕಠಿಣ ಮತ್ತು ಬಿಧುರವಾಗಿರುತ್ತವೆ
-ಹೆಚ್ಚಿನ ಕರಗುವ ಮತ್ತು ಕುದಿಬಿಂದುಗಳನ್ನು ಹೊಂದಿವೆ
-ಸಾಮಾನ್ಯವಾಗಿ ನೀರಿನಲ್ಲಿ ವಿಲೀನವಾಗುತ್ತವೆ
-ದ್ರಾವಣದ ಮೂಲಕ ವಿದ್ಯುತ್ ಹರಿಯಲು ಬಿಡುತ್ತವೆ.

6.ಈ ಕೆಳಗೆ ನೀಡಲಾಗಿರುವ ಸಮೀಕರಣಗಳಲ್ಲಿ ಯಾವುದು ಸರಿಯಾಗಿದೆ? ಏಕೆ?

ಎ)$Fe + CuSO_4 \longrightarrow FeSO_4 + Cu$
ಬಿ)$FeSO_4 + Cu \longrightarrow Fe + CuSO_4$

- ಎ.

ಏಕೆಂದರೆ ಕಬ್ಬಿಣ(Fe) ಹೆಚ್ಚು ಕ್ರಿಯಾಶೀಲ ಲೋಹ. ಇದು ಕಡಿಮೆ ಕ್ರಿಯಾಶೀಲ ಲೋಹವಾದ ತಾಮ್ರ(Cu)ವನ್ನು ತಾಮ್ರದ ಸಲ್ಫೇಟ್ ದ್ರಾವಣ($CuSO_4$)ದಿಂದ ಸ್ಥಾನಪಲ್ಲಟಗೊಳಿಸುತ್ತದೆ.

7.ಕಾರಣ ಕೊಡಿ:

ಎ)ಸೋಡಿಯಂ ಮತ್ತು ನೀರಿನ ನಡುವಿನ ಕ್ರಿಯೆಯಲ್ಲಿ ಬಿಡುಗಡೆಯಾಗುವ ಹೈಡ್ರೋಜನ್ ಅನಿಲವು ತಕ್ಷಣವೇ ಹೊತ್ತಿಕೊಂಡು ಉರಿಯುತ್ತದೆ.

-ಏಕೆಂದರೆ ಈ ಕ್ರಿಯೆಯು ತೀವ್ರ ಮತ್ತು ಬಹಿರುಷ್ಣಕವಾಗಿರುತ್ತದೆ. ಬಿಡುಗಡೆಯಾಗುವ ತಾಪವು ಹೈಡ್ರೋಜನ್ ಅನಿಲವು ಹೊತ್ತಿಕೊಂಡು ಉರಿಯುವಂತೆ ಮಾಡುತ್ತದೆ.

ಬಿ)ಲೋಹವು ನೈಟ್ರಿಕ್ ಆಮ್ಲದ ಜೊತೆ ಪ್ರತಿವರ್ತಿಸಿದಾಗ ಹೈಡ್ರೋಜನ್ ಅನಿಲ ಬಿಡುಗಡೆಯಾಗುವುದಿಲ್ಲ.

-ಏಕೆಂದರೆ ನೈಟ್ರಿಕ್ ಆಮ್ಲವು ಪ್ರಬಲ ಉತ್ಕರ್ಷಕ. ಇದು ಉತ್ಪತ್ತಿಯಾದ ಹೈಡ್ರೋಜನ್ ಅನ್ನು ಉತ್ಕರ್ಷಿಸಿ ನೀರನ್ನು ಉತ್ಪತ್ತಿ ಮಾಡುತ್ತದೆ ಮತ್ತು ಸ್ವತಃ ಯಾವುದಾದರೊಂದು ನೈಟ್ರೋಜನ್ ಆಕ್ಸೈಡ್ ಆಗಿ ಅಪಕರ್ಷಣೆ ಹೊಂದುತ್ತದೆ.

ಸಿ)ಬೆಳ್ಳಿಯ ಪಾತ್ರೆಗಳನ್ನು ಗಾಳಿಗೆ ತೆರೆದಿಟ್ಟಾಗ ಸ್ವಲ್ಪ ಕಾಲದ ನಂತರ ಕಪ್ಪಾಗುತ್ತವೆ.

-ಏಕೆಂದರೆ ಬೆಳ್ಳಿ ಗಾಳಿಯಲ್ಲಿರುವ ಸಲ್ಫರ್ ಜೊತೆ ವರ್ತಿಸಿ ಬೆಳ್ಳಿಯ ಸಲ್ಫೈಡ್ ಪದರ ಉಂಟಾಗುತ್ತದೆ.

ಡಿ)ಕ್ಯಾಲ್ಸಿಯಂ ಲೋಹವು ನೀರಿನೊಂದಿಗೆ ವರ್ತಿಸಿದಾಗ, ನೀರಿನ ಮೇಲೆ ತೇಲಲು ಪ್ರಾರಂಭಿಸುತ್ತದೆ.


-ಏಕೆಂದರೆ ಈ ಕ್ರಿಯೆಯಲ್ಲಿ ಬಿಡುಗಡೆಯಾಗುವ ಹೈಡ್ರೋಜನ್ ಅನಿಲವು ಕ್ಯಾಲ್ಸಿಯಂ ಲೋಹಕ್ಕೆ ಅಂಟಿಕೊಂಡಿರುತ್ತದೆ.

ಇ)ಅಯಾನಿಕ ಸಂಯುಕ್ತಗಳು ಹೆಚ್ಚಿನ ಕರಗುವ ಮತ್ತು ಕುದಿಬಿಂದುಗಳನ್ನು ಹೊಂದಿವೆ.


-ಏಕೆಂದರೆ ಅಣುಗಳ ನಡುವಿನ ಪ್ರಬಲ ಅಯಾನಿಕ್ ಬಂಧವನ್ನು ಒಡೆಯಲು ಹೆಚ್ಚಿನ ಶಕ್ತಿ ಬೇಕಾಗುತ್ತದೆ

ಪರೀಕ್ಷೆಗೆ ನೀಡಬಹುದಾದ ಸಂಭವನೀಯ ಚಿತ್ರಗಳು:

ಎ)ಲೋಹದ ಮೇಲೆ ಹಬೆಯ ವರ್ತನೆ (ಚಿತ್ರ-3.3)



ಬಿ)ಲವಣ ದ್ರಾವಣದ ವಾಹಕತೆಯನ್ನು



ಪರೀಕ್ಷಿಸುತ್ತಿರುವುದು.(ಚಿತ್ರ-3.8)

(ಪರಿಕಲ್ಪನೆಗಳಾದ 3.4 & 3.5 ಈ ವಿಷಯಗಳಿಗೆ ಸಂಬಂಧಿಸಿದಂತೆ ಪುಟಸಂಖ್ಯೆ 61 ರಿಂದ 68 ರವರೆಗಿನ ಪಠ್ಯ ಭಾಗವನ್ನು ಈ ವರ್ಷ ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ).

ಬಾಲರಾಜು ಎ. ಎಂಎಸ್‌ಸಿ,ಎಂಇಡಿ,
ವಿಜ್ಞಾನ ಶಿಕ್ಷಕರು, ಚಿಕ್ಕಬಳ್ಳಾಪುರ

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿ ರಸಾಯನಶಾಸ್ತ್ರದ 'ಮೆಟಲ್ ಅಂಡ್ ನಾನ್ ಮೆಟಲ್' ಅಧ್ಯಾಯಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಮಾದರಿ ಪ್ರಶ್ನೋತ್ತರ

ದ್ರಾವಕ ಮತ್ತು ದ್ರಾವಣಗಳು

ರಸಾಯನ ಶಾಸ್ತ್ರ

ಪಿಯುಸಿ

8) ಒಂದು ದ್ರಾವಕದಲ್ಲಿ, ಅನಿಲದ ಒತ್ತಡ ಮತ್ತು ವಿಲೀನತೆಗಳ ನಡುವೆ ಇರುವ ಪರಿಣಾತ್ಮಕ ಸಂಬಂಧವನ್ನು ಕಲ್ಪಿಸುವ ಹೆನ್ರಿಯ ನಿಯಮಮವನ್ನು ತಿಳಿಸಿ

ಉತ್ತರ:- ಒಂದು ದ್ರಾವಕದಲ್ಲಿ, ಅನಿಲದ ಒತ್ತಡ ಮತ್ತು ವಿಲೀನತೆಗಳ ನಡುವೆ ಇರುವ ಪರಿಣಾತ್ಮಕ ಸಂಬಂಧವನ್ನು ಕೊಡುವಲ್ಲಿ ಹೆನ್ರಿಯು ಮೊದಲಿಗನಾಗಿದ್ದಾನೆ. ಹೆನ್ರಿಯ ನಿಯಮವು ನಿರೂಪಿಸುವುದೇನೆಂದರೆ,

'ನಿರ್ದಿಷ್ಟ ತಾಪಮಾನವೊಂದರಲ್ಲಿ, ಒಂದು ದ್ರವದಲ್ಲಿ ಅನಿಲವೊಂದರ ವಿಲೀನತೆಯು ದ್ರವದ ಅಥವಾ ದ್ರಾವಣದ ಮೇಲ್ಮೈಯಲ್ಲಿನ ಅನಿಲದ ಆಂಶಿಕ ಒತ್ತಡಕ್ಕೆ ಅನುಲೋಮಾನುಪಾತದಲ್ಲಿರುತ್ತದೆ'.

9) 'ಆವಿಶೀಲ ದ್ರವಗಳ ದ್ರಾವಣದಲ್ಲಿ ದ್ರಾವಣದ ಪ್ರತಿಯೊಂದು ಘಟಕಗಳ ಆಂಶಿಕ ಒತ್ತಡವು ದ್ರಾವಣದಲ್ಲಿನ ಅವುಗಳ ಮೋಲ್ ಭಿನಾಂಶದೊಂದಿಗೆ ಅನುಲೋಮಾನುಪಾತದಲ್ಲಿರುತ್ತದೆ.' ಈ ನಿಯಮವನ್ನು ನೀಡಿದವರು ಯಾರು?

ಉತ್ತರ:- ಪ್ರ್ಯಾಂಕೋಯಿಸ್ ಮಾಚಿ ರೌಲ್ಟ್

10) ಡಾಲ್ಟನ್‌ನ ಆಂಶಿಕ ಒತ್ತಡಗಳ ನಿಯಮದ ಪ್ರಕಾರ ಯಾವೆಲ್ಲಾ ತೀರ್ಮಾನಗಳನ್ನು ತೆಗೆದುಕೊಳ್ಳಬಹುದು?

ಉತ್ತರ:- ಡಾಲ್ಟನ್‌ನ ಆಂಶಿಕ ಒತ್ತಡಗಳ ನಿಯಮದ ಪ್ರಕಾರ ಈ ಕೆಳಗಿನ ತೀರ್ಮಾನಗಳನ್ನು ಕೈಗೊಳ್ಳಬಹುದು.
(i) ದ್ರಾವಣದ ಮೇಲಿನ, ಒಟ್ಟು ಆವಿ ಒತ್ತಡವನ್ನು ಯಾವುದೇ ಒಂದು ಘಟಕದ ಮೋಲ್ ಭಿನ್ನಾಂಶದೊಂದಿಗೆ ಸಂಬಂಧಗೊಳಿಸಲ್ಪಡಬಹುದು.
(ii) ದ್ರಾವಣದ ಮೇಲಿನ ಒಟ್ಟು ಆವಿ ಒತ್ತಡವು, ಘಟಕ 2ರ ಮೋಲ್ ಭಿನ್ನಾಂಶದೊಂದಿಗೆ ರೇಖಾತ್ಮಕವಾಗಿ (Linearly) ಬದಲಾಗುತ್ತದೆ.
(iii) ಶುದ್ಧ ಘಟಕಗಳು 1 ಮತ್ತು 2ಗಳ ಆವಿ ಒತ್ತಡಗಳಿಗೆ ಅವಲಂಬಿಸಿದಂತೆ, ದ್ರಾವಣದ ಮೇಲಿನ ಒಟ್ಟು ಆವಿ ಒತ್ತಡವು, ಘಟಕ 1ರ ಮೋಲ್‌ನ ಭಿನ್ನಾಂಶ ಹೆಚ್ಚಿದಂತೆ, ಹೆಚ್ಚುತ್ತದೆ ಅಥವಾ ಕಡಿಮೆಯಾದಂತೆ ಕಡಿಮೆಯಾಗುತ್ತದೆ.

11) ಆದರ್ಶದ್ರಾವಣಗಳ (Ideal solutions) ಗುಣ ಲಕ್ಷಣದ ಬಗ್ಗೆ ಬರೆಯಿರಿ

ಉತ್ತರ:- ಸಾರತೆಯ, ಎಲ್ಲಾ ವ್ಯಾಪ್ತಿಯಲ್ಲಿ, ರೌಲ್ಟನ, ನಿಯಮವನ್ನು ಪಾಲಿಸುವ ದ್ರಾವಣಗಳನ್ನು ಆದರ್ಶದ್ರಾವಣಗಳು ಎನ್ನುವರು. ಆದರ್ಶದ್ರಾವಣಗಳು ಎರಡು ಪ್ರಮುಖ ಗುಣಲಕ್ಷಣಗಳನ್ನು ಹೊಂದಿವೆ. ಶುದ್ಧ ಘಟಕಗಳನ್ನು ಮಿಶ್ರಣಮಾಡಿ. ದ್ರಾವಣವುಂಟುಮಾಡಿದಾಗ ಬದಲಾವಣೆಯಾಗುವ ಎಂಥಾಲ್ಪಿಯು (Enthalpy) ಶೂನ್ಯವಾಗಿರುತ್ತದೆ. ಮತ್ತು ಮಿಶ್ರಣ ಮಾಡಿದಾಗ ಬದಲಾವಣೆಯಾಗುವ ಗಾತ್ರವು ಶೂನ್ಯವಾಗಿರುತ್ತದೆ.

12) ಆವಿ ಒತ್ತಡದ ಇಳಿಕೆಗೆ ಸಂಬಂಧಿಸಿದಂತೆ ದ್ರಾವಣಗಳಿಗೆ ಅನೇಕ ಗುಣಲಕ್ಷಣಗಳಿವೆ ಅವುಗಳನ್ನು ತಿಳಿಸಿ

ಉತ್ತರ:- ಆವಿಶೀಲ ದ್ರಾವಕವೊಂದಕ್ಕೆ ಆವಿಶೀಲವಲ್ಲದ ದ್ರಾವ್ಯವೊಂದನ್ನು ಸೇರಿಸಿದಾಗ ದ್ರಾವಣದ ಆವಿ ಒತ್ತಡವು ಕಡಿಮೆಯಾಗುತ್ತದೆ ಈ ಆವಿ ಒತ್ತಡದ ಇಳಿಕೆಗೆ ಸಂಬಂಧಿಸಿದಂತೆ ದ್ರಾವಣಗಳಿಗೆ ಅನೇಕ ಗುಣಲಕ್ಷಣಗಳಿವೆ. ಇವುಗಳು

1) ದ್ರಾವಕದ ಆವಿ ಒತ್ತಡದ ಸಾಪೇಕ್ಷ ಇಳಿಕೆ (Relative lowering of vapour pressure)
2) ದ್ರಾವಕದ ಘನೀಕರಣ ಬಿಂದುವಿನ ಕುಸಿತ (Depression of freezing point of the solvent)
3) ದ್ರಾವಕದ ಕುದಿ ಬಿಂದುವಿನ ಏರಿಕೆ (Elevation of boiling point of the solvent) ಮತ್ತು
4) ದ್ರಾವಣದ ಪರಾಸರಣ ಒತ್ತಡ (Osmotic pressure of the solution)

13) ಸಂಯೋಜನೆಯ ವ್ಯಾಪ್ತಿಯನ್ನು ಪರಿಗಣಿಸಲು ಇರುವ ವ್ಯಾಂಟೆಹಾಫನ i ಅಂಶ (Factor) ವ್ಯಾಖ್ಯಾನಿಸಿ

ಉತ್ತರ:- ವ್ಯಾಂಟೆಹಾಫನ i ಅಂಶ (Factor) ಅಂಶವೊಂದನ್ನು 1880ರಲ್ಲಿ ಪರಿಚಯಿಸಿದನು. ವಿಯೋಜನೆ ಅಥವಾ ಸಂಯೋಜನೆಯ ವ್ಯಾಪ್ತಿಯನ್ನು ಪರಿಗಣಿಸಲು, ಈ ಅಂಶ i ಅನ್ನು ಹೀಗೆ ವ್ಯಾಖ್ಯಾನಿಸಲಾಗಿದೆ.

$$i = \frac{\text{ಸಾಮಾನ್ಯ ಮೋಲಾರ್ ದ್ರವ್ಯರಾಶಿ}}{\text{ಅಸಂಬದ್ಧ ಮೋಲಾರ್ ದ್ರವ್ಯರಾಶಿ}} = \frac{\text{ಗಮನಿಸಿದ ಕಣಾವಲಂಬಿ ಗುಣಲಕ್ಷಣ}}{\text{ಲೆಕ್ಕಿಸಿದ ಕಣಾವಲಂಬಿ ಗುಣಲಕ್ಷಣ}}$$

$$i = \frac{\text{ಸಂಯೋಜನೆ / ವಿಯೋಜನೆ ನಂತರ ಒಟ್ಟು ಕಣಗಳ ಮೋಲ್‌ಗಳ ಸಂಖ್ಯೆ}}{\text{ಸಂಯೋಜನೆ/ ವಿಯೋಜನೆ ಮೊದಲು ಇದ್ದ ಕಣಗಳ ಮೋಲ್‌ಗಳ ಸಂಖ್ಯೆ}}$$

ಇಲ್ಲಿ ಅಸಂಬದ್ಧ ಮೋಲಾರ್ ದ್ರವ್ಯರಾಶಿಯು, ಪ್ರಾಯೋಗಿಕವಾಗಿ ನಿರ್ಧರಿಸಿದ ಮೋಲಾರ್ ದ್ರವ್ಯರಾಶಿಯಾಗಿದೆ ಮತ್ತು ಲೆಕ್ಕಿಸಿದ ಕಣಾವಲಂಬಿ ಗುಣಲಕ್ಷಣಗಳು, ಆವಿಶೀಲವಲ್ಲದ ದ್ರಾವ್ಯವು, ಸಂಯೋಜನೆಯೂ ಆಗುವುದಿಲ್ಲ, ವಿಯೋಜನೆಯೂ ಆಗುವುದಿಲ್ಲ ಎಂದು ಊಹಿಸಿ ಪಡೆಯಲಾಗಿರುತ್ತದೆ. ಸಂಯೋಜನೆಯ ಸಂದರ್ಭದಲ್ಲಿ i ನ ಮೌಲ್ಯವು ಒಂದಕ್ಕಿಂತ ಕಡಿಮೆಯಿದ್ದರೆ, ವಿಯೋಜನೆಗೆ ಒಂದಕ್ಕಿಂತ ಅಧಿಕವಾಗಿರುತ್ತದೆ.

14) ವಿದ್ಯುದಾಗ್ರ ವಿಭವ ಮತ್ತು ಶಿಷ್ಟ ವಿದ್ಯುದಾಗ್ರ ವಿಭವವನ್ನು ವಿವರಿಸಿ (ಗ್ಯಾಲ್ವಾನಿಕ್ ಕೋಶದ ಹಿನ್ನೆಯಲ್ಲಿ)

ಉತ್ತರ:- ಡೇನಿಯಲ್ ಕೋಶದ ಮಾದರಿಯಲ್ಲಿ ವಿವಿಧ ಅರ್ಧಕೋಶಗಳನ್ನು ಜೋಡಿಸಿ ಅನೇಕ ಗ್ಯಾಲ್ವಾನಿಕ್ ಕೋಶಗಳನ್ನು ನಿರ್ಮಿಸಬಹುದು. ಪ್ರತಿ ಅರ್ಧಕೋಶವೂ ಒಂದು ಲೋಹದ ವಿದ್ಯುದಾಗ್ರವನ್ನು ವಿದ್ಯುದ್ವಿಭಾಜ್ಯ ದ್ರಾವಣದಲ್ಲಿ ಅದ್ದಿರುವುದಾಗಿದೆ. ಎರಡು ಅರ್ಧಕೋಶಗಳನ್ನು ಬಾಹ್ಯವಾಗಿ ವೋಲ್ಟ್ ಮೀಟರ್ ಮತ್ತು ಸ್ವಿಚ್ ಮುಖಾಂತರ ಲೋಹದ ತಂತಿಗಳಿಂದ ಸಂಪರ್ಕಿಸಲಾದಾಗ ಎರಡು ಅರ್ಧಕೋಶಗಳ ವಿದ್ಯುದ್ವಿಭಾಜ್ಯಗಳನ್ನು ಆಂತರಿಕವಾಗಿ ಲವಣ ಸೇತುವೆ ಮೂಲಕ ಸಂಪರ್ಕಿಸಲಾಗುತ್ತದೆ. (ಕೆಲವು ಬಾರಿ ಎರಡೂ ವಿದ್ಯುದಾಗ್ರಗಳನ್ನೂ ಒಂದೇ ವಿದ್ಯುದ್ವಿಭಾಜ್ಯ ದ್ರಾವಣದಲ್ಲಿ ಅದ್ದಿದ್ದು ಮತ್ತು ಆ ಸಂದರ್ಭದಲ್ಲಿ ನಮಗೆ ಲವಣ ಸೇತುವೆಯು ಬೇಕಾಗಿರುವುದಿಲ್ಲ.)


ಪ್ರತಿಯೊಂದು ವಿದ್ಯುದಾಗ್ರ ಮತ್ತು ವಿದ್ಯುದ್ವಿಭಾಜ್ಯ ಅಂತರ್-ಸಂಪರ್ಕದಲ್ಲಿ, ಲೋಹದ ಅಯಾನುಗಳು ದ್ರಾವಣದಿಂದ ಲೋಹದ ವಿದ್ಯುದಾಗ್ರದ ಮೇಲೆ ಶೇಖರಣೆಯಾಗುವ ಸಾಮರ್ಥ್ಯ ಹೊಂದಿದ್ದು ಅದನ್ನು ಧನಾವೇಶವಾಗುವಂತೆ ಮಾಡುತ್ತವೆ. ಆದೇ ಸಮಯದಲ್ಲಿ, ಲೋಹದ ವಿದ್ಯುದಾಗ್ರದ ಲೋಹದ ಪರಮಾಣುಗಳು ದ್ರಾವಣದೊಳಗೆ ಅಯಾನುಗಳಾಗಿ ಹೋಗುವ ಸಾಮರ್ಥ್ಯ ಹೊಂದಿದ್ದು ವಿದ್ಯುದಾಗ್ರದಲ್ಲಿ ಎಲೆಕ್ಟ್ರಾನುಗಳನ್ನು ಬಿಟ್ಟು ಅದನ್ನು ಋಣಾವೇಶವಾಗುವಂತೆ ಮಾಡುತ್ತವೆ. ಸಮಸ್ಥಿತಿಯಲ್ಲಿ, ಆವೇಶಗಳ ಬೇರ್ಪಡಿಸುವಿಕೆಯಾಗುತ್ತವೆ ಮತ್ತು ಎರಡು ವಿದ್ಯುದಾಗ್ರಗಳು, ವಿರುದ್ಧ ಕ್ರಿಯೆಗಳ ಸಾಮರ್ಥ್ಯಗಳ ಅವಲಂಬಿಯಾಗಿ, ದ್ರಾವಣಕ್ಕೆ ಅನುಗುಣವಾಗಿರುವಂತೆ, ಧನಾವೇಶ ಅಥವಾ ಋಣಾವೇಶವುಳ್ಳವಾಗಿರುತ್ತವೆ. ವಿದ್ಯುದಾಗ್ರಗಳ ಮತ್ತು ವಿದ್ಯುದ್ವಿಭಾಜ್ಯ ನಡುವೆ ಉಂಟಾಗುವ ವಿಭವಾಂತರವನ್ನು ವಿದ್ಯುದಾಗ್ರ ವಿಭವ ಎನ್ನುತ್ತಾರೆ. ಅರ್ಧಕೋಶದಲ್ಲಿರುವ ಎಲ್ಲಾ ಬಗೆಯ ಅಯಾನುಗಳ ಸಾರತೆ ಏಕವಾದಲ್ಲಿ ವಿದ್ಯುದಾಗ್ರ ವಿಭವವನ್ನು ಶಿಷ್ಟ ವಿದ್ಯುದಾಗ್ರ ವಿಭವ ಎನ್ನುತ್ತಾರೆ.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ರಸಾಯನಶಾಸ್ತ್ರದ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.


ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦
ಸಜ್ಜನರಂತೆ ಮುಖವಾಡ ಧರಿಸುವ ಜನರ ಬಗ್ಗೆ ಎಚ್ಚರದಿಂದ ಇರಬೇಕು.
-ದ.ರಾ. ಬೇಂದ್ರೆ

ಪರೀಕ್ಷಾ ಅಭ್ಯರ್ಥಿಗಳಿಗೆ ವಸ್ತ್ರಸಂಹಿತೆ ಅನಗತ್ಯ ಹಾಗೂ ಅತಿರೇಕದ ನಿರ್ಧಾರ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಈ ತಿಂಗಳ 12ರಿಂದ 16ರವರೆಗೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಇದೇ ಮೊದಲ ಬಾರಿಗೆ ವಸ್ತ್ರಸಂಹಿತೆ ಜಾರಿಗೊಳಿಸಲಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಿಗದಿಪಡಿಸಿರುವ ಈ ವಸ್ತ್ರಸಂಹಿತೆ ಅತಿರೇಕದಿಂದ ಕೂಡಿದೆ ಹಾಗೂ ಪರೀಕ್ಷಾ ಪ್ರಕ್ರಿಯೆಯಲ್ಲಿನ ಲೋಪಗಳನ್ನು ಸೂಚಿಸುವಂತಿದೆ. ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ಕಲ್ಪಿಸುವ 'ನೀಟ್' ಬರೆಯುವ ವಿದ್ಯಾರ್ಥಿಗಳಿಗೆ ವಸ್ತ್ರಸಂಹಿತೆ ಜಾರಿಯಲ್ಲಿದೆ. ಆ ನಿರ್ಬಂಧಗಳನ್ನೀಗ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗಾಗಿ ನಡೆಸುವ ಪರೀಕ್ಷೆಗೂ ಜಾರಿಗೊಳಿಸಲಾಗಿದೆ. ಅಭ್ಯರ್ಥಿಗಳು ತುಂಬು ತೋಳಿನ ಉಡುಪು, ಶೂ, ಆಲಂಕಾರಿಕ ಉಡುಪು ಹಾಗೂ ಆಭರಣಗಳನ್ನು ತೊಡುವುದನ್ನು ನಿಷೇಧಿಸಲಾಗಿದೆ. ಮಾಂಗಲ್ಯ ಸರ ಧರಿಸುವುದಕ್ಕಷ್ಟೇ ಅವಕಾಶ ನೀಡಲಾಗಿದ್ದು, ಉಂಗುರ, ಕಿವಿಯೋಲೆ, ನೆಕ್ಲೇಸ್, ಬಳೆ, ಪೆಂಡೆಂಟ್‌ಗಳಂತಹ ಯಾವುದೇ ಆಭರಣ ಧರಿಸುವುದಕ್ಕೆ ಅವಕಾಶವಿಲ್ಲವೆಂದು ಪರೀಕ್ಷಾ ಪ್ರಾಧಿಕಾರ ಹೇಳಿದೆ. ಈ ನಿರ್ಬಂಧಗಳನ್ನು ನೋಡಿದರೆ, ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಬರುವರೋ ಅಥವಾ ಫ್ಯಾಷನ್ ಷೋದಲ್ಲಿ ಭಾಗಿಯಾಗಲು ಬರುವರೋ ಎನ್ನುವ ಗೊಂದಲ ಪ್ರಾಧಿಕಾರಕ್ಕೆ ಇರುವಂತಿದೆ. ವಸ್ತ್ರಸಂಹಿತೆಯ ನಿರ್ಧಾರವು ಪರೀಕ್ಷೆಯನ್ನು ಸಮರ್ಥವಾಗಿ ನಡೆಸುವುದಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಪ್ರಾಧಿಕಾರದ ದಕ್ಷತೆಯ ಬಗ್ಗೆಯೇ ಅನುಮಾನ ಹುಟ್ಟಿಸುವಂತಿದೆ. ಪರೀಕ್ಷೆ ಬರೆಯುವ ಅಭ್ಯರ್ಥಿಗಳನ್ನು ಅವಮಾನಿಸುವಂತೆಯೂ ಇದೆ. ಪರೀಕ್ಷೆ ಬರೆಯುತ್ತಿರುವವರು ಶಾಲಾಕಾಲೇಜು ವಿದ್ಯಾರ್ಥಿಗಳಲ್ಲ. ಪದವಿ ವಿದ್ಯಾರ್ಥಿಗಳಿಗೆ ಕಲಿಸುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನಿಯೋಜನೆಗೊಳ್ಳಬೇಕಾದವರು ನಕಲು ಮಾಡಿಯೇ ತೀರುತ್ತಾರೆಂದು ಭಾವಿಸುವುದು ಹಾಗೂ ಆ ನಕಲನ್ನು ತಡೆಯಲು ವಿಪರೀತ ಕ್ರಮಗಳನ್ನು ಕೈಗೊಳ್ಳುವುದು ತಮಾಷೆಯಾಗಿದೆ. ಸಂಭಾವ್ಯ ಅಕ್ರಮಗಳನ್ನು ತಡೆಯಲಿಕ್ಕಾಗಿ ಎಲ್ಲ ಕೊಠಡಿಗಳಲ್ಲೂ ಮೇಲ್ವಿಚಾರಕರು ಇದ್ದೇಇರುತ್ತಾರೆ. ಪರೀಕ್ಷೆ ಬರೆಯುವವರು ಕೂಡ ಸಾಮಾಜಿಕ ಜವಾಬ್ದಾರಿ ಹೊಂದಿರುವವರೇ ಆಗಿರುತ್ತಾರೆ. ಪ್ರೌಢ ಅಭ್ಯರ್ಥಿಗಳೇ ಇರುವ ಪರೀಕ್ಷೆಯಲ್ಲಿ ತುಡುಗು ನಡೆದೇ ನಡೆಯುತ್ತದೆಂದು ಭಾವಿಸುವುದು ಸರಿಯಲ್ಲ. ನಕಲು ಮಾಡುವುದಕ್ಕೆ ಸಾಧ್ಯವಾಗದಂತೆ ಪ್ರಶ್ನೆಪತ್ರಿಕೆಯನ್ನೂ ಒಳಗೊಂಡಂತೆ ಇಡೀ ಪರೀಕ್ಷಾ ಪದ್ಧತಿಯನ್ನು ರೂಪಿಸಬೇಕಾದ ಪರೀಕ್ಷಾ ಪ್ರಾಧಿಕಾರ, ಆ ಕೆಲಸ ಮಾಡುವುದರ ಬದಲು ಅಭ್ಯರ್ಥಿಗಳ ಮೇಲೆ ಅನಗತ್ಯ ನಿರ್ಬಂಧಗಳನ್ನು ಹೇರಲು ಹೊರಟಿದೆ. ನೆಮ್ಮದಿಯ ವಾತಾವರಣದಲ್ಲಿ ಪರೀಕ್ಷೆ ಬರೆಯಬೇಕಾದ ಅಭ್ಯರ್ಥಿಗಳು, ನಿರ್ಬಂಧಗಳ ಒತ್ತಡದಲ್ಲಿ ಪರೀಕ್ಷೆ ಬರೆಯುವಂತಾಗಿದೆ. ಪರೀಕ್ಷೆ ಬರೆಯಲಿಕ್ಕೆಂದೇ ವಿಶೇಷ ಉಡುಪಿನ ಸಿದ್ಧತೆಯನ್ನು ಮಾಡಿಕೊಳ್ಳಬೇಕಾದ ಅನಿವಾರ್ಯವನ್ನೂ ಕೆಲವು ಅಭ್ಯರ್ಥಿಗಳು ಎದುರಿಸಬೇಕಾಗಬಹುದು.



ನಕಲು ತಡೆಯಲು ವಿಪರೀತ ಅನಿಸುವಂತಹ ಕ್ರಮಗಳನ್ನು ಕೈಗೊಳ್ಳುವುದು ವಿವೇಕದ ನಡೆಯಲ್ಲ

ನೇಮಕಾತಿ ಪ್ರಕ್ರಿಯೆಯನ್ನು ಅತ್ಯಂತ ಪಾರದರ್ಶಕವಾಗಿ ನಡೆಸುವ ಉದ್ದೇಶದಿಂದ ವಸ್ತ್ರಸಂಹಿತೆ ರೂಪಿಸಲಾಗಿದೆ ಎಂದು ಹೇಳಲಾಗಿದೆ. ಯಾವುದೇ ಪರೀಕ್ಷೆ ಪಾರದರ್ಶಕವಾಗಿರಬೇಕು ಎನ್ನುವುದರ ಬಗ್ಗೆ ಯಾರಿಗೂ ತಕರಾರು ಇರಬಾರದು. ಪರೀಕ್ಷಾ ಕೊಠಡಿಗೆ ಅಭ್ಯರ್ಥಿಗಳು ಮೊಬೈಲ್, ಪೆನ್‌ಡ್ರೈವ್, ಇಯರ್ ಫೋನ್, ಮೈಕ್ರೊ ಫೋನ್, ಬ್ಲೂಟೂತ್‌ಗಳಂಥ ಎಲೆಕ್ಟ್ರಾನಿಕ್ ಸಲಕರಣೆಗಳನ್ನು ತರಬಾರದೆನ್ನುವ ನಿಯಮಗಳನ್ನೂ ಒಪ್ಪಬಹುದು. ಆದರೆ, ತೊಡುವ ಅಂಗಿ ಇಂಥದ್ದೇ ಆಗಿರಬೇಕು ಹಾಗೂ ಅದು ಆಲಂಕಾರಿಕ ಆಗಿರಬಾರದು ಎಂದು ಬಯಸುವುದು ವಿವೇಕದ ನಡವಳಿಕೆಯಲ್ಲ. ಹೆಣ್ಣುಮಕ್ಕಳು ಮಾಂಗಲ್ಯಸರ ಹೊರತುಪಡಿಸಿ ಉಳಿದೆಲ್ಲ ಒಡವೆಗಳನ್ನು ತೆಗೆದಿರಿಸಿ ಬರಬೇಕೆಂದು ಬಯಸುವುದೂ ಅತಿರೇಕದ ನಿರ್ಧಾರ. ಬಾಟಲಿಯಲ್ಲಿ ನೀರು ತರಲು ಅವಕಾಶ ಕಲ್ಪಿಸಿರುವ ಪರೀಕ್ಷಾ ಪ್ರಾಧಿಕಾರವು ಆ ಬಾಟಲಿಯ ಮೇಲೆ ಬ್ರ್ಯಾಂಡ್ ಹೆಸರಿರಬಾರದು ಎಂದು ಬಯಸುವುದು ಹುಚ್ಚುತನ. ಬಟ್ಟೆಯ ಮೇಲಿನ ಕಸೂತಿ, ಕಾಲಿನ ಚಪ್ಪಲಿ, ಅಂಗಿಯ ಗುಂಡಿ ಹಾಗೂ ಕಿಸೆಗಳನ್ನೂ ಪರೀಕ್ಷೆಗೊಳಪಡಿಸಲು ಪರೀಕ್ಷಾ ಪ್ರಾಧಿಕಾರ ಮುಂದಾಗಿದೆ. ಪ್ರಸ್ತುತ ವಸ್ತ್ರಸಂಹಿತೆಯಲ್ಲಿ ಅಭ್ಯರ್ಥಿಗಳು ಆಲಂಕಾರಿಕ ಉಡುಪು ಧರಿಸಲು ಅವಕಾಶವಿಲ್ಲ. ಹಾಗಾದರೆ, ಯಾವ ಉಡುಪು ಆಲಂಕಾರಿಕ ಯಾವುದು ಅಲ್ಲವೆಂದು ನಿರ್ಧರಿಸುವವರು ಯಾರು ಹಾಗೂ ಅಲಂಕಾರದ ಮಾನದಂಡಗಳು ಯಾವುವೆನ್ನುವುದನ್ನು ಪರೀಕ್ಷಾ ಪ್ರಾಧಿಕಾರ ಸ್ಪಷ್ಟಪಡಿಸಬೇಕು. ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಈವರೆಗೆ ನಡೆಸುತ್ತಿದ್ದ ಪರೀಕ್ಷೆಗಳಲ್ಲಿ ವಸ್ತ್ರಸಂಹಿತೆ ಇರಲಿಲ್ಲ. ಹಾಗೆಂದು ಆ ಪರೀಕ್ಷೆಗಳ ಮೂಲಕ ಆಯ್ಕೆಯಾದವರು ನಕಲು ಮಾಡಿದ್ದಾರೆಂದು ಭಾವಿಸಬೇಕೆ? ವಸ್ತ್ರಸಂಹಿತೆಗೆ ಬದ್ಧವಾಗಿ ಈಗ ಪರೀಕ್ಷೆ ಬರೆಯುವವರು ನಕಲು ಮಾಡುವುದಿಲ್ಲವೆಂದು ಪ್ರಾಧಿಕಾರ ಖಾತರಿ ನೀಡುತ್ತದೆಯೇ? ಪರೀಕ್ಷೆಗಳನ್ನು ಸರಳವಾಗಿ ಹಾಗೂ ಸಮರ್ಥವಾಗಿ ನಡೆಸಬೇಕಾದ ಪ್ರಾಧಿಕಾರ ಅನಗತ್ಯ ನೀತಿನಿಯಮಗಳನ್ನು ರೂಪಿಸುವ ಮೂಲಕ ಪರೀಕ್ಷಾ ಪ್ರಕ್ರಿಯೆಯನ್ನೇ ಕಗ್ಗಂಟು ಮಾಡುತ್ತಿದೆ. ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನಡೆಸುವ ಪರೀಕ್ಷೆ ಮಾತ್ರವಲ್ಲ, ಶಾಲಾಕಾಲೇಜು ಸೇರಿದಂತೆ ಯಾವ ಹಂತದಲ್ಲೂ ಪರೀಕ್ಷೆ ಬರೆಯುವ ವಾತಾವರಣ ಮುಕ್ತವಾಗಿರುವಂತೆ ನೋಡಿಕೊಳ್ಳುವುದು ಹಾಗೂ ಅಭ್ಯರ್ಥಿಗಳ ಮೇಲೆ ಅನಗತ್ಯ ನಿರ್ಬಂಧಗಳನ್ನು ಹೇರದಿರುವುದು ಆರೋಗ್ಯಕರ ಸಮಾಜದ ಲಕ್ಷಣ.

ದಿನದ ಟ್ವೀಟ್


ವಿರೋಧಾಭಾಸದ ಸ್ಥಿತಿ



ಮುಂಬೈನಲ್ಲಿ ಒಂದು ಗಂಟೆ ವಿದ್ಯುತ್ ಕಡಿತ ಆಗಿದ್ದೇಕೆ ಎಂಬುದರ ತನಿಖೆಗೆ ಮಹಾರಾಷ್ಟ್ರ ಸರ್ಕಾರವು ಉನ್ನತ ಮಟ್ಟದ ಸಮಿತಿ ರಚನೆಗೆ ಮುಂದಾಗಿದೆ. ಇಲ್ಲಿ ಬೆಂಗಳೂರಿನಲ್ಲಿ, ಕನಿಷ್ಠ ಹದಿನೈದು ದಿನಕ್ಕೆ ಒಮ್ಮೆಯಾದರೂ ಒಂದು ಗಂಟೆ ವಿದ್ಯುತ್ ಕಡಿತ ಆಗದಿದ್ದರಷ್ಟೇ ನಾವು ಆಶ್ಚರ್ಯಪಡುವಂತಹ ಸ್ಥಿತಿ ಇದೆ. ಇತ್ತೀಚೆಗೆ ಇದು ಕೆಲವು ಪ್ರದೇಶಗಳಲ್ಲಿ 1-2 ದಿನಗಳಿಗೆ ಇಳಿದಿದೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ



ಉಕ್ರೇನ್ ಮೇಲಿನ ರಷ್ಯಾ ಆಕ್ರಮಣಕ್ಕೆ ಸಂಬಂಧಿಸಿದಂತೆ ವಿಶ್ವಸಂಸ್ಥೆಯಲ್ಲಿ ಮತ ಚಲಾಯಿಸುವುದರಿಂದ ಭಾರತ ದೂರ ಉಳಿದಿದ್ದು, ಬೇರೆ ಯಾರಿಗಿಂತ ನಮಗೇ ಹೆಚ್ಚು ಹಾನಿ ಉಂಟು ಮಾಡುವ ಸಾಧ್ಯತೆಯಿದೆ. ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ನಾವು ಯಾವ ಕಡೆ ಇರಬೇಕು ಎಂಬುದು ಸ್ಪಷ್ಟವಾಗಿ ಇರಬೇಕಲ್ಲವೇ?

ತವ್ಲೀನ್ ಸಿಂಗ್, ಲೇಖಕಿ, ಅಂಕಣಕಾರ್ತಿ

25 ವರ್ಷಗಳ ಹಿಂದೆ
ಶನಿವಾರ, 1-3-1997

• ಗ್ರಾಮೀಣ ಅಭಿವೃದ್ಧಿಗೆ ಆದ್ಯತೆ: ಅಂಚೆ ದರ ತೀವ್ರ ಏರಿಕೆ

ನವದೆಹಲಿ, ಫೆ. 28– ಅಂಚೆ ಸಾಮಗ್ರಿಗಳು ಇನ್ನಷ್ಟು ತುಟ್ಟಿ, ಬೀಡಿ, ಸಿಗರೇಟಿನ ಮೇಲೆ ಹೆಚ್ಚು ತೆರಿಗೆ, ವರಮಾನ ತೆರಿಗೆದಾರರಿಗೆ ಕೊಂಚ ಪರಿಹಾರ ಹಾಗೂ ಗ್ರಾಮೀಣ ಅಭಿವೃದ್ಧಿಗೆ ಹೆಚ್ಚು ಒತ್ತು– ಇವು ಕೇಂದ್ರ ಹಣಕಾಸು ಸಚಿವ ಪಿ. ಚಿದಂಬರಂ ಅವರು ಮಂಡಿಸಿದ 1997–98ನೇ ಸಾಲಿನ, ಸರ್ವರನ್ನೂ ಸುಪ್ರೀತಗೊಳಿಸುವ ಬಜೆಟ್‌ನ ಮುಖ್ಯ ರೂಪುರೇಷೆಗಳು.

ಬಂಡವಾಳ ಪೇಟೆಗೆ ನವಚೈತನ್ಯ ನೀಡಲು ಪರಿಹಾರಗಳು, ಆಹಾರಧಾನ್ಯ ಹಾಗೂ ರಸಗೊಬ್ಬರ ಸಹಾಯಧನ ಏರಿಕೆ, ಎಕ್ಸೈಸ್ ತೆರಿಗೆ ಪ್ರಮಾಣ ಖೋತಾ, ಆಮದು ಸುಂಕ ಇಳಿತ, ರಕ್ಷಣಾ ಕಾರ್ಯಕ್ಕೆ ಹೆಚ್ಚು ಹಣ ನೀಡಿಕೆ– ಇವು ಮುಖ್ಯಾಂಶಗಳು.

ಮಹಾನಗರಗಳಲ್ಲಿ ನಾಲ್ಕು ಚಕ್ರಗಳ ವಾಹನ, ಆಸ್ತಿಪಾಸ್ತಿ, ಟೆಲಿಫೋನ್‌ಗಳನ್ನು ಹೊಂದಿರುವವರು ಅಥವಾ ವಿದೇಶ ಪ್ರವಾಸ ಮಾಡಿರುವವರಿಗೆ ವರಮಾನ ತೆರಿಗೆ ವಿವರ ನೀಡಿಕೆಯನ್ನು ಕಡ್ಡಾಯ ಮಾಡಿರುವ ಸಚಿವರು, ಕಪ್ಪುಹಣವನ್ನು ಅಧಿಕೃತ ವರಮಾನವಾಗಿ ಪರಿವರ್ತಿಸುವ ಯೋಜನೆಯೊಂದನ್ನು ಪ್ರಕಟಿಸಿದರು.

ಸಾಮಾನ್ಯ ಪೋಸ್ಟ್‌ಕಾರ್ಡ್‌ನ ಬೆಲೆಯನ್ನು 15ರಿಂದ 25 ಪೈಸೆಗೆ ಏರಿಸಲಾಗಿದೆ.

ಅಂಚೆ ಸಾಮಗ್ರಿಗಳ ಬೆಲೆಯೇರಿಕೆಯಿಂದ ಒಟ್ಟು ರೂ 367 ಕೋಟಿ ವರಮಾನ ಸಂಗ್ರಹಿಸುವ ಉದ್ದೇಶವಿದ್ದು, ಸೇವಾ ತೆರಿಗೆಯನ್ನು ಇನ್ನೂ ಹಲವಾರು ದಂಧೆಗಳಿಗೆ ವಿಸ್ತರಿಸುವ ಮೂಲಕ ರೂ 1,200 ಕೋಟಿ ಸಂಗ್ರಹಿಸಲು ಉದ್ದೇಶಿಸಲಾಗಿದೆ.

ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿ ಹಲವು ಪ್ರೋತ್ಸಾಹದಾಯಕ ಕ್ರಮಗಳನ್ನು ಪ್ರಕಟಿಸಿರುವುದರಿಂದ ವೈಯಕ್ತಿಕ ಕಂಪ್ಯೂಟರ್‌ಗಳು, ಇತರ ಎಲೆಕ್ಟ್ರಾನಿಕ್ಸ್ ವಸ್ತುಗಳು ಕಡಿಮೆ ಬೆಲೆಗೆ ದೊರೆಯಲಿವೆ.

50 ವರ್ಷಗಳ ಹಿಂದೆ
ಬುಧವಾರ, 1-3-1972


• ಕಲ್ಬುರ್ಗಿಯಲ್ಲಿ ಘರ್ಷಣೆ: ಗೋಲಿಬಾರ್– ಕರ್ಫ್ಯೂ; ಏಳು ಮಂದಿಗೆ ಗಾಯ

ಕಲ್ಬುರ್ಗಿ, ಫೆ. 28– ಹೋಳಿ ಹಬ್ಬದ ಮೆರವಣಿಗೆಗೆ ಅಡ್ಡಿ ಮಾಡಿದ್ದರಿಂದ ಸೋಮವಾರ ಸಂಜೆ ಆರಂಭವಾದ ಎರಡು ಗುಂಪುಗಳ ನಡುವಣ ಘರ್ಷಣೆಯು ಇಂದು ತೀವ್ರ ಸ್ವರೂಪ ತಾಳಿದಾಗ, ಬೆಳಗಿನ ಜಾವ ಪೊಲೀಸರು ಗುಂಡು ಹಾರಿಸಿ ಏಳು ಮಂದಿಗೆ ಗಾಯವಾಯಿತು. ಈಗ ಕಲ್ಬುರ್ಗಿಯಲ್ಲಿ ಮಂಗಳವಾರ ಸಂಜೆ 7 ಗಂಟೆಯಿಂದ ಎರಡು ದಿನಗಳ ಕರ್ಫ್ಯೂ ಜಾರಿಗೆ ತರಲಾಗಿದೆ.

ತಮ್ಮ ಮೇಲೆ ಕಲ್ಲು ಬೀರುತ್ತಿದ್ದ ಸುಮಾರು 500 ಮಂದಿಯ ಗುಂಪೊಂದರ ಮೇಲೆ ಇಂದು ಬೆಳಗಿನ ಜಾವದಲ್ಲಿ ಪೊಲೀಸರು ಆತ್ಮರಕ್ಷಣೆಗಾಗಿ ಗುಂಡು ಹಾರಿಸಿದಾಗ 7 ಮಂದಿ ಗಾಯಗೊಂಡರು.

ರಷ್ಯಾ ಯುದ್ಧಕ್ಕೆ ಮುಂದಾಗಲಿ ಎಂದು ಅಮೆರಿಕ ಬಯಸಿತ್ತೇ?

ದಿಗ್ಗಜರ ಹಗೆ, ಉಕ್ರೇನ್ ಬೇಗೆ



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ರಷ್ಯಾದ ಉಕ್ರೇನ್ ಯುದ್ಧ ಅನಿರೀಕ್ಷಿತವೇನೂ ಆಗಿರಲಿಲ್ಲ. ಈ ಯುದ್ಧ ನಾಲ್ಕಾರು ವರ್ಷಗಳ ಹಿಂದೆಯೇ ಆಗುವ ಸಂಭವ ಇತ್ತು. ಜಾಗತಿಕ ಬೆಳವಣಿಗೆಗಳು ಪುಟಿನ್ ಅವರ ಕೈಗಳನ್ನು ಕಟ್ಟಿಹಾಕಿದ್ದವು. ಇದೀಗ ಉಕ್ರೇನಿನ ಮೇಲೆ ರಷ್ಯಾ ಮುಗಿಬಿದ್ದಿದೆ. ಯುದ್ಧದ ವ್ಯಾಪ್ತಿ ಹಿರಿದಾಗಬಹುದೇ ಎಂಬ ಆತಂಕ ಪ್ರಪಂಚವನ್ನು ಕಾಡುತ್ತಿದೆ. ರಷ್ಯಾದ ಉಕ್ರೇನ್ ಯುದ್ಧಕ್ಕೆ ನ್ಯಾಟೊದ ವಿಸ್ತರಣಾ ದಾಹ ಪ್ರಮುಖ ಕಾರಣವಾದರೂ, ಅದನ್ನು ಮೀರಿದ ಹಿತಾಸಕ್ತಿಗಳು ಈ ಯುದ್ಧಕ್ಕೆ ಪ್ರಚೋದನೆ ಒದಗಿಸಿವೆ.

ಇತಿಹಾಸವನ್ನು ಸಂಕ್ಷಿಪ್ತವಾಗಿ ಮೆಲುಕು ಹಾಕುವುದಾದರೆ, ಎರಡನೇ ವಿಶ್ವಸಮರದ ಬಳಿಕ ಅಮೆರಿಕ ಮತ್ತು ಸೋವಿಯತ್ ರಷ್ಯಾ ಸೂಪರ್ ಪವರ್ ರಾಷ್ಟ್ರಗಳಾಗಿ ಹೊರಹೊಮ್ಮಿದವು. ಈ ಸೂಪರ್ ಪವರ್ ರಾಷ್ಟ್ರಗಳ ನಡುವೆ ಮಾತ್ಸರ್ಯ ಮತ್ತು ಅನುಮಾನ ಮೊಳಕೆಯೊಡೆದಿತ್ತು. 1949ರಲ್ಲಿ ಅಮೆರಿಕ ಮತ್ತು ಪಶ್ಚಿಮ ಯುರೋಪಿನ ಪ್ರಮುಖ ರಾಷ್ಟ್ರಗಳು ಭದ್ರತೆಯ ಹೆಸರಿನಲ್ಲಿ ಕೈ ಕೈ ಹಿಡಿದು ನಿಂತವು. ನ್ಯಾಟೊ ಅಸ್ತಿತ್ವಕ್ಕೆ ಬಂತು. ಇದಕ್ಕೆ ಪ್ರತಿಯಾಗಿ ಪೂರ್ವ ಐರೋಪ್ಯ ರಾಷ್ಟ್ರಗಳನ್ನು ಸಂಘಟಿಸಿದ ಸೋವಿಯತ್ ಒಕ್ಕೂಟ, ವಾರ್ಸಾ ಒಪ್ಪಂದಕ್ಕೆ ಮುಂದಾಯಿತು. ಈ ಎರಡು ಒಕ್ಕೂಟಗಳ ಮೂಲಕ ತಮ್ಮ ಪ್ರಭಾವ ವಲಯವನ್ನು ಕಾಯ್ದುಕೊಳ್ಳಲು ಅಮೆರಿಕ ಮತ್ತು ಸೋವಿಯತ್ ರಷ್ಯಾ ಯತ್ನಿಸಿದವು.

ವರ್ಷಗಳು ಉರುಳಿದ ಹಾಗೆ ಒಂದು ಕಡೆ ಮುಕ್ತ ಮಾರುಕಟ್ಟೆ, ಉದ್ಯಮಸ್ನೇಹಿ ಯೋಜನೆಗಳಿಂದ ಪಾಶ್ಚಿಮಾತ್ಯ ರಾಷ್ಟ್ರಗಳು ಆರ್ಥಿಕವಾಗಿ ಸಬಲವಾದರೆ, ಮತ್ತೊಂದೆಡೆ ಸೈದ್ಧಾಂತಿಕವಾಗಿ ತಾನು ಪ್ರತಿಪಾದಿಸುತ್ತಿದ್ದ ಬಿಗಿಮುಷ್ಟಿಯ ಯೋಜನೆಗಳಿಂದ ಸೋವಿಯತ್ ಆರ್ಥಿಕವಾಗಿ ಕುಗ್ಗತೊಡಗಿತು. ಸೋವಿಯತ್ ಪತನಕ್ಕೆ ದಾರಿಯಾಯಿತು. ಅನೇಕ ಹೊಸ ರಾಷ್ಟ್ರಗಳು ಉದಯಿಸಿದವು. ಉಕ್ರೇನ್ ಸ್ವತಂತ್ರ ರಾಷ್ಟ್ರವಾಗಿ ಅಸ್ತಿತ್ವ ಕಂಡುಕೊಂಡಿತು. ಆದರೆ ತನ್ನ ಪ್ರಭಾವ ವಲಯವನ್ನು ಬಿಟ್ಟುಕೊಡಲು ರಷ್ಯಾ ಸಿದ್ಧವಿರಲಿಲ್ಲ. ತನ್ನ ನೆರೆರಾಷ್ಟ್ರಗಳಿಗೆ ಭದ್ರತೆಯ ಅಭಯ ನೀಡಿ ತನ್ನ ಜೊತೆ ಇಟ್ಟುಕೊಳ್ಳಲು ಪ್ರಯತ್ನಿಸಿತು. ಉಕ್ರೇನ್ ತನ್ನ ನೆಲದ ಅಣುಶಸ್ತ್ರಾಗಾರಗಳನ್ನು ರಷ್ಯಾಕ್ಕೆ ಒಪ್ಪಿಸಿ, ಅದರ ಕೈಗೊಂಬೆಯಾಗುವತ್ತ ಹೆಜ್ಜೆಯಿರಿಸಿತು.

ಒಂದು ಹೆಜ್ಜೆ ಮುಂದೆ ಹೋದ ರಷ್ಯಾ, ಪೂರ್ವ ಐರೋಪ್ಯ ರಾಷ್ಟ್ರಗಳನ್ನು ನ್ಯಾಟೊ ಪರಿಧಿಗೆ ತೆಗೆದುಕೊಳ್ಳುವ ಪ್ರಯತ್ನವಾಗಬಾರದು ಎಂಬ ಕರಾರನ್ನು ಅಮೆರಿಕದ ಎದುರು ಇರಿಸಿತು. ಸೋವಿಯತ್ ಪತನದ ಖುಷಿಯಲ್ಲಿದ್ದ ಅಮೆರಿಕ ಆ ಕರಾರಿಗೆ ಒಪ್ಪಿತಾದರೂ, ರಷ್ಯಾ ಮುಂದೆಂದೂ ಸೋವಿಯತ್ ಆಗದಂತೆ ತಡೆಯಬೇಕು ಎಂಬ ದಿಸೆಯಲ್ಲಿ ಕಾರ್ಯತಂತ್ರ ಹೆಣೆಯಿತು. ನ್ಯಾಟೊ 'ಮುಕ್ತ ದ್ವಾರ' ಯೋಜನೆಯನ್ನು ಪ್ರತಿಪಾದಿಸಿ, ರಷ್ಯಾದ ಗಡಿಯವರೆಗೂ ತನ್ನ ವ್ಯಾಪ್ತಿ ವಿಸ್ತರಿಸಲು ಮುಂದಾಯಿತು.

2004ರಲ್ಲಿ ಬಾಲ್ಟಿಕ್ ರಾಷ್ಟ್ರಗಳು ನ್ಯಾಟೊ ಒಕ್ಕೂಟ ಸೇರಿಕೊಂಡವು. ರಷ್ಯಾ ತುಟಿಕಚ್ಚಿತು. ನ್ಯಾಟೊ 2008ರಲ್ಲಿ ಜಾರ್ಜಿಯಾ ಮತ್ತು ಉಕ್ರೇನಿಗೆ ಸದಸ್ಯತ್ವದ ಆಹ್ವಾನ ನೀಡಿತು. ರಷ್ಯಾ ಕೆರಳಿತು. ಜಾರ್ಜಿಯಾ ಮೇಲೆ ದಾಳಿ ಮಾಡಿತು. ಐರೋಪ್ಯ ಒಕ್ಕೂಟದ ಮುಕ್ತ ಮಾರುಕಟ್ಟೆ, ಆರ್ಥಿಕ ಏಳಿಗೆಯ ಕಡೆ ಆಕರ್ಷಿತಗೊಂಡಿದ್ದ ಉಕ್ರೇನಿಯನ್ನರು ಐರೋಪ್ಯ ಒಕ್ಕೂಟದ ಭಾಗವಾಗುವ ಇಚ್ಛೆ ಹೊಂದಿದ್ದರು. ಆದರೆ ರಷ್ಯಾ ಪರ ಇದ್ದ ಉಕ್ರೇನ್ ಆಡಳಿತವು ಐರೋಪ್ಯ ಒಕ್ಕೂಟ ಸೇರಲು ನಿರಾಕರಿಸಿದಾಗ, ಜನಾಂದೋಲನ ಆರಂಭವಾಯಿತು. ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳು ತೆರೆಯ ಹಿಂದೆ ನಿಂತು ಅದನ್ನು ಉಕ್ರೇನ್ ಕ್ರಾಂತಿಯಾಗಿ ಬೆಳೆಸಿದವು. 2014ರಲ್ಲಿ ರಷ್ಯಾ ಪರ ಇದ್ದ ಉಕ್ರೇನ್ ಸರ್ಕಾರ ಪತನಗೊಂಡಿತು. ಇದರಿಂದ ಕೆರಳಿದ ರಷ್ಯಾ, ರಷ್ಯನ್ ಭಾಷಿಕರು ಹೆಚ್ಚಿದ್ದ ಕ್ರಿಮಿಯಾವನ್ನು ವಶಪಡಿಸಿಕೊಂಡಿತು. ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳು ಆರ್ಥಿಕ ದಿಗ್ಬಂಧನದ 'ಮೊಂಡು ಅಸ್ತ್ರ' ಹೂಡಿದವು. ಐರೋಪ್ಯ ರಾಷ್ಟ್ರಗಳು ತೈಲ ಮತ್ತು ಅನಿಲಕ್ಕಾಗಿ ರಷ್ಯಾದ ಮೇಲೆ ಅವಲಂಬನೆ ಬೆಳೆಸಿಕೊಂಡಿದ್ದರಿಂದ ಹೆಚ್ಚಿನ ಕ್ರಮ ಸಾಧ್ಯವಾಗಲಿಲ್ಲ.

ಅಮೆರಿಕ ತನ್ನ ಹಿತಾಸಕ್ತಿಗೆ ಪೂರಕವಾಗಿ ಉಕ್ರೇನನ್ನು ಬಳಸಿಕೊಳ್ಳುವ ಯೋಜನೆ ರೂಪಿಸಿತು. ಉಕ್ರೇನಿಗೆ ಆರ್ಥಿಕ ನೆರವು ಹೆಚ್ಚಿಸುವ, ಶಸ್ತ್ರಾಸ್ತ್ರ ಕೊಟ್ಟು ರಷ್ಯಾವನ್ನು ಕೆರಳಿಸುವ ಕೆಲಸ ಮಾಡಿತು. ನ್ಯಾಟೊ ಸೇರುವ ಬಯಕೆಯನ್ನು ಉಕ್ರೇನಿಯನ್ನರಲ್ಲಿ ಜೀವಂತ ಇರಿಸಿತು. ಬುಷ್ ಅವರ ಅವಧಿಯಲ್ಲಿ ಜಾರ್ಜಿಯಾದ ಮೇಲೆ ದಾಳಿ ಮಾಡಿದ್ದ, ಒಬಾಮ ಅವರ ಅವಧಿಯಲ್ಲಿ ಕ್ರಿಮಿಯಾವನ್ನು ವಶಪಡಿಸಿಕೊಂಡಿದ್ದ ರಷ್ಯಾ, ಉಕ್ರೇನಿನ ಮೇಲೆ ಮುಗಿಬೀಳಲು ಕಾಯುತ್ತಿತ್ತು. ಆದರೆ ಡೊನಾಲ್ಡ್ ಟ್ರಂಪ್ ಅವರ ಅವಧಿಯಲ್ಲಿ ಆ ಕೆಲಸಕ್ಕೆ ರಷ್ಯಾ ಮುಂದಾಗಲಿಲ್ಲ.

ಉತ್ತರ ಕೊರಿಯಾದ ಹುಂಬ ಅಧ್ಯಕ್ಷರನ್ನು ಮಾತುಕತೆಯ ಮೇಜಿಗೆ ತಂದಿದ್ದ, ಯುಎಇ, ಬಹರೇನ್, ಸುಡಾನ್ ಮತ್ತು ಮೊರಕ್ಕೊಗಳು ಇಸ್ರೇಲ್ ಜೊತೆ ಕೈ ಕುಲುಕುವಂತೆ ಮಾಡಿದ್ದ, ಇರಾನಿನ ಖುದ್ಸ್ ಪಡೆಯ ಮುಖ್ಯಸ್ಥ ಸುಲೇಮಾನಿ ಹತ್ಯೆಗೆ ಆದೇಶಿಸಿದ್ದ ಟ್ರಂಪ್,



ಯಾವುದೇ ಅಪಾಯಕಾರಿ ಸಾಹಸಕ್ಕೂ ಕೈ ಹಾಕಬಲ್ಲೆ ಎಂಬ ಇಮೇಜ್ ಸೃಷ್ಟಿಸಿಕೊಂಡಿದ್ದರು. ಜೊತೆಗೆ 'ಅಮೆರಿಕ ಮೊದಲು' ನೀತಿಯನ್ನು ಮುಂದೊಡ್ಡಿ, ಇತರ ದೇಶಗಳ ಭದ್ರತೆಗೆ ಅಮೆರಿಕ ತನ್ನ ಬೊಕ್ಕಸದಿಂದ ಹಣ ತೆರುತ್ತಿರುವುದು ಮೂರ್ಖತನ ಎಂದು ನ್ಯಾಟೊಕ್ಕೆ ಅಂಕುಶ ಹಾಕುವ ಯತ್ನ ಮಾಡಿದ್ದರು. ಉಕ್ರೇನ್ ಸೇನಾ ನೆರವಿಗೆ ಅಮೆರಿಕದ ಸಂಸತ್ತು ಅನುಮೋದಿಸಿದ್ದ ಹಣವನ್ನು ಬಿಡುಗಡೆ ಮಾಡದೆ ತಡೆದಿದ್ದರು. ಟ್ರಂಪ್ ಅವರ ಖಡಕ್ ವ್ಯಕ್ತಿತ್ವ ಮತ್ತು ಅವರು ತೆಗೆದುಕೊಂಡ ಈ ನಿಲುವುಗಳು ಪುಟಿನ್ ಅವರನ್ನು ಉಕ್ರೇನ್ ವಿಷಯದಲ್ಲಿ ಮುಂದುವರಿಯದಂತೆ ತಡೆದಿದ್ದವು.

ಬೈಡನ್ ಅಮೆರಿಕದ ಅಧ್ಯಕ್ಷರಾದ ಬಳಿಕ ಉಕ್ರೇನಿಗೆ ನೆರವು ನೀಡುವ ಕೆಲಸ ಮುಂದುವರಿಯಿತು. ರಷ್ಯಾ ತನ್ನ ಸೇನೆಯನ್ನು ಉಕ್ರೇನ್ ಗಡಿಯಲ್ಲಿ ನಿಲ್ಲಿಸಿತು. ಯುದ್ಧಕ್ಕೆ ಆಸ್ಪದವಾಯಿತು. ಇದೀಗ ಮತ್ತೊಮ್ಮೆ ಅಮೆರಿಕವು ದಿಗ್ಬಂಧನ ಎಂಬ 'ಮೊಂಡು ಅಸ್ತ್ರ' ಹೂಡಿ ಕೈಕಟ್ಟಿ ನಿಂತಿದೆ!

ಹಾಗಾದರೆ ಯುದ್ಧಕ್ಕೆ ರಷ್ಯಾ ಮುಂದಾಗಲಿ ಎಂದು ಅಮೆರಿಕ ಬಯಸಿತ್ತೇ? ಇತ್ತೀಚಿನ ವರ್ಷಗಳಲ್ಲಿ ಐರೋಪ್ಯ ರಾಷ್ಟ್ರಗಳು ರಷ್ಯಾದೊಂದಿಗೆ ಸಂಬಂಧ ಸುಧಾರಿಸಿಕೊಳ್ಳುವತ್ತ ಹೆಜ್ಜೆಯಿರಿಸಿದ್ದವು. ಮುಖ್ಯವಾಗಿ ಜರ್ಮನಿ, ನೈಸರ್ಗಿಕ ಅನಿಲ ಪೂರೈಕೆಯ ನಾರ್ಡ್ ಸ್ಟ್ರೀಮ್- 2 ಯೋಜನೆಗೆ ರಷ್ಯಾದ ಜೊತೆ ಒಪ್ಪಂದ ಮಾಡಿಕೊಂಡಿತು. ರಷ್ಯಾ ಕುರಿತು ಫ್ರಾನ್ಸ್ ಮೃದು ನಿಲುವು ತಳೆಯಿತು. ಅತ್ತ ಸಿರಿಯಾದಲ್ಲಿ ವಾಯುನೆಲೆಗಳನ್ನು ಸ್ಥಾಪಿಸಿಕೊಂಡ ರಷ್ಯಾ, ಇಸ್ರೇಲಿಗೆ ಹತ್ತಿರವಾಗುವತ್ತ ಹೆಜ್ಜೆಯಿರಿಸಿತು. ಇರಾನ್ ಜೊತೆಗೆ ಸಂಬಂಧ ವೃದ್ಧಿಸಿಕೊಂಡಿತು. ಸೌದಿ ಅರೇಬಿಯಾದೊಂದಿಗೆ ಮಿಲಿಟರಿ ಸಹಕಾರ ಒಪ್ಪಂದ ಮಾಡಿಕೊಂಡಿತು. ಈ ಎಲ್ಲವೂ ಅಮೆರಿಕದ ಹಿತಾಸಕ್ತಿಗೆ ಮಾರಕವಾಗಿದ್ದವು. ಜೊತೆಗೆ ಕೊರೊನಾದಿಂದಾಗಿ ಅಮೆರಿಕ ಆರ್ಥಿಕವಾಗಿ ನಲುಗಿತು.

ಸಾಮಾನ್ಯವಾಗಿ ಅಮೆರಿಕ ಆರ್ಥಿಕವಾಗಿ ಹೈರಾಣಾದಾಗ, ಶಕ್ತಿ ಒದಗಿಸುವುದು ಅಲ್ಲಿನ ಶಸ್ತ್ರ ಉದ್ಯಮ. ಆಕ್ರಮಣಕಾರಿ ರಷ್ಯಾವನ್ನು ಗುಮ್ಮನಂತೆ ತೋರಿಸಿ ಈ ಹಿಂದೆಯೂ ಅಮೆರಿಕ ಯುರೋಪಿನಲ್ಲಿ ಶಸ್ತ್ರಾಸ್ತ್ರ ಮಾರಾಟ ಹೆಚ್ಚಿಸಿಕೊಂಡಿತ್ತು. ಹಾಗಾಗಿ ಉಕ್ರೇನ್ ಯುದ್ಧ ಆರ್ಥಿಕವಾಗಿ ಅಮೆರಿಕಕ್ಕೆ ಮುಂದಿನ ದಿನಗಳಲ್ಲಿ ಚೈತನ್ಯ ತುಂಬಬಲ್ಲದು. ಜೊತೆಗೆ ಐರೋಪ್ಯ ರಾಷ್ಟ್ರಗಳನ್ನು ರಷ್ಯಾದಿಂದ ದೂರ ನಿಲ್ಲಿಸಿ, ತನ್ನ ಕಕ್ಷೆಯಲ್ಲೇ ಇರಿಸಿಕೊಳ್ಳಲು ರಾಜಕೀಯವಾಗಿಯೂ ಈ ಯುದ್ಧ ಅಮೆರಿಕಕ್ಕೆ ನೆರವಾಗಬಲ್ಲದು.

ಅದೇನೇ ಇರಲಿ, ತನ್ನ ಬತ್ತಳಿಕೆಯಲ್ಲಿದ್ದ ಅಣ್ವಸ್ತ್ರವನ್ನು ರಷ್ಯಾಕ್ಕೆ ಹಸ್ತಾಂತರಿಸಿ ರಷ್ಯಾದ ಮುಲಾಜಿಗೆ ಬಿದ್ದ ಉಕ್ರೇನ್, ಇದೀಗ ಅಮೆರಿಕ ಮತ್ತು ರಷ್ಯಾ ನಡುವಿನ ರಾಜಕೀಯ ದಾಳವಾಗಿ ಸಂಕಷ್ಟ ಅನುಭವಿಸುತ್ತಿದೆ. ರಷ್ಯಾ- ಉಕ್ರೇನ್ ಯುದ್ಧದ ಅಧ್ಯಾಯ ಮುಗಿದ ಮೇಲೆ ತೈವಾನ್‌ನತ್ತ ಚೀನಾ ದೃಷ್ಟಿ ನೆಡಬಹುದು ಎಂಬ ಆತಂಕ ಸಾಂದ್ರಗೊಳ್ಳುತ್ತಿದೆ.

ಅಮೆರಿಕ ಮತ್ತು ರಷ್ಯಾದಂತೆ ಪ್ರಬಲ ಸೇನಾ ಶಕ್ತಿಯಾಗಿ ಹೊರಹೊಮ್ಮಿರುವ ಚೀನಾದ ಬಗಲಲ್ಲಿರುವ ನಾವು, ಒಂದೊಮ್ಮೆ ಆದರ್ಶಕ್ಕೆ ಕಟ್ಟುಬಿದ್ದು ಅಥವಾ ದಿಗ್ಬಂಧನಕ್ಕೆ ಹೆದರಿ ಅಣ್ವಸ್ತ್ರ ಹೊಂದುವ ಪ್ರಯತ್ನ ಮಾಡದಿದ್ದರೆ ಏನೆಲ್ಲಾ ಸಂಕಷ್ಟ ಎದುರಿಸಬೇಕಿತ್ತು ಎಂದು ನೆನೆದರೆ ದಿಗಿಲಾಗುತ್ತದೆ.

ಚುರುಮುರಿ



ಶೇಪೆ ಚಿತ್ರಾನ್ನ

• ಲಿಂಗರಾಜು ಡಿ.ಎಸ್.

'ಬಾರ್ಲಾ ಅಣ್ತಮ್ಮ, ಈವತ್ತು ನಿನಗೆ ಹೊಸಾ ಥರಾ ಚಿತ್ರಾನ್ನ ಮಾಡೋದು ಹೇಳಿಕೊಡ್ತೀನಿ. ಇದರ ಹೆಸರು ಶೇಪೆ ಚಿತ್ರಾನ್ನ ಅಂತ!' ಅಂತ ವಿವರ ಕೊಟ್ಟರು.

'ಅಲ್ಲಾ ಸಾ, ನಿಮಗೇನು ಮಲ್ಲಾಗರು ಬಂದದೆ! ಇದೇನು ಶೇಪಿಲ್ಲದ ಚಿತ್ರಾನ್ನ?' ಅಂತ ಮೂತಿ ತಿವಿದೆ.

'ಅಣ್ತಮ್ಮಾ ಇದು ಆಧ್ಯಾತ್ಮಿಕ ಶೇರುಪೇಟೆ ಚಿತ್ರಾನ್ನ ಕಲಾ! ಇದು ಕುರಿತೇಟಾಗಕೆ ಯೋಗಿಗಳ ಆಶೀರ್ವಾದ ಬೇಕು. ಮೊದಲು ಜೈರುಗ್‌ಯಜು ರ್ರಾಮ ಅಂತ ಧ್ಯಾನ ಮಾಡಿ ಡಿಮ್ಯಾಟ್ ಒಲೆ ಮೇಲೆ ಕಾವಲಿ ಇಟ್ಟು ಕೈತುಂಬಾ ಬಂಡವಾಳ, ರುಚಿಗೆ ತಕ್ಕಷ್ಟು ಫಂಡು ಹಾಕಿ ಬಿಸಿ ಮಾಡಿಕೊ. ನೀನು ಚಿತ್ರಾನ್ನ ಮಾಡುವಾಗ ತಂತ್ರಗಾರಿಕೆ ತಿಳಕಂಡು ಬಾಂಡು, ಡಿಬೆಂಚರು, ಎಫ್‌ಡಿಗೆ ಸ್ವಲ್ಪ ಫಂಡು ಹಾಕಿ ಇಂಡೆಕ್ಸ್ ನೋಡಿಕ್ಯಂಡು ಗಟ್ಟಿಯಾಗುವರೆಗೂ ತಿರುಗಿಸಿ ಆಮೇಲೆ ಈಕ್ವಿಟಿ ಹಾಕು. ಫಂಡು ಜಾಸ್ತಿ ಹಾಕಿದರೆ ಎಗ್ಸಿಟ್ ಲೋಡು ಜಾಸ್ತಿಯಾಗಿ ಚಿತ್ರಾನ್ನದ ರುಚಿ ಕೆಟ್ಟೋಯ್ತದೆ. ಪಕ್ಕದಮನಿಂದ ದ್ರಾಕ್ಷಿ-ಗೋಡಂಬಿ ಕಡ ತಂದು ಹಾಕಿದ್ರೆ ಅದು ಎಫ್‌ಡಿಐ ಆಗಿ ರುಚಿ ಜಾಸ್ತಿಯಾಯ್ತದೆ ಕಲಾ' ಅಂತಂದ್ರು.

'ಆಯ್ತು ಕನ ಬುಡಿ! ಶಾಸಕರು, ರಾಜಕಾರಣಿಗಳಿಗೆ ಈ ಚಿತ್ರಾನ್ನ ಇಷ್ಟಾಗಲ್ವರಾ ಸಾ?' ಅಂತ ಕೇಳಿದೆ.

'ಪಾಪದವು ಅವರ ತಾವು ದುಡ್ಡು-ದುಗ್ಗಣಿ ಎಲ್ಲದೋ! ಅವರೇ ರಾತ್ರಿಕೆಂಗೆ, ವತ್ತರಿಕೆಂಗೆ ಅನ್ನೋ ಪರಿಸ್ಥಿತೀಲವ್ರೆ. ಅವರ ಕತೆ ಇರ್ಲಿ, ಈಗ ಒಂದು ಸ್ವಲ್ಪ ಎಸ್‌ಐಪಿ ನೋಡಿಕ್ಯಂದು ಹಾಕ್ಬೇಕು. ಆಮೇಲೆ ಚಿತ್ರಾನ್ನಕ್ಕೆ ಸ್ವಲ್ಪ ಸಿದ್ಧಪುರುಷ ಯೋಗಿ ಮಸಾಲ ಸೇರಿಸಿ ಮಿಕ್ಸ್ ಮಾಡಿದ್ರೆ ಮಾತ್ರ ಚಿತ್ರಾನ್ನದ ಸ್ಟಾಕು ಎಕ್ಸ್‌ಚೇಂಜಿಗೆ ಲಿಸ್ಟಾಯ್ತದೆ ಅಂತ ತಿಳಿದೋರು ಹೇಳ್ತರೆ!' ಅಂದರು.

ನಾನು ಚಿತ್ರಾನ್ನ ಬಾಯಿಗೆ ಇಟ್ಟೇಟ್ಗೆ ಯೋಗಿ ಮಸಾಲೆ ವಾಸನೆ ಗಪ್ಪಂತ ಮೂಗಿಗೆ ಬಡಿದು, ಕರಡಿ-ಗೂಳಿ ಒಟ್ಟಿಗೇ ಗುಮ್ಮಿದಂಗಾಗಿ ಬಿದ್ದೋದೆ.

ಚರ್ಚೆ

ಕನ್ನಡ ಕಲಿಸುವುದು ಸುಲಭ, ಆದರೆ...

ಕನ್ನಡ ಕಲಿಸುವುದು ಎಂದರೆ, ಭಾಷೆಯನ್ನು ಕಲಿಸುವುದೋ ಓದು ಬರಹವನ್ನು ಕಲಿಸುವುದೋ ಎಂಬುದನ್ನು ಮೊದಲು ತೀರ್ಮಾನಿಸಿಕೊಳ್ಳಬೇಕು

• ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ

ಕನ್ನಡ ಕಲಿಸುವುದರ ಕುರಿತು ನಮ್ಮಲ್ಲಿ ಹೆಚ್ಚಿನವರ ಮನಃಸ್ಥಿತಿ ಪೂರ್ವಗ್ರಹಪೀಡಿತವಾಗಿದೆ. ಈ ಕುರಿತು ಇದೇ ಅಂಕಣದಲ್ಲಿ ಪ್ರಕಟವಾದ ಎರಡು ಬರಹಗಳನ್ನು (ಸಂಗತ, ಫೆ. 22, 25) ನೋಡಿ ಇದನ್ನು ಬರೆಯಬೇಕು ಎನ್ನಿಸಿತು. ಕನ್ನಡ ಕಲಿಸುವುದು ಎಂದರೆ, ಭಾಷೆಯನ್ನು ಕಲಿಸುವುದೋ ಓದು ಬರಹವನ್ನು ಕಲಿಸುವುದೋ ಎಂಬುದನ್ನು ಮೊದಲು ತೀರ್ಮಾನಿಸಿಕೊಳ್ಳಬೇಕು. ಈ ಪ್ರಶ್ನೆ ಬಹಳ ಮೂಲಭೂತ.

ಐದು ವರ್ಷದ ಒಳಗೆ ಒಂದು ಸಾಧಾರಣ ಮಗು ತನ್ನ ಮನೆಯ ಭಾಷೆಯ ಸುಮಾರು ಶೇ 90ರಷ್ಟನ್ನು ಕಲಿತಿರುತ್ತದೆ ಎಂದು ಭಾಷಾ ವಿಜ್ಞಾನಿಗಳು ಹೇಳುತ್ತಾರೆ. ಅದಕ್ಕೇ ಅದನ್ನು ಭಾಷಿಕವಾಗಿ 'ಹೆಚ್ಚುಕಡಿಮೆ ವಯಸ್ಕ' ಎಂದೂ ಭಾವಿಸಲಾಗುತ್ತದೆ. ಇನ್ನು ನಮ್ಮ ನಾಡಿನಲ್ಲಿ ಕನ್ನಡೇತರ ಮನೆಮಾತಾಗಿರುವ ಹೆಚ್ಚಿನ ಮಕ್ಕಳೂ ಕನ್ನಡವನ್ನು ಬಹಳಷ್ಟು ಚೆನ್ನಾಗಿ ಕಲಿತಿರುತ್ತಾರೆ. ಈಗಾಗಲೇ ಆಲಿಸುವ ಮತ್ತು ಮಾತನಾಡುವ ಕೌಶಲಗಳನ್ನು ಕಲಿತಿರುವವರಿಗೆ ಕನ್ನಡ ಓದು ಬರಹವನ್ನು ಕಲಿಸುವುದು ಹೆಚ್ಚು ಸುಲಭ. ಆದರೆ, ಮಾತಾಡುವ ಕನ್ನಡದ ಕೌಶಲವನ್ನು ಇದಕ್ಕಾಗಿ ಪರಿಣಾಮಕಾರಿಯಾಗಿ ದುಡಿಸಿಕೊಳ್ಳಬೇಕು ಎಂಬ ಮಾತು ಬಹಳ ಮಹತ್ವದ್ದು.


ಇತರ ಭಾರತೀಯ ಭಾಷೆಗಳ ಲಿಪಿಯ ಹಾಗೆ ಕನ್ನಡ ಲಿಪಿಯು ಬಹಳ ತರ್ಕಬದ್ಧವಾದ, ಧ್ವನಿಯಾಧಾರಿತ ಲಿಪಿ. ಆದರೆ, ಆಲಿಸುವುದು ಮತ್ತು ಮಾತನಾಡುವುದನ್ನು ಕಲಿಯುವುದಕ್ಕೆ ಸಿಗುವ ಸಹಜ ವಾತಾವರಣವಾಗಲೀ ಎರಡು- ಮೂರು ವರ್ಷ ಸಮಯವಾಗಲೀ ಓದು ಬರಹ ಕಲಿಸುವಾಗ ಸಿಗುವುದಿಲ್ಲ ಎಂಬುದು ಒಂದು ವಾಸ್ತವ. ವಾಸ್ತವ ಅಷ್ಟೆ, ಸಮಸ್ಯೆಯಲ್ಲ.

ಮಾತಾಡುವುದನ್ನು ಕಲಿಯುವ ಮುಂದೆ ಮಗು ಒಂದು- ಒಂದೂವರೆ ವರ್ಷ ಬರೀ ಆಲಿಸಿ ಅರ್ಥೈಸುವುದನ್ನು ಕಲಿಯಲು ಕಳೆದಿರುತ್ತದೆ. ಅದರ ಹೂರಣದಿಂದಲೇ ಕರಗತಗೊಳಿಸಿಕೊಂಡು ಅದು ನಿಧಾನವಾಗಿ ಮಾತನಾಡತೊಡಗುತ್ತದೆ. ಇದು ನೈಜ ವಿಧಾನ.

ಅದೇ ರೀತಿ ಅಕ್ಷರಾಭ್ಯಾಸ ಮಾಡುವಾಗ ಓದುವುದನ್ನು ಮೊದಲು ಕಲಿಸಿ ಎಲ್ಲ ಅಕ್ಷರ, ಕಾಗುಣಿತ, ಒತ್ತಕ್ಷರಗಳನ್ನು ಓದುವ ಕೌಶಲವನ್ನು ಸುಗಮಗೊಳಿಸಿಕೊಂಡ ನಂತರ ಬರೆಯುವುದನ್ನು ಕಲಿಸಿದರೆ ಅದು ಹೆಚ್ಚು ತರ್ಕಬದ್ಧ. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಇದಕ್ಕೆ ತದ್ವಿರುದ್ಧ ನಡೆಯುತ್ತದೆ. ಬರಹದಿಂದಲೇ ಆರಂಭಿಸಲಾಗುತ್ತದೆ.

ಓದು ಬರಹ ಕಲಿಸುವಾಗಲೂ ಅ ಆ ಇ ಈ ರೀತಿಯ ಅಕ್ಷರಮಾಲಾ ಪದ್ಧತಿ ಅತ್ಯಂತ ಕೃತ್ರಿಮ. ಅದರ ಬದಲಿಗೆ, ಕೆಲವು ದಶಕಗಳ ಹಿಂದೆ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದಲ್ಲಿ ಕನ್ನಡ ಓದು ಬರಹ ಕಲಿಸಲು ರೂಪಸಾಮ್ಯ ಪದ್ಧತಿಯನ್ನು ಅಳವಡಿಸಿಕೊಳ್ಳಲಾಯಿತು. ಓದುವುದು ಎಂದರೆ ಮೂಲಭೂತವಾಗಿ ಅಕ್ಷರದ ಆಕಾರವನ್ನು ಗುರುತಿಸುವುದು ಮತ್ತು ಅದರಲ್ಲಿ ಅಡಗಿರುವ ಧ್ವನಿಯನ್ನು ಹೊಮ್ಮಿಸುವುದು. 10 ಗುಂಪುಗಳಲ್ಲಿ ಅಕ್ಷರಗಳನ್ನು ವಿಂಗಡಿಸಿಕೊಂಡಿರುವ ರೂಪಸಾಮ್ಯ ಪದ್ಧತಿಯ ಒಂದು ವೈಶಿಷ್ಟ್ಯವೆಂದರೆ, ಒಂದೆರಡು ಗುಂಪಿನ ಅಕ್ಷರಗಳನ್ನು ಕಲಿಯುತ್ತಿರುವ ಹಾಗೆಯೆ ಅದೇ ಮೂಲಾಕ್ಷರಗಳನ್ನು ಬಳಸಿ ಅರ್ಥಪೂರ್ಣ ಪದಗಳನ್ನೂ ಓದಬಹುದು ಎಂಬುದು. ಒಂದೆರಡು ಗುಂಪುಗಳ ಕಲಿಕೆ ಮುಗಿಯುತ್ತಿದ್ದಂತೆ ಈಗಾಗಲೇ ಕಲಿತಿರುವ ಸ್ವರಗಳ ಕಾಗುಣಿತವನ್ನು ಪರಿಚಯಿಸಲಾಗುತ್ತದೆ. ಆಗ ಓದಲು ಸಾಧ್ಯವಾಗುವ ಪದಗಳ ಸಂಖ್ಯೆ ಬಹುವಾಗಿ ವೃದ್ಧಿಗೊಳ್ಳುತ್ತದೆ.

ಕಾಗುಣಿತವನ್ನೂ 'ಅ'ದಿಂದ 'ಅಃ'ದವರೆಗೆ ಎಲ್ಲ ವ್ಯಂಜನಗಳ ಜೊತೆ ಕಲಿಸಲಾಗುತ್ತದೆ. ಬದಲಿಗೆ ಇಲ್ಲಿರುವ ತರ್ಕವನ್ನು ಬಳಸಿಕೊಂಡು, ಮಕ್ಕಳ ಸೃಜನಶೀಲತೆಗೆ ಅವಕಾಶ ಕೊಡಬಹುದು. ಹಾಗೆಯೇ ವ್ಯಂಜನಗಳ ಒತ್ತಕ್ಷರಗಳನ್ನು ಕಲಿಸುವಾಗಲೂ ಅವುಗಳ ಹಿಂದೆ ಅಡಗಿರುವ ತರ್ಕವನ್ನು ಬಳಸಿಕೊಂಡು ಅಭ್ಯಾಸ ಮಾಡಿಸಬಹುದು.



ಯಾವುದೇ ರೀತಿಯಲ್ಲಿ ಓದು ಬರಹವನ್ನು ಕಲಿಸುವ ಮುಂಚೆ, ಕಲಿಯುವವರನ್ನು ಬದುಕಿನ ನೈಜ ಸನ್ನಿವೇಶಗಳಲ್ಲಿ ಹಲವಾರು ಕಡೆ ಈಗಾಗಲೇ ಬಳಕೆಯಲ್ಲಿರುವ ಬರಹಗಳಿಗೆ ಒಡ್ಡುವುದೂ ವ್ಯವಸ್ಥಿತ ಕಲಿಕೆಗೆ ಬುನಾದಿಯನ್ನು ಒದಗಿಸುತ್ತದೆ ಎನ್ನುವ ಮಾತನ್ನೂ ನೆನಪಿನಲ್ಲಿಡಬೇಕು. ವಿಧಾನ ಯಾವುದೇ ಆಗಿರಲಿ, ಓದುವುದನ್ನು ಬಹಳಷ್ಟು ಕಲಿತ ನಂತರವೇ ಬರಹವನ್ನು ಆರಂಭಿಸಬೇಕು.

ನಿಜ, ಮೇಲಿನ ಇಬ್ಬರು ಲೇಖಕರು ಹೇಳಿರುವ ಹಾಗೆ, ಹತ್ತನೇ ತರಗತಿಯವರೆಗಿನ ಕನ್ನಡ ಪಠ್ಯಪುಸ್ತಕಗಳಲ್ಲಿ ಎಲ್ಲರಿಗೂ ಸಮಾನವಾಗಿ ಜೀವನೋಪಯೋಗಿ ಆಗಬಲ್ಲಂಥ ಕನ್ನಡ ಭಾಷಾ ಕೌಶಲಗಳನ್ನು ಹೇಳಿಕೊಡದೆ, ವಿವಿಧ ಹಂತಗಳ ಕನ್ನಡ ಸಾಹಿತ್ಯ, ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ವಿಶಿಷ್ಟ ವಿಷಯಗಳನ್ನು ಬೋಧಿಸಲಾಗುತ್ತದೆ. ಹೀಗಾಗಿ, ಸುಮಾರು ಎರಡು ಸಾವಿರ ಗಂಟೆಗಳಷ್ಟು ಕಾಲ ಕನ್ನಡ ಬೋಧನೆಯಲ್ಲಿ ಕಳೆದರೂ ಹತ್ತನೇ ತರಗತಿ ಮುಗಿಸಿ ಹೊರಬರುವ ಯುವಜನರಿಗೆ ಕನ್ನಡ ಕಾಗುಣಿತ, ಒತ್ತಕ್ಷರವೂ ಸರಿಯಾಗಿ ಬರುವುದಿಲ್ಲ. ಲಕ್ಷಣವಾಗಿ ಮಾತನಾಡಲೂ ಬರುವುದಿಲ್ಲ. ಅದನ್ನೆಲ್ಲ ಬೆಳೆಸಿಕೊಳ್ಳುವ ಆಸಕ್ತಿಯೂ ಇರುವುದಿಲ್ಲ.

ಶಿಕ್ಷಣ ವ್ಯವಸ್ಥೆ ಇದನ್ನು ತಾನು ನಾಚಿಕೆಪಟ್ಟುಕೊಳ್ಳುವ ವಿಚಾರವಾಗಿ ಪರಿಭಾವಿಸಿ ತಕ್ಕ ಪರಿಹಾರವನ್ನು ರೂಪಿಸಿಕೊಳ್ಳಬೇಕು.

ಲೇಖಕ: ಭಾಷಾ ವಿಜ್ಞಾನಿ

ವಾಚಕರ ವಾಣಿ

ಎಲ್ಲಿಯ ಈ ಅಜ್ಜ? ಎಲ್ಲಿಯ ಆ ಉಕ್ರೇನಜ್ಜ?

ಉಕ್ರೇನ್‌ನಲ್ಲಿ ತಮ್ಮ ಮೊಮ್ಮಕ್ಕಳ ರಕ್ಷಣೆಗೆ ವೃದ್ಧರೊಬ್ಬರು ಸೇನೆ ಸೇರಲು ಮುಂದಾಗಿರುವ ವರದಿ (ಪ್ರ.ವಾ., ಫೆ. 27) ಅಚ್ಚರಿಗೂ ಮೀರಿ ವ್ಯಾಕುಲ ತಂದಿತು. ಯಾವುದೇ ಯುದ್ಧದ ಫಲ ಎರಡೂ ಕಡೆಗಳವರಿಗೆ ತರುವುದು ತಾನೆ ಏನು? ಸಾವು ನೋವು, ಆಸ್ತಿಪಾಸ್ತಿ ನಷ್ಟ, ಪರಿಸರ ಮಾಲಿನ್ಯ, ಅನಾರೋಗ್ಯ, ಕ್ಷಾಮ, ಬರಡು ಭೂಮಿ ಸೃಷ್ಟಿ... ಒಂದೇ? ಎರಡೇ?

ಹಿಂದಿನಂತೆ ಇಂದಿನ ಕಾದಾಟ ಕತ್ತಿ-ಗುರಾಣಿ ಹಿಡಿದಲ್ಲವಲ್ಲ, ಏನಿದ್ದರೂ ಸ್ಫೋಟಕಗಳೇ! ಸಮರದ ಬಿಸಿ ಅದೆಷ್ಟು ಭಾವಿ ಪೀಳಿಗೆಗಳವರೆಗೂ ತಟ್ಟುವುದೋ? ಮುಂಬರುವ ವಿಶ್ವ ಪ್ರಜೆಗಳು ತಮ್ಮದಲ್ಲದ ಪ್ರಮಾದಗಳಿಗೆ ಏಗಬೇಕು. ಇತಿಹಾಸ ಮನುಷ್ಯನಿಗೆ ಪಾಠವಾಗದಿದ್ದರೆ ಪರಿಣಾಮ ಘೋರ. ಎಸ್.ರಾಧಾಕೃಷ್ಣನ್ ಅವರ ನುಡಿ: 'ಮಾನವ ಆಕಾಶದಲ್ಲಿ ಹಾರುವುದ ಕಲಿತ, ನೀರಿನ ಮೇಲೆ ತೇಲುವುದ ಕಲಿತ. ಆದರೆ ನೆಲದ ಮೇಲೆ ನಡೆಯುವುದನ್ನೇ ಕಲಿಯಲಿಲ್ಲ!' ಆ ಕಥೆ ಅದೆಷ್ಟು ಬೋಧಪ್ರದ. ಹಣ್ಣು ಮುದುಕ ತೆಂಗಿನ ಸಸಿ ನೆಡುತ್ತಿದ್ದಾನೆ. ದಾರಿಹೋಕ 'ಅಜ್ಜ, ಕಾಯಿ ಬಿಡುವ ಸಮಯಕ್ಕೆ ನೀನು ಬದುಕಿರಬೇಕಲ್ಲ?' ಎನ್ನುವನು. 'ತಮ್ಮಾ ನಿಜ. ಆದರೆ ಮರ ನನಗಲ್ಲ, ಮುಂದೆ ಹುಟ್ಟುವವರಿಗೆ' ಅಂತ ಪ್ರತಿಕ್ರಿಯಿಸುತ್ತಾನೆ ಅಜ್ಜ. ಎಲ್ಲಿಯ ಈ ಅಜ್ಜ? ಎಲ್ಲಿಯ ಆ ಉಕ್ರೇನಜ್ಜ?

ಬಿಂಡಿಗನವಿಲೆ ಭಗವಾನ್, ಬೆಂಗಳೂರು

ಮಾತೃಭಾಷೆ: ವಿರೋಧಾಭಾಸದ ನಡೆ

'ಜನರು ಬಹಳ ಹೆಮ್ಮೆಯಿಂದ ತಮ್ಮ ಮಾತೃಭಾಷೆಯನ್ನು ಮಾತನಾಡಬೇಕು. ಭಾಷಾ ಶ್ರೀಮಂತಿಕೆ ವಿಷಯದಲ್ಲಿ ಭಾರತವನ್ನು ಸರಿಗಟ್ಟುವ ದೇಶ ಮತ್ತೊಂದಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ (ಪ್ರ.ವಾ., ಫೆ. 27). ಅವರ ಈ ಹೇಳಿಕೆ ವಿರೋಧಾಭಾಸದಿಂದ ಕೂಡಿದೆ. ಕಾರಣ, ಇತ್ತೀಚೆಗಿನ ವರ್ಷಗಳಲ್ಲಿ ದಕ್ಷಿಣ ಭಾರತದ ರಾಜ್ಯಗಳಲ್ಲಿ ಹಿಂದೆಂದೂ ಕಾಣದಂತೆ ಹಿಂದಿ ಹೇರಿಕೆ ನಡೆಯುತ್ತಿದೆ. ಹಿಂದಿ ಭಾಷಿಕರದ್ದಾದರೂ ಕೊಂಚ ಸಹಿಸಿಕೊಳ್ಳಬಹುದು ಮತ್ತು ಅವರಿಗೆ ಕನ್ನಡವನ್ನೂ ಕಲಿಸಬಹುದು. ಆದರೆ, ಕೇಂದ್ರ ಸರ್ಕಾರವೇ ಅವಕಾಶ ದೊರಕಿದ ಜಾಗದಲ್ಲೆಲ್ಲಾ ಹಿಂದಿ ಹೇರುತ್ತಿದೆ. ಈ ಬಲವಂತ ಹಿಂದಿ ಹೇರಿಕೆಯನ್ನು ನಿಲ್ಲಿಸಿ ನಂತರ 'ಹೆಮ್ಮೆಯಿಂದ ಮಾತೃಭಾಷೆ ಮಾತನಾಡಿ' ಎಂದು ಹೇಳಿದರೆ ಅದಕ್ಕೊಂದು ಅರ್ಥವಿದೆ. ಅದಿಲ್ಲದೆ ಕೇವಲ ಬಾಯಿಮಾತಿನಲ್ಲಿ ಇಂತಹ ಹೇಳಿಕೆಗಳನ್ನು ನೀಡಿದರೆ ಅದು ವಿರೋಧಾಭಾಸವೇ ಹೌದು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಉಕ್ರೇನ್ ಬಿಕ್ಕಟ್ಟು: ಪ್ರಚಾರಕ್ಕೆ ಬಾರದ ಅಂಶಗಳು

ಫೆಬ್ರುವರಿ 24ರಿಂದ ಉಕ್ರೇನ್‌ನಲ್ಲಿನ ಘಟನಾಕ್ರಮ ಗಮನಿಸುತ್ತಿರುವವರು, ಭಾರತೀಯ ವಿದ್ಯಾರ್ಥಿಗಳು ಅಲ್ಲಿಗೆ ಏಕೆ ಹೋದರು ಎಂದೂ ಪ್ರಶ್ನಿಸಿಕೊಂಡಿರಬಹುದು. ಗಮನಾರ್ಹ ಸಂಖ್ಯೆಯಲ್ಲಿ ಮೆಡಿಕಲ್ ಕಾಲೇಜುಗಳಿರುವ ಕರ್ನಾಟಕವಷ್ಟೇ ಅಲ್ಲ, ಒಡಿಶಾದಿಂದಲೂ ಉಕ್ರೇನ್‌ಗೆ ವೈದ್ಯಕೀಯ ಪದವಿ ಪಡೆಯಲು ಹೋಗುತ್ತಾರೆ. ಈ ಸಂಬಂಧದ ವಿವರಗಳನ್ನು ಪರಿಶೀಲಿಸಿದರೆ- ಅಲ್ಲಿ ಪ್ರವೇಶ ಪರೀಕ್ಷೆಯೇ ಇಲ್ಲವಂತೆ, ಜತೆಗೆ ಶಿಕ್ಷಣ ಅಗ್ಗ. ಇಲ್ಲಿ 'ನೀಟ್'ನಲ್ಲಿ ಸಲ್ಲದವರು ಅಲ್ಲಿಗೆ ಹೋಗಿ ಅವಧಿ ದೀರ್ಘ ಆದರೂ ಇಲ್ಲಿ ತಗಲುವ ಫೀ ಮತ್ತು ವಸತಿ ವೆಚ್ಚದ ಸಣ್ಣ ಭಾಗದಲ್ಲಿ ಮೆಡಿಕಲ್ ಗ್ರ್ಯಾಜುಯೇಟ್ ಅನಿಸಿಕೊಳ್ಳಬಹುದು. ಆದರೆ ಗುಣಮಟ್ಟ? ಇಲ್ಲಿ ಪ್ರ್ಯಾಕ್ಟೀಸ್ ಮಾಡಬೇಕೆಂದರೆ ಬರೆಯಬೇಕಾಗುವ ಪರೀಕ್ಷೆಯಲ್ಲಿ ಐವರಲ್ಲಿ ಒಬ್ಬರೂ ತೇರ್ಗಡೆ ಆಗುತ್ತಿಲ್ಲವಂತೆ, ಆದವರಿಗೂ ಇಂಟರ್ನ್‌ಶಿಪ್ ಕಡ್ಡಾಯ ಮಾಡಬೇಕಾಗಿ ಬಂದಿದೆ.

'ಆಪರೇಷನ್ ಗಂಗಾ' ಮೂಲಕ ಸುರಕ್ಷಿತವಾಗಿ ಬಂದರು, ಒಳ್ಳೆಯದು. ಆದರೆ ಹೋಗುವುದು ಅನಿವಾರ್ಯ ಆಗಿತ್ತೇ? ಬಹುಪಾಲಿನವರ ಆರ್ಥಿಕ, ಸಾಮಾಜಿಕ ಹಿನ್ನೆಲೆ ಏನು ಎಂಬುದನ್ನು ವಿಶ್ಲೇಷಿಸಬೇಕಾಗಿದೆ. ಭಾರತ ವಿಶ್ವಗುರು ಸ್ಥಾನವನ್ನು ಈಗಾಗಲೇ ಪಡೆದುಬಿಟ್ಟಿದೆ, ಮುಖ್ಯ ರಾಷ್ಟ್ರಗಳೆಲ್ಲ ನಮ್ಮತ್ತ ನೋಡುತ್ತಿವೆ ಎಂಬ ಪ್ರಚಾರವೂ ಇದೆ. ವಿಶ್ವಸಂಸ್ಥೆಯ ಸಭೆಗಳಲ್ಲಿ ಉಕ್ರೇನ್ ವಿಷಯದಲ್ಲಿ ಇದುವರೆಗೆ ನಾವು ಇರುವುದು ಚೀನಾ ಗುಂಪಿನಲ್ಲಿ (ಆಕ್ರಮಣದ ವಿರುದ್ಧ ಮತ ಚಲಾಯಿಸದೆ ಹೊರಗುಳಿದವರು). ನಮ್ಮವರೆಲ್ಲ ದೇಶಕ್ಕೆ ವಾಪಸಾದ ಮೇಲಾದರೂ ಸರ್ಕಾರ ದಿಟ್ಟ ನಿಲುವು ತಳೆಯುವುದೋ ನೋಡಬೇಕು. ರಷ್ಯಾ ಹಿಂದಡಿ ಇಟ್ಟೀತೆ?

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ವಿಶ್ವಸಂಸ್ಥೆಯ ಮಹತ್ವ ಪುಸ್ತಕದಲ್ಲಿ ಮಾತ್ರವೇ?

ನಾವೆಲ್ಲ 30 ವರ್ಷಗಳ ಹಿಂದೆ ಶಾಲೆಗಳಲ್ಲಿ ಓದುವಾಗ ವಿಶ್ವಸಂಸ್ಥೆಯ ಶಕ್ತಿ, ಸಾಮರ್ಥ್ಯದ ಬಗೆಗೆ ಸಮಾಜ ವಿಜ್ಞಾನ ಪಾಠದಲ್ಲಿ ಬಹಳಷ್ಟು ವಿವರಣೆ ಇರುತ್ತಿತ್ತು. ಈಗಲೂ ಅನೇಕ ಸಾಧನೆಯ ವಿಷಯಗಳನ್ನು ನೀಡಲಾಗಿದೆ. ಪಠ್ಯ ವಿಷಯಗಳಿಗೆ ಪೂರಕವಾಗಿ ನಮ್ಮ ಶಿಕ್ಷಕರು ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆ, ಕಾಂಗೊ ದೇಶದಲ್ಲಿ ಮಾಡಿದ ಕಾರ್ಯ, ಭಾರತ- ಪಾಕಿಸ್ತಾನ ಯುದ್ಧ, ಇರಾಕ್- ಇರಾನ್ ಯುದ್ಧ ನಿಲ್ಲಿಸಿದ ಉದಾಹರಣೆಗಳನ್ನು ಸೋದಾಹರಣವಾಗಿ ನೀಡುವ ಮೂಲಕ ವಿಶ್ವಸಂಸ್ಥೆ ಸ್ಥಾಪನೆಯ ಉದ್ದೇಶವನ್ನು ಸವಿವರವಾಗಿ ನೀಡುತ್ತಿದ್ದರು. ಇದರಿಂದ ವಿಶ್ವಸಂಸ್ಥೆಯ ಬಗೆಗೆ ನಮ್ಮಲ್ಲಿ ಗೌರವ, ಹೆಮ್ಮೆಯ ಭಾವನೆ ಮೂಡುತ್ತಿತ್ತು. ಜಗತ್ತಿನಲ್ಲಿ ಶಕ್ತಿಯುತ ರಾಷ್ಟ್ರಗಳು ಯುದ್ಧ ಮಾಡಲಾರವು, ಹೀಗಾಗಿ ಜಗತ್ತು ಶಾಂತಿಯುತವಾಗಿ ಮುಂದುವರಿಯುತ್ತದೆ ಎನಿಸುತ್ತಿತ್ತು.

ಈಗ ರಷ್ಯಾ- ಉಕ್ರೇನ್ ಯುದ್ಧವನ್ನು ನೋಡಿದಾಗ, ವಿಶ್ವಸಂಸ್ಥೆ ಬಲಿಷ್ಠವಾಗಿರುವುದು ವಾಸ್ತವವಾಗಿ ಶಾಲಾ ಪಠ್ಯಕ್ರಮದಲ್ಲಿ ಮಾತ್ರ ಅನಿಸುತ್ತಿದೆ. ಬಲಿಷ್ಠ ರಾಷ್ಟ್ರವಾದ ರಷ್ಯಾವೂ ಚಿಕ್ಕ ದೇಶ ಉಕ್ರೇನ್ ಮೇಲೆ ಎರಗುವುದನ್ನು ನೋಡಿದರೆ, ವಿಶ್ವಸಂಸ್ಥೆಯು ಅಸಲಿ ಸಾಮರ್ಥ್ಯ ತೋರುವುದು ಏನಿದ್ದರೂ ಮುಂದುವರಿಯುತ್ತಿರುವ ಮತ್ತು ಹಿಂದುಳಿದ ದೇಶಗಳ ಮೇಲೆ ಮಾತ್ರ ಎಂಬುದು ತಿಳಿಯುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯ ಸಾಮರ್ಥ್ಯವೂ ಅದೇ ರೀತಿ ಆಗಿದೆ. ಕೋವಿಡ್- 19 ಜಗತ್ತಿಗೆ ಹರಡಲು ಕಾರಣವಾಗಿದ್ದು ಚೀನಾವೆಂದು ಹಲವು ರಾಷ್ಟ್ರಗಳು ಪ್ರತಿಪಾದಿಸಿದರೂ ಸಂಸ್ಥೆಯು ಕೋವಿಡ್‌ಪೀಡಿತ ದೇಶಗಳ ಅಹವಾಲು ಕೇಳುವ ಹೃದಯವಂತಿಕೆಯನ್ನು ತೋರಲಿಲ್ಲ. ಹಾಗಿದ್ದಲ್ಲಿ ಈ ಸಂಸ್ಥೆಗಳ ಮಾನವೀಯ ನಡೆ ಪುಸ್ತಕಗಳಲ್ಲಿ ಮಾತ್ರವೇ?

ಮಲ್ಲಪ್ಪ ಫ. ಕರೇಣ್ಣನವರ, ಮೋಟೆಬೆನ್ನೂರು, ಬ್ಯಾಡಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಯುವಕ–ಯುವತಿಯರ ಮೇಲೆ ಸೈನಿಕರಿಂದ ಹಲ್ಲೆ, ಗಡಿಗಳತ್ತ ಬರಲು ವ್ಯವಸ್ಥೆಯೇ ಇಲ್ಲ

ಭಾರತೀಯ ವಿದ್ಯಾರ್ಥಿಗಳ ಮೇಲೆ ಪ್ರಹಾರ



• ಜಯಸಿಂಹ ಆರ್., ಅಮೃತ್ ಕಿರಣ್ ಬಿ.ಎಂ.

ರಷ್ಯಾದ ಅತಿಕ್ರಮಣಕ್ಕೆ ಗುರಿಯಾಗಿರುವ ಉಕ್ರೇನ್‌ನಲ್ಲಿ 15,000ಕ್ಕೂ ಹೆಚ್ಚು ಭಾರತೀಯ ವಿದ್ಯಾರ್ಥಿಗಳು ಸಿಲುಕಿದ್ದಾರೆ. ಭಾರತೀಯ ವಿದ್ಯಾರ್ಥಿಗಳನ್ನು ಉಕ್ರೇನ್‌ನಿಂದ ತೆರವು ಮಾಡುವ ಭಾರತ ಸರ್ಕಾರದ ಕಾರ್ಯಾಚರಣೆಯಲ್ಲಿ ಹಲವು ನ್ಯೂನತೆಗಳಿವೆ ಎಂದು ಆ ವಿದ್ಯಾರ್ಥಿಗಳು ಆರೋಪಿಸಿದ್ದಾರೆ. ಉಕ್ರೇನ್‌ನಲ್ಲಿ ಸಿಲುಕಿರುವ, ಉಕ್ರೇನ್–ಪೋಲೆಂಡ್ ಗಡಿಯಲ್ಲಿ ಸಿಲುಕಿರುವ ಭಾರತೀಯ ವಿದ್ಯಾರ್ಥಿಗಳು ಈ ಸಂಬಂಧ ವಿಡಿಯೊಗಳನ್ನು ಟ್ವೀಟ್ ಮಾಡುತ್ತಿದ್ದಾರೆ. ಈ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

ಉಕ್ರೇನ್‌ನಲ್ಲಿರುವ ವಿದ್ಯಾರ್ಥಿಗಳನ್ನು ತೆರವು ಮಾಡಲು ಭಾರತ ಸರ್ಕಾರವು ಗರಿಷ್ಠ ಮಟ್ಟದಲ್ಲಿ ಕಾರ್ಯಾಚರಣೆ ನಡೆಸುತ್ತಿದೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ. ಇದಕ್ಕಾಗಿ ಯಾವೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂಬುದರ ಬಗ್ಗೆ ಸಚಿವಾಲಯವು ಮತ್ತು ಉಕ್ರೇನ್‌ನಲ್ಲಿನ ಭಾರತದ ರಾಯಭಾರ ಕಚೇರಿಯು ಪ್ರಕಟಣೆಗಳನ್ನು ಹೊರಡಿಸಿವೆ. ಆದರೆ ವಾಸ್ತವ ಸ್ಥಿತಿ ಇದಕ್ಕೆ ವ್ಯತಿರಿಕ್ತವಾಗಿದೆ. ರಾಯಭಾರ ಕಚೇರಿ ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ.

ತಟಸ್ಥ ನೀತಿಗೆ ಪ್ರತೀಕಾರ?

ರಷ್ಯಾ ಅತಿಕ್ರಮಣದ ವಿಚಾರದಲ್ಲಿ ಭಾರತ ಸರ್ಕಾರವು ತಟಸ್ಥ ನೀತಿಯ ಮೊರೆ ಹೋಗಿದೆ. ಇದರ ಪರಿಣಾಮ ಉಕ್ರೇನ್‌ನಲ್ಲಿರುವ ವಿದ್ಯಾರ್ಥಿಗಳ ಮೇಲಾಗುತ್ತಿದೆ ಎಂದು ಆ ವಿದ್ಯಾರ್ಥಿಗಳು ಆರೋಪಿಸಿದ್ದಾರೆ. 'ಉಕ್ರೇನ್ ಅನ್ನು ಬೆಂಬಲಿಸಿಲ್ಲ ಎಂದು ಉಕ್ರೇನ್ ಜನರು ಮತ್ತು ಸೈನಿಕರು ಭಾರತೀಯ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸುತ್ತಿದ್ದಾರೆ. ರಷ್ಯಾವನ್ನು ಬೆಂಬಲಿಸಿಲ್ಲ ಎಂದು ರಷ್ಯಾ ಸೈನಿಕರು ಭಾರತೀಯ ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ಎಸಗುತ್ತಿದ್ದಾರೆ' ಎಂದು ವಿದ್ಯಾರ್ಥಿನಿಯೊಬ್ಬರು ವಿಡಿಯೊದಲ್ಲಿ ಆರೋಪಿಸಿದ್ದಾರೆ. ಉಕ್ರೇನ್‌ನ ವಿವಿಧ ನಗರಗಳಿಂದ ಹೊರಟು ಪೋಲೆಂಡ್ ಗಡಿ ತಲುಪಿರುವ ಭಾರತೀಯ ವಿದ್ಯಾರ್ಥಿಗಳನ್ನು ಅಲ್ಲಿ ತಡೆದು ನಿಲ್ಲಿಸಲಾಗಿದೆ. ಸುರಿಯುತ್ತಿರುವ ಹಿಮದಲ್ಲಿ ಗಡಿಯಲ್ಲಿ ನೂರಾರು ವಿದ್ಯಾರ್ಥಿಗಳು ನಿಂತಿರುವ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ವಿದ್ಯಾರ್ಥಿಗಳು ಟ್ವೀಟ್ ಮಾಡಿರುವ ವಿಡಿಯೊದಲ್ಲಿ ಹಿಮ ಬೀಳುತ್ತಿರುವ ದೃಶ್ಯಗಳು ಇವೆ. ಉಕ್ರೇನ್–ಪೋಲೆಂಡ್ ಗಡಿಯಲ್ಲಿ ಭಾರತೀಯ ವಿದ್ಯಾರ್ಥಿಗಳ ಮೇಲೆ ಉಕ್ರೇನ್ ಸೈನಿಕರು ಹಲ್ಲೆ ನಡೆಸುತ್ತಿದ್ದಾರೆ ಎಂದು ಆರೋಪಿಸಿರುವ ವಿಡಿಯೊವನ್ನು ಸಹ ಹಂಚಿಕೊಳ್ಳಲಾಗಿದೆ. ವಿದ್ಯಾರ್ಥಿಗಳ ಮೇಲೆ ಸೈನಿಕರು ಹಲ್ಲೆ ಮಾಡುತ್ತಿರುವ ಮತ್ತು ಗಾಳಿಯಲ್ಲಿ ಗುಂಡು ಹಾರಿಸುತ್ತಿರುವ ದೃಶ್ಯಗಳು ಈ ವಿಡಿಯೊದಲ್ಲಿ ಇವೆ. ವಿದ್ಯಾರ್ಥಿಯೊಬ್ಬನಿಗೆ ಸೈನಿಕರು ಒದೆಯುತ್ತಿರುವ ದೃಶ್ಯವಿರುವ ವಿಡಿಯೊ ಸಹ ವೈರಲ್ ಆಗಿದೆ.

ಉಕ್ರೇನ್ ಸೈನಿಕರು ಭಾರತೀಯರು ಮತ್ತು ಆಫ್ರಿಕನ್ನರನ್ನು ಮಾತ್ರ ತಡೆಯುತ್ತಿದ್ದಾರೆ. ಈ ಮೂಲಕ ಜನಾಂಗೀಯ ತಾರತಮ್ಯ ಮಾಡುತ್ತಿದ್ದಾರೆ ಎಂದೂ ಹಲವರು ಆರೋಪಿಸಿದ್ದಾರೆ.

ತೆರವಿಗೆ ಮತ್ತೆ ಮತ್ತೆ ವಿಳಂಬ

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಉಕ್ರೇನ್ ಮೇಲೆ ಯುದ್ಧ ಸಾರುವುದಾಗಿ ಫೆಬ್ರುವರಿ 24ರಂದು ಘೋಷಿಸಿದರು. ಈ ಘೋಷಣೆಗೆ ಒಂದು ತಿಂಗಳ ಮೊದಲೇ ಉಕ್ರೇನ್‌ನಲ್ಲಿ ಯುದ್ಧದ ಭೀತಿ ಆವರಿಸಿತ್ತು. ಉಕ್ರೇನ್‌ನ ಭಾರತದ ರಾಯಭಾರ ಕಚೇರಿಯು ದೇಶದಲ್ಲಿ ಬಿಕ್ಕಟ್ಟು ಸೃಷ್ಟಿಯಾಗಿದೆ ಎಂಬ ಮಾಹಿತಿಯನ್ನು ಫೆ. 15ರಂದು ಹೊರಡಿಸಿದ್ದ ಸಲಹೆಯಲ್ಲಿ ನೀಡಿತ್ತು. ಉಕ್ರೇನ್‌ನಲ್ಲಿರುವ ಭಾರತೀಯರು ಅದರಲ್ಲೂ ವಿಶೇಷವಾಗಿ ವಿದ್ಯಾರ್ಥಿಗಳು ಅಗತ್ಯ ಕೆಲಸ ಇಲ್ಲದಿದ್ದರೆ ತಾತ್ಕಾಲಿಕವಾಗಿ ಉಕ್ರೇನ್ ತೊರೆಯಬಹುದು ಎಂದು ಸೂಚಿಸಿತ್ತು. ಆದರೆ, ಹೊರಡಲೇಬೇಕು ಎಂದು ಖಚಿತವಾಗಿ ಹೇಳಿರಲಿಲ್ಲ. ವಿದ್ಯಾರ್ಥಿಗಳನ್ನು ತೆರವು ಮಾಡುವಲ್ಲಿ ವಿಳಂಬವಾದದ್ದು ಇಲ್ಲೇ.

ಫೆ. 20ರಂದು ನೀಡಿದ್ದ ಸಲಹೆ ಪ್ರಕಾರ, ಉಕ್ರೇನ್‌ಗೆ ಬರುವಾಗ ನೆರವು ನೀಡಿದ್ದ ಏಜೆಂಟರ ಜೊತೆ ವಿದ್ಯಾರ್ಥಿಗಳು ಸಂಪರ್ಕದಲ್ಲಿರಬೇಕು ಎಂದು ಸಲಹೆ ನೀಡಿತ್ತು. ಆಗಲೂ ವಿದ್ಯಾರ್ಥಿಗಳನ್ನು ಸರ್ಕಾರವೇ ತೆರವು ಮಾಡಲು ಯಾವುದೇ ಕ್ರಮ ಘೋಷಿಸಲಿಲ್ಲ. ಫೆ. 25ರಂದು ಕೀವ್‌ನಿಂದ ದೆಹಲಿಗೆ ತೆರಳಲು ವ್ಯವಸ್ಥೆ ಮಾಡಿರುವ ವಿಶೇಷ ವಿಮಾನಗಳ ಮಾಹಿತಿಯನ್ನು ಫೆ. 21ರ ಸಲಹೆಯಲ್ಲಿ ಪ್ರಕಟಿಸಿತ್ತು. ಆದರೆ ಯುದ್ಧ ಘೋಷಣೆಯಾದ ಕಾರಣ, ವಾಯುಮಾರ್ಗ ಬಳಕೆ ಮೇಲೆ ಉಕ್ರೇನ್ ನಿರ್ಬಂಧ ಹೇರಿತು. ಹೀಗಾಗಿ ಪೂರ್ವನಿಗದಿಯಾಗಿದ್ದ ವಿಮಾನಗಳ ಹಾರಾಟ ರದ್ದುಗೊಂಡಿತು.

'ಆಪರೇಷನ್ ಗಂಗಾ' ಹೆಸರಿನಲ್ಲಿ ತೆರವು ಕಾರ್ಯಾಚರಣೆ ಆರಂಭಿಸಿದ ಭಾರತ, ರಸ್ತೆ ಮಾರ್ಗದ ಮೂಲಕ ಉಕ್ರೇನ್ ಪಶ್ಚಿಮ ಗಡಿಗಳತ್ತ ಬರುವಂತೆ ಸಲಹೆ ನೀಡಿತ್ತು. ಭಾರತೀಯರನ್ನು ವಾಪಸ್ ಕರೆಸಿಕೊಳ್ಳಲು ಸಾಧ್ಯವಿರುವ ಎಲ್ಲ ಯತ್ನಗಳನ್ನು ಮಾಡುತ್ತಿರುವುದಾಗಿ ತಿಳಿಸಿತ್ತು. ಉಕ್ರೇನ್ ಜೊತೆ ಗಡಿ ಹಂಚಿಕೊಂಡಿರುವ ರೊಮೇನಿಯಾ ಹಾಗೂ ಹಂಗರಿ ಗಡಿಗಳಲ್ಲಿರುವ ಚೆಕ್‌ಪಾಯಿಂಟ್‌ಗಳನ್ನು ತಲುಪುವಂತೆ ಭಾರತೀಯರಿಗೆ ಸೂಚನೆ ನೀಡಿತ್ತು. ಮಾಹಿತಿ ಸಿಗುವಂತೆ ನೋಡಿಕೊಳ್ಳಲು ಪ್ರತ್ಯೇಕ ಟ್ವಿಟರ್ ಹ್ಯಾಂಡಲ್ ರಚಿಸಲಾಯಿತು. ಹಂಗರಿ, ಪೋಲೆಂಡ್, ರೊಮೇನಿಯಾ, ಸ್ಲೊವಾಕಿಯಾದ ಸಹಾಯವಾಣಿ ಸಂಖ್ಯೆಗಳನ್ನು ಇದರಲ್ಲಿ ಹಂಚಿಕೊಳ್ಳಲಾಯಿತು. ಪೋಲೆಂಡ್ ಗಡಿಗಳನ್ನು ತಲುಪಿದ ಭಾರತೀಯರು ಪ್ರಯಾಣಿಸಲು 10 ಬಸ್‌ಗಳನ್ನು ವ್ಯವಸ್ಥೆ ಮಾಡಲಾಗಿದ್ದು, ಇವು ಫೆ. 28ರಿಂದ ಕಾರ್ಯಾಚರಣೆ ಮಾಡಲಿವೆ ಎಂದು ಮಾಹಿತಿ ನೀಡಲಾಗಿತ್ತು. ಆದರೆ ಕೀವ್ ಹಾಗೂ ಹಾರ್ಕಿವ್‌ನಿಂದ ನೆರೆಯ ದೇಶಗಳ ಗಡಿಗಳಿಗೆ ಭಾರತೀಯರನ್ನು ಕರೆತರುವ ವ್ಯವಸ್ಥೆಯನ್ನು ರಾಯಭಾರ ಕಚೇರಿ ಮಾಡಿಲ್ಲ ಎಂದು ಸಂತ್ರಸ್ತರು ಆರೋಪಿಸಿದ್ದಾರೆ.

ಗಡಿ ಮುಟ್ಟಲು ನಡೆಯಬೇಕು ನೂರಾರು ಮೈಲಿ



ಗಡಿಠಾಣೆಗಳು	ಕೀವ್‌ನಿಂದ ಇರುವ ದೂರ	ಹಾರ್ಕಿವ್‌ನಿಂದ ಇರುವ ದೂರ
ರೊಮೇನಿಯಾ (ಪೊರುಬ್ನೆ ಸಿರೆಟ್)	535 ಕಿ.ಮೀ.	1,005 ಕಿ.ಮೀ.
ಪೋಲೆಂಡ್ (ಶೆಹೆನ್ಯ)	620 ಕಿ.ಮೀ.	1,088 ಕಿ.ಮೀ.
ಸ್ಲೊವಾಕಿಯಾ (ಉಝೋರೊಡ್)	786 ಕಿ.ಮೀ.	1,255 ಕಿ.ಮೀ.
ಹಂಗೆರಿ (ಚಾಪ್‌ಝುಹೋ)	812 ಕಿ.ಮೀ.	1,280 ಕಿ.ಮೀ.

20,000
ಉಕ್ರೇನ್‌ನಲ್ಲಿರುವ ಭಾರತೀಯರ ಸಂಖ್ಯೆ

4,000
ಉಕ್ರೇನ್ ವಾಯುಮಾರ್ಗ ರದ್ದುಗೊಳ್ಳುವ ಮುನ್ನ ದೇಶ ತೊರೆದವರ ಸಂಖ್ಯೆ

ಗಡಿಗಳತ್ತ ಪ್ರಯಾಸದ ನಡಿಗೆ

ಉಕ್ರೇನ್‌ನ ಪ್ರಮುಖ ನಗರಗಳಾದ ಕೀವ್ ಹಾಗೂ ಹಾರ್ಕಿವ್‌ನಲ್ಲಿ ಭಾರತೀಯ ವಿದ್ಯಾರ್ಥಿಗಳು ಹೆಚ್ಚಾಗಿ ವಾಸವಿದ್ದಾರೆ. ಬಹುತೇಕ ವಿದ್ಯಾರ್ಥಿಗಳು ವೈದ್ಯ ಪದವಿ ಶಿಕ್ಷಣ ಪಡೆಯುತ್ತಿದ್ದಾರೆ. ಆದರೆ, ಈ ಎರಡೂ ನಗರಗಳಿಂದ ನೆರೆಯ ದೇಶಗಳಾದ ರೊಮೇನಿಯಾ, ಪೋಲೆಂಡ್, ಸ್ಲೊವಾಕಿಯಾ ಹಾಗೂ ಹಂಗೆರಿ ಗಡಿಗಳಿಗೆ ಸಂಚರಿಸಲು ವಿದ್ಯಾರ್ಥಿಗಳಿಗೆ ಯಾವುದೇ ವ್ಯವಸ್ಥೆ ಇಲ್ಲ.

ಯುದ್ಧ ಆರಂಭವಾಗಿದ್ದರಿಂದ ಸಂಚಾರ ವ್ಯವಸ್ಥೆ ಸ್ಥಗಿತಗೊಂಡಿತ್ತು. ದೇಶದಲ್ಲಿ ಕರ್ಫ್ಯೂ ಹೇರಲಾಗಿತ್ತು. ಭಾರತೀಯರನ್ನು ಕರೆಸಿಕೊಳ್ಳಲು ವ್ಯವಸ್ಥೆ ಮಾಡಲಾಗುತ್ತಿದೆ. ಅಲ್ಲಿಯವರೆಗೆ ವಿದ್ಯಾರ್ಥಿಗಳು ವಾಹನಗಳ ವ್ಯವಸ್ಥೆ ಮಾಡಿಕೊಂಡು ಹೇಗಾದರೂ ಮಾಡಿ ಗಡಿಗಳನ್ನು ತಲುಪುವಂತೆ ಕೀವ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ತನ್ನ ಸಲಹೆಯಲ್ಲಿ ತಿಳಿಸಿತ್ತು.

ದೇಶದ ಪಶ್ಚಿಮ ಭಾಗದಲ್ಲಿರುವ ರೊಮೇನಿಯಾದ ಪೊರುಬ್ನೆ ಸಿರೆಟ್, ಪೋಲೆಂಡ್‌ನ ಶೆಹೆನ್ಯ, ಸ್ಲೊವಾಕಿಯಾದ ಉಝೋರೊಡ್ ಹಾಗೂ ಹಂಗೆರಿ ದೇಶದ ಚಾಪ್‌ಝುಹೋ ಚೆಕ್‌ಪೋಸ್ಟ್‌ಗಳನ್ನು ಭಾರತೀಯರು ತಲುಪಬೇಕಿತ್ತು. ಈ ಚೆಕ್‌ಪಾಯಿಂಟ್‌ಗಳಲ್ಲಿರುವ ಆಯಾ ದೇಶಗಳ ಭಾರತೀಯ ರಾಯಭಾರ ಕಚೇರಿಗಳು ಅಲ್ಲಿ ತಾತ್ಕಾಲಿಕ ಕಚೇರಿಗಳನ್ನು ಸ್ಥಾಪಿಸಿದ್ದು, ಉಕ್ರೇನ್‌ನಿಂದ ಬರುವ ಭಾರತೀಯರಿಗೆ ಎಲ್ಲ ನೆರವು ದೊರೆಯಲಿದೆ ಎಂದು ತಿಳಿಸಲಾಗಿತ್ತು.

ಈ ಚೆಕ್‌ಪಾಯಿಂಟ್‌ಗಳನ್ನು ತಲುಪಬೇಕಾದರೆ ವಿದ್ಯಾರ್ಥಿಗಳಿಗೆ ಇದ್ದ ದಾರಿ ಕಾಲ್ನಡಿಗೆ ಮಾತ್ರ. ಕೀವ್ ಹಾಗೂ ಹಾರ್ಕಿವ್‌ನಲ್ಲಿದ್ದ ವಿದ್ಯಾರ್ಥಿಗಳು ಕಾಲ್ನಡಿಗೆಯಲ್ಲಿ ವಿವಿಧ ದೇಶಗಳ ಗಡಿಗಳತ್ತ ಸಾಗುತ್ತಿದ್ದಾರೆ. ಅವರಿಗೆ ಕುಡಿಯುವ ನೀರು, ಆಹಾರ, ವಿಶ್ರಾಂತಿ ಸಿಕ್ಕಿಲ್ಲ. ಗಡಿ ತಲುಪಿದರೆ ಕಷ್ಟ ಕರಗಿತು ಎಂದುಕೊಂಡು ಧಾವಂತದಿಂದ ಗಡಿಗಳತ್ತ ಹೆಜ್ಜೆಹಾಕಿದ ವಿದ್ಯಾರ್ಥಿಗಳಿಗೆ ಚೆಕ್‌ಪಾಯಿಂಟ್‌ಗಳಲ್ಲಿ ನಿರಾಸೆ ಕಾದಿತ್ತು.

ಆಧಾರ: ರಾಯಿಟರ್ಸ್, ಪಿಟಿಐ, ಬಿಬಿಸಿ, ವಿದೇಶಾಂಗ ಸಚಿವಾಲಯದ ಟ್ವೀಟ್‌ಗಳು, ಉಕ್ರೇನ್‌ನಲ್ಲಿರುವ ವಿದ್ಯಾರ್ಥಿಗಳು ಮಾಡಿರುವ ಟ್ವೀಟ್‌ಗಳು

'ವಾಪಸ್ ಬರುತ್ತೇವೆಂಬ ನಂಬಿಕೆ ಇಲ್ಲ'



'ನಾವು ಕೀವ್‌ನಲ್ಲಿ ಸಿಲುಕಿದ್ದೇವೆ. ಇಲ್ಲಿ ಒಂದು ಶಿಬಿರದಲ್ಲಿ ಇದ್ದೇವೆ. ನಮಗೆ ರಾಯಭಾರ ಕಚೇರಿ, ಭಾರತ ಸರ್ಕಾರ ನೆರವು ನೀಡುತ್ತದೆ ಎಂದು ಹೇಳಲಾಗಿತ್ತು. ಆದರೆ, ರಾಯಭಾರ ಕಚೇರಿ ಫೋನ್ ಕರೆ ಸ್ವೀಕರಿಸುತ್ತಿಲ್ಲ. ನಾವು ಇಲ್ಲಿಂದ ಸುರಕ್ಷಿತವಾಗಿ ವಾಪಸ್ ಆಗುತ್ತೇವೆ ಅಥವಾ ನಮ್ಮನ್ನು ಸುರಕ್ಷಿತವಾಗಿ ತೆರವು ಮಾಡಲಾಗುತ್ತದೆ ಎಂಬ ನಂಬಿಕೆ ನಮಗೆ ಇಲ್ಲ. ಈ ಯುದ್ಧದಲ್ಲಿ ಭಾರತವು ಉಕ್ರೇನ್ ಅನ್ನು ಬೆಂಬಲಿಸಿಲ್ಲ ಎಂದು ಉಕ್ರೇನ್ ಜನರು ಸಿಟ್ಟಾಗಿದ್ದಾರೆ. ನಾವು ಉಳಿದುಕೊಂಡಿರುವ ಶಿಬಿರದ ಬಾಗಿಲುಗಳನ್ನು ಇಲ್ಲಿನ ಜನರು ಬಡಿಯುತ್ತಿದ್ದಾರೆ. ನಮ್ಮ ಮೇಲೆ ದಾಳಿ ಆಗಬಹುದು' ಎಂದು ಉತ್ತರ ಪ್ರದೇಶದ ಲಖನೌನ ವಿದ್ಯಾರ್ಥಿನಿಯೊಬ್ಬರು ವಿಡಿಯೊದಲ್ಲಿ ಅಳಲು ತೋಡಿಕೊಂಡಿದ್ದಾರೆ.

'ಸರ್ಕಾರ ಮೋಸ ಮಾಡುತ್ತದೆ ಎಂದುಕೊಂಡಿರಲಿಲ್ಲ'



'ನಾವು ಪೋಲೆಂಡ್ ಗಡಿಗೆ ಬಂದಿದ್ದೇವೆ. ಬೇರೆಲ್ಲಾ ದೇಶಗಳ ವಿದ್ಯಾರ್ಥಿಗಳನ್ನು ಗೌರವಯುತವಾಗಿ ಗಡಿ ದಾಟಿಸಲಾಗುತ್ತಿದೆ. ಆದರೆ ಭಾರತದ ವಿದ್ಯಾರ್ಥಿಗಳನ್ನು ಬಿಡುತ್ತಿಲ್ಲ. ನಮಗೆ ನೀರು, ಆಹಾರ ಏನೂ ಇಲ್ಲ. ಇಲ್ಲಿನ ಪೆಟ್ರೋಲ್ ಬಂಕ್‌ನಲ್ಲಿ ಉಳಿದುಕೊಂಡಿದ್ದೇವೆ. ಎರಡು ದಿನ ಆಗಿದೆ. ನಮ್ಮಲ್ಲಿ ಒಬ್ಬರನ್ನೂ ಗಡಿ ದಾಟಲು ಬಿಟ್ಟಿಲ್ಲ. ಭಾರತೀಯ ವಿದ್ಯಾರ್ಥಿಗಳನ್ನು ನಿರ್ಲಕ್ಷಿಸಲಾಗುತ್ತಿದೆ. ಆದರೆ ಈ ನಿರ್ಲಕ್ಷ್ಯ ಏಕೆ ಎಂಬುದು ಗೊತ್ತಾಗುತ್ತಿಲ್ಲ. ಇಲ್ಲಿ ಚಳಿ ತಡೆಯಲಾಗುತ್ತಿಲ್ಲ. ಆದರೆ, ನಮ್ಮನ್ನು ಭೇಟಿ ಮಾಡಲು ನಮ್ಮ ರಾಯಭಾರ ಕಚೇರಿಯ ಒಬ್ಬ ಸಿಬ್ಬಂದಿಯೂ ಇಲ್ಲಿ ಇಲ್ಲ. ನಮ್ಮ ಸರ್ಕಾರ ನಮ್ಮನ್ನು ಹೀಗೆ ವಂಚಿಸುತ್ತದೆ ಎಂದುಕೊಂಡಿರಲಿಲ್ಲ' ಎಂದು ವಿದ್ಯಾರ್ಥಿಯೊಬ್ಬರು ಬೇಸರ ವ್ಯಕ್ತಪಡಿಸಿದ್ದಾರೆ.

'ಸರ್ಕಾರದ ಹೇಳಿಕೆಯನ್ನು ನಂಬಬೇಡಿ'



'ಹೇಗಾದರು ಮಾಡಿ ಗಡಿಗೆ ಬನ್ನಿ ಎಂದು ರಾಯಭಾರ ಕಚೇರಿ ಮಾರ್ಗಸೂಚಿ ಹೊರಡಿಸಿದೆ. ರಾಯಭಾರ ಕಚೇರಿಯ ಫೋನ್ ಸಂಖ್ಯೆ ನೀಡಲಾಗಿದೆ. ಆದರೆ ಎಷ್ಟು ಬಾರಿ ಕರೆ ಮಾಡಿದರೂ ಅಲ್ಲಿನ ಸಿಬ್ಬಂದಿ ಕರೆಯನ್ನು ಸ್ವೀಕರಿಸುತ್ತಿಲ್ಲ. ನಾವಿರುವ ಜಾಗದಿಂದ ಗಡಿ 800 ಕಿ.ಮೀ. ದೂರ ಇದೆ. ಅಲ್ಲಿಗೆ ತಲುಪುವುದಾದರೂ ಹೇಗೆ? ಮಾರ್ಗಸೂಚಿ ಹೊರಡಿಸುವುದು ಬಿಟ್ಟು ಸರ್ಕಾರ ಬೇರೇನನ್ನೂ ಮಾಡುತ್ತಿಲ್ಲ. ಆದರೆ ವಿದ್ಯಾರ್ಥಿಗಳನ್ನು ತೆರವು ಮಾಡುತ್ತಿದ್ದೇವೆ ಎಂದು ಸರ್ಕಾರ ಹೇಳುತ್ತಿದೆ. ಮಾಧ್ಯಮಗಳೂ ಅದೇ ಸುದ್ದಿಯನ್ನು ಪ್ರಸಾರ ಮಾಡುತ್ತಿವೆ. ಆದರೆ ಪರಿಸ್ಥಿತಿ ಹಾಗಿಲ್ಲ. ಸರ್ಕಾರದ ಹೇಳಿಕೆಗಳನ್ನು ನಂಬಬೇಡಿ' ಎಂದು ವಿದ್ಯಾರ್ಥಿನಿಯೊಬ್ಬರು ಕೇಳಿಕೊಂಡಿದ್ದಾರೆ.

'ನಮ್ಮನ್ನು ಕೇಳುವವರೇ ಇಲ್ಲ'



'ಪೋಲೆಂಡ್ ಗಡಿಗೆ ಬರಲು ಹೇಳಲಾಗಿತ್ತು. ಇಲ್ಲಿಗೆ ಬಂದಿದ್ದೇವೆ. ಚಳಿ ಮೈಕೊರೆಯುತ್ತಿದೆ. ಕರೆ ಮಾಡಿದರೆ ರಾಯಭಾರ ಕಚೇರಿ ಕರೆ ಸ್ವೀಕರಿಸುತ್ತಿಲ್ಲ. ಗಡಿ ದಾಟಲೂ ಬಿಡುತ್ತಿಲ್ಲ. ನನ್ನ ಕಿರಿಯ ಮಿತ್ರರಿಗೆ ಸಮಾಧಾನ ಹೇಳಿ ಹೇಳಿ ಸಾಕಾಗಿ ಹೋಗಿದೆ. ಇಲ್ಲಿ ನಮ್ಮನ್ನು ಕೇಳುವವರು ಯಾರೂ ಇಲ್ಲ. ಅಪ್ಪ–ಅಮ್ಮನೂ ಇಲ್ಲ, ಸರ್ಕಾರವೂ ಇಲ್ಲ, ಯಾವ ಅಧಿಕಾರಿಯೂ ಇಲ್ಲ. ನಾವು ವಾಪಸ್ ಬರುವುದಾದರೂ ಹೇಗೆ?' ಎಂದು ವಿದ್ಯಾರ್ಥಿಯೊಬ್ಬರು ಕಣ್ಣೀರಿಟ್ಟಿದ್ದಾರೆ.

'ಚುನಾವಣೆಯೇ ಮುಖ್ಯ'

'ಯುದ್ಧ ನಡೆಯುವ ಬಗ್ಗೆ ತಿಂಗಳ ಹಿಂದೆಯೇ ಸೂಚನೆ ದೊರೆತಿತ್ತು. ಬೇರೆಲ್ಲಾ ದೇಶಗಳು ಉಕ್ರೇನ್‌ನಿಂದ ತಮ್ಮ ವಿದ್ಯಾರ್ಥಿಗಳನ್ನು ಯುದ್ಧ ಆರಂಭವಾಗುವ ಮುನ್ನವೇ ತೆರವು ಮಾಡಿವೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಮಾತ್ರ ಏನೂ ಮಾಡಿಲ್ಲ. ಅವರು ಉತ್ತರ ಪ್ರದೇಶದ ಚುನಾವಣೆ ಪ್ರಚಾರದಲ್ಲಿದ್ದರು. ಅವರಿಗೆ ಚುನಾವಣೆಯೇ ಮುಖ್ಯವಾಯಿತು' ಎಂದು ವಿದ್ಯಾರ್ಥಿನಿಯೊಬ್ಬರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರತಿಭಟನೆಗೆ ಕರೆ, ಪೋಷಕರ ಆಕ್ರೋಶ

'ಭಾರತದಲ್ಲಿ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿ. ಇಲ್ಲದಿದ್ದರೆ, ಅವರು ತ್ವರಿತವಾಗಿ ನಮ್ಮನ್ನು ತೆರವು ಮಾಡುವುದಿಲ್ಲ' ಎಂದು ಹಲವು ವಿದ್ಯಾರ್ಥಿಗಳು ವಿಡಿಯೊದಲ್ಲಿ ಹೇಳಿದ್ದಾರೆ. ದೆಹಲಿಯಲ್ಲಿರುವ ರಷ್ಯಾ ರಾಯಭಾರ ಕಚೇರಿ ಬಳಿ ಹಲವು ಪೋಷಕರು ಧರಣಿ ನಡೆಸಿದ್ದಾರೆ. ಆದರೆ ಅವರನ್ನು ಅಲ್ಲಿಂದ ತೆರಳಲು ಸೂಚಿಸಲಾಗಿದೆ. ಆಗ ಪೋಷಕರು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ನಮ್ಮ ಮಕ್ಕಳು ಅಲ್ಲಿದ್ದಾರೆ. ನಮ್ಮನ್ನು ಕಾಪಾಡಿ ಎಂದು ಕಣ್ಣೀರಿಟ್ಟಿದ್ದಾರೆ. ಅವರನ್ನು ಯಾವಾಗ ಕರೆತರುತ್ತೀರಿ ಎಂದು ಕೇಳಲು ಬಂದಿದ್ದೇವೆ. ಆದರೆ ನಮ್ಮನ್ನು ಇಲ್ಲಿಂದ ಓಡಿಸಲಾಗುತ್ತಿದೆ. ಈ ಬಗ್ಗೆ ಸರ್ಕಾರ ಉತ್ತರ ನೀಡುವವರೆಗೂ ನಾವು ಹೋಗುವುದಿಲ್ಲ' ಎಂದು ಸೋನು ಜೈನ್ ಎಂಬ ಮಹಿಳೆಯೊಬ್ಬರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ವಿಡಿಯೊ ಸಹ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 57

ಶಿವ ಪ್ರದಕ್ಷಿಣ ನಮಸ್ಕಾರವೇ ಶ್ರೇಷ್ಠ

ಶಾಂತಿಕರ್ಮದಲ್ಲಿ ಶಿವನಿಗೆ ನೈವೇದ್ಯವನ್ನು ಮಾಡಿ ತಾಂಬೂಲವನ್ನರ್ಪಿಸಿ, ನೂರೆಂಟು ಪ್ರದಕ್ಷಿಣ ನಮಸ್ಕಾರಗಳನ್ನು ಶಿವನಿಗೆ ಮಾಡಬೇಕು. ಶಿವನಿಗೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿದರೆ, ಸಕಲ ಪಾಪಗಳೂ ನಾಶವಾಗುವುದು ಎಂದು ಸೂತಮುನಿ ತಿಳಿಸುತ್ತಾನಲ್ಲದೆ, ದುಃಖಕ್ಕೆ ರೋಗವೇ ಕಾರಣ. ಆ ರೋಗಕ್ಕೆ ಪಾಪವು ಕಾರಣ ಅಂತ ವಿವರಿಸುತ್ತಾನೆ. ಧರ್ಮದಿಂದಲೇ ಪಾಪಗಳು ನಾಶವಾಗುವುದು. ಶಿವನನ್ನುದ್ದೇಶಿಸಿ ಮಾಡುವಂತಹ ಪ್ರದಕ್ಷಿಣನಮಸ್ಕಾರ ಮುಂತಾದ ಧರ್ಮಕಾರ್ಯಗಳಿಂದ ಪಾಪಗಳನ್ನು ಹೋಗಲಾಡಿಸಬಹುದು. ಧರ್ಮಕಾರ್ಯಗಳಲ್ಲಿ ಪ್ರದಕ್ಷಿಣ ನಮಸ್ಕಾರವು ಶ್ರೇಷ್ಠವಾದುದು. ಜಪರೂಪವಾದ ಪ್ರಣವಮಂತ್ರವೂ ಕ್ರಿಯಾರೂಪ ಪ್ರದಕ್ಷಿಣೆಯಾಗಿರುತ್ತದೆ ಎನ್ನುತ್ತಾನೆ.

ಪ್ರಾಣಿಗಳಿಗೆ ಒದಗುವ ಜನನ ಮತ್ತು ಮರಣಗಳಿಗೆ ಮಾಯಾಚಕ್ರವೆಂದು ಹೆಸರು. ಶಿವನ ಬಲಿಪೀಠವು ಆ ಮಾಯಾಚಕ್ರದ ಸ್ವರೂಪವಾಗಿರುತ್ತದೆ. ಬಲಿಪೀಠದಿಂದ ಪ್ರಾರಂಭಿಸಿ ಶಿವದೇವಾಲಯವನ್ನು ಒಂದು ಸುತ್ತು ತಿರುಗಿ ಬಲಿಪೀಠದ ಬಳಿ ಬಂದು ನಮಸ್ಕಾರವನ್ನು ಮಾಡಬೇಕು. ಇದಕ್ಕೆ ಪ್ರದಕ್ಷಿಣವೆಂದು ಹೆಸರು. ಮಾತೃಗರ್ಭದಿಂದ ಜನಿಸುವುದೇ ಜನನ. ನಮಸ್ಕಾರವು ಆತ್ಮಸ್ವರೂಪವನ್ನು ಶಿವನಲ್ಲಿ ಅರ್ಪಿಸುವುದು. ಅಂದರೆ ಶಿವನೊಡನೆ ಐಕ್ಯವಾಗುವುದು. ಜನನ ಮತ್ತು ಮರಣ ಎಂಬ ಈ ದ್ವಂದ್ವವು ಶಿವನ ಮಾಯೆಯಿಂದ ನಿರ್ಮಿತವಾಗಿರುವುದು. ಶಿವನ ಮಾಯೆಯಿಂದ ಜನನ-ಮರಣವುಳ್ಳವನು ತಿರುಗಿ ಆತ್ಮಸ್ವರೂಪವನ್ನು ಪಡೆಯುವುದು ಕಷ್ಟ. ಅವನು ದೇಹವಿರುವವರೆಗೂ ಕ್ರಿಯೆಗಳಿಗೆ ಅಧೀನನಾಗಿಯೇ ಇರುವನು. ಅವನಿಗೆ ಬದ್ಧಜೀವನೆಂದು ಹೆಸರು. ಸ್ಥೂಲ, ಸೂಕ್ಷ್ಮ ಮತ್ತು ಕಾರಣ – ಈ ಮೂರು ಶರೀರಗಳನ್ನು ವಶದಲ್ಲಿಟ್ಟುಕೊಂಡಿರುವವನಿಗೆ ಮುಕ್ತಜೀವನೆಂದು ಹೆಸರು.

ಜಗತ್ತಿಗೆ ಪರಮಕಾರಣನಾದ ಶಿವನು ಜನ್ಮಮರಣರೂಪವಾದ ಈ ಮಾಯಾಚಿತ್ರವನ್ನು ನಿರ್ಮಿಸಿರುವನು. ಶಿವಮಾಯೆಯಿಂದ ಬಂದಿರುವ ಜನನಮರಣಗಳನ್ನು ಶಿವನೊಬ್ಬನು ಮಾತ್ರ ಹೋಗಲಾಡಿಸಲು ಸಮರ್ಥ. ಶಿವನು ನಿರ್ಮಿಸಿರುವ ಜನನಮರಣಗಳನ್ನು ಅವನಲ್ಲಿಯೇ ಸಮರ್ಪಿಸಬೇಕು. ಆದ್ದರಿಂದ ಶಿವನಿಗೆ ತುಂಬಾ ಪ್ರಿಯವಾದ ಪ್ರದಕ್ಷಿಣ ನಮಸ್ಕಾರ ಮಾಡಬೇಕು. ಪ್ರದಕ್ಷಿಣ ನಮಸ್ಕಾರಗಳೊಡನೆ ಷೋಡಶೋಪಚಾರಗಳಿಂದ ಪರಮಾತ್ಮನಾದ ಶಿವನಿಗೆ ಪೂಜೆಯನ್ನು ಮಾಡಿದರೆ ನಿಶ್ಚಯವಾಗಿಯೂ ಫಲ ಲಭಿಸುವುದು. ಪ್ರದಕ್ಷಿಣ ನಮಸ್ಕಾರಗಳಿಂದ ಹೋಗದಿರುವಂತಹ ಪಾಪವೇ ಭೂಮಿಯಲ್ಲಿಲ್ಲ. ಪ್ರದಕ್ಷಿಣದಿಂದಲೇ ಸಕಲ ಪಾಪಗಳನ್ನು ನಾವು ನಾಶಮಾಡಿಕೊಳ್ಳಬೇಕು. ಶಿವಪೂಜೆಯಲ್ಲಿ ನಿರತನಾದವನು ಮೌನಿಯೂ, ಸತ್ಯ ಅಸ್ತೇಯ ಮುಂತಾದ ಗುಣಗಳುಳ್ಳವನೂ ಆಗಿರಬೇಕು. ಕ್ರಿಯೆ, ತಪಸ್ಸು, ಜಪ, ಜ್ಞಾನ, ಧ್ಯಾನಗಳಲ್ಲಿ ಒಂದನ್ನೂ ಬಿಡದೆ ಆಚರಿಸಬೇಕು.

ಶಿವನ ಕ್ರಿಯೆಗೆ ಐಶ್ವರ್ಯ ಫಲ, ತಪಸ್ಸಿಗೆ ದಿವ್ಯವಾದ ದೇಹ ದೊರೆವುದು, ಜಪಕ್ಕೆ ಜ್ಞಾನ ಲಭ್ಯವಾದರೆ, ಧ್ಯಾನಕ್ಕೆ ಶಿವನ ಸಾನ್ನಿಧ್ಯವಿರುವ ಫಲಗಳು ಸಿಗುವುದು. ಕಾಲ–ದೇಶಗಳಿಗೆ ಅನುಗುಣವಾಗಿ ಮತ್ತು ತನ್ನ ಶರೀರ, ಧನಗಳಿಗೆ ಅನುಗುಣವಾಗಿ ಮಾಡಬೇಕು. ಕ್ರಿಯೆ ಮುಂತಾದ ಮುಕ್ತಿಸಾಧನಗಳನ್ನು ಶಿವಭಕ್ತನು ಯೋಗ್ಯತೆಯನ್ನು ಮೀರದೆ ಆಚರಿಸಬೇಕು. ನ್ಯಾಯವಾಗಿ ಸಂಪಾದಿಸಿದ ಧನದಿಂದ ಶಿವಕ್ಷೇತ್ರದಲ್ಲಿ ವಾಸಮಾಡಬೇಕು. ಜೀವಹಿಂಸೆಯಾಗದಿರುವಂತಹ ಮತ್ತು ಹೆಚ್ಚು ಕ್ಲೇಶಸಾಧ್ಯವಲ್ಲದಂತಹ ಆಹಾರವನ್ನು ಪಂಚಾಕ್ಷರಮಂತ್ರದಿಂದ ಜಪಿಸಿ ಸೇವಿಸಿದರೆ ಸುಖವಾಗುವುದು. ಬಡವನು ಭಿಕ್ಷಾನ್ನವನ್ನು ತಂದು ಸೇವಿಸಬಹುದು.

ಶಿವಭಕ್ತಿಯಿಂದ ತಂದ ಭಿಕ್ಷಾನ್ನವು ಶಿವಭಕ್ತಿಯನ್ನು ಹೆಚ್ಚಿಸುವುದು. ಭಿಕ್ಷಾನ್ನವು ಶಂಭುವಿನ ಸತ್ರವೆಂದು ಶಿವಯೋಗಿಗಳು ಹೇಳಿರುವರು. ಶುದ್ಧವಾದ ಪ್ರದೇಶದಲ್ಲಿ ಕುಳಿತು ಯಾರಿಗೂ ಕಾಣಿಸದಂತೆ ಮೌನವಾಗಿ ಶುದ್ಧವಾದ ಅನ್ನವನ್ನು ಸೇವಿಸಬೇಕು. ಬಹಿರಂಗವಾಗಿ ಸೇವಿಸಬಾರದು. ಶಿವಭಕ್ತರಿಗೆ ಶಿವಮಹಾತ್ಮೆಯನ್ನು ಹೇಳಬೇಕು. ಶಿವಮಂತ್ರದ ರಹಸ್ಯವನ್ನು ಶಿವನೇ ಬಲ್ಲವನು, ಇನ್ನಾರಿಗೂ ತಿಳಿಯದು. ಶಿವಭಕ್ತನು ನಿತ್ಯವೂ ಶಿವಲಿಂಗವನ್ನಾಶ್ರಯಿಸಿದರೆ ಶಿವಸ್ವರೂಪವನ್ನು ಪಡೆಯುವನು. ಚರವಾದ ಶಿವಲಿಂಗವನ್ನರ್ಚಿಸಿದರೆ ಮುಕ್ತಿಯು ಲಭಿಸುವುದು.

ವ್ಯಾಸಮುನಿಯು ನನಗೆ ಯಾವುದನ್ನು ಹೇಳಿದ್ದನೋ, ಅದೆಲ್ಲವನ್ನೂ ಸಂಕ್ಷೇಪವಾಗಿ ನಿಮಗೆ ಹೇಳಿರುವೆ. ಶಿವನು ನಮ್ಮೆಲ್ಲರಿಗೂ ಮಂಗಳವನ್ನುಂಟುಮಾಡಲಿ, ಶಿವಭಕ್ತಿಯು ನಮ್ಮಲ್ಲಿ ದೃಢವಾಗಲಿ. ಈ ಅಧ್ಯಾಯವನ್ನು ಪಠಿಸುವವರು ಕೇಳುವವರೂ ಶಿವನ ಅನುಗ್ರಹಕ್ಕೆ ಪಾತ್ರರಾಗಿ ಶಿವಸ್ವರೂಪಜ್ಞಾನವನ್ನು ಪಡೆಯುವರು – ಎಂದು ಪ್ರಯಾಗದ ಋಷಿಸಮೂಹಕ್ಕೆ ಸೂತಮುನಿ ತಿಳಿಸುವುದರೊಂದಿಗೆ ಶ್ರೀ ಶಿವಪುರಾಣದ ವಿದ್ಯೇಶ್ವರಸಂಹಿತೆಯ ಶಿವಲಿಂಗಮಹಾತ್ಮೆ ವರ್ಣನೆ ಎಂಬ ಹದಿನೆಂಟನೆ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ಉದಾತ್ತತೆಯ ಹೋರಾಟ

ಹೋರು ಧೀರತೆಯಿಂದ, ಮೊಂಡುತನದಿಂ ಬೇಡ |
ವೈರ ಹಗೆತನ ಬೇಡ, ಹಿರಿ ನಿಯಮವಿರಲಿ ||
ವೈರಾಗ್ಯ ಕಾರುಣ್ಯ ಮೇಳನವೆ ಧೀರತನ |
ಹೋರುದಾತ್ತತೆಯಿಂದ – ಮಂಕುತಿಮ್ಮ || 574 ||

ಪದ-ಅರ್ಥ: ಹೋರು = ಹೋರಾಡು, ಮೇಳನವೆ- = ಸೇರುವಿಕೆಯೆ, ಹೋರುದಾತ್ತತೆಯಿಂದ = ಹೋರು + ಉದಾತ್ತತೆಯಿಂದ (ಶ್ರೇಷ್ಠತೆಯಿಂದ).

ವಾಚ್ಯಾರ್ಥ: ಧೀರತೆಯಿಂದ ಹೋರಾಡು, ಮೊಂಡತನದಿಂದ ಬೇಡ. ವೈರತ್ವ, ದ್ವೇಷ ಬೇಡ. ಯಾವಾಗಲೂ ಹೋರಾಟದಲ್ಲಿ ಹಿರಿದಾದ ನಿಯಮವಿರಲಿ. ವೈರಾಗ್ಯ ಮತ್ತು ಕರುಣೆಗಳ ಸಮ್ಮೇಳನವೆ ಧೀರತನ. ಶ್ರೇಷ್ಠತೆಯಿಂದ ಹೋರಾಡು.

ವಿವರಣೆ: ಮಹಾಭಾರತದ ಕಥೆ, ನಿತ್ಯ ಜೀವನದ ಬದುಕಿಗೆ ಒಂದು ಅದ್ಭುತ ಪಾಠ. ಅದರಲ್ಲಿಯ ಒಂದೊಂದು ಪ್ರಸಂಗ ನಮಗೆ ಮಾರ್ಗದರ್ಶಿಯಾಗಬಲ್ಲವು. ಅಲ್ಲಿ ಅನೇಕ ಪಾತ್ರಗಳು ಹೋರಾಟ ಮಾಡಿದವುಗಳೇ. ಭೀಷ್ಮರ ಹೋರಾಟಕ್ಕೊಂದು ಮುಖ, ದ್ರೋಣರ, ಅಶ್ವತ್ಥಾಮರ ಹೋರಾಟಕ್ಕೆ ಇನ್ನೊಂದು ಮುಖ. ನನಗೆ ಅಲ್ಲಿ ಮುಖ್ಯವಾಗಿ ಹೋರಾಟದ ಎರಡು ಮುಖಗಳು ಕಾಣುತ್ತವೆ. ಒಂದು ಮಾದರಿ ದುರ್ಯೋಧನನದು. ಅವನಿಗೆ ಛಲ, ಎಲ್ಲವೂ ತನಗೇ ದಕ್ಕಬೇಕೆಂಬ ಹಟ. ದಾಯಾದಿಗಳಿಗೆ ಅನ್ಯಾಯವಾದರೂ ಸರಿ, ತಾನು ಎಲ್ಲವನ್ನೂ ಪಡೆಯಬೇಕೆಂಬ ಅದಮ್ಯ ದುರಾಸೆ. ಗೆಲ್ಲಲು ಆತ ಯಾವ ಮಾರ್ಗವನ್ನಾದರೂ ಹಿಡಿಯಲು, ಯಾರನ್ನಾದರೂ ಒಲಿಸಿಕೊಳ್ಳಲು ಸಿದ್ಧ. ಅವನದು ಅಸಾಧ್ಯ ಮೊಂಡತನ. ಆತ ತಾತ ಭೀಷ್ಮರನ್ನು, ತಂದೆ-ತಾಯಿಯರನ್ನು, ಗುರುಗಳನ್ನು ಎದುರು ಹಾಕಿಕೊಂಡು ತನ್ನ ಛಲಕ್ಕೋಸ್ಕರವೇ ಹೋರಾಡುವಂಥವನು. ಅದು ಮೊಂಡುತನದ ಹೋರಾಟ. ಅದರಲ್ಲಿ ಪಾಂಡವರ ಬಗ್ಗೆ ಅಸಾಧ್ಯ ವೈರವಿದೆ, ದ್ವೇಷವಿದೆ.

ಇನ್ನೊಂದು ಮುಖ ಕೃಷ್ಣನದು. ಅವನಿಗೆ ದುರ್ಯೋಧನ ಮತ್ತು ಧರ್ಮರಾಜ ಇಬ್ಬರೂ ಸಂಬಂಧಿಗಳೇ. ಹಾಗೆ ನೋಡಿದರೆ ದುರ್ಯೋಧನನೊಡನೆ ಸಂಬಂಧ ಹತ್ತಿರದ್ದು. ಕೃಷ್ಣನ ಮಗ ಸಾಂಬ, ದುರ್ಯೋಧನನ ಮಗಳು ಲಕ್ಷಣೆಯನ್ನು ಮದುವೆಯಾಗಿದ್ದ. ಆದ್ದರಿಂದ ಅವರಿಬ್ಬರೂ ಬೀಗರು. ಕೃಷ್ಣ ಆಯುಧ ಹಿಡಿದು ಯುದ್ಧ ಮಾಡದೆ ಹೋದರೂ, ಒಂದು ರೀತಿಯಲ್ಲಿ ಆತನೇ ಯುದ್ಧಕ್ಕೆ ಕಾರಣ. ತಾನು ಯುದ್ಧ ಮಾಡುವುದಿಲ್ಲವೆಂದು ಶಸ್ತ್ರ ಚೆಲ್ಲಿ ಕುಳಿತ ಪಾರ್ಥನನ್ನು ಕಲಿಮಾಡಿ ಯುದ್ಧಕ್ಕೆ ಪ್ರೇರೇಪಿಸಿದವನೇ ಅವನು. ಆದರೆ ಅವನ ಹೋರಾಟದಲ್ಲಿ ವೈರತ್ವವಿಲ್ಲ. ದ್ವೇಷವಿಲ್ಲ. ಅವನ ಒಟ್ಟು ಧ್ಯೇಯ ಧರ್ಮರಕ್ಷಣೆ, ದುಷ್ಟ ಶಿಕ್ಷಣೆ ಮತ್ತು ನ್ಯಾಯಪಾಲನೆ. ಅವನಿಗೆ ಯಾರು ಯುದ್ಧ ಗೆದ್ದರೂ ವೈಯಕ್ತಿಕವಾಗಿ ಯಾವ ಲಾಭವೂ ಇಲ್ಲ, ಯಾವ ಹಾನಿಯೂ ಇಲ್ಲ. ಅವನು ಪಾಂಡವರನ್ನು ಆರಿಸಿಕೊಂಡದ್ದು ಸೋದರತ್ತೆಯ ಮಕ್ಕಳೆಂದಲ್ಲ. ಅವರು ಧರ್ಮಿಷ್ಠರು ಮತ್ತು ಸತ್ಯವಂತರು ಎಂದು. ಅವರ ರಕ್ಷಣೆ ಮತ್ತು ಜಯ, ಇದೇ ಹಿರಿದಾದ ನಿಯಮ ಕೃಷ್ಣನಿಗೆ. ಯುದ್ಧದ ಪರಿಣಾಮದ ಬಗ್ಗೆ ಅವನಿಗೆ ವೈರಾಗ್ಯವಿದೆ ಮತ್ತು ಪ್ರತಿಯೊಂದು ಜೀವದ ಬಗ್ಗೆ ಕರುಣೆ ಇದೆ. ಧೀರತನವೆಂದರೆ ಕೇವಲ ಖಡ್ಗದ ಶೌರ್ಯತನವಲ್ಲ. ಅದು ವೈರಾಗ್ಯ ಮತ್ತು ಕಾರುಣ್ಯಗಳ ಸೇರುವಿಕೆ.

ಅದಕ್ಕೆಂದೇ ಶ್ರೀ ಕೃಷ್ಣ ಜಗದೋದ್ಧಾರಕನಾದ, ದುರ್ಯೋಧನ ಖಳನಾಯಕನಾಗಿ ಉಳಿದ. ಕಗ್ಗ ಈ ವಿಷಯವನ್ನು ಒತ್ತಿ ಹೇಳುತ್ತದೆ. ಹೋರಾಟದಲ್ಲಿ ಮೊಂಡುತನ ಬೇಡ, ವೈರತ್ವ, ದ್ವೇಷಗಳು ಬೇಡ. ಅದರಲ್ಲೊಂದು ಹಿರಿದಾದ ಧ್ಯೇಯವಿರಲಿ. ವೈರಾಗ್ಯ ಮತ್ತು ಕಾರುಣ್ಯಗಳು ಮೇಳೈಸಿದಾಗ ಧೀರತನ ಪ್ರಕಟವಾಗುತ್ತದೆ. ಪ್ರತಿಯೊಂದು ಹೋರಾಟದಲ್ಲಿ ಒಂದು ಶ್ರೇಷ್ಠತೆ ಇರಲಿ. ಇದು ಸಾಧನೆಗೆ ಮಾರ್ಗದರ್ಶಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಮಾರ್ಚ್ 1, 2022

ಶ್ರೀಪ್ಲವನಾಮ ಸಂವತ್ಸರ ಉತ್ತರಾಯಣ –ಶಿಶಿರ ಋತು ಕುಂಭ ಮಾಸದ 17 ನೇ ದಿನ ತಿಥಿ: (ಮಾಘ ಕೃಷ್ಣ) ಚತುರ್ದಶಿ ಗಂ. 25-01 ನಕ್ಷತ್ರ: ಧನಿಷ್ಠಾ ಗಂ. 27-48 ಯೋಗ: ಪರಿಘ ಗಂ. 11-17, ಕರಣ: ವಿಷ್ಟಿ ಗಂ. 14-07. ರಾಹುಕಾಲ: ಮಧ್ಯಾಹ್ನ 03:00 – 04:30 ಸೂರ್ಯೋದಯ : 06-50 ಸೂರ್ಯಾಸ್ತ : 06-36 ಮುಸ್ಲಿಂ ದಿನಾಂಕ : 27 ರಜಬ್ ದಿನ ವಿಶೇಷ : ಮಹಾ ಶಿವರಾತ್ರಿ, ಸಬ್-ಎ-ಮಿರಾಜ್ (ಹಿಂದಿನ ದಿನ ರಾತ್ರಿ) (ಮುಸ್ಲಿಂ) ಅದೃಷ್ಟ ಸಂಖ್ಯೆ: 1, 8

ಮೇಷ: ನಿಮ್ಮ ಕಾರ್ಯದಲ್ಲಿ ಎಷ್ಟೇ ಮನುಷ್ಯ ಪ್ರಯತ್ನವಿದ್ದರೂ ಯಶಸ್ಸು ಹೊಂದಲು ಮೊದಲೆರಡು ಬಾರಿ ವಿಘ್ನ ಉಂಟಾಗುವುದು. ಆದಾಯದಲ್ಲಿ ಏರಿಳಿತ. ಜೀವನದಲ್ಲಿ ಅಧಿಕಾರದ ಹುದ್ದೆಯನ್ನು ಹೊಂದುವಿರಿ.

ವೃಷಭ: ಮನೆ ದುರಸ್ತಿಯ ಕೆಲಸಗಳನ್ನು ಮಾಡಿಸುವ ಅನಿವಾರ್ಯ. ಸಹಾಯ ಗುಣ ಹೊಂದಿರುವ ಕಾರಣದಿಂದ ಸಹಪಾಠಿಗಳೊಂದಿಗಿನ ಬಾಂಧವ್ಯ ಉತ್ತಮಗೊಳ್ಳುವುದು. ಮನೆಗಾಗಿ ಅಲಂಕಾರಿಕ ವಸ್ತುಗಳ ಖರೀದಿ ಮಾಡುವಿರಿ.

ಮಿಥುನ: ವಿದೇಶಿ ಗೆಳೆಯನ ಆಗಮನ ಮತ್ತು ಅವನ ಸಹವಾಸದಿಂದ ನಿಮ್ಮ ವ್ಯವಹಾರದಲ್ಲಿ ಉತ್ತಮ ಬದಲಾವಣೆಗಳನ್ನು ಕಾಣುವಿರಿ. ನಿಮ್ಮಲ್ಲಿ ಹೊಸ ಹುಮ್ಮಸ್ಸು ಮೂಡಲಿದೆ. ರಾಜಕೀಯ ವಿಚಾರಗಳನ್ನು ಗುಪ್ತವಾಗಿ ಇರಿಸಿ.

ಕರ್ಕಾಟಕ: ಬದುಕಿನ ಮೇಲೆ ನಿಯಂತ್ರಣ ಸಾಧಿಸುವ ನಿಟ್ಟಿನಲ್ಲಿ ದುಡಿದು ಯಶಸ್ಸನ್ನು ಹೊಂದುವಿರಿ. ಕೌಟುಂಬಿಕವಾಗಿ ಅಚ್ಚರಿಯ ಸಂಗತಿಗಳನ್ನು ಕೇಳುವಂತಾಗುವುದು. ಸರಕು ಸಾಗಾಟದಿಂದ ಉತ್ತಮ ಲಾಭ.

ಸಿಂಹ: ಕಾನೂನು ವಿದ್ಯಾರ್ಥಿಗಳಿಗೆ ಹೆಚ್ಚಿನ ಪರಿಶ್ರಮ ಅಗತ್ಯವಿದ್ದು ಅನುಭವಕ್ಕೆಂದು ಹಿರಿಯ ವಕೀಲರ ಸಹಾಯಕನಾಗಿ ಸೇರಿಕೊಳ್ಳುವುದು ಉತ್ತಮ. ಕನಸುಗಳನ್ನು ಸಾಕಾರಗೊಳಿಸಲು ಅವಿರತ ಶ್ರಮ ಅಗತ್ಯ.

ಕನ್ಯಾ: ತಕ್ಷಣದಲ್ಲಿ ನಡೆಯಬೇಕೆಂಬ ಅಗತ್ಯ ಕಾರ್ಯಗಳಲ್ಲಿ ವಿಳಂಬ ತೋರಿ ಬಂದೀತು. ವ್ಯಾವಹಾರಿಕ ಪಾಲುದಾರರ ಜೊತೆಯಲ್ಲಿ ಉತ್ತಮ ಬಾಂಧವ್ಯವನ್ನು ಹೊಂದುವಿರಿ. ಆರೋಗ್ಯದ ಬಗ್ಗೆ ವಿಶೇಷ ಗಮನಹರಿಸಬೇಕಾದೀತು.

ತುಲಾ: ಷರತ್ತುಗಳ ಯಾವುದೇ ರೀತಿಯ ವ್ಯವಹಾರಕ್ಕೂ ಈ ದಿನದಲ್ಲಿ ಕೈ ಹಾಕಬೇಡಿ. ಗಣ್ಯರಿಂದ ಮುಂದಿನ ಬದುಕಿನ ದಾರಿ ಬದಲಾಗುವ ಸಾಧ್ಯತೆ ಇದೆ. ಹೊಸ ವಾತಾವರಣಕ್ಕೆ ಮನೆಯವರೆಲ್ಲರೂ ಹೊಂದಿಕೊಳ್ಳಲು ಯತ್ನಿಸುವರು.

ವೃಶ್ಚಿಕ: ಧಾನ್ಯಗಳ ವ್ಯಾಪಾರಗಳಿಂದ ಹೆಚ್ಚಿನ ಲಾಭ. ಬಹಳ ದಿನಗಳಿಂದ ನೀವು ಅಂದುಕೊಂಡಂತೆ ಕೆಲಸದಲ್ಲಿ ಹೊಸ ಪರಿವರ್ತನೆ ಮಾಡಲು ಈ ಸಮಯ ಸಾಧ್ಯವಾಗುತ್ತದೆ. ಕೇವಲ ಮನರಂಜನೆಗಾಗಿ ದೂರ ಪ್ರಯಾಣ ಸರಿಯಲ್ಲ.

ಧನು: ದಾಂಪತ್ಯ ಜೀವನ ಸುಖಮಯವಾಗಿರುವುದು ಅಥವಾ ವಿವಾಹ ಅಪೇಕ್ಷಿಗಳಿಗೆ ಶುಭವಿದೆ. ಸಾಮಾಜಿಕ ಕಾರ್ಯಕ್ರಮಗಳಿಂದ ಖ್ಯಾತಿ. ಈಶ್ವರನ ಕೃಪೆಯಿಂದ ಆರ್ಥಿಕ ಸ್ಥಿತಿಗತಿ ಇನ್ನಷ್ಟು ಉತ್ತಮಗೊಳ್ಳಲಿದೆ.

ಮಕರ: ಆರಕ್ಷಕ ಸಿಬ್ಬಂದಿಗಳಿಗೆ ಹೆಚ್ಚಿನ ಕೆಲಸಗಳು ಒದಗಿ ಬರಲಿವೆ. ನಿಮ್ಮ ಬುದ್ಧಿವಂತಿಕೆ, ನಡೆ-ನುಡಿಯಿಂದ ಸಮಸ್ಯೆಗಳು ಹಿಮದಂತೆ ಕರಗಲಿವೆ. ವಿದ್ಯಾರ್ಥಿ ಜೀವನವನ್ನು ಇಷ್ಟಪಡುವವರಿಗೆ ಹೆಚ್ಚಿನ ಅಧ್ಯಯನಕ್ಕೆ ಸಕಾಲ.

ಕುಂಭ: ಮಗಳಿಗೆ ಸಂಬಂಧಿಕರಲ್ಲಿ ಅಥವಾ ಅಕ್ಕಪಕ್ಕದ ಮನೆಯಲ್ಲಿಯೇ ವರ ನಿಶ್ಚಯವಾಗಿ ಮದುವೆಯ ತಯಾರಿ ನಡೆಸುವಿರಿ. ಕಮಿಷನ್ ಏಜೆಂಟರುಗಳಿಗೆ ಮತ್ತು ರಿಯಲ್ ಎಸ್ಟೇಟ್ ವ್ಯಾಪಾರಿಗಳಿಗೆ ಅಧಿಕ ಲಾಭ ಇರಲಿದೆ.


ಮೀನ: ಹೊಸ ಮನೆಯ ನಿರ್ಮಾಣ ಕಾರ್ಯಗಳು ಚುರುಕುಗತಿಯಲ್ಲಿ ಸಾಗುವುದು. ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಸ್ವೀಕರಿಸುವ ಉತ್ತಮ ಅವಕಾಶ. ಅದರಿಂದಾಗಿ ಸಮಾಜದಲ್ಲಿ ಪ್ರತಿಷ್ಠೆಯು ಹೆಚ್ಚಲಿದೆ.

ಪದಬಂಧ 4884

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಭ್ರೂಣವನ್ನು ಆವರಿಸಿರುವ ಪೊರೆ (3)
4.ವಿಷ್ಣುವಿನ ಐದನೆಯ ಅವತಾರ (3)
5.ಒತ್ತಾಯವನ್ನು ಹೀಗೂ ಹೇಳುವರು (4)
6.ನಾಮ ಹಚ್ಚಿಕೊಂಡವನ ಹೆಸರು (4)
7.ಕಮ್ಮಾರನ ಕೈ! (2)
9.ಪುಢಾರಿಯ ಹತ್ತಿರವಿರುವ ಶತ್ರು ಕಾಣುವನೇ? (2)
13.ನಡುವೆ ಹೋರಿ ತಿರುಗಿದರೆ ಪ್ರಯಾಣಿಕ ಕಾಣಿಸಿದನೇ? (4)
14.ಇತರರಿಗೆ ಸಹಾಯ ಮಾಡುವವ (4)
15.ವಿರಾಟರಾಜನ ಸೇನಾಪತಿ (3)
16.ಗಟ್ಟಿಯಾದ ಕೂಗು (3)

ಮೇಲಿಂದ ಕೆಳಕ್ಕೆ
1.ಉತ್ತರದವರ ಆಸ್ಪತ್ರೆ (4)
2.ಈತ ಮಂದಿಗೆಲ್ಲಾ ಯಜಮಾನ (5)
3.ಮನದೊಳಗೆ ನೀವುವಿಕೆ! (3)
5.ಗೆಲುವಿನ ಭೇರಿಯಿದು (4)
8.ಅಪ್ಪಣೆ ಚೀಟಿಯಿದು (4)
10.ಹೊತ್ತಿಗೆಯ ಜೊತೆಯಿರುವ ಕೀಟ! (5)
11.ಸಮಯಸ್ಫೂರ್ತಿಯಿಂದ ಕವನ ರಚಿಸಬಲ್ಲ ಕವಿ (4)
12.ನಾಲ್ಕು ಪಾದಗಳುಳ್ಳ ಒಂದು ಪದ್ಯ ಜಾತಿ (3)



4883ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅರ್ಬುದ 4.ಗಬ್ಬುನಾತ
6.ಮನಸಿಜ 8.ಜಿಬರು
11.ಮುದುಕ 13.ಹಸುಗೂಸು
17.ತಡಗುಣಿ 18.ಕಟ್ಟಳೆ

ಮೇಲಿಂದ ಕೆಳಕ್ಕೆ:
1.ಅಲ್ಪಜ್ಞ 2.ದಗಲ್ಬಾಜಿ
3.ಆಲಸಿ 5.ತಮ
7.ಜಯಂತ 9.ರುಸುಮು
10.ಸಂದೇಹ 12.ಕರಣಿಕ
14.ಸುಶ್ರಾವ್ಯ 15.ಸುತ
16.ಹೊರಳೆ

ಸುಡೊಕು 5270

		1		7		6		2
		5	2		9		8	1
2				1			9	
	5		7			8		
				8		5		9
8		6		9				
6				5		9		7
		8					5	
5		3		6		1		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5269 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಸೆಬಿಗೆ ಮೊದಲ ಮಹಿಳಾ ಅಧ್ಯಕ್ಷೆ ಮಾಧವಿ


ಮಾಧವಿ ಪುರಿ ಬುಚ್

ನವದೆಹಲಿ (ಪಿಟಿಐ): ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಮಾಧವಿ ಪುರಿ ಬುಚ್ ಅವರನ್ನು ಅಧ್ಯಕ್ಷೆಯನ್ನಾಗಿ ನೇಮಿಸಲಾಗಿದೆ. ಸೆಬಿ ಅಧ್ಯಕ್ಷ ಸ್ಥಾನಕ್ಕೆ ನೇಮಕ ಆಗಿರುವ ಮೊದಲ ಮಹಿಳೆ ಮಾಧವಿ.


ಅಜಯ್ ತ್ಯಾಗಿ ಅವರ ಐದು ವರ್ಷಗಳ ಅವಧಿ ಸೋಮವಾರ ಮುಗಿದಿದ್ದು, ಅವರ ಸ್ಥಾನಕ್ಕೆ ಈ ನೇಮಕಾತಿ ನಡೆದಿದೆ. ಸಂಪುಟದ ನೇಮಕಾತಿ ಸಮಿತಿಯು ಮೂರು ವರ್ಷಗಳ ಅವಧಿಗೆ ಅವರ ನೇಮಕಕ್ಕೆ ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಸೆಬಿಯ ಸದಸ್ಯರಾಗಿ ಅವರು ಸೇವೆ ಸಲ್ಲಿಸಿದ್ದಾರೆ. ಈ ಹಿಂದೆ ಶಾಂಘೈನಲ್ಲಿ ನ್ಯೂ ಡೆವಲಪ್‌ಮೆಂಟ್ ಬ್ಯಾಂಕ್‌ನ ಸಲಹೆಗಾರಾಗಿ ಕೆಲಸ ಮಾಡಿದ್ದರು.

ಅಂತರ ಕಾಯ್ದುಕೊಳ್ಳಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,658
ಇಂದಿನ ಅಂತ್ಯ	16,794
▲	136
ದಿನದ ಗರಿಷ್ಠ	16,815

ವಿನಿಮಯ ದರ

$ ಡಾಲರ್	75.35
£ ಪೌಂಡ್	100.87
€ ಯುರೊ	84.40
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹390
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹395

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1485 (1470)
ಸೋಯಾ (ರಿಫೈನ್ಡ್)	₹1520 (1475)
ಸೂರ್ಯಕಾಂತಿ (ರಿಫೈನ್ಡ್)	--- (1520)
ಪಾಮೋಲಿನ್	₹1417 (1395)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಬೆಂಗಳೂರು	₹19000-20000
ಪುತ್ತೂರು	₹4000-10500
ತುರುವೇಕೆರೆ	₹17600-17650

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2000-2700
ಮಧ್ಯಮ	₹1200-2000
ಸಣ್ಣ	₹000-1200

ಸತತ ಎರಡನೆಯ ದಿನವೂ ಏರಿಕೆ ಕಂಡ ಸೆನ್ಸೆಕ್ಸ್



ಮುಂಬೈ (ಪಿಟಿಐ): ಉಕ್ರೇನ್–ರಷ್ಯಾ ನಡುವಿನ ಸಂಘರ್ಷದಿಂದಾಗಿ ಪಾಶ್ಚಿಮಾತ್ಯ ದೇಶಗಳ ಷೇರು-ಪೇಟೆಗಳಲ್ಲಿ ಕುಸಿತ ಮುಂ-ದುವರಿದಿದ್ದರೂ, ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಸತತವಾಗಿ ಎರಡನೆಯ ವಹಿವಾಟಿನ ದಿನವೂ ಏರಿಕೆ ದಾಖಲಿಸಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ ಕೂಡ ಏರಿಕೆ ಕಂಡುಕೊಂಡಿತು.

ಸೋಮವಾರ ವಹಿವಾಟು ಆರಂಭವಾದಾಗ ಸೆನ್ಸೆಕ್ಸ್ 1,025ಕ್ಕೂ ಹೆಚ್ಚು ಅಂಶ ಕುಸಿದಿತ್ತು. ಆದರೆ, ದಿನದ ಕೊನೆಯಲ್ಲಿ 388 ಅಂಶ ಏರಿಕೆಯೊಂದಿಗೆ ವಹಿವಾಟು ಅಂತ್ಯಗೊಳಿಸಿತು. ನಿಫ್ಟಿ 135 ಅಂಶ ಏರಿಕೆ ದಾಖಲಿಸಿತು.

‘ರಷ್ಯಾ–ಉಕ್ರೇನ್ ಬಿಕ್ಕಟ್ಟು ತೀವ್ರ-ವಾಗಿರುವುದು, ರಷ್ಯಾದ ಮೇಲೆ ಜಾಗತಿಕವಾಗಿ ನಿರ್ಬಂಧಗಳು ಜಾರಿಗೆ ಬಂದಿರುವುದು ಪಾಶ್ಚಿಮಾತ್ಯ ದೇಶಗಳ ಮಾರುಕಟ್ಟೆಗಳ ಮೇಲೆ ಪ್ರಭಾವ ಬೀರಿವೆ. ಆದರೆ, ರಷ್ಯಾದ ಮೇಲಿನ ನಿರ್ಬಂಧದ ಕಾರಣದಿಂದಾಗಿ ಭಾರತದ ಉಕ್ಕು ತಯಾರಕರಿಗೆ ರಫ್ತು ಮಾರುಕಟ್ಟೆಯ-ಲ್ಲಿ ಹೆಚ್ಚಿನ ಪಾಲು ಸಿಗಬಹುದು ಎಂಬ ನಿರೀಕ್ಷೆಯಲ್ಲಿ ಲೋಹ ವಲಯದ ಷೇರುಗಳಿಗೆ ಹೆಚ್ಚಿನ ಬೇಡಿಕೆ ಬಂತು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

‘ರಷ್ಯಾ ಮತ್ತು ಉಕ್ರೇನ್ ನಡುವಿನ ಮಾತುಕತೆಯು ಮಾರುಕಟ್ಟೆಗಳ ಮೇಲೆ ಪ್ರಭಾವ ಬೀರಲಿದೆ’ ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಉಕ್ರೇನ್ ಬಿಕ್ಕಟ್ಟು: ರಫ್ತು ಬಗ್ಗೆ ನಿರ್ಮಲಾ ಆತಂಕ

ನವದೆಹಲಿ (ರಾಯಿಟರ್ಸ್): ಉಕ್ರೇನ್ ಬಿಕ್ಕಟ್ಟಿನಿಂದಾಗಿ ರಫ್ತು ವಹಿವಾಟಿನ ಮೇಲೆ ದುಷ್ಪರಿಣಾಮ ಉಂಟಾಗಬಹುದು ಎನ್ನುವ ಆತಂಕವು ಭಾರತಕ್ಕೆ ಇದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ಹೇಳಿದ್ದಾರೆ.

ಬಿಕ್ಕಟ್ಟಿನಿಂದಾಗಿ ಪಾವತಿ ವ್ಯವಸ್ಥೆಯಲ್ಲಿ ಯಾವುದೇ ರೀತಿಯ ಸಮಸ್ಯೆಗಳು ಎದುರಾಗಿವೆಯೇ ಎನ್ನುವ ಬಗ್ಗೆ ಉದ್ಯಮ ವಲಯದ ಪ್ರತಿಕ್ರಿಯೆಯನ್ನೂ ಹೇಳಿದ್ದಾರೆ. ಔಷಧವಸ್ತುಗಳ ರಫ್ತು ಮತ್ತು ರಾಸಾಯನಿಕ ಆಮದು ಕುರಿತು ಕಳವಳ ಇರುವುದಾಗಿ ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

28-2-2022

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9550-9600
ದಪ್ಪ ಮಧ್ಯಪ್ರದೇಶ(ಹೊಸ)	9550-9600
ದಪ್ಪ ಗುಜರಾತ್(ಹೊಸ)	8400-8450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1495 (1480)
ಒಂದು ವಾರದ ಡೆಲಿವರಿ	1490 (1475)
ಸೋಯಾ ಕಚ್ಚಾ	1465 (1470)
ಪಾಮ್ ವಾರದ ಡೆಲಿವರಿ	1415 (1393)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (1460)


ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,600 (50,475)
ಬೆಳ್ಳಿ ಕೆ.ಜಿ 65,400 (65,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಶಿವ ಒಳಿತಿನ ಒಡೆಯ

• ಎಸ್. ಸೂರ್ಯಪ್ರಕಾಶ ಪಂಡಿತ್



ಇಂದು ಮಹಾಶಿವರಾತ್ರಿ

ಶಿವನ ಕಲ್ಪನೆ ತುಂಬ ಪ್ರಾಚೀನವಾದುದು; ವೇದಗಳಲ್ಲಿಯೇ ಕಾಣುತ್ತೇವೆ. ಅವನು ಶಿವನೂ ಹೌದು, ಶಂಕರನೂ ಹೌದು. ‘ಶಂಕರ’ ಎಂದರೆ ಮಂಗಳಕರ – ಒಳಿತನ್ನು ಮಾಡುವವನು – ಎಂದರ್ಥ. ‘ಒಳಿತು ನನಗೆ ಬೇಡ’ – ಎನ್ನುವವರು ಯಾರಾದರೂ ಇದ್ದಾರೆಯೆ? ‘ಶಿವ’ ಎಂದರೆ ‘ವಿಶ್ರಾಂತಸ್ಥಾನ’ ಎಂದೂ ಹೇಳುವುದಿದೆ. ಪ್ರತಿಕ್ಷಣವೂ ಜೀವನಯಾನದಲ್ಲಿ ಓಡುತ್ತಲೇ ಇರುವ ನಮಗೆ ವಿಶ್ರಾಂತಿ ಕೂಡ ಅಗತ್ಯವೇ ಹೌದಲ್ಲವೆ? ಶಿವನ ಪ್ರಸಿದ್ಧ ಹೆಸರುಗಳಲ್ಲಿ ‘ರುದ್ರ’ ಎಂಬುದೂ ಒಂದು. ರುದ್ರ ಎಂದರೆ ರೋದನವನ್ನು ಉಂಟುಮಾಡಬಲ್ಲವನಂತೆ. ರೋದನ, ಎಂದರೆ ಅಳು; ಅದು ಯಾರಿಗೂ ಬೇಡವಾದದ್ದು. ಆದರೆ ಯಾರ ಜೀವನದಲ್ಲಿ ತಾನೆ ರೋದನವಿಲ್ಲದಿದ್ದೀತು? ಆದಕಾರಣ, ಅಳುವಿನಿಂದ ಬಿಡುಗಡೆ ಬೇಕು ಎಂದರೆ, ಅದರ ಮೂಲದ ಬಗ್ಗೆ ಅರಿವು ಒದಗಬೇಕು; ಆಗ ರುದ್ರನನ್ನೇ ಆಶ್ರಯಿಸಬೇಕು. ತಾತ್ಪರ್ಯ ಏನೆಂದರೆ, ಶಿವನ ಕಲ್ಪನೆಯಲ್ಲೇ ನಮ್ಮ ಜೀವನದ ಕಲ್ಪನೆಯೂ ಬೆಸೆದುಕೊಂಡಿದೆ.

ತ್ರಿಮೂರ್ತಿಗಳಲ್ಲಿ ಶಿವನೂ ಒಬ್ಬ. ಸೃಷ್ಟಿಕರ್ತನು ಬ್ರಹ್ಮನಾದರೆ, ಸ್ಥಿತಿಗೆ ಕಾರಣನು ವಿಷ್ಣು; ಪ್ರಳಯ-ಕಾರಕನೇ ಶಿವ ಎಂಬುದು ನಮ್ಮ ಸಂಸ್ಕೃತಿಯ ಎಣಿಕೆ. ಹುಟ್ಟ ಬೇಕು; ಹುಟ್ಟಿದ್ದು ಬೆಳೆಯಬೇಕು; ಬೆಳೆದದ್ದು ಮರೆಯಾಗಲೇಬೇಕು. ಇದು ಸೃಷ್ಟಿನಿಯಮ; ಸೃಷ್ಟಿ, ಸ್ಥಿತಿ ಮತ್ತು ಲಯತತ್ತ್ವಗಳ ಸಾರ. ತ್ರಿಮೂರ್ತಿಗಳ-ಲ್ಲಿ ಶಿವನ ಕೆಲಸ ಸಂಹಾರಕನ ಪಾತ್ರ; ಎಲ್ಲವನ್ನೂ ಲಯ ಮಾಡುವವನು, ಮರೆಯಾಗಿಸುವವನು. ಸಂಹಾರ ಎಂಬುದು ಮೇಲ್ನೋಟಕ್ಕೆ ತುಂಬ ಭಯಂಕರವಾಗಿಯೂ ಕ್ರೌರ್ಯವಾಗಿಯೂ ಕಾಣಿಸುವುದು ದಿಟವೆನ್ನಿ! ಆದರೆ ಸಂಹಾರ ನಡೆಯದೆಯೇ ಉಗಮಕ್ಕೆ ತಾಣವೇ ಒದಗದು ಎಂಬ ತಥ್ಯವನ್ನು ಅದು ಸಂಕೇತಿಸುತ್ತಿದೆ; ‘ತೊಟ್ಟಿಲುಗಳೆಷ್ಟೊ ಮಸಣಗಳಷ್ಟು’ ಎಂಬ ಕವಿವಾಣಿಯನ್ನು ಇಲ್ಲಿ ಸ್ಮರಿಸಿಕೊಳ್ಳ ಬಹುದು. ಮಾತ್ರವಲ್ಲ, ‘ಲಯ’ ಎಂಬುದು ವಿಶ್ರಾಂತಿಗೂ ಸಂಕೇತ; ದಣಿದಿರುವ ಜೀವಕ್ಕೆ ವಿಶ್ರಾಂತಿಯೂ ಬೇಕಲ್ಲವೆ? ಹೀಗಾಗಿ ಶಿವನು ನಡೆಸುವ ಸಂಹಾರ ಎಂದರೆ ಸೃಷ್ಟಿಚಕ್ರದ ನಿರಂತರತೆಯನ್ನು ಕಾಪಾಡುವುದು; ಬದುಕಿನಲ್ಲಿ ಎದುರಾಗುವ ರೋದನಕ್ಕೆ ಉಪಶಮನವನ್ನು ಒದಗಿಸುವುದು. ರುದ್ರ ನಮ್ಮನ್ನು ಅಳುವಂತೆ ಮಾಡುವವನಲ್ಲ; ಅಳುವಿನಿಂದ ನಮ್ಮನ್ನು ಪಾರುಮಾಡುವವನು ಅವನು.

ಶಿವ ಎಂದರೆ ಇಡಿಯ ಸೃಷ್ಟಿ – ಎಂಬ ಕಲ್ಪನೆಯನ್ನು ಕಾಳಿದಾಸ ತುಂಬ ಸೊಗಸಾಗಿ ಎತ್ತಿಹಿಡಿದಿದ್ದಾನೆ. ‘ಸೃಷ್ಟಿಕರ್ತನ ಪ್ರಥಮ ಸೃಷ್ಟಿಯಾದ ನೀರು, ಹವಿಸ್ಸನ್ನು ದೇವತೆಗಳಿಗೆ ಮುಟ್ಟಿಸುವ ಅಗ್ನಿ, ಯಜಮಾನ, ಕಾಲ ವಿಭಜನೆಗೆ ಕಾರಣರಾದ ಸೂರ್ಯಚಂದ್ರರು, ಎಲ್ಲ ಕಡೆಗೂ ವ್ಯಾಪಿಸಿರುವ ಆಕಾಶ, ಎಲ್ಲ ವಿಧದ ಬೀಜಶಕ್ತಿಗೂ ಆಧಾರವಾಗಿರುವ ಭೂಮಿ, ಎಲ್ಲ ಪ್ರಾಣಿಗಳಿಗೂ ಪ್ರಾಣವನ್ನು ಒದಗಿಸುವ ವಾಯು – ಈ ಎಂಟು ವಿವರಗಳು ಶಿವನ ಪ್ರತ್ಯಕ್ಷ ಶರೀರಗಳು’ ಎಂದು ಅವನು ಒಕ್ಕಣಿಸಿದ್ದಾನೆ. ವಿಶ್ವದ ಒಂದೊಂದು ಕಣದ ಚಲನೆಯೂ, ಅದು ದಿಟದಲ್ಲಿ ಶಿವನ ಕುಣಿತ ಎಂಬುದು ಇಲ್ಲಿಯ ಭಾವ. ತ್ರಿಮೂರ್ತಿಗಳು ಮೂವರು ದೇವತೆಗಳಲ್ಲ, ಒಂದೇ ತತ್ತ್ವದ ಮೂರು ಆಯಾಮಗಳ ಸಂಕೇತಗಳಷ್ಟೆ.

ಶಿವನ ಕಲ್ಪನೆಯ ವ್ಯಾಪ್ತಿ ತುಂಬ ವಿಶಾಲವಾದುದು. ಯೋಗಿಯಾಗಿಯೂ ಭೋಗಿಯಾಗಿಯೂ ನಮಗೆ ಅವನು ಕಾಣಿಸುತ್ತಾನೆ; ತ್ಯಾಗ–ಭೋಗಗಳ ಸಮನ್ವಯವನ್ನು ಎತ್ತಿಹಿಡಿದಿದ್ದಾನೆ. ತಪಸ್ವಿಗಳಿಗೂ ಅವನೇ ಆದರ್ಶ; ಗೃಹಸ್ಥರಿಗೂ ಅವನೇ ಆದರ್ಶ. ಸ್ಮಶಾನದಲ್ಲಿಯೇ ವಾಸಿಸುವಷ್ಟು ವೈರಾಗ್ಯಸಂಪನ್ನ; ಹೆಂಡತಿಗೆ ಅರ್ಧ ದೇಹವನ್ನೇ ನೀಡುವಷ್ಟು ಪ್ರೇಮಪೂರ್ಣನೂ ಹೌದು. ಅವನು ತಾಂಡವಕ್ಕೂ ಸಿದ್ಧ; ಲಾಸ್ಯಕ್ಕೂ ಬದ್ಧ. ಅನಂತಗುಣಗಳ ಪ್ರತಿನಿಧಿಯಾದ ಶಿವನ ಆರಾಧನೆಯೂ ಸುಲಭ; ಬಿಲ್ವಪತ್ರೆಗೂ ತುಂಬೆಹೂವಿಗೂ ಒಲಿ ಯುವಷ್ಟು ಉದಾರಿ ಅವನು; ಅವನಿಗೆ ಆಭರಣಗಳ ಹೊಳಪಿನ ಅಲಂಕಾರಕ್ಕಿಂತಲೂ ಜಲಾಭಿಷೇಕದ ಆರ್ದ್ರತೆಯೇ ಪ್ರಿಯ. ಇಂಥ ಸರ್ವಶಕ್ತನೂ ಲೋಕನಾಥನೂ ಸತ್ಯ–ಶಿವ–ಸುಂದರಗಳ ಸಾಕಾರಮೂರ್ತಿಯೂ ಎನಿಸಿರುವ ಶಿವನ ಪೂಜೆಗೆ ಮೀಸಲಾದ ದಿನವೇ ‘ಮಹಾಶಿವರಾತ್ರಿ.’

ಶಿವರಾತ್ರಿ; ಹೆಸರೇ ಸೂಚಿಸುವಂತೆ ಶಿವನ ಆರಾಧನೆಗೆ ಮೀಸಲಾದ ಸಮಯ ‘ರಾತ್ರಿ’. ಇಡಿಯ ರಾತ್ರಿ ನಾವು ಜಾಗರಣೆಯಲ್ಲಿದ್ದು ಶಿವನನ್ನು ಪೂಜಿಸಬೇಕು. ರಾತ್ರಿ ಎಂದರೆ ನಿದ್ರೆ; ತಮಸ್ಸು; ಕತ್ತಲು. ಇವೆಲ್ಲವೂ ನಮ್ಮ ಎಚ್ಚರವನ್ನು ತಪ್ಪಿಸುವಂಥವು; ಪ್ರಮಾದಕ್ಕೆ ಕಾರಣವಾಗಬಲ್ಲಂಥವು. ಇಂಥ ಸಮಯ ದಲ್ಲಿ ಬೆಳಕಾಗಿ ಒದಗುವವನು ಶಿವ. ಇದರ ಸಂಕೇತವೇ ರಾತ್ರಿಯಲ್ಲಿ ನಡೆಯುವ ಅವನ ಪೂಜೆ. ಶಿವತತ್ತ್ವದ ಆಯಾಮಗಳು ಇನ್ನೂ ಹತ್ತು ಹಲವು. ಅವುಗಳನ್ನು ಸಾಕ್ಷಾತ್ಕರಿಸಿಕೊಳ್ಳುವ ಪರ್ವವೇ ದಿಟವಾದ ‘ಶಿವರಾತ್ರಿ.’ ❖

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು


ರಷ್ಯಾ–ಉಕ್ರೇನ್ ಸಂಘರ್ಷ: ಅರ್ಥಶಾಸ್ತ್ರಜ್ಞರ ಅನಿಸಿಕೆ

ಕಚ್ಚಾ ತೈಲ ದರ ಏರಿಕೆ, ಆರ್ಥಿಕ ಏಳಿಗೆಗೆ ಅಡ್ಡಿ

ನವದೆಹಲಿ (ರಾಯಿಟರ್ಸ್): ಕೋವಿಡ್‌ನಿಂದಾಗಿ ಮಂದಗತಿಯ ಬೆಳವಣಿಗೆ ಕಾಣುತ್ತಿರುವ ದೇಶದ ಆರ್ಥಿಕತೆಯ ಮೇಲೆ ಕಚ್ಚಾತೈಲ ದರ ಏರಿಕೆಯು ದುಷ್ಪರಿಣಾಮ ಉಂಟುಮಾಡಲಿದೆ ಎಂದು ಅರ್ಥ-ಶಾಸ್ತ್ರಜ್ಞರು ಹೇಳಿದ್ದಾರೆ.

ರಷ್ಯಾ – ಉಕ್ರೇನ್ ಸಂಘರ್ಷದಿಂದ ಕಚ್ಚಾ ತೈಲ ದರ ಏರಿಕೆ ಆಗಿದೆ. ಇದು ಆರ್ಥಿಕ ಬೆಳವಣಿಗೆಗೆ ತೊಡಕು ಉಂಟುಮಾಡಲಿದೆ. ಕುಟುಂಬಗಳು ಅಗತ್ಯ ವಸ್ತುಗಳು ಮತ್ತು ಸೇವೆಗಳ ಮೇಲೆ ಮಾಡುವ ಖರ್ಚು, ಖಾಸಗಿ ಹೂಡಿಕೆ ಮೇಲೆ ಹೆಚ್ಚು ಪರಿಣಾಮ ಉಂಟಾಗಲಿದೆ ಎಂದು ತಿಳಿಸಿದ್ದಾರೆ.

ಕಚ್ಚಾತೈಲ ದರದಲ್ಲಿ ಶೇಕಡ 10ರಷ್ಟು ಏರಿಕೆ ಆದಲ್ಲಿ ಭಾರತದ ಜಿಡಿಪಿ ಬೆಳವಣಿಗೆ ದರದಲ್ಲಿ ಶೇ 0.2ರಷ್ಟು ಇಳಿಕೆ ಆಗಲಿದೆ. ಕಂಪನಿಗಳಿಗೆ ತಯಾರಿಕಾ ವೆಚ್ಚವನ್ನು ಗ್ರಾಹಕರ ಮೇಲೆ ವರ್ಗಾಯಿಸಲು ಆಗದೇ ಇರುವುದರಿಂದ ಅವುಗಳ ಲಾಭದಲ್ಲಿ ಇಳಿಕೆ ಕಂಡುಬರಲಿದೆ ಎಂದು ನೊಮುರಾ ಹೋಲ್ಡಿಂಗ್ಸ್‌ನ ಅರ್ಥಶಾಸ್ತ್ರಜ್ಞೆ ಸೋನಲ್ ವರ್ಮಾ ಅಭಿಪ್ರಾಯಪಟ್ಟಿದ್ದಾರೆ.



ಬ್ರೆಂಟ್ ಕಚ್ಚಾತೈಲ ದರವು ಕಳೆದವಾರ ಬ್ಯಾರಲ್‌ಗೆ 105 ಡಾಲರ್ ದಾಟಿದ್ದರಿಂದ ಹಣದುಬ್ಬರ ಏರಿಕೆ ಆಗುವ ಸಾಧ್ಯತೆಯ ಜೊತೆಗೆ ರೂಪಾಯಿ ದುರ್ಬಲಗೊಳ್ಳಲಿ-ದೆ. ವ್ಯಾಪಾರ ಕೊರತೆ ಅಂತರ ಹೆಚ್ಚಾಗಲಿದೆ ಎಂದು ಬ್ಯಾಂಕ್ ಆಫ್ ಬರೋಡಾದ ಆರ್ಥಿಕತಜ್ಞೆ ಅದಿತಿ ಗುಪ್ತಾ ಹೇಳಿದ್ದಾರೆ.

ಸರಕು ಮತ್ತು ಸೇವೆಗಳ ಖರೀದಿಗೆ ಜನರು ಮಾಡುತ್ತಿರುವ ಖರ್ಚು ಈಗಲೂ ಸಹ ಕೋವಿಡ್ ಪೂರ್ವದ ಮಟ್ಟಕ್ಕಿಂತ ಕಡಿಮೆ ಇದೆ. ಸಾರ್ವಜನಿಕರಿಂದ ಬರುವ ಬೇಡಿಕೆಯು ದೇಶದ ಜಿಡಿಪಿಗೆ ಶೇ 55ರಷ್ಟು ಕೊಡುಗೆ ನೀಡುತ್ತಿದೆ.

ಪೂರೈಕೆ ಕೊರತೆಯು ಅಲ್ಪಾ-ವಧಿಯಲ್ಲಿ ತೊಡಕಾಗಿಯೇ ಉಳಿಯಲಿದೆ. ಇದು ನಿವಾರಣೆ ಆಗುತ್ತಿದ್ದಂತೆಯೇ ಆರ್ಥಿಕ ಚಟುವ-ಟಿಕೆಗಳಲ್ಲಿ ಚೇತರಿಕೆ ಕಂಡುಬರಲಿದೆ ಎಂದು ಸಿಂಗಪುರದಲ್ಲಿ ಇರುವ ಕ್ಯಾಪಿಟಲ್ ಎಕನಾಮಿಕ್ಸ್‌ನ ಅರ್ಥ-ಶಾಸ್ತ್ರಜ್ಞ ಶಿಲಾನ್ ಶಾ ಹೇಳಿದ್ದಾರೆ.

ಮುಖ್ಯಾಂಶಗಳು

- ದೇಶಿ ಬೇಡಿಕೆಯ ಶೇ 80ರಷ್ಟು ಕಚ್ಚಾ ತೈಲ ಆಮದು
- ಕುಟುಂಬಗಳ ಖರ್ಚು, ಖಾಸಗಿ ಹೂಡಿಕೆಗೆ ಅಡ್ಡಿ

ಕಾನ್ಪುರದ ಭಾರತೀಯ ತಂತ್ರಜ್ಞಾನ ಸಂಸ್ಥೆ ವರದಿ

ಜೂನ್ 22ರ ವೇಳೆಗೆ 4ನೇ ಅಲೆ?

ನವದೆಹಲಿ (ಪಿಟಿಐ): ಭಾರತದಲ್ಲಿ ಜೂನ್ 22ರ ಹೊತ್ತಿಗೆ ಕೋವಿಡ್‌ನ ನಾಲ್ಕನೇ ಅಲೆ ಆರಂಭವಾಗುವ ಸಾಧ್ಯತೆ ಇದೆ. ಇದು ಆಗಸ್ಟ್‌ನ ಮಧ್ಯ ಭಾಗದ ನಂತರ ಉತ್ತುಂಗದ ಮಟ್ಟ ತಲುಪಬಹುದು ಎಂದು ಕಾನ್ಪುರದ ಭಾರತೀಯ ತಂತ್ರಜ್ಞಾನ ಸಂಸ್ಥೆಯ (ಐಐಟಿ) ಅಧ್ಯಯನವೊಂದು ಹೇಳಿದೆ.

ಇನ್ನೂ ಪರಿಶೀಲನಾ ಹಂತದಲ್ಲಿರುವ ಅಧ್ಯಯನದ ವರದಿಯನ್ನು ಆನ್‌ಲೈನ್ ಜಾಲತಾಣ ಮೆಡ್‌ಆರ್‌ಕ್ಸಿವ್‌ನಲ್ಲಿ ಪ್ರಕಟಿಸಲಾ-ಗಿದೆ. ಸಂಖ್ಯಾಶಾಸ್ತ್ರದ ಮಾದರಿ ಮೂಲಕ ಅಧ್ಯಯನ ನಡೆಸಲಾಗಿದೆ. ಹೊಸ ಕೋವಿಡ್ ಅಲೆಯು ನಾಲ್ಕು ತಿಂಗಳ ಕಾಲ ಇರುವ ಸಾಧ್ಯತೆ ಇದೆ ಎಂದು ಅಧ್ಯಯನ ಹೇಳಿದೆ.

ಐಐಟಿ ಕಾನ್ಪುರದ ಗಣಿತ ಮತ್ತು ಸಂಖ್ಯಾಶಾಸ್ತ್ರ ವಿಭಾಗದ ಸಬರ ಪರ್ಷದ್ ರಾಜೇಶಭಾಯ್, ಸುಭ್ರಾ ಶಂಕರ್ ಧರ್ ಮತ್ತು ಶಲಭ್ ಅಧ್ಯಯನದ ಭಾಗವಾಗಿದ್ದರು. ಸಂಭವನೀಯ ಹೊಸ ಕೋವಿಡ್‌ನ ರೂಪಾಂತರ ತಳಿಯ ಗುಣಲಕ್ಷಣ-ಗಳು ಮತ್ತು ದೇಶದಾದ್ಯಂತ ಇರುವ ಲಸಿಕೆಯ ಪ್ರಮಾಣದ ಮೇಲೆ ನಾಲ್ಕನೇ ಅಲೆಯ ತೀವ್ರತೆಯು ಅವಲಂಬಿತವಾಗಿರುತ್ತದೆ ಎಂದು ಅಧ್ಯಯನ ಹೇಳಿದೆ.

‘ಕೋವಿಡ್ ಪ್ರಾರಂಭವಾದ 2020ರ ಜನವರಿ 30 ರಿಂದ 936 ದಿನಗಳ ನಂತರ ಭಾರತದಲ್ಲಿ ನಾಲ್ಕನೇ ಅಲೆ ಕಾಣಿಸಿಕೊಳ್ಳಲಿದೆ. ಅಂದರೆ 2022ರ ಜೂನ್ 22 ರಂದು ಹೊಸ ಕೋವಿಡ್ ಅಲೆ ಆರಂಭವಾಗಿ ಆಗಸ್ಟ್ 23ರ ಹೊತ್ತಿಗೆ ಉತ್ತುಂಗಕ್ಕೆ ತಲುಪಲಿದೆ. ಇದು ಅಕ್ಟೋಬರ್ 24 ರವರೆಗೆ ಮುಂದುವರೆಯಲಿದೆ’ ಎಂದು ಅಧ್ಯಯನದ ಲೇಖಕರು ಸಂಶೋಧನಾ ವರದಿಯಲ್ಲಿ ಹೇಳಿದ್ದಾರೆ.

ಅಂತರರಾಷ್ಟ್ರೀಯ ವಿಮಾನ ಸಂಚಾರ ನಿರ್ಬಂಧ ವಿಸ್ತರಣೆ: ಡಿಜಿಸಿಎ

ನವದೆಹಲಿ (ಪಿಟಿಐ): ಕೋವಿಡ್ ಹಿನ್ನೆಲೆಯಲ್ಲಿ ಅಂತರರಾಷ್ಟ್ರೀಯ ಪ್ರಯಾಣಿಕ ವಿಮಾನಗಳ ಸಂಚಾರದ ಮೇಲೆ ವಿಧಿಸಲಾಗಿರುವ ನಿರ್ಬಂಧವನ್ನು ಮುಂದಿನ ಆದೇಶದವರೆಗೆ ವಿಸ್ತರಿಸಲಾಗಿದೆ ಎಂದು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಸೋಮವಾರ ತಿಳಿಸಿದೆ.

ಆದಾಗ್ಯೂ, ಏರ್ ಬಬಲ್ ವ್ಯವಸ್ಥೆಗಳ ಅಡಿಯಲ್ಲಿ ವಿಶೇಷ ಪ್ರಯಾಣಿಕ ವಿಮಾನಗಳು 2020ರ ಜುಲೈ ತಿಂಗಳಿನಿಂದ ಸುಮಾರು 45 ದೇಶಗಳಿಗೆ ಭಾರತದಿಂದ ಸಂಚಾರ ನಡೆಸುತ್ತಿವೆ. ಏರ್ ಬಬಲ್ ವ್ಯವಸ್ಥೆ ಅಡಿಯಲ್ಲಿ ಕಾರ್ಯನಿರ್ವಹಿಸುವ ವಿಮಾನಗಳಿಗೆ ಮತ್ತು ಡಿಜಿಸಿಎ ಅನುಮತಿ ಪಡೆದ ಸರಕು ಸಾಗಣೆಯ ಅಂತರರಾಷ್ಟ್ರೀಯ ವಿಮಾನಗಳ ಸಂಚಾರಕ್ಕೆ ಈ ನಿರ್ಬಂಧ ಅನ್ವಯಿಸುವುದಿಲ್ಲ ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ.

2020ರ ಮಾರ್ಚ್ 23ರ ರಿಂದ ಅಂತರರಾಷ್ಟ್ರೀಯ ವಿಮಾನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿತ್ತು. 2021ರ ಡಿಸೆಂಬರ್ 15 ರಿಂದ ಸಂಚಾರ ಆರಂಭಿಸಲಾಗುವುದು ಎಂದು ನವೆಂಬರ್ 26 ರಂದು ಸುತ್ತೋಲೆ ಹೊರಡಿಸಲಾಗಿತ್ತು. ಆದರೆ, ಡಿಸೆಂಬರ್ 1 ರಂದು ಈ ಸುತ್ತೋಲೆಯನ್ನು ಡಿಜಿಸಿಎ ಹಿಂದಕ್ಕೆ ಪಡೆದಿತ್ತು. ಫೆಬ್ರುವರಿ 28ರ ವರೆಗೆ ನಿರ್ಬಂಧವನ್ನು ವಿಸ್ತರಿಸಿ ಜನವರಿ 19 ರಂದು ಮತ್ತೆ ಸುತ್ತೋಲೆ ಹೊರಡಿಸಲಾಗಿತ್ತು. ಈಗ ಮತ್ತೆ ನಿಗದಿತ ಅಂತರರಾಷ್ಟ್ರೀಯ ಪ್ರಯಾಣಿಕ ವಿಮಾನಗಳ ಸಂಚಾರದ ನಿರ್ಬಂಧವನ್ನು ವಿಸ್ತರಿಸಲಾಗಿದೆ.

‘ವುಹಾನ್ ಮಾರುಕಟ್ಟೆಯೇ ಸೋಂಕು ಮೂಲ’

ವಾಷಿಂಗ್ಟನ್ (ಪಿಟಿಐ): ಕೋವಿಡ್–19 ಸೋಂಕು ಮೂಲ ಚೀನಾದ ವುಹಾನ್‌ನ ಹ್ಯೂನನ್ ಸೀಫುಡ್ ಮಾರುಕಟ್ಟೆಯೇ. ಅಲ್ಲಿ ಮೊದಲು ಪ್ರಾಣಿಗಳಲ್ಲಿ ಕಂಡು ಬಂದಿದ್ದ ಸೋಂಕು ಬಳಿಕ ಜನರಿಗೆ ಹಬ್ಬಿದೆ ಎಂದು ಎರಡು ಹೊಸ ಅಧ್ಯಯನಗಳು ಪ್ರತಿಪಾದಿಸಿವೆ.

ಮೊದಲ ಅಧ್ಯಯನವು ಡಿಸೆಂಬರ್ 2019ರಲ್ಲಿ ಪತ್ತೆಯಾಗಿದ್ದ ಪ್ರಕರಣಗಳ ಪ್ರಾದೇಶಿಕ ಅಂಕಿ ಅಂಶಗಳನ್ನು ಆಧರಿಸಿದ್ದು, ಸೋಂಕು ವುಹಾನ್ ಮಾರುಕಟ್ಟೆ ಕೇಂದ್ರೀತ-ವಾಗಿತ್ತು ಎಂದು ತಿಳಿಸಿದೆ.

ಎರಡನೇ ಅಧ್ಯಯನವು, ಎರಡು ಮುಖ್ಯ ಕಾರ್ಯಕ್ರಮಗ-ಳಲ್ಲಿ ಸೋಂಕಿನ ಎರಡು ಪ್ರಮುಖ ವಂಶಾವಳಿಗಳು ಮನುಷ್ಯನಿಗೆ ಹಬ್ಬಿವೆ ಎಂಬುದನ್ನು ಪ್ರತಿಪಾದಿಸಿದೆ.

‘ವುಹಾನ್ ಮಾರುಕಟ್ಟೆಯೇ ಸೋಂಕಿನ ಕೇಂದ್ರ’ ಎಂದು ಅರಿಜೋನಾ ವಿಶ್ವವಿದ್ಯಾಲಯದ ಪ್ರೊ. ಮೈಕೆಲ್ ವೊರೊಬೆ ಟ್ವೀಟ್ ಮಾಡಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	525
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಚಿತ್ರದುರ್ಗ	
ಆಪಿ	45219-45629
ಬೆಟ್ಟೆ	36459-36899
ಕೆಂಪುಗೋಟು	30900-31300
ರಾಶಿ	44739-45169
ಕಾರ್ಕಳ	
ಹೊಸತು	40000-44500
ಹಳತು	46000-53000
ಪುತ್ತೂರು	
ಕೋಕ	11000-26000
ಹೊಸತು	27500-45000
ಕುಮಟ	
ಚಿಪ್ಪು	25019-29019
ಕೋಕ	18019-26009
ಹಳೆಚಾಲಿ	46509-48309
ಹೊಸಚಾಲಿ	36509-40549
ಸಿದ್ದಾಪುರ	
ಬಿಳಿಗೋಟು	20669-29099
ಚಾಲಿ	46899-46899
ಕೋಕ	19699-26890
ಹೊಸಚಾಲಿ	35599-41099
ಕೆಂಪುಗೋಟು	22089-32309
ರಾಶಿ	42349-46869
ತಟ್ಟಿಬೆಟ್ಟೆ	36889-45699
ಶಿರಸಿ	
ಬೆಟ್ಟೆ	30509-44698
ಬಿಳಿಗೋಟು	22069-33889
ಚಾಲಿ	32639-41303
ರಾಶಿ	39610-47489
ಯಲ್ಲಾಪುರ	
ಬಿಳಿಗೋಟು	26929-32569
ಕೋಕ	18899-30019
ಹಳೆಚಾಲಿ	44501-46719
ಹೊಸಚಾಲಿ	35260-40899
ಕೆಂಪುಗೋಟು	28699-36599
ರಾಶಿ	45819-52950
ತಟ್ಟಿಬೆಟ್ಟೆ	38509-45179
ಶಿವಮೊಗ್ಗ	
ಬೆಟ್ಟೆ	46366-51799
ಗೊರಬಲು	17019-34019
ರಾಶಿ	42669-46099
ಸರಕು	54069-75150
ಸಾಗರ	
ಬಿಳಿಗೋಟು	19099-35200
ಚಾಲಿ	25179-37829
ಕೋಕ	24109-32799
ಕೆಂಪುಗೋಟು	16899-38329
ರಾಶಿ	33899-46419
ಸಿಪ್ಪೆಗೋಟು	5290-18619
ರೇಷ್ಮೆಗೂಡು	
ಮಿಶ್ರ ತಳಿ	303-755
ದ್ವಿತಳಿ	310-926

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15800	15900	238.65 ಸೆಂಟ್ಸ್
ಎಸಿ	7560	7500	8200	
ಆರ್‌ಪಿ	8250	8000	8400	ಲಂಡನ್
ಆರ್‌ಸಿ	4065	3900	4025	2178 ಡಾಲರ್ಸ್

ಸ್ಲಾವಿಯಾ ಬೆಲೆ ₹ 10.69 ಲಕ್ಷ

ನವದೆಹಲಿ (ಪಿಟಿಐ): ಮಧ್ಯಮ ಗಾತ್ರದ ಹೊಸ ಪ್ರೀಮಿಯಂ ಸೆಡಾನ್ ‘ಸ್ಲಾವಿಯಾ’ವನ್ನು ಸ್ಕೋಡಾ ಕಂಪನಿ ಬಿಡುಗಡೆ ಮಾಡಿದ್ದು, ಇದರ ಆರಂಭಿಕ ಎಕ್ಸ್‌ಷೋರೂಂ ಬೆಲೆ ₹ 10.69 ಲಕ್ಷ ಎಂದು ಸೋಮವಾರ ತಿಳಿಸಿದೆ.

ಈ ಮಾದರಿಯು 1 ಲೀಟರ್ ಪೆಟ್ರೋಲ್ ಎಂಜಿನ್ ಹೊಂದಿದ್ದು, ಆ್ಯಕ್ಟಿವ್, ಆ್ಯಂಬಿಷನ್ ಮತ್ತು ಸ್ಟೈಲ್ ಎಂಬ ಮೂರು ವಿಧಗಳಲ್ಲಿ ಲಭ್ಯವಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸ್ಲಾವಿಯಾ ಆ್ಯಕ್ಟಿವ್ ಟ್ರಿಮ್ ಮ್ಯಾನುಯಲ್ ಟ್ರಾನ್ಸ್‌ಮಿಷನ್ ಬೆಲೆ ₹ 10.69 ಲಕ್ಷ, ಮ್ಯಾನುಯಲ್ ಟ್ರಾನ್ಸ್‌ಮಿಷನ್‌ನ ಆ್ಯಂಬಿಷನ್ ಬೆಲೆ ₹ 12.39 ಲಕ್ಷ ಹಾಗೂ ಆಟೊಮೆಟಿಕ್ ಆಯ್ಕೆಯ ಬೆಲೆ ₹ 13.59 ಲಕ್ಷ ಇದೆ ಎಂದು ಕಂಪನಿಯು ಹೇಳಿದೆ.

ಸ್ಟೈಲ್ ಆವೃತ್ತಿಯ ಬೆಲೆ (ಸನ್‌ರೂಫ್ ಇಲ್ಲದ) ಮ್ಯಾನುಯಲ್ ಟ್ರಾನ್ಸ್‌ಮಿಷನ್‌ಗೆ ₹ 13.59 ಲಕ್ಷ ಇದೆ. ಸನ್‌ರೂಫ್ ಇರುವುದಕ್ಕೆ ₹ 13.99 ಲಕ್ಷ ಬೆಲೆ ನಿಗದಿಪಡಿಸಲಾಗಿದೆ. 521 ಲೀಟರ್ ಬೂಟ್‌ಸ್ಪೇಸ್, 179 ಎಂಎಂ ಗ್ರೌಂಡ್ ಕ್ಲಿಯರೆನ್ಸ್ ಹೊಂದಿದೆ ಎಂದು ಕಂಪನಿ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಮುಂಬೈ ನೂತನ ಪೊಲೀಸ್ ಆಯುಕ್ತ ಸಂಜಯ್ ಪಾಂಡೆ

ಮುಂಬೈ(ಪಿಟಿಐ): ಮಾಜಿ ಹಂಗಾಮಿ ಪೊಲೀಸ್ ಮಹಾನಿರ್ದೇಶಕ ಸಂಜಯ್ ಪಾಂಡೆ ಅವರನ್ನು ಮುಂಬೈ ಪೊಲೀಸ್ ಆಯುಕ್ತರನ್ನಾಗಿ ಮಹಾರಾಷ್ಟ್ರ ಸರ್ಕಾರ ನೇಮಿಸಿದೆ.

ಕಳೆದ ವರ್ಷ ಮುಂಬೈ ಆಯುಕ್ತ-ರಾಗಿದ್ದ ಪರಮ್ ಬಿರ್ ಸಿಂಗ್ ಅವರನ್ನು ಹಲವು ವಿವಾದಗಳ ಕಾರಣಕ್ಕೆ ಹುದ್ದೆಯಿಂದ ಹೊರಗಿಡಲಾಗಿತ್ತು.

ಆ ಹುದ್ದೆಗೆ ಹೇಮಂತ್ ನಗರ್ಲೆ ಅವರನ್ನು ನೇಮಿಸಲಾಗಿತ್ತು. ಈಗ ನಗರ್ಲೆ ಅವರನ್ನು ರಾಜ್ಯ ಭದ್ರತಾ ಕಾರ್ಪೊರೇಶನ್‌ನ ವ್ಯವಸ್ಥಾಪಕ ನಿರ್ದೇಶಕರಾಗಿ ವರ್ಗಾವಣೆ ಮಾಡಲಾಗಿದೆ.

ಪಾಕಿಸ್ತಾನದ ನುಸುಳುಕೋರನ ಸೆರೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯ ಮೆಂದಾರ್ ಉಪವಿಭಾಗದ ಗಡಿ ನಿಯಂತ್ರಣ ರೇಖೆಯ (ಎಲ್‌ಒಸಿ) ಬಳಿ ಸೋಮವಾರ ದೇಶದ ಗಡಿಯೊಳಗೆ ನುಸುಳಿದ ಪಾಕ್ ವ್ಯಕ್ತಿಯೊಬ್ಬನನ್ನು ಭಾರತೀಯ ಸೇನೆ ಸೋಮವಾರ ಬಂಧಿಸಿದೆ.

ಅಮೂಲ್ ತಾಜಾ ಹಾಲಿನ ದರ ಲೀಟರ್‌ಗೆ ₹2 ಹೆಚ್ಚಳ

ಅಹಮದಾಬಾದ್: ಅಮೂಲ್‌ನ ತಾಜಾ ಹಾಲಿನ ದರವನ್ನು ಮಾರ್ಚ್ 1ರಿಂದ ದೇಶದಾದ್ಯಂತ ಲೀಟರ್‌ಗೆ ₹2ರಂತೆ ಹೆಚ್ಚಿಸಲಾಗು-ವುದು ಎಂದು ಗುಜರಾತ್ ಸಹಕಾರಿ ಹಾಲು ಮಾರಾಟ ಒಕ್ಕೂಟ (ಜಿಸಿಎಂಎಂಎಫ್) ಸೋಮವಾರ ಹೇಳಿದೆ.

ಗುಜರಾತ್‌ನ ಅಹಮದಾಬಾದ್ ಮತ್ತು ಸೌರಾಷ್ಟ್ರ ಮಾರು-ಕಟ್ಟೆಯಲ್ಲಿ ಅಮೂಲ್ ಗೋಲ್ಡ್ ಹಾಲಿನ ದರ ಅರ್ಧ ಲೀಟರ್‌ಗೆ ₹30, ಅಮೂಲ್ ತಾಜಾ ಹಾಲಿನ ದರ ಅರ್ಧ ಲೀಟರ್‌ಗೆ ₹24 ಮತ್ತು ಅಮೂಲ್ ಶಕ್ತಿ ಹಾಲಿನ ದರ ಅರ್ಧ ಲೀಟರ್‌ಗೆ ₹27 ಆಗಲಿದೆ ಎಂದು ಜಿಸಿಎಂಎಂಎಫ್ ಹೇಳಿಕೆಯಲ್ಲಿ ತಿಳಿಸಿದೆ. ಕಳೆದ ಎರಡು ವರ್ಷಗಳಲ್ಲಿ ಅಮೂಲ್ ತಾಜಾ ಹಾಲಿನ ಬೆಲೆಯನ್ನು ವಾರ್ಷಿಕವಾಗಿ ಕೇವಲ ಶೇ 4ರಷ್ಟು ಮಾತ್ರ ಹೆಚ್ಚಿಸಲಾಗಿದೆ ಎಂದಿದೆ.

ಬ್ಯಾಗ್ ಹೊತ್ತು 8 ಕಿಲೋಮೀಟರ್ ನಡೆದೇ ರೊಮೇನಿಯಾ ಗಡಿ ತಲುಪಿದ ಭಾರತೀಯ ವಿದ್ಯಾರ್ಥಿನಿಯರು

‘ಹೋಗುತ್ತೇವೆಂದರೂ ಕಾಲೇಜಿನವರು ಬಿಡಲಿಲ್ಲ’

• ಸಿದ್ದಯ್ಯ ಹಿರೇಮಠ


ಆಶಾ ವೆಂಕಟೇಶ್

ನವದೆಹಲಿ: ‘ಯುದ್ಧದ ಸಂಭವನೀಯತೆ ಕಾರಣ ಭಾರತ ಸರ್ಕಾರವು ಉಕ್ರೇನ್ ತೊರೆಯುವಂತೆ ಜನವರಿ ಮೊದಲ ವಾರದಲ್ಲೇ ನಮಗೆ ಸೂಚನೆ ನೀಡಿತ್ತು. ಆದರೆ, ನಾವು ಅಭ್ಯಸಿಸುವ ಕಾಲೇಜು ಆಡಳಿತ ಮಂಡಳಿಯವರು ಆನ್‌ಲೈನ್ ತರಗತಿ ಆರಂಭಿಸಲು ಹಿಂದೇಟು ಹಾಕಿದ್ದರಿಂದ ಅನಿವಾರ್ಯವಾಗಿ ಅಲ್ಲೇ ಇರಬೇಕಾಯಿತು’

ಉಕ್ರೇನ್‌ನ ಇವಾನೊಫ್ರಾಂಕ್ವಿ-ಸ್ಕ್ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ಪದವಿಯ 5ನೇ ಸೆಮಿಸ್ಟರ್ ವಿದ್ಯಾರ್ಥಿನಿ, ಬೆಂಗಳೂರಿನ ಬನ್ನೇರುಘಟ್ಟ ನಿವಾಸಿ ಆಶಾ ವೆಂಕಟೇಶ್, ಯುದ್ಧಪೀಡಿತ ದೇಶದ ಸ್ಥಿತಿಗತಿಯನ್ನು ‘ಪ್ರಜಾವಾಣಿ’ ಎದುರು ಬಿಚ್ಚಿಟ್ಟರು.

ಇವಾನೊಫ್ರಾಂಕ್ವಿಸ್ಕ್ ನಗರದಿಂದ ಶನಿವಾರ ಬೆಳಿಗ್ಗೆ ಬಸ್‌ನಲ್ಲಿ ಮೂರುವರೆ ಗಂಟೆ ಪ್ರಯಾಣ ಮಾಡಿ, ರೊಮೇನಿಯಾ ಗಡಿಯ ಅಂಚನ್ನು ತಲುಪಿದ್ದರು. ಅಲ್ಲಿಂದ ಎಂಟು ಕಿಲೋ ಮೀಟರ್ ನಡೆದುಕೊಂಡೇ ಗಡಿ ತಲುಪಿದ್ದ ಅವರು, ಭಾರತ ಸರ್ಕಾರ ಏರ್ಪಾಡು ಮಾಡಿದ್ದ ಬಸ್ ಮೂಲಕ ಸತತ 8 ಗಂಟೆ ಪ್ರಯಾಣಿಸಿ, ಬುಕಾರೆಸ್ಟ್ ವಿಮಾನ ನಿಲ್ದಾಣ ತಲುಪಿದ್ದರು. ಅಲ್ಲಿಂದ ಏರ್ ಇಂಡಿಯಾ ವಿಮಾನದ ಮೂಲಕ ಸೋಮವಾರ ಮಧ್ಯಾಹ್ನ ದೆಹಲಿಗೆ ಬಂದಿಳಿದಿದ್ದಾರೆ.

‘ಅಮೆರಿಕ, ಕೆನಡಾ ಮತ್ತು ಬ್ರಿಟನ್ ಮತ್ತಿತರ ದೇಶಗಳ ವಿದ್ಯಾರ್ಥಿಗಳನ್ನು ಜನವರಿಯಲ್ಲೇ ಹೋಗಲು ಬಿಟ್ಟ ನಮ್ಮ ಕಾಲೇಜಿನವರು ನಮಗೆ ಹಾಜರಾತಿ ನೀಡಲು ಹಿಂದೇಟು ಹಾಕಿದರು. ಯುದ್ಧವೇನೂ ನಡೆಯುವುದಿಲ್ಲ. ನೀವು ಮರಳಿ ಹೋದರೆ, ಅಟೆಂಡೆನ್ಸ್ ಕೊರತೆ ಆದಲ್ಲಿ ಪರೀಕ್ಷೆಗೆ ಅನುಮತಿ ನೀಡುವುದಿಲ್ಲ ಎಂದು ಮೌಖಿಕ ಬೆದರಿಕೆಯನ್ನೂ ಹಾಕಿದರು. ಪರಿಸ್ಥಿತಿಯ ಗಂಭೀರತೆ ಅರಿತು ಆನ್‌ಲೈನ್ ತರಗತಿ ಆರಂಭಿಸಿ, ನಮಗೆ ವಾಪಸಾಗಲು ಅನುಮತಿ ನೀಡಿದ್ದರೆ ನಾವು ಮತ್ತು ಈಗ ಅಲ್ಲಿಯೇ ಸಿಲುಕಿರುವ ಸಾವಿರಾರು ವಿದ್ಯಾರ್ಥಿಗಳು ತೊಂದರೆ ಅನುಭವಿಸಬೇಕಿರಲಿಲ್ಲ’ ಎಂದು ಅವರು ತಿಳಿಸಿದರು.

‘ಸ್ವತಃ ರಾಯಭಾರಿ ಕಚೇರಿಯವರೇ ನಮ್ಮನ್ನು ಗಡಿವರೆಗೆ ಕರೆತಂದರೂ, ರೊಮೇನಿಯಾ ದೇಶದವರು ಒಳಗೆ ಬಿಟ್ಟುಕೊಳ್ಳಲು ಸತಾಯಿಸಿದರು. ಉಕ್ರೇನ್‌ನ ಸಾವಿರಾರು ಜನ ಆ ದೇಶದ ಗಡಿಯೊಳಗೆ ನುಗ್ಗುತ್ತಿರುವುದರಿಂದ ನಮಗೂ ಪ್ರವೇಶ ನೀಡದೆ ತಡೆದರು. ಕೆಲವೊಮ್ಮೆ ನೂಕುನುಗ್ಗಲು ಹೆಚ್ಚಿ ಕಾಲ್ತುಳಿತವೂ ಸಂಭವಿಸಿದೆ. ಪೋಲೆಂಡ್ ಮತ್ತು ಸ್ಲೋವಾಕಿಯಾದ ಗಡಿಗಳಲ್ಲಿ ಭಾರತೀಯರಿಗೆ ಪ್ರವೇಶ ನೀಡುತ್ತಿಲ್ಲ’ ಎಂದು ವಿವರಿಸಿದರು.

‘ಕೆಲವು ದೇಶಗಳು ಅವರ ನಾಗರಿಕರಿಗೆ ಉಕ್ರೇನ್ ತೊರೆಯದಿದ್ದರೆ ನಾವು ಜವಾಬ್ದಾರಿ ಅಲ್ಲ ಎಂಬ ಸೂಚನೆ ನೀಡಿದ್ದವು. ಆದರೆ, ಭಾರತೀಯ ರಾಯಭಾರಿ ಕಚೇರಿಯವರು ನೀಡಿದ ಸೂಚನೆಯಲ್ಲಿ ಆ ವಾಕ್ಯ ಇರಲಿಲ್ಲ. ಹಾಗಾಗಿ ನಮಗೂ ವಿಷಯದ ಗಂಭೀರತೆ ಅರ್ಥವಾಗ-ಲಿಲ್ಲ’ ಎಂದು ಮತ್ತೊಬ್ಬ ವಿದ್ಯಾರ್ಥಿನಿ ಹೇಳಿದರು.

ರಾಣೆಬೆನ್ನೂರಿನ ಮೈನಾ ನಾಯ್ಕ, ಹಿರಿಯೂರಿನ ಶಕ್ತಿಶ್ರೀ ಶೇಖರ್, ಬೆಂಗಳೂರಿನ ನಿಹಾರಿಕಾ, ಶ್ರಾವಣಾ ಬಿರಾದಾರ್ ಅವರೂ ಅಪಾಯದಿಂದ ಪಾರಾಗಿ, ಉಕ್ರೇನ್‌ನ ಟರ್ನೋಪಿಲ್, ಚರ್ನಿವ್ಸಿ ನಗರದಿಂದ ರೊಮೇನಿಯಾ ಮೂಲಕ ಸುರಕ್ಷಿತವಾಗಿ ದೆಹಲಿಗೆ ವಾಪಸಾಗಿ, ಸಂಜೆ ಬೆಂಗಳೂರಿನತ್ತ ಪ್ರಯಾಣ ಬೆಳೆಸಿದರು.


ಯುದ್ಧಪೀಡಿತ ಉಕ್ರೇನ್‌ನಲ್ಲಿ ಸೋಮವಾರ ಸ್ಥಳೀಯ ಪೊಲೀಸರು ರೈಲು ಹತ್ತಲು ಅನುಮತಿ ನಿರಾಕರಿಸಿದ ನಂತರ ರೈಲ್ವೆ ನಿಲ್ದಾಣದಲ್ಲಿ ಸಿಲುಕಿರುವ ಭಾರತೀಯ ವಿದ್ಯಾರ್ಥಿಗಳು – ಪಿಟಿಐ ಚಿತ್ರ

ರೊಮೇನಿಯಾ ಗಡಿಯಲ್ಲಿ 2 ಸಾವಿರ ಭಾರತೀಯರು

ಮೈಸೂರು: ಉಕ್ರೇನಿನ ರೊಮೇನಿಯಾ ಗಡಿಯಲ್ಲಿ ಸುಮಾರು 2 ಸಾವಿರ ಭಾರತೀಯರು ಗಡಿ ದಾಟುವುದಕ್ಕಾಗಿ ಕಾಯುತ್ತಿದ್ದಾರೆ.

ಉಕ್ರೇನಿನ ಚರ್ನಿವಿಟ್ಸ ನಗರದಲ್ಲಿರುವ, ಕೆ.ಆರ್. ನಗರದ ಚಂದನ್ ಈ ಕುರಿತು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ್ದಾರೆ.

‘ಇಲ್ಲಿಂದ ಹೊರಡಲು ನನ್ನ ಜೊತೆಗಿರುವ 500 ಭಾರತೀಯರಿಗೆ ಅನುಮತಿ ಸಿಕ್ಕಿದೆ. ಬಸ್‌ನಲ್ಲಿ ಒಂದೂವರೆ ಗಂಟೆ ಪ್ರಯಾಣದ ಬಳಿಕ ರೊಮೇನಿಯಾ ಗಡಿಯನ್ನು ತಲುಪುತ್ತೇವೆ. ಅಲ್ಲಿ 2 ಸಾವಿರಕ್ಕೂ ಅಧಿಕ ಮಂದಿ ತಪಾಸಣೆಗಾಗಿ ಕಾಯುತ್ತಿದ್ದಾರೆ. ಅಗತ್ಯ ದಾಖಲಾತಿಗಳ ಪರಿಶೀಲನೆ ನಂತರ ರೊಮೇನಿಯಾ ಗಡಿ ಪ್ರವೇಶಿಸಲು ಅನುಮತಿ ನೀಡಲಾಗುತ್ತದೆ. ಅಲ್ಲಿನ ರಾಜಧಾನಿ ಬುಕಾರೆಸ್ಟ್‌ನಿಂದ ಭಾರತಕ್ಕೆ ವಿಮಾನದ ವ್ಯವಸ್ಥೆ ಮಾಡಲಾಗಿದೆ’ ಎಂದು ತಿಳಿಸಿದರು.

‘ಇದುವರೆಗೂ ಶಾಂತವಾಗಿದ್ದ ಚರ್ನಿವಿಟ್ಸ ನಗರದಲ್ಲೂ ಯುದ್ಧದ ಆತಂಕ ಎದುರಾಗಿದ್ದು, ರಾತ್ರಿ ವೇಳೆ ದೀಪಗಳನ್ನು ಆರಿಸುವಂತೆ ಸೂಚಿಸಲಾಗುತ್ತಿ-ದೆ. ನಾವು ಅಪಾರ್ಟ್‌ಮೆಂಟಿನ ಬೇಸ್‌ಮೆಂಟಿನಲ್ಲಿ ಅಡಗಿದ್ದೆವು’ ಎಂದು ಹೇಳಿದರು.

ಬೇಸ್‌ಮೆಂಟ್‌ನಲ್ಲಿ ರಕ್ಷಿತ್: ಹುಣಸೂರು ತಾಲ್ಲೂಕಿನ ದೊಡ್ಡಹೆಜ್ಜೂರಿನ ಧರಣೇಶ್–ಶೋಭಾ ದಂಪತಿ ಪುತ್ರ ರಕ್ಷಿತ್ ಡಿ.ಆಚಾರ್, ಹಾರ್ಕಿವ್ ನಗರದಲ್ಲಿದ್ದು, ವೈದ್ಯಕೀಯ ಶಿಕ್ಷಣಕ್ಕಾಗಿ ತೆರಳಿದ 13 ದಿನಗಳಲ್ಲೇ ಯುದ್ಧ ಘೋಷಣೆಯಾಗಿದೆ. ‘ಹಾಸ್ಟೆಲ್‌ನ ಬೇಸ್‌ಮೆಂಟ್‌ನಲ್ಲಿದ್ದು, ‘ಬಾಂಬ್ ಸ್ಫೋಟ ಹಾಗೂ ಯುದ್ಧ ವಿಮಾನಗಳ ಹಾರಾಟದ ಶಬ್ದಗಳೇ ಕೇಳಿ ಬರುತ್ತಿವೆ’ ಎಂದು ಪೋಷಕರಿಗೆ ಮಾಹಿತಿ ನೀಡಿದ್ದಾರೆ.

ಬಂಕರ್‌ನಲ್ಲಿ ಶ್ರೀಗಣೇಶ್: ಜೆಪ್ರೋಜ್ಜಿಯಾ ನಗರದಲ್ಲಿರುವ ಇಲ್ಲಿನ ಶ್ರೀಗಣೇಶ್ ಬಂಕರ್‌ನಲ್ಲಿ ಆಶ್ರಯ ಪಡೆದಿದ್ದಾರೆ. ‘ಸಮೀಪದ ಹಾಸ್ಟೆಲ್‌ನಲ್ಲಿ ಅಡುಗೆ ಮಾಡಿ ಊಟ ಮಾಡಬೇಕಾಗಿದೆ. ಸೈರನ್ ಶಬ್ದ ಕೇಳಿಸಿದರೆ, ಮಧ್ಯರಾತ್ರಿಯಾಗಿದ್ದರೂ ಬಂಕರ್‌ಗೆ ಓಡಿ ಹೋಗಬೇಕು’ ಎಂದಿದ್ದಾರೆ.

ಅವರ ಸೋದರಿ ಮಾಲತಿ, ‘ಜೆಪ್ರೋಜ್ಜಿಯಾ ನಗರದಲ್ಲಿ ಯುದ್ಧ ಆರಂಭವಾಗಿದ್ದು, ಸೋದರ ಅಪಾಯದಲ್ಲಿದ್ದಾರೆ’ ಎಂದು ಆತಂಕ ವ್ಯಕ್ತಪಡಿಸಿ-ದರು.

ಐಎಫ್‌ಎಸ್ ಅಧಿಕಾರಿ ಆಶ್ರಯ: ನಗರದ ವಿದ್ಯಾರ್ಥಿನಿಯೊಬ್ಬರು ಕೀವ್ ನಗರದ ಐಎಫ್‌ಎಸ್ ಅಧಿಕಾರಿಯೊಬ್ಬರ ಕಚೇರಿಯಲ್ಲಿ ಆಶ್ರಯ ಪಡೆದಿದ್ದಾರೆ. ‘ಪುತ್ರಿ ಸುರಕ್ಷಿತವಾಗಿದ್ದಾಳೆ’ ಎಂದು ಆಕೆಯ ತಾಯಿ ತಿಳಿಸಿದ್ದಾರೆ.

ಮುಂದುವರಿದ ಆತಂಕದ ಸ್ಥಿತಿ

ನವದೆಹಲಿ: ಉಕ್ರೇನ್‌ನ ಕೀವ್ ಮತ್ತು ಹಾರ್ಕಿವ್ ನಗರಗಳಲ್ಲಿ ಸಿಲುಕಿರುವ ಭಾರತೀಯ ವಿದ್ಯಾರ್ಥಿಗಳ ಆತಂಕದ ಸ್ಥಿತಿ ಸೋಮವಾರವೂ ಮುಂದುವರಿದಿದ್ದು, ಹಾರ್ಕಿವ್ ನಗರವೊಂದರ ಬಂಕರ್‌ಗಳಲ್ಲಿ ರಾಜ್ಯದ 250ಕ್ಕೂ ಅಧಿಕ ವಿದ್ಯಾರ್ಥಿಗಳು ಸಿಲುಕಿಕೊಂ-ಡಿದ್ದಾರೆ.

ಕೀವ್ ನಗರದಿಂದ ವಿದ್ಯಾರ್ಥಿಗಳನ್ನು ಮರಳಿ ಗಡಿಗಳತ್ತ ಕರೆತರಲು ರೈಲಿನ ವ್ಯವಸ್ಥೆ ಮಾಡಲಾಗಿದೆ ಎಂದು ವಿದೇಶಾಂಗ ಸಚಿವ ಜೈಶಂಕರ್ ಸೋಮವಾರ ಟ್ವೀಟ್ ಮಾಡಿದ್ದು, ಹಾರ್ಕಿವ್ ನಗರದಲ್ಲಿ ಸಿಲುಕಿರುವವರ ರಕ್ಷಣೆ ಬಗ್ಗೆ ಇನ್ನಷ್ಟೇ ಕ್ರಮ ಕೈಗೊಳ್ಳಬೇಕಿದೆ. ಹಾಗಾಗಿ, ಅಲ್ಲಿನವರ ಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ.

‘ಬಂಕರ್‌ಗಳಲ್ಲಿ ಆಹಾರ, ನೀರು ಗಾಳಿಯ ಕೊರತೆ ಇದೆ. ಇಲ್ಲಿ ದಿನೇದಿನೇ ಪರಿಸ್ಥಿತಿ ಬಿಗ-ಡಾಯಿಸುತ್ತಿದೆ. ಭಾರತ ಸರ್ಕಾರ ಆದಷ್ಟು ಶೀಘ್ರವೇ ನಮ್ಮನ್ನು ಇಲ್ಲಿಂದ ಕರೆದೊಯ್ಯಲು ವ್ಯವಸ್ಥೆ ಮಾಡಬೇಕು’ ಎಂದು ಹಾರ್ಕಿವ್‌ನ ಬಂಕರ್‌ಗಳಲ್ಲಿ ಆಶ್ರಯ ಪಡೆದಿರುವ ಕನ್ನಡದ ವಿದ್ಯಾರ್ಥಿಗಳು ವಾಟ್ಸ್ ಆ್ಯಪ್ ಸಂದೇಶದ ಮೂಲಕ ಮನವಿ ಮಾಡಿದ್ದಾರೆ.

ದಿನದ ಬೆಳವಣಿಗೆಗಳು

- ಉಕ್ರೇನ್ ಮೇಲಿನ ರಷ್ಯಾ ಆಕ್ರಮಣದ ಬಗ್ಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ 2ನೇ ತುರ್ತು ಸಭೆಯಲ್ಲಿ ತೆಗೆದುಕೊಂಡ ನಿರ್ಣಯದ ಪರ-ವಿರೋಧ ಮತ ಚಲಾಯಿಸದೆ ತಟಸ್ಥ ನೀತಿ ಅನುಸರಿಸಿದ ಭಾರತ
- ಸಂಕಷ್ಟದಲ್ಲಿರುವ ಉಕ್ರೇನ್‌ಗೆ ಮಾನವೀಯ ನೆರವು ಘೋಷಿಸಿದ ಭಾರತ
- ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ಸುರಕ್ಷಿತವಾಗಿ ವಾಪಸ್ ಕರೆತರುವ ಉಸ್ತುವಾರಿಗೆ ನೆರೆ ರಾಷ್ಟ್ರಗಳಿಗೆ ನಾಲ್ವರು ಕೇಂದ್ರ ಸಚಿವರ ನಿಯೋಜನೆ
- ಭಾರಿ ಸಂಕಷ್ಟದ ಸ್ಥಿತಿಯಲ್ಲಿ ಭಾರತೀಯರು ದೇಶದಿಂದ ತೆರಳಲು ನೆರವಾಗುತ್ತಿದ್ದೇವೆ ಎಂದು ಭಾರತದಲ್ಲಿರುವ ಉಕ್ರೇನ್‌ನ ರಾಯಭಾರಿ ವ ಇಗೋರ್ ಪೊಲಿಕಾ
- ಭಾರತೀಯರ ತೆರವು ಕಾರ್ಯಾಚರಣೆ– ಶುಕ್ರವಾರದಿಂದ ಏರ್ ಇಂಡಿಯಾಗೆ ಸಾಥ್ ನೀಡಲಿದೆ ಸ್ಪೈಸ್ ಜೆಟ್, ಇಂಡಿಗೊ
- ಯುರೋಪ್‌ನ ಎಲ್ಲ ದೇಶಗಳಿಂದ ನಿರಾಶ್ರಿತರಿಗೆ ಆಶ್ರಯ ನೀಡುವ ಭರವಸೆ, ಅಮೆರಿಕದಿಂದಲೂ ನೆರವು
- ಐದನೇ ದಿನವೂ ನಿಲ್ಲದ ಯುದ್ಧ. ಕೀವ್ ಮತ್ತು ಹಾರ್ಕಿವ್ ನಗರಗಳಲ್ಲಿ ರಷ್ಯಾ ಪಡೆಗೆ ಉಕ್ರೇನ್‌ನಿಂದ ತೀವ್ರ ಪ್ರತಿರೋಧ
- ಉಕ್ರೇನ್‌ನ ಮತ್ತೊಂದು ನಗರ ಮರಿಯುಪೋಲ್ ನಗರಕ್ಕೆ ರಷ್ಯಾ ಪಡೆಗಳಿಂದ ಕ್ಷಿಪಣಿ, ಶೆಲ್ ದಾಳಿ
- ಉಕ್ರೇನ್ ಹೊಂದಿದ್ದ ವಿಶ್ವದ ಅತಿದೊಡ್ಡ ಸರಕು ಸಾಗಣೆ ವಿಮಾನ ‘ಆಂಟೊನೊವ್-225’ ನಾಶಪಡಿಸಿದ ರಷ್ಯಾ ಪಡೆ
- ರಷ್ಯಾ ಹಿಮ್ಮೆಟ್ಟಿಸಲು ನಾಗರಿಕರ ಕೈಗೆ ಶಸ್ತ್ರಾಸ್ತ್ರ ನೀಡಿದ್ದ ಉಕ್ರೇನ್ ಅಧ್ಯಕ್ಷರಿಂದ ಈಗ ಕೈದಿಗಳಿಗೂ ಯುದ್ಧದಲ್ಲಿ ಪಾಲ್ಗೊಳ್ಳಲು ಶಸ್ತ್ರಾಸ್ತ್ರ ನೀಡಲು ಒಪ್ಪಿಗೆ
- ಯುರೋಪ್ ಒಕ್ಕೂಟದ ಸದಸ್ಯತ್ವ ತಕ್ಷಣ ನೀಡಲು ಉಕ್ರೇನ್ ಅಧ್ಯಕ್ಷ ವೊಲೊಡಿಮೀರ್ ಝೆಲೆನ್‌ಸ್ಕಿ ಒತ್ತಾಯ
- ‘ಆಪರೇಷನ್ ಗಂಗಾ’ ಅಡಿ ಭಾರತೀಯರನ್ನು ಕರೆತಂದ ಮತ್ತೆರಡು ವಿಮಾನಗಳು
- ರಷ್ಯಾದ ಆಕ್ರಮಣವನ್ನು ಯುದ್ಧವೆನ್ನಲು ಹಿಂಜರಿದ ತನ್ನ ದೇಶದ ರಕ್ಷಣಾ ಸಚಿವ ಸ್ಟೀಫನ್ ಯಾನೆವ್ ಅವರನ್ನು ವಜಾಗೊಳಿಸಿದ ಬಲ್ಗೇರಿಯಾ ಪ್ರಧಾನಿ ಕಿರಿಲ್ ಪೆಟ್ಕೊವ್
- ಅಂತರರಾಷ್ಟ್ರೀಯ ಹಣ ವರ್ಗಾವಣೆ ವ್ಯವಸ್ಥೆ ‘ಸ್ವಿಫ್ಟ್’ನಿಂದ ರಷ್ಯಾದ ಬ್ಯಾಂಕುಗಳಿಗೆ ನಿರ್ಬಂಧ ವಿಧಿಸಿರುವುದಕ್ಕೆ ಚೀನಾ ವಿರೋಧ
- ಉಕ್ರೇನ್‌ಗೆ ವಾಯು ರಕ್ಷಣಾ ಕ್ಷಿಪಣಿಗಳು ಮತ್ತು ಟ್ಯಾಂಕ್ ವಿರೋಧಿ ಶಸ್ತ್ರಾ-ಸ್ತ್ರಗಳು ನ್ಯಾಟೊ ಮಿತ್ರಕೂಟ ರಾಷ್ಟ್ರಗಳಿಂದ ಪೂರೈಕೆ– ನ್ಯಾಟೊ ಮುಖ್ಯಸ್ಥ ಜೆನ್ಸ್ ಸ್ಟೋಲ್ಟೆನ್‌ಬರ್ಗ್, ಆಸ್ಟ್ರೇಲಿಯಾದಿಂದಲೂ ಶಸ್ತ್ರಾಸ್ತ್ರ ಪೂರೈಕೆ
- ಅಮೆರಿಕದಿಂದ ಉಕ್ರೇನ್‌ಗೆ ಯುದ್ಧ ವಿಮಾನ ಹೊಡೆದುರುಳಿಸುವ 500 ಸ್ಟಿಂಜರ್ ಕ್ಷಿಪಣಿಗಳು ಮತ್ತು ಇನ್ನಿತರ ಅತ್ಯಾಧುನಿಕ ಯುದ್ಧಾಸ್ತ್ರಗಳ ಪೂರೈಕೆ
- ರಷ್ಯಾಕ್ಕೆ ಯುದ್ಧೋಪಕರಣಗಳ ಪೂರೈಕೆ ನಿರ್ಬಂಧಿಸಿದ ದಕ್ಷಿಣ ಕೊರಿಯಾ
- ಲಕ್ಸೆಂಬರ್ಗ್ ದೇಶವು ಟ್ಯಾಂಕ್ ಹೊಡೆದುರುಳಿಸುವ ಸಾಮರ್ಥ್ಯದ ಎನ್‌ಎಲ್‌ವಿ 100 ಅಸ್ತ್ರಗಳು, ಮಿಲಿಟರಿ ಜೀಪುಗಳು ಮತ್ತು 15 ಮಿಲಿಟರಿ ಟೆಂಟ್‌ಗಳನ್ನು ಉಕ್ರೇನ್‌ಗೆ ಕಳುಹಿಸಿದೆ
- ತಕ್ಷಣವೇ ರಷ್ಯಾ ತೊರೆದು ಬರಲು ತಮ್ಮ ದೇಶದ ನಾಗರಿಕರಿಗೆ ಅಮೆರಿಕ ಮತ್ತು ಇಟಲಿ ಸೂಚನೆ
- ಐರೋಪ್ಯ ಒಕ್ಕೂಟ ತನ್ನ ನಿರ್ಬಂಧ ಹೇರಿದ ಬೆನ್ನಲ್ಲೇ ರಷ್ಯಾ ಕೂಡ ಬ್ರಿಟನ್, ಜರ್ಮನಿ ಸೇರಿದಂತೆ 32 ರಾಷ್ಟ್ರಗಳ ವಿಮಾನಗಳಿಗೆ ತನ್ನ ವಾಯು ಪ್ರದೇಶ ನಿರ್ಬಂಧಿಸಿದೆ
- ಯುದ್ಧ ಬಿಡಿ, ಮಾತುಕತೆಯಿಂದ ಸಮಸ್ಯೆ ಬಗೆಹರಿಸಿ ಎಂದು ಸಲಹೆ ನೀಡಿದ ದಲೈ ಲಾಮಾ
- ಬೆಲರೂಸ್‌ನಲ್ಲಿ ಯುದ್ಧ ವಿರೋಧಿ ಪ್ರತಿಭಟನೆ, 500 ಜನರ ಬಂಧನ
- ಯುರೋಪ್ ಜತೆಗೆ ಕೆನಡಾದ ವಾಯುಪ್ರದೇಶ ಬಳಕೆಗೂ ರಷ್ಯಾಕ್ಕೆ ನಿಷೇಧ
- ರಷ್ಯಾದಲ್ಲೂ ಯುದ್ಧ ಭೀತಿ–ಅಗತ್ಯ ವಸ್ತು ಖರೀದಿಸಲು ಮುಗಿಬಿದ್ದ ಜನತೆ

ಕೀವ್ ರೈಲ್ವೆ ನಿಲ್ದಾಣ ತಲುಪಲು ಸೂಚನೆ

ನವದೆಹಲಿ (ಪಿಟಿಐ): ಉಕ್ರೇನ್ ರಾಜಧಾನಿ ಕೀವ್‌ನಲ್ಲಿ ಸಿಲುಕಿರುವ ಎಲ್ಲ ಭಾರತೀಯ ವಿದ್ಯಾರ್ಥಿಗಳು ಯುದ್ಧಪೀಡಿತ ದೇಶದಿಂದ ತಮ್ಮ ಮುಂದಿನ ಪ್ರಯಾಣ ಕೈಗೊಳ್ಳಲು ರೈಲ್ವೇ ನಿಲ್ದಾಣಕ್ಕೆ ತೆರಳಬೇಕು ಎಂದು ಉಕ್ರೇನ್‌ನ ಭಾರತೀಯ ರಾಯಭಾರಿ ಕಚೇರಿ ಸೋಮವಾರ ತಿಳಿಸಿದೆ.

ಸುರಕ್ಷಿತ ಸ್ಥಳ ತಲುಪಲು ಜೀವಿತಾ ಹರಸಾಹಸ

ಪ್ರಜಾವಾಣಿ ವಾರ್ತೆ


ಜೀವಿತಾ ಶಿಂಧೆ

ಕಲಬುರಗಿ: ಉಕ್ರೇನ್‌ನ ಕೀವ್ ನಗರದಲ್ಲಿ ಸಿಲುಕಿರುವ ಕಲಬುರಗಿಯ ವೈದ್ಯ ವಿದ್ಯಾರ್ಥಿನಿ ಜೀವಿತಾ ಶಿಂಧೆ ಅವರು ಸೋಮವಾರ ಬಂಕರ್‌ನಿಂದ ಹೊರಬಂದಿದ್ದು, ಸುರಕ್ಷಿತ ಸ್ಥಳಕ್ಕೆ ತೆರಳಲು ಯತ್ನ ನಡೆಸಿದ್ದಾರೆ. ಕಠಿಣ ಕರ್ಫ್ಯೂ ಹಾಗೂ ಶೆಲ್ ದಾಳಿ ಆತಂಕದ ಮಧ್ಯೆಯೂ ಅವರು ಧೈರ್ಯ ಮಾಡಿ ರೈಲು ನಿಲ್ದಾಣ ತಲುಪಿದ್ದಾರೆ.

‘ಕೀವ್‌ನಲ್ಲಿ ಸೋಮವಾರ ಬೆಳಿಗ್ಗೆಯಿಂದ ಸ್ಫೋಟದ ಶಬ್ದ ಕಡಿಮೆಯಾಗಿದೆ. ನಾನು ಬಂಕರ್‌ನಿಂದ ಹೊರಬಂದು, ಕೀವ್‌ನ ರೈಲು ನಿಲ್ದಾಣ ತಲುಪಿರುವೆ. ಇಲ್ಲಿ ಹಲವಾರು ಜನ ಬೇರೆಬೇರೆ ದೇಶಗಳಿಗೆ ಹೋಗಲು ರೈಲುಗಳಿಗೆ ಕಾಯುತ್ತಿದ್ದಾರೆ. ಆದರೆ, ನಾನು ಇಂಥದ್ದೇ ರೈಲು ಬರಲಿ ಎಂದು ಕಾಯುವ ಸ್ಥಿತಿಯಲ್ಲಿ ಇಲ್ಲ. ಯಾವ ರೈಲು ಮೊದಲು ಬರುತ್ತದೆಯೋ ಅದಕ್ಕೆ ಹತ್ತುವೆ’ ಎಂದು ಜೀವಿತಾ ಸೋಮವಾರ ಸಂಜೆ ‘ಪ್ರಜಾವಾಣಿ’ಗೆ ತಿಳಿಸಿದರು.

‘ಉಕ್ರೇನ್ ಗಡಿ ತಲುಪಿದರೆ ಸಾಕು; ಅಲ್ಲಿಂದ ಬೇರೆ ದೇಶದ ಗಡಿ ಪ್ರವೇಶಿಸಿ ತಾತ್ನಾಡಿಗೆ ಮರಳಬಹುದು. ನನ್ನ ಕೈಲಾದ ಎಲ್ಲ ಪ್ರಯತ್ನ ಮಾಡುತ್ತಿರುವೆ’ ಎಂದು ಅವರು ಹೇಳಿದರು.

‘ರೈಲು ನಿಲ್ದಾಣದಲ್ಲಿ ಜನ ದುಗುಡಗೊಂಡು ಓಡಾಡುತ್ತಿದ್ದಾರೆ. ರೈಲು ಸಂಚಾರ ಬಂದ್ ಆಗಿಲ್ಲ ಎಂದು ಕೇಳಿ ಸಮಾಧಾನವಾಗಿದೆ. ಕೀವ್‌ನಿಂದ ನೇರವಾಗಿ ಪೋಲೆಂಡ್ ಇಲ್ಲವೇ ಹಂಗೆರಿಯ ಗಡಿ ತಲುಪಲು ರೈಲುಗಳಿವೆ. ಯಾವ ರೈಲು ಬಂದರೂ ನಾನು ಹತ್ತಿ ಹೊರಡುತ್ತೇನೆ. ಅಲ್ಲಿಂದ ವಿಮಾನದ ಮೂಲಕ ಭಾರತ ಮುಟ್ಟುವ ಪ್ರಯತ್ನ ನನ್ನದು’ ಎಂದರು.

‘ಇಲ್ಲಿ ಪೊಲೀಸ್ ಕಠಿಣ ಕರ್ಫ್ಯೂ ಹೇರಿದ್ದಾರೆ. ಮೊಬೈಲ್ ಬಳಕೆ ಸಾಧ್ಯ-ವಾಗುತ್ತಿಲ್ಲ. ಸುರಕ್ಷತೆಯ ದೃಷ್ಟಿಯಿಂದ ಫೋಟೊ, ವಿಡಿಯೊ ಮಾಡದಂತೆ ಪೊಲೀಸರು ಸೂಚಿಸಿದ್ದಾರೆ. ವಾರದ ಹಿಂದೆಯೇ ನಾನು ಊಟಕ್ಕೆ ಬೇಕಾದ ಸಾಮಗ್ರಿ ಸಂಗ್ರಹಿಸಿ ಇಟ್ಟುಕೊಂಡ ಕಾರಣ ಉಪವಾಸ ಇರುವ ಸಂದರ್ಭ ಬರಲಿಲ್ಲ’ ಎಂದು ವಿವರಿಸಿದರು.

‘ಕಲಬುರಗಿಯ ಪ್ರಜ್ವಲ್‌ಕುಮಾರ ಗುಬ್ಯಾಡ, ವಿದ್ಯಾಸಾಗರ ಪೂಜಾರಿ, ಮಲ್ಲಿನಾಥ ಜಮಗೊಂಡ, ವಿನಯ ರುದ್ರೇಶ ಕಲ್ಲಿಹಾಳ, ಸುಷ್ಮಿತಾ ನಾಗೇಂದ್ರಪ್ಪ, ಪ್ರಿಯಾ ಪಾಟೀಲ ಅವರೂ ವೈದ್ಯಕೀಯ ಶಿಕ್ಷಣಕ್ಕಾಗಿ ಉಕ್ರೇನ್ ದೇಶದ ವಿವಿಧ ನಗರಗಳಲ್ಲಿ-ದ್ದು, ಸುರಕ್ಷಿತವಾಗಿದ್ದಾರೆ’ ಎಂದರು.

‘ನನ್ನ ಸಹೋದರನನ್ನು ರಕ್ಷಿಸಿ’


ಪ್ರಜ್ವಲ್‌ಕುಮಾರ

‘ನನ್ನ ಸಹೋದರ ಪ್ರಜ್ವಲ್‌ಕುಮಾರ ಗುಬ್ಯಾಡ ವೈದ್ಯಕೀಯ ಶಿಕ್ಷಣಕ್ಕಾಗಿ ಉಕ್ರೇನ್‌ನ ಹಾರ್ಕಿವ್ ನಗರದಲ್ಲಿದ್ದಾರೆ. ನಾಲ್ವರು ಭಾರತದ ವಿದ್ಯಾರ್ಥಿಗಳ ಜತೆಗೆ ಒಂದು ವಾರದಿಂದ ಬಂಕರ್‌ನಲ್ಲಿದ್ದು, ಅಲ್ಲಿ ಕಠಿಣ ಕರ್ಫ್ಯೂ ಇರುವುದರಿಂದ ಬಂಕರ್‌ನಿಂದ ಹೊರಬಂದು ಮಾತನಾಡಲೂ ಅವರಿಗೆ ಆಗುತ್ತಿಲ್ಲವಂತೆ. ಸಹೋದರನನ್ನು ರಕ್ಷಿಸಿ’ ಎಂದು ಪ್ರಜ್ವಲ್‌ಕುಮಾರ ಅವರ ಸಹೋದರ ಜೈಪ್ರಕಾಶ್ ಮನವಿ ಮಾಡಿದ್ದಾರೆ.

‘ಕೇಂದ್ರ ಸರ್ಕಾರ ಆದಷ್ಟು ಬೇಗ ನನ್ನ ಸಹೋದರ ಹಾಗೂ ಅವರ ಸಹಪಾಠಿಗಳನ್ನು ರಕ್ಷಿಸಬೇಕು’ ಎಂದು ಅವರು ಕೋರಿದ್ದಾರೆ.

‘ಸೋಮವಾರ ಮಧ್ಯಾಹ್ನ 2ರ ಸುಮಾರಿಗೆ ಸಹೋದರನ ಜೊತೆ ಮಾತನಾಡಿರುವೆ. ಅಲ್ಲಿ ಊಟಕ್ಕೂ ಅವ್ಯವಸ್ಥೆ ಆಗಿದೆ. ಬಂಕರ್‌ನ ಪಕ್ಕದಲ್ಲಿ-ರುವ ಅಪಾರ್ಟ್‌ಮೆಂಟಿಗೆ ಹೋಗಿ ಇವರೇ ಅಡುಗೆ ಮಾಡಿಕೊಂಡು ತರಬೇ-ಕಾಗಿದೆಯಂತೆ. ಯಾರಾದರೂ ಅವರನ್ನು ನೆರೆದೇಶದ ಗಡಿಗೆ ಮುಟ್ಟಿಸಿದರೆ ಸಾಕು ಎನ್ನುವಂತಾಗಿದೆ. ಪ್ರತಿ ಕ್ಷಣವನ್ನೂ ಆತಂಕದಲ್ಲೇ ಕಳೆಯುತ್ತಿದ್ದೇವೆ’ ಎಂದರು.


ಪಹರೆ... ಉಕ್ರೇನ್ ಮಿಲಿಟರಿ ಪಡೆಗಳ ಸೈನಿಕರು ಡೊನೆಟ್ಸ್ಕ್ ಪ್ರದೇಶದ ಸೆವೆರೊಡೊನೆಟ್ಸ್ಕ್ ನಗರದಲ್ಲಿ ಸೋಮವಾರ ಪಹರೆ ನಡೆಸಿದರು– ಎಎಫ್‌ಪಿ ಚಿತ್ರ

‘ಕೋವಿಡ್ ನಿಯಮದಲ್ಲಿ ವಿನಾಯಿತಿ’

ನವದೆಹಲಿ: ಯುದ್ಧ ಪೀಡಿತ ದೇಶದಿಂದ ಬರುತ್ತಿರುವ ಭಾರತೀಯರಿಗೆ ಈಗ ಕೋವಿಡ್ ಮಾರ್ಗಸೂಚಿ ನಿಯಮಗಳಿಂದ ವಿನಾಯಿತಿ ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ರಷ್ಯಾ– ಉಕ್ರೇನ್ ಯುದ್ಧದಿಂದಾಗಿ ಆರೋಗ್ಯ ಸಚಿವಾಲಯ, ಅಂತರರಾಷ್ಟ್ರೀಯ ಪ್ರಯಾಣದ ಮಾರ್ಗ ಸೂಚಿ ಪರಿಷ್ಕರಿಸಿ, ಹಲವು ನಿಬಂಧನೆಗಳಿಗೆ ವಿನಾಯಿತಿ ನೀಡಿದೆ. ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರಲ್ಲಿ ಸೋಮವಾರದವರೆಗೆ 1,156 ಮಂದಿ ಭಾರತಕ್ಕೆ ವಾಪಸಾಗಿದ್ದಾರೆ. ಇದರಲ್ಲಿ ಉಕ್ರೇನ್‌ನ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳೇ ಹೆಚ್ಚಿದ್ದಾರೆ. ಇದರಲ್ಲಿ ಯಾರೊಬ್ಬರನ್ನು ಪ್ರತ್ಯೇಕವಾಗಿರಿಸಿಲ್ಲ. ಉಕ್ರೇನ್‌ನಲ್ಲಿ 18 ಸಾವಿರಕ್ಕೂ ಹೆಚ್ಚು ಭಾರತೀಯ ವಿದ್ಯಾ-ರ್ಥಿಗಳಿರುವ ಅಂದಾಜಿದೆ.

ವಿದೇಶದಿಂದ ಬರುವ ಭಾರತೀಯರು ಆರ್‌ಟಿಪಿಸಿಆರ್ ಪರೀಕ್ಷೆಯಲ್ಲಿ ನೆಗೆಟಿವ್ ಮತ್ತು ಕೋವಿಡ್ ಲಸಿಕೆ ಪಡೆದಿರುವ ಪ್ರಮಾಣ ಪತ್ರ ಹೊಂದಿರಬೇಕಿತ್ತು.

ಇನ್ನು ಮುಂದೆ ರೊಮೇನಿಯಾ, ಪೋಲೆಂಡ್ ಮತ್ತು ಹಂಗೆರಿ ಗಡಿಗಳ ಮೂಲಕ ಬರುವ ಭಾರತೀಯರಿಗೆ ಈ ಪ್ರಮಾಣ ಪತ್ರ ಕಡ್ಡಾಯವಿಲ್ಲ. ಪ್ರಯಾಣದ ಮೊದಲು ಏರ್-ಸುವಿಧಾ ಪೋರ್ಟಲ್‌ನಲ್ಲಿ ಈ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಅಗತ್ಯವೂ ಇಲ್ಲ.

ಸ್ಥಳಾಂತರ ಕಾರ್ಯಾಚರಣೆಯ ಸಮನ್ವಯತೆಗಾಗಿ ಉಕ್ರೇನ್‌ನಿಂದ ಬರುವವರು ಆಗಮನದ ಪೂರ್ವ ಆರ್‌ಟಿ-ಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿ ಸಲ್ಲಿಸಲು ಸಾಧ್ಯವಾ-ಗದಿದ್ದರೆ ಅಥವಾ ಅವರು ಕೋವಿಡ್ 19 ಲಸಿಕೆ ಪಡೆದು-ಕೊಂಡಿಲ್ಲದಿದ್ದರೆ ದೇಶಕ್ಕೆ ಬಂದ ನಂತರ 14 ದಿನಗಳವರೆಗೆ ತಮ್ಮ ಮನೆಯಲ್ಲೇ ಸ್ವಯಂ ಆರೋಗ್ಯ ಮೇಲ್ವಿಚಾರಣೆ ಮಾಡಿಕೊಳ್ಳುವ ಸಲಹೆ ನೀಡಲಾಗಿದೆ. ಅಲ್ಲದೇ ಕೋವಿಡ್ ಪರೀಕ್ಷೆಗೆ ಗಂಟಲು ದ್ರವದ ಮಾದರಿ ಸಲ್ಲಿಸಲು ಅನುಮತಿ-ಸಲಾಗಿದೆ ಎಂದು ಆರೋಗ್ಯ ಸಚಿವಾಲಯವು, ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ಮಾಹಿತಿ ನೀಡಿದೆ.

‘ವಾಪಸ್ ಬರಲ್ಲ ಅನ್ಕೊಂಡಿದ್ವಿ’

ಪ್ರಜಾವಾಣಿ ವಾರ್ತೆ


ಡಿ. ರೇಖಾ

ತುಮಕೂರು: ‘ಉಕ್ರೇನ್‌ನಲ್ಲಿ ಯುದ್ಧ ಶುರುವಾದಾಗ ನಾವು ಭಾರತಕ್ಕೆ ವಾಪಸ್ ಹೋಗಲ್ಲ ಅನ್ಕೊಂಡಿದ್ವಿ’

–ಹೀಗೆಂದು ಉಕ್ರೇನ್‌ನಿಂದ ತುಮಕೂರಿಗೆ ಮರಳಿದ ನಗರದ ಎಂಬಿಬಿಎಸ್ ವಿದ್ಯಾರ್ಥಿನಿ ಡಿ. ರೇಖಾ ಯುದ್ಧದ ತೀವ್ರತೆಯನ್ನು ವಿವರಿಸಿದರು.

‘ಯುದ್ಧ ಶುರುವಾದ ನಂತರ ದಿನದಿಂದ ದಿನಕ್ಕೆ ನಮ್ಮಲ್ಲಿ ಭಯ ಜಾಸ್ತಿಯಾಯ್ತು. ಬಾಂಬ್ ಬ್ಲಾಸ್ಟ್ ಆಗ್ತಿರೋದು ನಮ್ಮ ಆತಂಕ ಹೆಚ್ಚು ಮಾಡಿತು. ಅಲ್ಲಿನ ವಿದ್ಯಾರ್ಥಿಗಳು ಸಹಾಯ ಮಾಡಿದ್ದರಿಂದ ನಾವು ಆದಷ್ಟು ಬೇಗ ವಾಪಸ್ ಬರಲು ಅನುಕೂಲವಾಯ್ತು. ಸರ್ಕಾರ ಶ್ರಮವಹಿಸಿ ನಮ್ಮನ್ನು ವಾಪಸ್ ಕರೆಸಿಕೊಂಡಿದೆ. ದೆಹಲಿಯ ಕರ್ನಾಟಕ ಭವನದಲ್ಲಿ ಉಳಿಯಲು ಅವಕಾಶ ಮಾಡಿದ್ದರು. ನನ್ನ ಹಾಗೆ ಉಕ್ರೇನ್‌ನಲ್ಲಿ ಉಳಿದಿರುವ ಎಲ್ಲರನ್ನು ಸುರಕ್ಷಿತವಾಗಿ ಮರಳಿ ಭಾರತಕ್ಕೆ ಕರೆತನ್ನಿ’ ಎಂದು ಮನವಿ ಮಾಡಿದರು.

‘ಈಗ ಅಲ್ಲಿನ ಪರಿಸ್ಥಿತಿ ಚಿಂತಾಜನ-ಕವಾಗಿದೆ. ಕುಡಿಯಲು ನೀರು, ಊಟ ಇಲ್ಲದೆ ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದರು.

ಕದನ ವಿರಾಮಕ್ಕೆ ಒತ್ತಡ

ಒಂದನೇ ಪುಟದಿಂದ

ಕ್ರಿಮಿಯಾ, ರಷ್ಯಾದ ಭಾಗ ಎಂಬ ಮಾನ್ಯತೆಯನ್ನೂ ಕೊಡಬೇಕು ಎಂದು ಪುಟಿನ್ ಹೇಳಿದ್ದಾರೆ. ಪುಟಿನ್ ಮತ್ತು ಮ್ಯಾಕ್ರನ್ ನಡುವೆ ದೂರವಾಣಿ ಮೂಲಕ ಮಾತುಕತೆ ನಡೆದಿದೆ.

ನಾಗರಿಕರ ಮೇಲೆ ದಾಳಿ ನಡೆಸಬಾರದು, ಪ್ರಮುಖ ರಸ್ತೆಗಳ ಬಳಕೆಗೆ ನಾಗರಿಕರಿಗೆ ಅಡ್ಡಿ ಮಾಡಬಾರದು, ನಾಗರಿಕ ಮೂಲ ಸೌಕರ್ಯಗಳನ್ನು ನಾಶ ಮಾಡಬಾರದು ಎಂದು ಪುಟಿನ್ ಅವರನ್ನು ಮ್ಯಾಕ್ರನ್ ಅವರು ಒತ್ತಾಯಿಸಿದ್ದಾರೆ. ಇದಕ್ಕೆ ಪುಟಿನ್ ಒಪ್ಪಿಗೆ ಸೂಚಿಸಿದ್ದಾರೆ ಎಂದು ಮ್ಯಾಕ್ರನ್ ಅವರ ಕಚೇರಿಯು ತಿಳಿಸಿದೆ.

ಅಮೆರಿಕ ಮತ್ತು ಇತರ ದೇಶಗಳು ರಷ್ಯಾ ಮೇಲೆ ಇನ್ನಷ್ಟು ನಿರ್ಬಂ-ಧಗಳನ್ನು ಸೋಮವಾರ ಹೇರಿವೆ. ರಷ್ಯಾದ ಕೇಂದ್ರೀಯ ಬ್ಯಾಂಕ್‌ನ ಜತೆಗೆ ಯಾವುದೇ ವಹಿವಾಟು ನಡೆಸುವುದಿಲ್ಲ ಎಂದು ಅಮೆರಿಕ ಘೋಷಿಸಿದೆ. ವಿದೇಶಿ ಮೀಸಲನ್ನು ಸ್ಥಗಿತಗೊಳಿಸಲಾಗುವುದು ಎಂದಿದೆ. ಸಾಂಪ್ರದಾಯಿಕವಾಗಿ ತಟಸ್ಥ ನಿಲುವು ತಳೆಯುವ ಸ್ವಿಟ್ಜರ್‌ಲೆಂಡ್ ಕೂಡ ಈ ಬಾರಿ ನಿಲುವು ಬದಲಿಸಿದೆ. ಐರೋಪ್ಯ ಒಕ್ಕೂಟದ ನಿಲುವೇ ತನ್ನದೂ ಆಗಿದೆ ಎಂದಿದೆ.

‘ಪಶ್ಚಿಮ ದೇಶಗಳ ನಿರ್ಬಂಧವು ಬಹಳ ಕಠಿಣವಾಗಿವೆ. ಆದರೆ, ನಮ್ಮ ದೇಶವು ಇಂತಹ ಹಾನಿಯನ್ನು ಪರಿಹ-ರಿಸಿಕೊಳ್ಳುವ ಶಕ್ತಿಯನ್ನು ಹೊಂದಿದೆ’ ಎಂದು ರಷ್ಯಾದ ವಕ್ತಾರ ಡಿಮಿಟ್ರಿ ಪೆಸ್ಕೋವ್ ಹೇಳಿದ್ದಾರೆ.

ಬನವಾಸಿ ಯುವಕ ಸುರಕ್ಷಿತ

ಪ್ರಜಾವಾಣಿ ವಾರ್ತೆ


ಇಮ್ರಾನ್ ನಜೀರ್ ಚೌದರಿ

ಶಿರಸಿ: ಉಕ್ರೇನ್ ದೇಶದಿಂದ ತಾಲ್ಲೂಕಿನ ಬನವಾಸಿಯ ಯುವಕ ಇಮ್ರಾನ್ ನಜೀರ್ ಚೌದರಿ ಭಾನುವಾರ ರಾತ್ರಿ ಸುರಕ್ಷಿತವಾಗಿ ಪಾರಾಗಿದ್ದಾರೆ.

ಬಸ್ ಮೂಲಕ ಉಕ್ರೇನ್‌ನ ವಿನಿಶಿಯಾ ನಗರದಿಂದ ಶನಿವಾರ ಹೊರಟಿದ್ದ ಅವರು ರೊಮೇನಿಯಾ ದೇಶದ ಗಡಿಯಲ್ಲಿ ಒಂದು ದಿನ ಸಿಲು-ಕಿಕೊಂಡಿದ್ದರು. ಭಾನುವಾರ ತಡರಾತ್ರಿ ರೊಮೇನಿಯಾ ದೇಶಕ್ಕೆ ತಲುಪಿದರು.

‘ಮೂವತ್ತಕ್ಕೂ ಹೆಚ್ಚು ಸ್ನೇಹಿತರೊಂದಿಗೆ ಬಸ್ ಮೂಲಕ ಸುರಕ್ಷಿತ ದೇಶಕ್ಕೆ ತಲುಪಿದಿದ್ದೇನೆ. ರೊಮೇನಿಯಾ ರಾಜಧಾನಿ ಬುಕಾರೆಸ್ಟ್ ನಗರಕ್ಕೆ ಪ್ರಯಾಣ ಬೆಳೆಸಿದ್ದು ಅಲ್ಲಿಂದ ವಿಮಾನದ ಮೂಲಕ ಶೀಘ್ರವೇ ಭಾರತಕ್ಕೆ ಮರಳುವೆ. ದಾಳಿಯ ಆತಂಕ ಎದುರಿಸಿದ್ದ ನಾವು ಈಗ ಅಪಾಯದಿಂದ ಪಾರಾಗಿರುವ ಸಮಾಧಾನದಲ್ಲಿದ್ದೇವೆ’ ಎಂದು ಇಮ್ರಾನ್ ಪ್ರತಿಕ್ರಿಯಿಸಿದ್ದಾರೆ.

451 ಕನ್ನಡಿಗರು ನೆರವಿಗೆ ಮೊರೆ: ರಾಜನ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಉಕ್ರೇನ್‌ನಲ್ಲಿ ಸಿಲುಕಿರುವ ರಾಜ್ಯದ ಇನ್ನೂ 51 ಮಂದಿಯ ಮಾಹಿತಿ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ ಲಭಿಸಿದೆ. ಈವರೆಗೆ ಒಟ್ಟು 451 ಜನರು ತವರಿಗೆ ಮರಳಲು ಸರ್ಕಾರದ ನೆರವು ಕೋರಿದ್ದಾರೆ.

‘ಬೆಂಗಳೂರಿನ 37, ತುಮಕೂರಿನ ಐದು ಜನ ಸೇರಿದಂತೆ ಉಕ್ರೇನ್‌ನಲ್ಲಿ ಸಿಲುಕಿರುವ 51 ಕನ್ನಡಿಗರ ಮಾಹಿತಿ ಭಾನುವಾರ ದೊರಕಿದೆ. ಅದನ್ನು ವಿದೇಶಾಂಗ ವ್ಯವಹಾರ ಸಚಿವಾಲಯದ ಜತೆ ಹಂಚಿಕೊಳ್ಳಲಾಗಿದೆ’ ಎಂದು ಉಕ್ರೇನ್‌ನಲ್ಲಿ ಸಿಲುಕಿರುವ ರಾಜ್ಯದ ಜನರನ್ನು ಮರಳಿ ಕರೆತರುವ ಕಾರ್ಯಾಚರಣೆಯ ನೋಡಲ್ ಅಧಿಕಾರಿಯಾಗಿರುವ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಮನೋಜ್ ರಾಜನ್ ತಿಳಿಸಿದ್ದಾರೆ.

‘ಆಪರೇಷನ್ ಗಂಗಾ’ ಹೆಸರಿನಲ್ಲಿ ಭಾರತೀಯರನ್ನು ಉಕ್ರೇನ್‌ನಿಂದ ಕರೆತರುವ ಕಾರ್ಯಾಚರಣೆ ನಡೆಯುತ್ತಿದೆ. ನೆರೆಯ ರೊಮೇನಿಯಾ, ಬುಡಾಪೆಸ್ಟ್ ಮತ್ತು ಬುಕಾರೆಸ್ಟ್‌ನಿಂದ ವಿಮಾನಗಳ ಮೂಲಕ ಕರೆತರುವ ವ್ಯವಸ್ಥೆ ಮಾಡಲಾಗಿದೆ. ರೈಲುಗಳ ಮೂಲಕ ಉಕ್ರೇನ್‌ನ ಪಶ್ಚಿಮ ಭಾಗಕ್ಕೆ ಬರುವಂತೆ ಅಲ್ಲಿ ಸಿಲುಕಿರುವ ಕರ್ನಾಟಕದ ಜನರಿಗೆ ಸೂಚಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಉಕ್ರೇನ್‌ನ ಗಡಿ ಭಾಗದಲ್ಲಿರುವ ಶೆಯ್ನಿಯಲ್ಲಿ ಭಾರತೀಯ ರಾಯಭಾರ ಕಚೇರಿಯಿಂದ ಹತ್ತು ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಅಲ್ಲಿಂದ ಪೋಲೆಂಡ್‌ನ ಗಡಿ ತನಿಖಾ ಠಾಣೆಗೆ ಕರೆದೊಯ್ಯ-ಲಾಗುತ್ತದೆ. ಬಳಿಕ ಪೋಲೆಂಡ್‌ನಿಂದ ವಿಮಾನಗಳ ಮೂಲಕ ಸ್ಥಳಾಂತರಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

45 ಮಂದಿ ವಾಪಸ್: ಉಕ್ರೇನ್‌ನಲ್ಲಿ ಸಿಲುಕಿದ್ದ ಭಾರತೀಯರಿದ್ದ ಐದು ವಿಮಾನಗಳು ಭಾನುವಾರ ಮತ್ತು ಸೋಮವಾರ ಮುಂಬೈ, ಮತ್ತು ದೆಹಲಿಗೆ ಬಂದಿಳಿದಿವೆ. ಅವುಗಳ ಮೂಲಕ ಕರ್ನಾಟಕದ 45 ಜನರು ವಾಪಸಾಗಿದ್ದಾರೆ ಎಂದು ವಿಪತ್ತು ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

‘ಉಕ್ರೇನ್‌ನಿಂದ ಮರಳಿದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ವ್ಯವಸ್ಥೆ’

ಪ್ರಜಾವಾಣಿ ವಾರ್ತೆ


ಅಶ್ವತ್ಥನಾರಾಯಣ

ಬೆಂಗಳೂರು: ‘ಉಕ್ರೇನ್‌ನಿಂದ ರಾಜ್ಯಕ್ಕೆ ಮರಳುತ್ತಿರುವ ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಮುಂದುವರಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರದ ಮಟ್ಟದಲ್ಲಿ ಮಾತುಕತೆ ನಡೆಸಿ, ವ್ಯವಸ್ಥೆ ಕಲ್ಪಿಸಲು ಪ್ರಯತ್ನಿಸಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಉಕ್ರೇನ್‌ನಿಂದ ಮರಳಿರುವ ವಿದ್ಯಾರ್ಥಿಗಳಿಗೆ ಎಂಜಿನಿಯರಿಂಗ್ ಮತ್ತು ಪದವಿ ಶಿಕ್ಷಣ ವ್ಯವಸ್ಥೆ ಮಾಡಲು ಯಾವ ತೊಂದರೆಯೂ ಇಲ್ಲ. ಆದರೆ, ಅಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿ-ದ್ದವರಿಗೆ ಇಲ್ಲಿ ವ್ಯವಸ್ಥೆ ಕಲ್ಪಿಸಲು ಕೆಲವು ಮಿತಿಗಳಿವೆ’ ಎಂದರು.

‘ಈ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಗಂಭೀರವಾಗಿ ಚಿಂತಿಸುತ್ತಿದ್ದು, ಕೆಲವೇ ದಿನಗಳಲ್ಲಿ ಮಾತುಕತೆ ಪ್ರಕ್ರಿಯೆ ಆರಂಭಿಸಲಾಗುವುದು. ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡ ಈ ವಿದ್ಯಾರ್ಥಿಗಳ ಬಗ್ಗೆ ಕಳಕಳಿ ಹೊಂದಿದ್ದಾರೆ’ ಎಂದರು.

ಹವಾಮಾನ ಬದಲಾವಣೆಯಿಂದ ಭಾರತಕ್ಕೆ ಭಾರಿ ಹೊಡೆತ: ಐಪಿಸಿಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಭಿವೃದ್ಧಿ ಹೆಸರಲ್ಲಿ ಮನುಷ್ಯ ನಿರ್ಮಿತ ಹವಾಮಾನ ಬದಲಾವಣೆಯಿಂದ ಮುಂದಿನ ದಿನಗಳಲ್ಲಿ ಭಾರತಕ್ಕೆ ಕುಡಿಯುವ ನೀರಿನ ಸಮಸ್ಯೆ ಸಹಿತ ಭಾರಿ ಅನಾಹುತ ಎದುರಾಗಲಿದೆ ಎಂದು ಹವಾಮಾನ ಬದಲಾವಣೆ ಮೇಲಿನ ಅಂತರಸರ್ಕಾರ ಮಂಡಳಿ (ಐಪಿಸಿಸಿ) ಎಚ್ಚರಿಸಿದೆ.

ಐಪಿಸಿಸಿಯ ಇತ್ತೀಚಿನ ವರದಿಯಲ್ಲಿ ಇದನ್ನು ತಿಳಿಸಲಾಗಿದ್ದು, ತನ್ನ ಎಚ್ಚರಿಕೆಯನ್ನು ಪುಷ್ಟೀಕರಿಸುವುದಕ್ಕೆ ಬೆಂಗಳೂರಿನಲ್ಲಿ ಅವಸಾನಗೊಂಡಿರುವ ಕೆರೆಗಳು ಮತ್ತು ಇದೀಗ ದೂರದಿಂದ ತರುವ ನೀರಿಗೆ ಅವಲಂಬಿತವಾಗಿರುವ ಅಂಶವನ್ನು ಉದಾಹರಣೆಯಾಗಿ ನೀಡಿದೆ. ಮುಂದಿನ ಎರಡು ದಶಕಗಳಲ್ಲಿ ಜಾಗತಿಕ ತಾಪಮಾನ 1.5 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಲಿದೆ ಎಂದು ವರದಿಯಲ್ಲಿ ಎಚ್ಚರಿಸಲಾಗಿದೆ.

ಹವಾಮಾನ ಬದಲಾವಣೆ ವಿಚಾರದಲ್ಲಿ ಸರ್ಕಾರಗಳು ಕ್ರಮ ಕೈಗೊಳ್ಳದೆ ಇರುವುದಕ್ಕೆ ನೀಡಲಾಗಿರುವ ಕಠಿಣ ಎಚ್ಚರಿಕೆಯೇ ಈ ವರದಿಯಲ್ಲಿ ಕಂಡುಕೊಂಡು ಅಂಶವಾಗಿದೆ ಎಂದು ಐಪಿಸಿಸಿ ಮುಖ್ಯಸ್ಥ ಹೊಯೆಸಂಗ್ ಲೀ ಹೇಳಿದ್ದಾರೆ.

ಗ್ರೀನ್‌ಪೀಸ್ ಎಚ್ಚರಿಕೆ: ಐಪಿಸಿಸಿಯ ಈ ಎಚ್ಚರಿಕೆಯ ಬಳಿಕವಾದರೂ ಹವಾಮಾನ ಬದಲಾವಣೆ ವಿಚಾರವನ್ನು ಮಾನವ ಹಕ್ಕು ವಿಚಾರವಾಗಿ ಪರಿಗಣಿಸಬೇಕು ಎಂದು ಗ್ರೀನ್‌ಪೀಸ್ ಸಂಘಟನೆ ಒತ್ತಾಯಿಸಿದೆ.


ಮೊಹಾಲಿ ಟೆಸ್ಟ್: ಭಾರತದ ಬ್ಯಾಟಿಂಗ್ ಕ್ರಮಾಂಕದಲ್ಲಿ ಹೊಸ ಪ್ರಯೋಗ ಸಾಧ್ಯತೆ

ಮೂರನೇ ಕ್ರಮಾಂಕಕ್ಕೆ ಗಿಲ್?

ನವದೆಹಲಿ (ಪಿಟಿಐ): ಭಾರತ ಟೆಸ್ಟ್ ತಂಡದ ನಾಯಕರಾದ ನಂತರ ಮೊದಲ ಸರಣಿ ಆಡಲಿರುವ ರೋಹಿತ್ ಶರ್ಮಾ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ಪಡೆಯನ್ನು ಬಲಿಷ್ಠಗೊಳಿಸುವತ್ತ ಚಿತ್ತ ನೆಟ್ಟಿದ್ದಾರೆ.

ಇದೇ 3ರಿಂದ ಮೊಹಾಲಿಯಲ್ಲಿ ನಡೆಯಲಿರುವ ಶ್ರೀಲಂಕಾ ಎದುರಿನ ಮೊದಲ ಟೆಸ್ಟ್‌ನಲ್ಲಿ ರೋಹಿತ್ ಮತ್ತು ಮಯಂಕ್ ಅಗರವಾಲ್ ಇನಿಂಗ್ಸ್ ಆರಂಭಿಸುವುದು ಖಚಿತ. ಆದರೆ, ಅನುಭವಿ ಬ್ಯಾಟರ್‌ಗಳಾದ ಚೇತೇಶ್ವರ್ ಪೂಜಾರ ಮತ್ತು ಅಜಿಂಕ್ಯ ರಹಾನೆ ಅವರು ಸ್ಥಾನ ಕಳೆದುಕೊಳ್ಳುವುದು ಬಹುತೇಕ ಖಚಿತವಾಗಿದೆ. ಆದ್ದರಿಂದ ಮೂರನೇ ಕ್ರಮಾಂಕದಲ್ಲಿ ಪಂಜಾಬ್ ಬ್ಯಾಟರ್ ಶುಭಮನ್ ಗಿಲ್ ಮತ್ತು ನಾಲ್ಕನೇ ಸ್ಥಾನದಲ್ಲಿ ವಿರಾಟ್ ಕೊಹ್ಲಿ ಬ್ಯಾಟಿಂಗ್‌ಗೆ ಬರುವ ಸಾಧ್ಯತೆ ಇದೆ.

ಐದು ಮತ್ತು ಆರನೇ ಕ್ರಮಾಂಕಗಳಲ್ಲಿ ಕ್ರಮವಾಗಿ ರಿಷಭ್ ಪಂತ್ ಮತ್ತು ಹನುಮವಿಹಾರಿ ಕಣಕ್ಕಿಳಿಯುವರು. ಏಳನೇ ಸ್ಥಾನದಲ್ಲಿ ರವೀಂದ್ರ ಜಡೇಜ ಭರವಸೆಯ ಆಟಗಾರನಾಗಿದ್ದಾರೆ. ಆಲ್‌ರೌಂಡರ್ ಆರ್. ಅಶ್ವಿನ್ ಫಿಟ್‌ನೆಸ್ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು ಮರಳಿದರೆ ಬ್ಯಾಟಿಂಗ್ ಬಲ ವರ್ಧಿಸಲಿದೆ. ಅವರು ಅಲಭ್ಯರಾದರೆ, ಮತ್ತೊಬ್ಬ ಆಲ್‌ರೌಂಡರ್ ಜಯಂತ್ ಯಾದವ್ ಕಣಕ್ಕಿಳಿಯಬಹುದು.



ಶುಭಮನ್ ಗಿಲ್– ಪಿಟಿಐ ಚಿತ್ರ

'ಮೂರನೇ ಕ್ರಮಾಂಕದಲ್ಲಿ ಆಡಲು ಗಿಲ್ ಸಮರ್ಥ ಆಟಗಾರ. ಈ ಹಿಂದೆ ಅವರು ಇನಿಂಗ್ಸ್ ಆರಂಭಿಸಿದ್ದಾರೆ ಆದರೆ, ರೋಹಿತ್ ಮತ್ತು ಮಯಂಕ್ ಇರುವುದರಿಂದ ಗಿಲ್ ಮೂರನೇ ಸ್ಥಾನದಲ್ಲಿ ಆಡುವುದು ಸೂಕ್ತ. ಗಿಲ್ ಭಾರತ ಎ ತಂಡದಲ್ಲಿದ್ದಾಗ ಮಧ್ಯಮಕ್ರಮಾಂಕದಲ್ಲಿ ಒಳ್ಳೆಯ ದಾಖಲೆ ಹೊಂದಿದ್ದಾರೆ. ವೆಸ್ಟ್ ಇಂಡೀಸ್ ಎ ವಿರುದ್ಧ ಕೆರಿಬಿಯನ್ ನೆಲದಲ್ಲಿಯೇ ದ್ವಿಶತಕ ಬಾರಿಸಿದ್ದರು' ಎಂದು ಭಾರತ ತಂಡದ ಮಾಜಿ ಆಟಗಾರ ಮತ್ತು ಆಯ್ಕೆ ಸಮಿತಿ ಮಾಜಿ ಸದಸ್ಯ ದೇವಾಂಗ್ ಗಾಂಧಿ ಅಭಿಪ್ರಾಯಪಟ್ಟಿದ್ದಾರೆ.

ಮೊಹಾಲಿಯಲ್ಲಿ ಅಭ್ಯಾಸ: 100ನೇ ಟೆಸ್ಟ್ ಪಂದ್ಯ ಆಡಲಿರುವ ವಿರಾಟ್ ಭಾನುವಾರದಿಂದಲೇ ಮೊಹಾಲಿಯ ಪಂಜಾಬ್ ಕ್ರಿಕೆಟ್ ಸಂಸ್ಥೆಯ ನೆಟ್ಸ್‌ನಲ್ಲಿ ಅಭ್ಯಾಸ ಆರಂಭಿಸಿದ್ದಾರೆ. ಶ್ರೀಲಂಕಾ ಎದುರು ನಡೆದ ಟಿ20 ಸರಣಿಯಲ್ಲಿ ಅವರು ಆಡಿರಲಿಲ್ಲ.

ಸಂಭವನೀಯ ತಂಡ: ರೋಹಿತ್ ಶರ್ಮಾ (ನಾಯಕ), ಮಯಂಕ್ ಅಗರ ವಾಲ್, ಶುಭಮನ್ ಗಿಲ್, ವಿರಾಟ್ ಕೊಹ್ಲಿ, ರಿಷಭ್ ಪಂತ್ (ವಿಕೆಟ್‌ಕೀಪರ್), ಹನುಮವಿಹಾರಿ, ರವೀಂದ್ರ ಜಡೇಜ, ಆರ್. ಅಶ್ವಿನ್ (ಫಿಟ್‌ನೆಸ್ ಟೆಸ್ಟ್), ಜಯಂತ್ ಯಾದವ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್.

ಪಂಜಾಬ್ ಕಿಂಗ್ಸ್‌ಗೆ ಮಯಂಕ್ ನಾಯಕತ್ವ

ನವದೆಹಲಿ (ಪಿಟಿಐ): ಬ್ಯಾಟರ್ ಮಯಂಕ್ ಅಗರವಾಲ್ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪಂಜಾಬ್ ಕಿಂಗ್ಸ್ ತಂಡಕ್ಕೆ ನಾಯಕರಾಗಿ ನೇಮಕವಾಗಿದ್ದಾರೆ.


ಮಯಂಕ್ ಅಗರವಾಲ್

ಬೆಂಗಳೂರಿನ ಮಯಂಕ್ ಅವರ ನೇಮಕದ ಕುರಿತು ಈಚೆಗೆ ಮಾತುಕತೆ ನಡೆದಿದ್ದವು. ಫ್ರ್ಯಾಂಚೈಸಿಯು ಸೋಮವಾರ ಅಧಿಕೃತವಾಗಿ ಈ ವಿಷಯವನ್ನು ಘೋಷಿಸಿದೆ.

'2018ರಿಂದ ಕಿಂಗ್ಸ್ ತಂಡದಲ್ಲಿದ್ದೇನೆ. ಈ ಬಳಗವನ್ನು ಪ್ರತಿನಿಧಿಸುವುದು ಹೆಮ್ಮೆಯ ವಿಷಯ. ತಂಡವನ್ನು ಮುನ್ನಡೆಸುವ ಅವಕಾಶ ಸಿಕ್ಕಿರುವುದು ಸಂತಸ ತಂದಿದೆ' ಎಂದು ಮಯಂಕ್ ತಿಳಿಸಿದ್ದಾರೆ.

ಈಚೆಗೆ ನಡೆದ ಮೆಗಾ ಹರಾಜು ಪ್ರಕ್ರಿಯೆಗೂ ಮುನ್ನ ತಂಡವು ಮಯಂಕ್ ಮತ್ತು ಅರ್ಷದೀಪ್ ಸಿಂಗ್ ಅವರಿಬ್ಬರನ್ನು ಬಿಟ್ಟು ಉಳಿದ ಆಟಗಾರರನ್ನು ಬಿಡುಗಡೆ ಮಾಡಿತ್ತು.

'ಕಳೆದೆರಡು ವರ್ಷಗಳಿಂದ ಹಂಗಾಮಿ ನಾಯಕತ್ವ ವಹಿಸಿರುವ ಅನುಭವ ಮಯಂಕ್ ಅವರಿಗೆ ಇದೆ. ಈಚೆಗೆ ಹರಾಜು ಪ್ರಕ್ರಿಯೆಯಲ್ಲಿ ಆಯ್ಕೆ ಮಾಡಿರುವ ಹೊಸ ಬಳಗಕ್ಕೆ ಮಯಂಕ್ ಸಮರ್ಥ ನಾಯಕತ್ವ ಒದಗಿಸುವರು' ಎಂದು ಮುಖ್ಯ ಕೋಚ್ ಅನಿಲ್ ಕುಂಬ್ಳೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ರಾಷ್ಟ್ರೀಯ ಅಂಧ ಮಹಿಳೆಯರ ಟಿ20 ಕ್ರಿಕೆಟ್ ಟೂರ್ನಿಯ ಟ್ರೋಫಿ ಅನಾವರಣ ಕಾರ್ಯಕ್ರಮದಲ್ಲಿ (ಎಡದಿಂದ) ಕೊಟಕ್ ಮಹೀಂದ್ರಾ ಬ್ಯಾಂಕ್‌ನ ಸಿಎಸ್‌ಆರ್ ವಿಭಾಗದ ಮುಖ್ಯಸ್ಥೆ ಕೆ. ಪಲ್ಲವಿ ರಾಜ್, ಕೆಎಸ್‌ಸಿಎ ಮಾಜಿ ಕಾರ್ಯದರ್ಶಿ ಸುಧಾಕರ್ ರಾವ್, ಕಮ್ಯುನಿಟಿ ಇನ್ವೆಸ್ಟ್‌ಮೆಂಟ್‌ನ ಉಪಾಧ್ಯಕ್ಷ ಅನಿಲ್ ಪರಮಾರ್, ಇಂಡಸ್‌ಇಂಡ್ ಬ್ಯಾಂಕ್‌ನ ಸಿಎಸ್‌ಆರ್ ಮಟಿಲ್ಡಾ ಲೋಬೊ, ರಾಷ್ಟ್ರೀಯ ಅಂಧರ ಕ್ರಿಕೆಟ್ ಸಂಸ್ಥೆಯ (ಸಿಎಬಿಐ) ಅಧ್ಯಕ್ಷ ಮಹಾಂತೇಶ ಜಿ. ಕಿವಡಸಣ್ಣವರ್, ಡಾ. ಸುಭಾಷ್ ಮಹಾಜನ್, ನೈಕ್ ಸಂಸ್ಥೆಯ ಯೋಗಾನಂದ ಕೋಟೆ, ನಟ ಸಂಚಿತ ಸಂಜೀವ್, ರಾಜ್ಯ ಸರ್ಕಾರದ ಅಂಗವಿಕಲ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ನಿರ್ದೇಶಕಿ ಕೆ.ಎಸ್.ಲಲಿತಾಕುಮಾರಿ, ಸಿಎಬಿಐ ಪ್ರಧಾನ ಕಾರ್ಯದರ್ಶಿ ಇ. ಜಾನ್ ಡೇವಿಡ್ ಉಪಸ್ಥಿತರಿದ್ದರು.

ಪ್ರಶಸ್ತಿಗೆ 14 ತಂಡಗಳ ಪೈಪೋಟಿ

ರಾಷ್ಟ್ರೀಯ ಅಂಧ ಮಹಿಳೆಯರ ಟಿ20 ಟೂರ್ನಿ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಧ ಮಹಿಳೆಯರಿಗಾಗಿ ರಾಷ್ಟ್ರೀಯ ಟ್ವೆಂಟಿ–20 ಕ್ರಿಕೆಟ್ ಟೂರ್ನಿಯು ಉದ್ಯಾನನಗರಿಯಲ್ಲಿ ಮಂಗಳವಾರದಿಂದ ನಡೆಯಲಿದ್ದು 14 ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ.

ನಗರದಲ್ಲಿ ಸೋಮವಾರ ನಡೆದ ಅಂಧರ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನದಲ್ಲಿ ಈ ಕುರಿತು ಪ್ರಕಟಿಸಿ ಟೂರ್ನಿಯ ಟ್ರೋಫಿಗಳನ್ನು ಅನಾವರಣ ಮಾಡಲಾಯಿತು.

ಸಮರ್ಥನಂ ಸಂಸ್ಥೆಯ ಬೆಳ್ಳಿಹಬ್ಬದ ಸಂಭ್ರಮಾಚರಣೆಯನ್ನು ಮಾಡುತ್ತಿದ್ದು, ಈ ಹಿನ್ನೆಲೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಅಂಧ ಮಹಿಳೆಯರ ರಾಷ್ಟ್ರೀಯ ಟಿ20 ಟೂರ್ನಿ ಅದರಲ್ಲೊಂದು. ಮಾರ್ಚ್ 1ರಿಂದ ಮಾರ್ಚ್ 5ರವರೆಗೆ ಬೆಂಗಳೂರಿನ ಮೂರು ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಡೆಯಲಿವೆ. 14 ರಾಜ್ಯಗಳು ಪಾಲ್ಗೊಳ್ಳಲಿದ್ದು, 224 ಆಟಗಾರ್ತಿಯರು ಪಾಲ್ಗೊಳ್ಳಲಿದ್ದಾರೆ. ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ರಾಜೇಶ್ವರಿ ಗಾಯಕವಾಡ್ ಅವರು ಟೂರ್ನಿಯ ರಾಯಭಾರಿಯಾಗಿದ್ದಾರೆ.

ಟೂರ್ನಿಯಲ್ಲಿ ಆಡಲಿರುವ ತಂಡಗಳು: ಕರ್ನಾಟಕ, ಒಡಿಶಾ, ರಾಜಸ್ಥಾನ್, ಜಾರ್ಖಂಡ್, ಆಂಧ್ರಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶ, ಕೇರಳ, ಗುಜರಾತ್, ದೆಹಲಿ, ಚಂಡೀಗಡ, ತಮಿಳುನಾಡು, ಹಾಗೂ ಪಶ್ಚಿಮ ಬಂಗಾಳ.

ಟೂರ್ನಿ ನಡೆಯುವ ಕ್ರೀಡಾಂಗಣಗಳು: ಸಚಿನ್ ತೆಂಡೂಲ್ಕರ್ ಟರ್ಫ್ ಕ್ರೀಡಾಂಗಣ, ಚಂದಾಪುರ, ಅಲ್ಟಾಯಿರ್ ಸ್ಪೋರ್ಟ್ಸ್ ದೊಮ್ಮಸಂದ್ರ ಮತ್ತು ನಿರ್ಮಾಣ್ ಕ್ರಿಕೆಟ್ ಚಂದಾಪುರ.

ಬೆಳಿಗ್ಗೆ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಅಂಧರ ಕ್ರಿಕೆಟ್ ರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ ನೀಡಿದರು. ಮಾರ್ಚ್ 13ರಿಂದ ಯುಎಇನಲ್ಲಿ ಬಾಂಗ್ಲಾದೇಶ ಹಾಗೂ ಪಾಕಿಸ್ತಾನ ತಂಡಗಳು ಎದುರು ನಡೆಯುವ ಅಂಧರ ಟಿ20 ತ್ರಿಕೋನ ಕ್ರಿಕೆಟ್ ಸರಣಿಯಲ್ಲಿ ಪಾಲ್ಗೊಳ್ಳಲಿರುವ ಭಾರತ ಪುರುಷರ ತಂಡಕ್ಕೆ ರಾಜ್ಯಪಾಲರು ಶುಭ ಕೋರಿದರು. ಭಾರತ ತಂಡದ ಮಾಜಿ ಆಟಗಾರ ಸೈಯದ್ ಕೀರ್ಮಾನಿ, ತಂಡದ ಆಟಗಾರರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಂಜೆ ನೀಡಿದ ಕಾರ್ಯಕ್ರಮದಲ್ಲಿ ಮಹಿಳಾ ಟೂರ್ನಿಗೆ ಚಾಲನೆ ನೀಡಲಾಯಿತು.

ಐಎಸ್‌ಎಲ್: ಡ್ರಾ ಪಂದ್ಯದಲ್ಲಿ ಈಸ್ಟ್ ಬೆಂಗಾಲ್ ತಂಡ

ವಾಸ್ಕೊ: ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ಮತ್ತು ಈಸ್ಟ್ ಬೆಂಗಾಲ್ ತಂಡಗಳು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಸೋಮವಾರ 1–1ರ ಸಮಬಲ ಸಾಧಿಸಿದವು.

ತಿಲಕ್ ಮೈದಾನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ನಾರ್ತ್ ಈಸ್ಟ್ ತಂಡಕ್ಕೆ 45ನೇ ನಿಮಿಷದಲ್ಲಿ ಗೋಲು ಗಳಿಸಿದ ಮಾರ್ಕೊ ಸಹನೆಕ್ ಮುನ್ನಡೆ ತಂದುಕೊಟ್ಟರು. 55ನೇ ನಿಮಿಷದಲ್ಲಿ ಈಸ್ಟ್ ಬೆಂಗಾಲ್‌ನ ಆಂಟೊನಿಯೊ ಪೆರೊಸೆವಿಚ್ ಸಮಬಲದ ಗೋಲು ಹೊಡೆದರು.

ಹೈದರಾಬಾದ್– ಜಮ್ಷೆಡ್‌ಪುರ ಸೆಣಸು: ಬ್ಯಾಂಬೊಲಿಮ್‌ನಲ್ಲಿ ಮಂಗಳವಾರ ನಡೆಯಲಿರುವ ಪಂದ್ಯದಲ್ಲಿ ಹೈದರಾಬಾದ್ ಎಫ್‌ಸಿ ಮತ್ತು ಜಮ್ಷೆಡ್‌ಪುರ ಎಫ್‌ಸಿ ತಂಡಗಳು 'ಲೀಗ್ ವಿಜೇತ' ಟ್ರೋಫಿಗಾಗಿ ಪೈಪೋಟಿ ನಡೆಸಲಿವೆ.


ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ವಿಕ್ರಂ ಕ್ರಿಕೆಟ್ ಕ್ಲಬ್ ತಂಡ: ನಿಂತವರು: (ಎಡದಿಂದ) ಭಾರ್ಗವ್ ಆರ್, ರೌನಕಗ್ ಎಸ್, ಲೋಹಿತ್ ಆರ್, ಅಶ್ವಿನ್ ಎಸ್, ಧವಳ್ ಪಟೇಲ್, ಆಕಾಶ್ ರೆಡ್ಡಿ, ಕಾರ್ತಿಕ್, ಮಾನವ್ ಭಗತ್, ಸಂತೋಷ್ ಎಂ, ಕೃತಿಕ್ ಆರ್, ಹರೀಶ್ ಆರ್, ನಂದೀಶ್, ಭರತ್ ಬಿ. ಬಡಿಗೇರ್. ಕುಳಿತವರು: ಪವನ್ ಕುಮಾರ್, ಬೆನೆಡಿಕ್ಟ್ ರಾಜ್, ರೋಹಿತ್ ಎಸ್, ಸತ್ಯಕುಮಾರ್ ಪಿ. (ಕ್ಲಬ್ ಅಧ್ಯಕ್ಷ), ಪ್ರಣವ್ ಎಸ್, ಪ್ರವೀಣ್ ಎಸ್, ದೀಪಕ್ ರೆಡ್ಡಿ ಮತ್ತು ಗಣೇಶ್ ಪಿ.

ವಿಕ್ರಂ ಕ್ರಿಕೆಟ್ ಕ್ಲಬ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆನೆಡಿಕ್ಟ್ ರಾಜ್ ಬಡಿಗೇರ್ (20ಕ್ಕೆ 3) ಮತ್ತು ಭರತ್ ಬಿ. ಬಡಿಗೇರ್ (31ಕ್ಕೆ 3) ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ವಿಕ್ರಂ ಕ್ರಿಕೆಟ್ ಕ್ಲಬ್ ತಂಡವು ಮೆಟ್ರೊ ಶೀಲ್ಡ್‌ಗಾಗಿ ನಡೆದ ಕೆಎಸ್‌ಸಿಎ ಗುಂಪು 1ರಿಂದ ನಾಲ್ಕನೇ ಡಿವಿಷನ್ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತು.

ಆಲೂರು ಮೂರನೇ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಫೈನಲ್ ಹಣಾಹಣಿಯಲ್ಲಿ ವಿಕ್ರಂ ಕ್ಲಬ್ ತಂಡವು 11 ರನ್‌ಗಳಿಂದ ಕೆಜಿಎಫ್‌ನ ಫ್ರೆಂಡ್ಸ್ ಯೂನಿಯನ್ ಕ್ರಿಕೆಟರ್ಸ್ ತಂಡಕ್ಕೆ ಸೋಲುಣಿಸಿತು.

ಮೊದಲು ಬ್ಯಾಟ್ ಮಾಡಿದ ವಿಕ್ರಂ ಕ್ಲಬ್, 45.1 ಓವರ್‌ಗಳಲ್ಲಿ 197 ರನ್ ಗಳಿಸಿ ಎಲ್ಲ ವಿಕೆಟ್ ಒಪ್ಪಿಸಿತು. ಮಾನವ್ ಭಗತ್ (55) ಅರ್ಧಶತಕ ಸಿಡಿಸಿದರು. ಬ್ಯಾಟಿಂಗ್‌ನಲ್ಲಿಯೂ ಮಿಂಚಿದ ಭರತ್ 31 ರನ್‌ಗಳ ಕಾಣಿಕೆ ನೀಡಿದರು. ಎದುರಾಳಿ ತಂಡದ ಯತೀಶ್ ಕುಮಾರ್ ಬಿ.ಆರ್. (32ಕ್ಕೆ 5) ಉತ್ತಮ ಬೌಲಿಂಗ್ ಮಾಡಿದರು.

ಗುರಿ ಬೆನ್ನತ್ತಿದ ಫ್ರೆಂಡ್ಸ್ ಯೂನಿಯನ್ 46 ಓವರ್‌ನಲ್ಲಿ 186ಕ್ಕೆ ಎಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿತು.

ಸಂಕ್ಷಿಪ್ತ ಸ್ಕೋರು: ವಿಕ್ರಂ ಕ್ರಿಕೆಟ್ ಕ್ಲಬ್: 45.1 ಓವರ್‌ಗಳಲ್ಲಿ 197 (ಪವನ್ ಕುಮಾರ್ ಕೆ. 52, ರೋಹಿತ್ ಎಸ್. 31, ಭರತ್ ಬಿ. ಬಡಿಗೇರ 31, ಮಾನವ್ ಭಗತ್ 55; ಯತೀಶ್ ಕುಮಾರ್ ಬಿ.ಆರ್. 32ಕ್ಕೆ 5). ಫ್ರೆಂಡ್ಸ್ ಯೂನಿಯನ್ ಕ್ರಿಕೆಟರ್ಸ್: 45.5 ಓವರ್‌ಗಳಲ್ಲಿ 186 (ಅರ್ಜುನ್ ಕೆ.ವೈ. 20, ಶೈಲೇಂದ್ರ ಸಿಂಗ್ 59, ಯತೀಶ್ ಕುಮಾರ್ ಬಿ.ಆರ್. 63; ಭರತ್ ಬಿ. ಬಡಿಗೇರ್ 31ಕ್ಕೆ 3, ಬೆನೆಡಿಕ್ಟ್ ರಾಜ್ ಬಡಿಗೇರ್ 20ಕ್ಕೆ 3, ಗಣೇಶ್ ಪಿ. 22ಕ್ಕೆ 2). ಫಲಿತಾಂಶ: ವಿಕ್ರಂ ಕ್ರಿಕೆಟ್ ಕ್ಲಬ್‌ಗೆ 11 ರನ್‌ಗಳ ಗೆಲುವು ಮತ್ತು ಪ್ರಶಸ್ತಿ.

ರಾಷ್ಟ್ರೀಯ ಬಾಲ್ ಬ್ಯಾಡ್ಮಿಂಟನ್ ನಾಳೆಯಿಂದ

ಮೂಡುಬಿದಿರೆ: 'ಇಲ್ಲಿನ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಹಾಗೂ ಕರ್ನಾಟಕ ಬಾಲ್ ಬ್ಯಾಡ್ಮಿಂಟನ್ ಸಂಸ್ಥೆಯ ಆಶ್ರಯದಲ್ಲಿ ಮಾರ್ಚ್ 2ರಿಂದ 6ರವರೆಗೆ 67ನೇ ರಾಷ್ಟ್ರೀಯ ಸೀನಿಯರ್ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್ ಷಿಪ್ ನಡೆಯಲಿದೆ' ಎಂದು ಪ್ರತಿಷ್ಠಾನದ ಅಧ್ಯಕ್ಷ ಡಾ.ಮೋಹನ್ ಆಳ್ವ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'29 ರಾಜ್ಯಗಳಿಂದ ಹಾಗೂ ಸಾರ್ವಜನಿಕ ವಲಯಗಳಿಂದ ಒಟ್ಟು 700 ಕ್ರೀಡಾಪಟುಗಳು ಹಾಗೂ 500 ಕ್ರೀಡಾಧಿಕಾರಿಗಳು ಕೂಟದಲ್ಲಿ ಭಾಗವಹಿಸಲಿದ್ದಾರೆ. ಭಾರತೀಯ ರೈಲ್ವೆ, ಮೇಜರ್ ಪೋರ್ಟ್ಸ್, ಕೆನರಾ ಬ್ಯಾಂಕ್, ಇಸ್ರೊ, ಡಿ.ಎ.ಇ. ತಂಡಗಳು ಭಾಗವಹಿಸಲಿವೆ. ಆಳ್ವಾಸ್ ವಿದ್ಯಾಗಿರಿ ಕ್ಯಾಂಪಸ್‌ನಲ್ಲಿ ಟೂರ್ನಿ ನಡೆಯಲಿದೆ' ಎಂದು ಮಾಹಿತಿ ನೀಡಿದರು.

ವಿಂಡೀಸ್ ಕ್ರಿಕೆಟಿಗ ರಾಮದಿನ್ ನಿಧನ

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ವೆಸ್ಟ್ ಇಂಡೀಸ್ ಕ್ರಿಕೆಟ್‌ನ ದಿಗ್ಗಜ ಸ್ಪಿನ್ ಬೌಲರ್ ಸೊನಿ ರಾಮದಿನ್ (92) ಭಾನುವಾರ ನಿಧನರಾದರು.

1950ರಲ್ಲಿ ಇಂಗ್ಲೆಂಡ್‌ನಲ್ಲಿ ಮೊದಲ ಬಾರಿ ಟೆಸ್ಟ್ ಸರಣಿ ಜಯಿಸಿದ್ದ ವೆಸ್ಟ್ ಇಂಡೀಸ್ ತಂಡದಲ್ಲಿ ರಾಮದಿನ್ ಆಡಿದ್ದರು. ವರು ಓಲ್ಡ್ ಟ್ರಾಫರ್ಡ್‌ನಲ್ಲಿ ಟೆಸ್ಟ್ ಪದಾರ್ಪಣೆ ಮಾಡಿದ್ದರು. ಒಟ್ಟು 43 ಟೆಸ್ಟ್‌ಗಳಲ್ಲಿ ಆಡಿದ ಅವರು 158 ವಿಕೆಟ್‌ಗಳನ್ನು ಗಳಿಸಿದ್ದರು.

'ವೆಸ್ಟ್ ಇಂಡೀಸ್ ಕ್ರಿಕೆಟ್‌ನ ದಿಗ್ಗಜರಲ್ಲಿ ಒಬ್ಬರಾಗಿರುವ ರಾಮದಿನ್ ನಿಧನರಾಗಿದ್ದಾರೆ. ಈ ಸಂದರ್ಭದಲ್ಲಿ ಅವರ ಕುಟುಂಬಕ್ಕೆ ಬೆಂಬಲ ವ್ಯಕ್ತಪಡಿಸುತ್ತೇವೆ' ಎಂದು ಕ್ರಿಕೆಟ್ ವೆಸ್ಟ್ ಇಂಡೀಸ್ ತಿಳಿಸಿದೆ.


ಸೋನಿ ರಾಮದಿನ್

72 ವರ್ಷಗಳ ಹಿಂದೆ ಲಾರ್ಡ್ಸ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಮೊದಲ ಬಾರಿ ಟೆಸ್ಟ್ ಗೆದ್ದಾಗ ರಾಮದಿನ್ 152 ರನ್‌ಗಳಿಗೆ 11 ವಿಕೆಟ್ ಗಳಿಸಿದ್ದರು.

'ರಾಮದಿನ್ ಪ್ರತಿಭಾವಂತ ಮತ್ತು ಪರಿಣಾಮಕಾರಿ ಸ್ಪಿನ್ನರ್ ಆಗಿದ್ದರು' ಎಂದು ವಿಂಡೀಸ್ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ರಿಕಿ ಸ್ಕೆರಿಟ್ ಹೇಳಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕ್ರಿಕೆಟ್: ಸೋಲು ತಪ್ಪಿಸಿಕೊಳ್ಳಲು ಕಿವೀಸ್ ಹೋರಾಟ

ಕ್ರೈಸ್ಟ್‌ಚರ್ಚ್ (ಪಿಟಿಐ/ಎಎಫ್‌ಪಿ): ಕೈಲ್ ವೆರೆಯೆನ್ ಸುಂದರ ಶತಕದ ಬಲದಿಂದ ದಕ್ಷಿಣ ಆಫ್ರಿಕಾ ತಂಡವು ಹೆಗ್ಲಿ ಓವಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದಲ್ಲಿ ನ್ಯೂಜಿಲೆಂಡ್‌ಗೆ ಕಠಿಣ ಸವಾಲೊಡ್ಡಿದೆ.

427 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿರುವ ಕಿವೀಸ್ ತಂಡವು ಸೋಮವಾರ ನಾಲ್ಕನೇ ದಿನದಾಟದ ಮುಕ್ತಾಯಕ್ಕೆ 42 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 94 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ 364, ನ್ಯೂಜಿಲೆಂಡ್ 293, ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ: 100 ಓವರ್‌ಗಳಲ್ಲಿ 9ಕ್ಕೆ 354ಡಿಕ್ಲೇರ್ಡ್ (ವೆರೆಯೆನ್ ಔಟಾಗದೆ 136, ಮಲ್ಡರ್ 35, ಕಗಿಸೊ ರಬಾಡ 47, ಟಿಮ್ ಸೌಥಿ 90ಕ್ಕೆ2, ಮ್ಯಾಟ್ ಹೆನ್ರಿ 81ಕ್ಕೆ2, ಕೈಲ್ ಜೆಮಿಸನ್ 81ಕ್ಕೆ2, ನೀಲ್ ವಾಗ್ನರ್ 81ಕ್ಕೆ2) ನ್ಯೂಜಿಲೆಂಡ್: 42 ಓವರ್‌ಗಳಲ್ಲಿ 4ಕ್ಕೆ94 (ಡೆವೊನ್ ಕಾನ್ವೆ ಬ್ಯಾಟಿಂಗ್ 60, ಡೆರಿಲ್ ಮಿಚೆಲ್ 24, ಕಗಿಸೊ ರಬಾಡ 17ಕ್ಕೆ2, ಕೇಶವ್ ಮಹಾರಾಜ್ 32ಕ್ಕೆ2).

ರಷ್ಯಾ ವಿರುದ್ಧ ಒಲಿಂಪಿಕ್ ಸಮಿತಿ ಆಕ್ರೋಶ

ಜಿನಿವಾ (ಎಪಿ): ಉಕ್ರೇನ್ ಮೇಲೆ ಯುದ್ಧ ಸಾರಿರುವ ರಷ್ಯಾದ ವಿರುದ್ಧ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ತೀವ್ರ ಆಕ್ರೋಶವ್ಯಕ್ತಪಡಿಸಿದೆ.

ಕ್ರೀಡಾಕೂಟಗಳು ಮತ್ತು ಚಟುವಟಿಕೆಗಳಿಂದ ರಷ್ಯಾದ ಆಟಗಾರರು ಮತ್ತು ಅಧಿಕಾರಿಗಳನ್ನು ಕೈಬಿಡಬೇಕು ಎಂದು ಎಲ್ಲ ಕ್ರೀಡಾ ಫೆಡರೇಷನ್‌ಗಳಿಗೆ ಐಒಸಿ ಮನವಿ ಮಾಡಿದೆ.

'ಜಾಗತಿಕ ಕ್ರೀಡಾ ವಲಯದಲ್ಲಿ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡಬೇಕು. ಸ್ಪರ್ಧಾಳುಗಳ ಸುರಕ್ಷತೆಯೂ ಮುಖ್ಯ' ಎಂದು ಐಒಸಿ ತಿಳಿಸಿದೆ.

ಈ ನಿರ್ಣಯದ ಬೆನ್ನಲ್ಲಿಯೇ ಫಿಫಾ ಮಾರ್ಚ್ 24ರಂದು ನಡೆಯಲಿರುವ ವಿಶ್ವಕಪ್ ಅರ್ಹತಾ ಪ್ಲೇ ಆಫ್‌ನಿಂದ ರಷ್ಯಾ ತಂಡವನ್ನು ಕೈಬಿಟ್ಟಿದೆ.

ಐಒಸಿಯ ನಿರ್ಧಾರವು ಬೆಲಾರೂಸ್ ಅಥ್ಲೀಟ್‌ಗಳು ಮತ್ತು ಅಧಿಕಾರಿಗಳಿಗೂ ಅನ್ವಯಿಸಲಿದೆ. ಬೆಲಾರೂಸ್ ರಷ್ಯಾಗೆ ಬೆಂಬಲ ನೀಡುತ್ತಿದೆ. ರಷ್ಯನ್ ಸೇನೆಗೆ ನೆಲೆ ಒದಗಿಸಿದೆ. ಆದ್ದರಿಂದ ಬೆಲಾರೂಸ್ ಕೂಡ ಐಒಸಿ ಕೆಂಗಣ್ಣಿಗೆ ಗುರಿಯಾಗಿದೆ.

'ಬೀಜಿಂಗ್‌ನಲ್ಲಿ ನಡೆಯಲಿರುವ ಚಳಿಗಾಲದ ಪ್ಯಾರಾಲಿಂಪಿಕ್ಸ್‌ನಲ್ಲಿ ರಷ್ಯಾ ಮತ್ತು ಬೆಲಾರೂಸ್‌ನ ಅಥ್ಲೀಟ್‌ಗಳು ಭಾಗವಹಿಸಬಹುದು. ಆದರೆ, ತಮ್ಮ ದೇಶದ ಧ್ವಜ, ಚಿಹ್ನೆ ಅಥವಾ ರಾಷ್ಟ್ರ ಗೀತೆಯನ್ನು ಬಳಸುವಂತಿಲ್ಲ. ತಟಸ್ಥ ತಂಡವಾಗಿ ಪಾಲ್ಗೊಳ್ಳಬೇಕು' ಎಂದು ಸೂಚಿಸಲಾಗಿದೆ.

ಈಗಾಗಲೇ ಯುರೋಪಿನ ಕ್ರೀಡಾ ಫೆಡರೇಷನ್‌ಗಳು ರಷ್ಯಾದ ಎದುರಿನ ಎಲ್ಲ ಕ್ರೀಡಾ ಚಟುವಟಿಕೆಗಳಿಂದ ಹಿಂದೆ ಸರಿದಿವೆ. ರಷ್ಯಾ ವಿರುದ್ಧದ ಪಂದ್ಯಗಳಲ್ಲಿ ಭಾಗವಹಿಸಲು ನಿರಾಕರಿಸಿವೆ. ಮೇ ನಲ್ಲಿ ನಡೆಯಲಿರುವ ಪುರುಷರ ವಿಶ್ವ ಹಾಕಿ ಚಾಂಪಿಯನ್‌ಷಿಪ್‌ನಿಂದ ರಷ್ಯಾ ಮತ್ತು ಬೆಲಾರೂಸ್ ಹಾಕಿ ತಂಡವನ್ನು ನಿಷೇಧಿಸುವಂತೆ ಫಿನ್ಲೆಂಡ್ ಒತ್ತಾಯಿಸಿದೆ.

ಕತಾರ್‌ನಲ್ಲಿ ನ. 21ರಿಂದ ವಿಶ್ವಕಪ್ ಫುಟ್‌ಬಾಲ್ ಆರಂಭವಾಗಲಿದೆ. ಆ ಟೂರ್ನಿಯಿಂದಲೂ ರಷ್ಯಾ ಮತ್ತು ಬೆಲಾರೂಸ್ ತಂಡಗಳನ್ನು ನಿರ್ಬಂಧಿಸಬೇಕೆಂದು ಕೆಲವು ದೇಶಗಳ ಫೆಡರೇಷನ್‌ಗಳು ಒತ್ತಾಯಿಸಿವೆ.



ಹೋದ ವರ್ಷ ಪದ್ಮಶ್ರೀ ಪುರಸ್ಕೃತರಾಗಿರುವ ಒಲಿಂಪಿಯನ್ ಹಾಕಿಪಟು ಎಂ.ಪಿ. ಗಣೇಶ್ ಅವರನ್ನು ಭಾನುವಾರ ನಡೆದ ರಾಜ್ಯ ಹಾಕಿ ಸಂಸ್ಥೆಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸನ್ಮಾನಿಸಲಾಯಿತು. ಗಣೇಶ್ ಅವರ ಪತ್ನಿ ಪ್ರೇಮಾ ಇದ್ದಾರೆ.

ರಣಜಿ: ಪಿತೃವಿಯೋಗದ ದುಃಖದಲ್ಲೂ ವಿಷ್ಣು ಕಣಕ್ಕೆ

ವಡೋದರ (ಪಿಟಿಐ): ಬರೋಡಾ ಕ್ರಿಕೆಟ್ ತಂಡದ ಆಟಗಾರ ವಿಷ್ಣು ಸೋಳಂಕಿ ಇತ್ತೀಚೆಗಷ್ಟೇ ಪುತ್ರಿಯ ಸಾವಿನ ಶೋಕ ಅನುಭವಿಸಿದ್ದರು. ಇದೀಗ ಅವರಿಗೆ ಪಿತೃವಿಯೋಗದ ದುಃಖ ಅವರನ್ನು ಕಾಡಿದೆ.

ಭಾನುವಾರ ಅವರ ತಂದೆ ನಿಧನರಾಗಿದ್ದಾರೆ. ಆದರೆ ಎದೆಗುಂದದ ವಿಷ್ಣು ರಣಜಿ ಟ್ರೋಫಿ ಟೂರ್ನಿಯ ಮೂರನೇ ಪಂದ್ಯದಲ್ಲಿ ಆಡಲು ಸಿದ್ಧರಾಗಿದ್ದಾರೆ.

'ವಿಷ್ಣು ತಂದೆ ನಿಧನರಾಗಿದ್ದಾರೆ. ಆದರೆ, ವಿಷ್ಣು ಅವರು ವಡೋದರಕ್ಕೆ ಬರುತ್ತಿಲ್ಲ. ಮೂರನೇ ಪಂದ್ಯ ಆಡಲು ನಿರ್ಧರಿಸಿರುವ ಅವರು ಬಯೋಬಬಲ್ ತೊರೆದು ಬರುತ್ತಿಲ್ಲ' ಎಂದು ಬರೋಡಾ ಕ್ರಿಕೆಟ್ ಸಂಸ್ಥೆ ಕಾರ್ಯದರ್ಶಿ ಅಜಿತ್ ಲೆಲೆ ತಿಳಿಸಿದ್ದಾರೆ.

ಫೆಬ್ರುವರಿ 10ರಂದು ಅವರ ನವಜಾತ ಹೆಣ್ಣುಮಗು ಸಾವಿಗೀಡಾಯಿತು. ಆದರೆ ಈ ದುಃಖವನ್ನು ನುಂಗಿ ಕೊಂಡು ಟೂರ್ನಿಯ 2ನೇ ಪಂದ್ಯದಲ್ಲಿ ಆಡಿದ್ದ ವಿಷ್ಣು ಚಂಡೀಗಡ ತಂಡದ ಎದುರು ಶತಕ ಬಾರಿಸಿದ್ದರು. ಪಂದ್ಯದ ಕೊನೆಯ ದಿನವಾದ ಭಾನುವಾರ ತಂದೆಯ ನಿಧನದ ಸುದ್ದಿ ಅವರಿಗೆ ಸಿಕ್ಕಿತ್ತು.

ಕ್ರಾಸ್‌ಕಂಟ್ರಿ: ಎನ್‌ಎಂಎಎಂಐಟಿ, ಎಸ್‌ಡಿಎಂಸಿಇಟಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರಿನ ಎನ್‌ಎಂಎಎಂಐಟಿ ಮತ್ತು ಧಾರವಾಡದ ಎಸ್‌ಡಿಎಂಸಿಇಟಿ ತಂಡಗಳು ಇಲ್ಲಿಯ ವಿವೇಕಾನಂದ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆಶ್ರಯದಲ್ಲಿ ನಡೆದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳಾ ವಿಭಾಗದ ಪ್ರಶಸ್ತಿ ಗೆದ್ದುಕೊಂಡವು.

ಫಲಿತಾಂಶಗಳು: ತಂಡ ಪ್ರಶಸ್ತಿ: ಪುರುಷರು: ಎನ್‌ಎಂಎಎಂಐಟಿ ಮಂಗಳೂರು–1, ಎಸ್‌ಐಟಿ ಮಂಗಳೂರು–2, ಎಐಸಿಇಟಿ, ಮಂಗಳೂರು –3. **ಮಹಿಳೆಯರು:** ಎಸ್‌ಡಿಎಂಸಿಇಟಿ ಧಾರವಾಡ–1, ಎನ್‌ಐಎಂಎಎಂಐಟಿ, ಮಂಗಳೂರು–2, ಎಂವಿಜೆ ಎಂಜಿನಿಯರಿಂಗ್ ಕಾಲೇಜು–3.

ಪುರುಷರು: ಸಿ. ರಂಗನಾಥ (ಸರ್ಕಾರಿ ಎಂಜಿನಿಯರಿಂಗ್ ಕಾಲೇಜು, ರಾಮನಗರ)–1, ಸಂಜಯ್ ಕುಮಾರ್ (ಎಸ್‌ಐಟಿಐಎಂ ಮಂಗಳೂರು)–2, ರಾಜೇಂದ್ರ (ಎನ್‌ಎಂಎಎಂಐಟಿ)–3, ಕಾಲ: 35.57ನಿಮಿಷ. ಮಹಿಳೆಯರು: ಶ್ರೀನಿಧಿ ಸುರಗೊಂಡ (ಎಸ್‌ಡಿಎಂಸಿಇ, ಧಾರವಾಡ)–1, ಗೀತಾ (ವಿಟಿಯು ಬೆಳಗಾವಿ)–2, ಸೀಮಾ ತೆಂಡೂಲ್ಕರ್ (ಆರ್‌ವಿಸಿಇ, ಬೆಂಗಳೂರು)–3. ಕಾಲ:46.33 ನಿಮಿಷ.



ಬೆಂಗಳೂರಿನ ವಿವೇಕಾನಂದ ತಾಂತ್ರಿಕ ಇನ್‌ಸ್ಟಿಟ್ಯೂಟ್ ಆಶ್ರಯದಲ್ಲಿ ನಡೆದ ವಿಟಿಯು ಕ್ರಾಸ್‌ಕಂಟ್ರಿ ಚಾಂಪಿಯನ್‌ಷಿಪ್‌ನಲ್ಲಿ ತಂಡ ಪ್ರಶಸ್ತಿ ಜಯಿಸಿದ ಎಸ್‌ಡಿಎಂಸಿಇಟಿ (ಎಡದಿಂದ ಬಲಕ್ಕೆ); ಕುಳಿತವರು; ಸುಪ್ರಿತಾ, ಶಿಲ್ಪಾ, ಸಂಜನಾ, ಶ್ರೀನಿಧಿ, ಅನುಷಾ, ತೇಜಸ್ವಿನಿ, ಗೌರಾ. ನಿಂತವರು: ಗಣೇಶ್ ಪೂಜಾರಿ, (ದೈಹಿಕ ಶಿಕ್ಷಣ ನಿರ್ದೇಶಕ, ಎನ್‌ಎಂಎಎಂಐಟಿ, ಲೋಕೇಶ್ ಕೆ. ಟಿ,(ದೈಹಿಕ ಶಿಕ್ಷಣ ನಿರ್ದೇಶಕ ವಿಕೆಐಟಿ), ಆರ್ ಸರವಣ, ಎಸ್ ಪದ್ಮನಾಭ (ಪ್ರಾಚಾರ್ಯರು), ಎಚ್‌ಜಿ. ಬಾಲಗೋಪಾಲ (ಕ್ರೀಡಾ–ಸಂಸ್ಕೃತಿ ಸಮಿತಿ ಮುಖ್ಯಸ್ಥರು), ಡಾ. ಎ.ಜೆ. ಬುಜುರ್ಕೆ (ದೈಹಿಕ ಶಿಕ್ಷಣ ನಿರ್ದೇಶಕ, ವಿಟಿಯು ಬೆಳಗಾವಿ), ರಂಗನಾಥ್, ಡಾ. ಶಿವರಾಮ್ ರೆಡ್ಡಿ.